ಮಾನವಿಕ ಕರ್ನಾಟಕ

ಸಂಪುಟ ೪ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.


೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.



ಪಾಲ್ ಗಾಗಿ (೧೮೪೮–೧೯೦೩)

[ರೇಖಾಚಿತ್ರ : ಪಿ. ಆರ್ ತಿಪ್ಪೇಸ್ವಾಮಿ

ಮಾನವಿಕ ಕರ್ಣಾಟಕ

ಸಂಪುಟ ೪ ಸಂಚಿಕೆ ೨

೧೪

ಫೆಬ್ರುವರಿ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

MANAVIKA KARNATAKA, Kannada quarterly of the University of Mysore. Volume 4, Number 2, February 1974. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಪಿ. ಆರ್. ತಿಪ್ಪೇಸ್ವಾಮಿ

ಪಾಲ್ ಗಾಗಿ

ಪಾಲ್ ಗಾಗಿಯ ಜೀವನ ಎಲ್ಲ ರೀತಿಯಲ್ಲಿಯೂ ಸಾಹಸಮಯ, ವೈಚಿತ್ರ್ಯಪೂರ್ಣ. ಎಷ್ಟೋ ನಾಟಕಕಾರರಿಗೆ ಮೂಲ ಸಾಮಗ್ರಿಯಾಗುವಷ್ಟು ಅದ್ಭುತಗಳಿಂದ ತುಂಬಿದ ವ್ಯಕ್ತಿತ್ವ ಆತನದು. ಅವನ ಬಗ್ಗೆ ಅನೇಕ ಕಾದಂಬರಿಗಳೂ ರಮ್ಯ ಜೀವನಚಿತ್ರಗಳೂ ಒಂದು ಚಲನಚಿತ್ರವೂ ಹೊರಬಿದ್ದಿವೆ. ಗಾಗಿ ಅನೇಕ ನ್ಯಾಯಮೂರ್ತಿಗಳ ದೃಷ್ಟಿಯಲ್ಲಿ ದೋಷಪೂರ್ಣ ವ್ಯಕ್ತಿಯಾದರೂ ಸಹಾನುಭೂತಿಪರರ ದೃಷ್ಟಿಯಲ್ಲಿ ದುರಂತಜೀವನಕ್ಕೆ ಪಕ್ಕಾದ ಮೇಧಾವಿ ಅವನು. ದೈಹಿಕ ಹಾಗೂ ಮಾನಸಿಕ ವೇದನೆಗಳಿಗೆ ತುತ್ತಾದ ಅವನು ಆದರ್ಶ ಕಥಾನಾಯಕನಾಗಿರುವಂತೆಯೇ ಆ ಯುಗದ ಅಪೂರ್ವ ಹಾಗೂ ಅಪ್ರತಿಮ ಕಲಾಸಾಧಕನೂ ಹೌದು.

ಎರಡನೆಯ ಫ್ರೆಂಚ್ ಕ್ರಾಂತಿಯ ಸಮಯದಲ್ಲಿ ಈತ ಪ್ಯಾರಿಸಿನಲ್ಲಿ ಜನಿಸಿದ (೧೮೪೮.) ಆದರೆ ಆ ಕ್ರಾಂತಿಯ ಪ್ರತಿಕ್ರಿಯೆಯ ಫಲವಾಗಿ, ಸ್ವತಂತ್ರ ಪತ್ರಿಕೋದ್ಯಮಿಯಾದ ಆತನ ತಂದೆ ಗಡಿಪಾರಾಗಬೇಕಾಯಿತು. ಗಾಗಿಯ ತಾಯಿಗೆ ಪೆರು ದೇಶದ ಅಧ್ಯಕ್ಷ ಒಬ್ಬ ಬಂಧು. ಗಾಗಿಯ ಮಾತಾಪಿತೃಗಳು ಪೆರುವಿಗೆ ಪ್ರಯಾಣ ಮಾಡಿದಾಗ ಇವನಿಗೆ ಮೂರು ವರ್ಷ. ಗಾಗಿಯ ತಂದೆ ಸಮುದ್ರಯಾನದಲ್ಲೆ ತೀರಿಹೋದ. ಲಿಮಾ ಎಂಬಲ್ಲಿ ಅವನ ತಾಯಿ ನಾಲ್ಕು ವರ್ಷಗಳ ಕಾಲ ನೆಲಸಿದಳು. ಗಾಗಿ ತನ್ನ ಹದಿನೇಳನೆಯ ವಯಸ್ಸಿನ ವರೆಗೂ ಫ್ರಾನ್ಸಿನ ಮರ್ಚೆಂಟ್ ಮರೀನಾದಲ್ಲಿ ನೌಕಾಶಿಕ್ಷಣ ಪಡೆದು ಅಟ್ಲಾಂಟಿಕ್ ಸಾಗರದ ರಯೋ ಮತ್ತು ಲಾಹಾಗಳ ನಡುವೆ ಅತ್ತಿಂದಿತ್ತ ಸಮುದ್ರಯಾನಮಾಡಿದ. ತಾಯಿ ೧೮೭೧ರಲ್ಲಿ ತೀರಿಕೊಂಡಾಗ ಗಾಗಿ ಸಮುದ್ರಯಾನ ತೊರೆದು ಪ್ಯಾರಿಸ್ಸಿನ ದಳ್ಳಾಳಿಯೊಬ್ಬನಲ್ಲಿ ಕೆಲಸಕ್ಕೆ ಸೇರಿಕೊಂಡ.

ಗಾಗಿ ಹನ್ನೊಂದು ವರ್ಷಗಳ ಕಾಲ ವ್ಯಾಪಾರೋದ್ಯಮದಲ್ಲಿ ಯಶಸ್ಸು ಗಳಿಸಿದ. ೧೮೭೩ರಲ್ಲಿ ಡೇನಿಷ್ ಯುವತಿಯೊಬ್ಬಳನ್ನು ಲಗ್ನವಾಗಿ ತನ್ನ ಮಡದಿ ಮಕ್ಕಳೊಂದಿಗೆ ಸುಖಪ್ರದ ಜೀವನ ಸಾಗಿಸತೊಡಗಿದ. ಅಪರೂಪಕ್ಕೆ ಭಾನುವಾರಗಳಲ್ಲಿ ಅವನು ಕಲಾಸಾಧಕನಂತೆ ಚಿತ್ರಬಿಡಿಸತೊಡಗಿದ. ೧೮೭೬ರ ಸ್ಟೇನ್ ಕಲಾಪ್ರದರ್ಶನಕ್ಕೆ ತನ್ನದೊಂದು ಪ್ರಕೃತಿಕಲಾಕೃತಿಯೊಂದನ್ನು ಕಳಿಸಿಕೊಡುವ ಪ್ರೇರಣೆಯಾಯಿತು. ಆದರೆ, ಅಕಾಡಮಿಯ ಕಟ್ಟುಕಟ್ಟಲೆಗಳು ಆತನಿಗೆ ಸರಿಬೀಳದೆ, ಕಲಾಪ್ರದರ್ಶನಗಳಲ್ಲಿ, ಚಿತ್ರಶಾಲೆಗಳಲ್ಲಿ ಮೇಲಿಂದ ಮೇಲೆ ಸುಳಿದಾಡತೊಡಗಿದ. ಆಗ ತಿರಸ್ಕಾರ ಹಾಗೂ ಪರಿಹಾಸ್ಯಕ್ಕೀಡಾಗಿದ್ದ 'ಇಂಪ್ರೆಷನಿಸಂ' ಕೃತಿಗಳಿಂದ ಆಕರ್ಷಿತನಾಗಿ ತಾನು ಮೆಚ್ಚಿದವುಗಳನ್ನು ಕೊಂಡುಕೊಂಡ. ಯುವಕ ಕಲಾವಿದರಿಗೆ ಮಾರ್ಗದರ್ಶಿಯೂ ಸಹಾಯಕನೂ ಆಗಿದ್ದ ಕ್ಯಾಮಲ್ ಪಿಸಾರೋ ಎಂಬವನ ದೃಷ್ಟಿಗೂ ಬೀಳದಿರಲಿಲ್ಲ. ಪಿಸಾರೋ ಇವನನ್ನು ಸಿಜೇನ್ ಮತ್ತು ಡಗಾರಿಗೆ ಪರಿಚಯಿಸಿದನಲ್ಲದೆ ಕಲಾಪ್ರದರ್ಶನಗಳಲ್ಲಿ ಇವನ ಕೃತಿಗಳ ಪ್ರದರ್ಶನಕ್ಕೆ ಅಣಿ ಮಾಡಿಕೊಟ್ಟ. ಇವನಿಗೆ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಬೆಳೆಯಿತು. ೧೮೮೩ರಲ್ಲಿ ಇವನ ಅದೃಷ್ಟ ಕುದುರಿ ಇದ್ದಕ್ಕಿದ್ದಂತೆಯೇ ಉದ್ಯೋಗವನ್ನು ತೊರೆಯಲು ನಿರ್ಧರಿಸಿದ. ಅನಂತರ ಪ್ರತಿನಿತ್ಯವೂ ಎಡೆಬಿಡದೆ ಚಿತ್ರ ರಚಿಸತೊಡಗಿದ. ತನ್ನ ಮಕ್ಕಳು ಮತ್ತು ಮಡದಿಯೊಂದಿಗೆ ಪಿಸಾರೋ ವಾಸವಾಗಿದ್ದ ರೆಯಾನ್‌ಗೆ ತೆರಳಿದನಾದರೂ ಅಲ್ಲಿ ಕಾಲಹಾಕುವುದು

ದುಸ್ತರವೆನಿಸಿತು. ಶ್ರೀಮತಿ ಗಾಗಿ ತನ್ನ ಸಂಬಂಧಿಕರಿದ್ದ ಡೆನ್‌ಮಾರ್ಕಿನಲ್ಲಿ ಜೀವನ ಸುಖಮಯವಾಗ ಬಹುದೆಂದು ಅಲ್ಲಿಗೆ ಹೋಗಲು ಒತ್ತಾಯಪಡಿಸಿದಳು. ಕೊನೆಗೆ ಕೋಪನ್‌ಹೇಗನ್‌ನಲ್ಲೂ ಸ್ವಲ್ಪ ಕಾಲ ಇದ್ದ. ಆದರೆ ಅಲ್ಲೂ ನಿರಾಶೆಯೇ ಕಾದಿತ್ತು. ವಾಣಿಜ್ಯಕೇಂದ್ರವೊಂದರ ಪ್ರತಿನಿಧಿಯಾಗಿಯಾಗಲಿ ಕಲಾವಿದನಾಗಿಯಾಗಲಿ ಗಾಗಿ ಯಶಸ್ವಿಯಾಗಲಿಲ್ಲ. ಅವನ ಕಲಾಕೃತಿಗಳ ಪ್ರದರ್ಶನವೊಂದನ್ನು ಕೇವಲ ಐದು ದಿನಗಳಲ್ಲಿ ಕೊನೆಗೊಳಿಸಬೇಕಾಯಿತು.

ನಿರುತ್ಸಾಹಿಯೂ ದರಿದ್ರನೂ ಆದ ಗಾಗಿ ಕೋಪನ್‌ಹೇಗೆನ್‌ನಲ್ಲಿ ಸಂಸಾರವನ್ನು ಬಿಟ್ಟು, ೧೮೮೫ರ ಬೇಸಗೆಯಲ್ಲಿ ಪ್ಯಾರಿಸಿಗೆ ಬಂದು ನೆಲಸಿದ. ಅಲ್ಲಿ ರೈಲ್ವೆ ನಿಲ್ದಾಣದಲ್ಲಿ ಭಿತ್ತಿಪತ್ರಗಳನ್ನು ಅಂಟಿಸುವ ಕೆಲಸಕ್ಕೆ ಸೇರಿದ. ಆದರೆ, ಅವನ ಅನಾರೋಗ್ಯದಿಂದಾಗಿ ಆ ಕೆಲಸ ಸಾಗದೆ ಆಸ್ಪತ್ರೆಯಲ್ಲಿ ವಾರಗಟ್ಟಲೆ ಕಾಲಕಳೆಯಬೇಕಾಯಿತು. ಆದರೆ ಏನೇ ಆದರೂ ಅವನು ಕಲೆಯನ್ನು ತೊರೆಯಲಿಲ್ಲ. ೧೮೮೬ರ ಮೊದಲ ದಿನಗಳಲ್ಲಿ ಬ್ರಿಟನ್ನಿನ 'ಪಾಂಟವೆನ್' ಎಂಬ ಪುಟ್ಟ ಹಳ್ಳಿಗೆ ತೆರಳಿದ. ಅಲ್ಲಿ ಶಾಂತಿಯೂ ಚಿತ್ರರಚನೆಗೆ ಹೊಸ ವಿಷಯಗಳೂ ಹೋಟಲಿನಲ್ಲಿ ಸಾಲದ ಸೌಲಭ್ಯವೂ ದೊರೆತುವು. ಅದೇ ವರ್ಷದ ಕೊನೆಯಲ್ಲಿ ಪ್ಯಾರಿಸಿಗೆ ಮರಳಿದಾಗ ಅವನು ವಿನ್‌ಸೆಂಟ್ ವ್ಯಾನ್ ಗೋನನ್ನು ಸಂದರ್ಶಿಸಿದ. ಇವನನ್ನು ವ್ಯಾನ್ ಗೋ ತುಂಬ ಮೆಚ್ಚಿಕೊಂಡ.

ಅಲ್ಲಿಂದ ತಪ್ಪಿಸಿಕೊಂಡು ಹೋಗುವ ಉತ್ಕಟೇಚ್ಛೆಯಿಂದ ಗಾಗಿ ಮಾರ್ಟಿನೀಕ್‌ಗೆ ಹೋಗಿ ನೆಲಸಲು ನಿಶ್ಚಯ ಮಾಡಿದ. ಆ ದ್ವೀಪಕ್ಕೆ ಹೋಗುವ ಸೌಲಭ್ಯವನ್ನು ಕಲ್ಪಿಸಿಕೊಳ್ಳಲು ಅವನು ಪನಾಮಾ ಕಾಲುವೆಯ ಸಾಮಾನ್ಯ ಕೂಲಿಗಳೊಡನೆ ಕೆಲಸ ಮಾಡಬೇಕಾದ ಸಂದರ್ಭವೂ ಬಂತು. ಅಪೂರ್ವ ಸೌಂದರ್ಯದಿಂದ ಕೂಡಿದ ಮಾರ್ಟಿನೀಕ್ ದ್ವೀಪದಿಂದ ಆಕರ್ಷಿತನಾಗಿ ತನ್ನ 'ಇಂಪ್ರೆಷನಿಸ್ಟ್' ಕೃತಿಗಳಿಗೆ ಹಲವು ಉಷ್ಣವಲಯದ ವರ್ಣಗಳಿಂದ ಮೆರುಗು ಕೊಟ್ಟ. ಆದರೆ ಅಲ್ಲಿಯ ವಾಯುಗುಣ ಅವನಿಗೆ ಒಗ್ಗಲಿಲ್ಲ. ಸ್ವದೇಶಕ್ಕೆ ಮರಳಲು ನಾವಿಕನಾಗಿ ಕೆಲಸ ಮಾಡುತ್ತ, ೧೮೮೭ರಲ್ಲಿ ಪ್ಯಾರಿಸಿಗೆ ಬಂದು ಖಾಯಿಲೆ ಮಲಗಿದ. ಮತ್ತೆ ಪಾಂಟವೆನ್‌ಗೆ ತೆರಳಿ ಅಲ್ಲಿ ವ್ಯಾನ್ ಗೋನ ತರುಣ ಮಿತ್ರ ಎಮಿಲ್ ಬಾರ್ನಾರ್ಡ್‌ನನ್ನು ಸಂದರ್ಶಿಸಿದ. ಅವನ ಪ್ರಭಾವದಿಂದಾಗಿ ಅಂದಿನಿಂದ ಕ್ರಮವಾಗಿ 'ಇಂಪ್ರೆಷನಿಸಂ ಶೈಲಿಯನ್ನು ಬಿಟ್ಟು ಪ್ರೌಢ ಶೈಲಿಯ ಕಡೆಗೆ ಜಾರಿದ.

ವಿನ್‌ಸೆಂಟ್ ವ್ಯಾನ್ ಗೋನ ಒತ್ತಾಯದ ಹಾಗೂ ಅವನ ಸೋದರ ತಿಯೋವಿನ ಹಣದ ನೆರವಿನಿಂದಾಗಿ ಗಾಗಿ ೧೮೮೮ರಲ್ಲಿ ವ್ಯಾನ್ ಗೋ ಇದ್ದ ಆರೆಲ್ಸ್‌ಗೆ ಬಂದ. ಆದರೆ ಅಲ್ಲಿ ಅವರಿಬ್ಬರ ವಿಚಿತ್ರ ಸ್ವಭಾವದಿಂದಾಗಿ ಹಾಗೂ ವಿರುದ್ಧ ಅಭಿಪ್ರಾಯಗಳಿಂದಾಗಿ ಆ ಮಿತ್ರರಲ್ಲಿ ಜಗಳಗಳಾಗುತ್ತಿದ್ದುವು. ವ್ಯಾನ್ ಗೋ ಅರೆ ಹುಚ್ಚಿನಿಂದಾಗಿ ನರಗಳ ದೌರ್ಬಲ್ಯಕ್ಕೆ ತುತ್ತಾಗಿ ಒಮ್ಮೆ ಗಾಗಿಗೆ ಪ್ರಾಣಭಯವನ್ನುಂಟುಮಾಡಿದ. ಆ ಕ್ಷಣವೇ ಅವನು ಹಿಂದಿರುಗಿ ಅಲ್ಲಿಂದ ಬ್ರಿಟನ್ನಿಗೆ ಬಂದ.

ಗಾಗಿಯ ನವೀನ ಕಲಾ ಪದ್ಧತಿ ಅನೇಕ ತರುಣ ಕಲಾವಿದರ ಗಮನ ಸೆಳೆಯಿತು. ಕ್ರಮೇಣ ಅವನನ್ನು ಅನುಸರಿಸುವ ಪುಟ್ಟ ಗುಂಪೊಂದು ಕಲೆಯಿತು. ಆದರೆ ಇದರಿಂದ ಯಾವ ಲೌಕಿಕ ಉದ್ದೇಶವೂ ಸಾಧಿತವಾಗದೆ ೧೮೯೧ರಲ್ಲಿ ತಾಹಿತಿಯಲ್ಲಿಯ ನಿಸರ್ಗದಲ್ಲಿ ಬೆಳೆದ ತಾಳೆಯ ಮರಗಳ ಹಾಗೂ ಉಷ್ಣವಲಯದ ರವಿಯ ಸೊಬಗಿನ ಕನಸನ್ನು ಕಾಣುತ್ತ ಮರಳಿದ

ಗಾಗಿ ತಾಹಿತಿಯ ಕಾನನದ ನಡುವೆ ಸೇರಿ ಅವಿಶ್ರಾಂತವಾಗಿ ಚಿತ್ರ ಬರೆಯತೊಡಗಿದ. ಆನಂದದಾಯಕ ಹಾಗೂ ಪ್ರಶಾಂತ ವಾತಾವರಣದಿಂದಾಗಿ ಅವನ ಪ್ರತಿಭೆಗೆ ರೆಕ್ಕೆ ಮೂಡಿತು. ಆಕೃತಿಗಳನ್ನು ಸ್ಪಷ್ಟಪಡಿಸುವ ಹಾಗೂ ಸ್ವಚ್ಛಂದವಾಗಿ ವರ್ಣಗಳನ್ನು ಬಳಸುವ ಆಸೆ ಅವನದಾಗಿತ್ತು. ಅವುಗಳ ಜೊತೆಗೆ ಅವನ ಮಹತ್ವಾಕಾಂಕ್ಷೆಯಿಂದಾಗಿ ಅವನ ಕೃತಿಗಳಿಗೆ ಮತ್ತಷ್ಟು ಕಳೆ ಬಂತು. ಅವನ ನವೀನ ಕಲೆ ಬರೀ ವಸ್ತುವಿನಲ್ಲಿಲ್ಲದೆ ಭಾವನಾತ್ಮಕ ವಸ್ತುಗಳಲ್ಲೂ ಸೇರಿಕೊಂಡಿತು.

ಕೆಲವು ತಿಂಗಳುಗಳು ಅವನು ತಾಹಿತಿಯಲ್ಲಿ ಕಳೆದ ಮೇಲೆ, ಅಸಹನೀಯ ಪರಿಸ್ಥಿತಿಯಿಂದಾಗಿ ಮತ್ತೊಮ್ಮೆ ಉತ್ಸಾಹಭಂಗವಾಯಿತು. ದಾರಿದ್ರ್ಯ ಮತ್ತು ಹಸಿವು ಅವನ ನಿತ್ಯದ ಅತಿಥಿಗಳಾದುವು.



ಘೂರ್ಜರ ಕಥೆಗಳು (ಜಲವರ್ಣ ಚಿತ್ರ)



ಕ್ರಿಸ್ತ, ಶಿಲುಬೆಯ ಮೇಲೆ (ಮರಚ್ಚು)

ಕಟ್ಟಕಡೆಗೆ ನಿರಾಶನಾಗಿ ಮನೆಗೆ ಹಿಂದಿರುಗಲು ಅಪೇಕ್ಷಿಸಿದ. ೧೮೯೩ರಲ್ಲಿ ಫ್ರೆಂಚ್ ಸರ್ಕಾರ ಅವನನ್ನು ಸ್ವಸ್ಥಳಕ್ಕೆ ಕಳುಹಿಸಿಕೊಟ್ಟಿತು. ಪ್ಯಾರಿಸಿನಲ್ಲಿ ಅವನಿಗಾಗಿ ಅನಿರೀಕ್ಷಿತ ಸುದ್ದಿಯೊಂದು ಕಾದಿತ್ತು. ಆರ್ಲಿಯನ್ಸ್‌ನಲ್ಲಿದ್ದ ಅವನ ಚಿಕ್ಕಪ್ಪ ತೀರಿಕೊಂಡ. ಅವನ ಆಸ್ತಿಗೆ ಗಾಗಿ ಉತ್ತರಾಧಿಕಾರಿಯಾದ. ಅವನು ಆ ಆಸ್ತಿಯನ್ನೆಲ್ಲ ಮುಂದು ಮಾಡಿ ಕಳೆದ. ವಿಶಾಲವಾದ ಕಲಾಪ್ರದರ್ಶನವನ್ನು ತೆರೆದನಾದರೂ ಅದು ಅಷ್ಟೇನೂ ಯಶಸ್ಸು ಕೊಡಲಿಲ್ಲ. ದೊಡ್ಡ ಸ್ಟುಡಿಯೋ ಒಂದನ್ನು ಬಾಡಿಗೆಗೆ ತೆಗೆದುಕೊಂಡ. ಅಲ್ಲಿ ಇಂಡೊನೇಷ್ಯದ ಯುವತಿಯೊಬ್ಬಳೊಂದಿಗೆ ವಾಸಿಸತೊಡಗಿದ. ಸತ್ಕಾರಗಳನ್ನು ನೀಡುತ್ತ, ಕೋಪನ್‌ಹೇಗೆನ್ ಮುಂತಾದ ಕಡೆಗಳಿಗೆ ಪ್ರವಾಸಮಾಡಿದ. ಇವರ ವಿಚಿತ್ರ ಜೋಡಿಯ ಬಗ್ಗೆ ಅಲ್ಲಿಯ ನಾವಿಕರಾಡಿದ ಕುಹಕ ನುಡಿಗಳಿಂದ ಉಂಟಾದ ಹೋರಾಟದಲ್ಲಿ ಗಾಗಿಯ ಹಿಮ್ಮಡಿ ಕಿತ್ತು ಹೋಯಿತು.

ನಿದ್ರೆ ಇಲ್ಲದ ರಾತ್ರಿಗಳಲ್ಲಿ ಗಾಗಿಯ ಹೃದಯ ನೊಂದಿತು. ಉಷ್ಣವಲಯದ ಜೀವನದತ್ತ ತಿರುಗಿ ಪ್ರೀತಿಯ ಕನಸು ಕಾಣುತ್ತಿತ್ತು. ದಕ್ಷಿಣ ಸಮುದ್ರಗಳಲ್ಲಿ ಅವನು ಹಸಿವು ಖಾಯಿಲೆಗಳಿಂದ ಬಳಲಿ ಕಷ್ಟಪಟ್ಟ ಅನುಭವಗಳಾಗಿದ್ದಾಗ್ಯೂ ಮತ್ತೆ ಅಲ್ಲಿಗೇ ಕೊನೆ ಎಂಬಂತೆ ಹೋಗಲು ನಿರ್ಧರಿಸಿದ. ಬಹಿರಂಗ ಹರಾಜಿನಲ್ಲಿ ತನ್ನದೆಲ್ಲವನ್ನೂ ಮಾರಲು ಹಾಕಿದ. ಅನೇಕ ಚಿತ್ರಗಳು ಅತ್ಯಲ್ಪಬೆಲೆಗೆ ಹೋಗಬಾರದೆಂದು ಮತ್ತೆ ಅವುಗಳನ್ನು ವಾಪಸು ಪಡೆದ.

ಹಿಂದೊಮ್ಮೆ ತಾಹಿತಿಯಲ್ಲಿ ಅನುಭವಿಸಿದಂತೆಯೇ ಮತ್ತೆ ಅವನಿಗೆ ಕಷ್ಟ ತಂದೊಡ್ಡಲು ವಿಧಿ ಕಾದಿತ್ತು. ಸಾಲದ ಹೊರೆ ಹೆಚ್ಚಾಗುತ್ತ ಬಂತು. ಅವನ ಪ್ರೀತಿಯ ಮಗುವಿನ ಸಾವಿನ ಸುದ್ದಿ ಬಂತು. ೧೮೯೮ರಲ್ಲಿ ಗುಡ್ಡಗಳಲ್ಲಿ ಅವಿತುಕೊಳ್ಳಲು ಹೋಗಿ ಕೊನೆಗೆ ಆತ್ಮಹತ್ಯಕ್ಕೂ ಪ್ರಯತ್ನಿಸಿ ವಿಫಲನಾದ. ಸಾವು ಅವನ ಪಾಲಿಗೆ ಆಗ ಕರುಣೆ ತೋರಿತು. ಅದೇ ವೇಳೆಗೆ ಪ್ಯಾರಿಸಿನಲ್ಲಿ ಆಂಬ್ರೋ ವಾಲ್ಲಾರ್ಡ್ ಎಂಬ ಕಲಾವ್ಯಾಪಾರಿ ಗಾಗಿಯ ಕೃತಿಗಳನ್ನು ಕೊಂಡು, ಅವನ ಜೀವನಕ್ಕೆ ನೆರವು ನೀಡುವುದಾಗಿ ಮುಂದೆ ಬಂದ. ವ್ಯವಹಾರ ಸರಿಬೀಳದೆ ಗಾಗಿ ಅವನೊಂದಿಗೆ ಜಗಳವಾಡಿದ. ೧೯೦೧ರಲ್ಲಿ ಅನೇಕ ಕೃತಿಗಳನ್ನು ಮಾರಿ ತಾಹಿತಿಯನ್ನು ತೊರೆದು ಹಿವಾ ಓವ ಎಂಬ ದ್ವೀಪದ ಸಮೀಪಕ್ಕೆ ಬಂದು ನೆಲಸಿದ.

ಗಾಗಿ ತನ್ನ ಆರೋಗ್ಯ ಉತ್ತಮ ಸ್ಥಿತಿಗೆ ಬಂದಲ್ಲಿ ತಾನು ಫ್ರಾನ್ಸಿಗೆ ಹಿಂದಿರುಗಿ ಹೆಚ್ಚು ಆಸಕ್ತಿಯಿಂದ ಚಿತ್ರ ಬಿಡಿಸಬೇಕೆಂದು ನಿಶ್ಚಯಿಸಿದ. ಆದರೆ ಹೃದಯಬೇನೆ ಹಾಗೂ ಪಾದದ ಇಸಬಿನ ನೋವು ಅವನ ಆಸೆಗೆ ಎಡೆಕೊಡಲಿಲ್ಲ. ಅವನು ಚಿತ್ರರಚನೆಯಲ್ಲಿ ತೊಡಗಿದ್ದಾಗಲೆಲ್ಲಾ ತನ್ನ ಅನುಭವಗಳನ್ನು ಕುರಿತು ಸ್ಥಳೀಯ ಅಧಿಕಾರಿಗಳಿಗೆ ಉಗ್ರ ಪತ್ರಗಳನ್ನು ಬರೆಯುತ್ತಿದ್ದ. ಹೀಗಾಗಿ ಸ್ಥಳೀಯ ಅಧಿಕಾರಿಯೊಬ್ಬ ಇವನ ಮೇಲೆ ಒಂದು ಮೊಕದ್ದಮೆ ಹೂಡಿದ. ಜನವರಿ ೧೯೦೩ರಲ್ಲಿ ಒಂದು ಬಿರುಗಾಳಿ ಇವನ ಗುಡಿಸಲನ್ನು ಹಾಳುಮಾಡಿತು. ಅದೇ ಮಾರ್ಚಿಯಲ್ಲಿ ಇವನು ಕೆಲವು ವಾರ ಜೈಲಿನಲ್ಲಿ ಕಳೆಯಬೇಕಾಯಿತಲ್ಲದೆ ತಾಹಿತಿಗೆ ಹೋಗಿ ಅಪೀಲು ಮಾಡಿಕೊಳ್ಳಲು ಅನುಕೂಲವಿಲ್ಲದಂತೆಯೂ ಆಯಿತು. ಸೆರೆಮನೆಯ ಭಯ ಅವನ ಜೀವನವನ್ನೇ ಮುಕ್ತಗೊಳಿಸಿತು. ತನ್ನ ಸ್ನೇಹಿತರಿಂದ, ಸಂಸಾರದಿಂದ, ಮಾತೃದೇಶದಿಂದ ಬಹುದೂರದಲ್ಲಿ, ಹೃದಯ ಒಡೆದು, ೧೯೦೩ರ ಮೇ ಒಂಬತ್ತರಂದು ಅವನು ಏಕಾಂಗಿಯಾಗಿ ಮಡಿದ. ಆದರೆ ಅವನ ಕೃತಿಗಳು ಅವನ ಹೆಸರನ್ನು ಶಾಶ್ವತಗೊಳಿಸಿವೆ.

ಗಾಗಿಯ ಶೈಲಿ ಜನಸಾಮಾನ್ಯರಿಗೂ ಅರ್ಥವಾಗುವಂತಿದ್ದು, ಅದರಲ್ಲಿ ಒಂದು ಭಾವ ಕಲಾತ್ಮಕವಾಗಿ, ವರ್ಣರಂಜಿತವಾಗಿ ವ್ಯಕ್ತವಾಗಿರುವುದನ್ನು ನೋಡಬಹುದು. ಟಹಿಟಿನಲ್ಲಿ ಗಾಗಿಯ ಚಿತ್ರರಾಶಿಗಳಲ್ಲಿ ಆತ್ಮವಿನಾಶಕ ಬೂರ್ಜ್ವಾ ನಾಗರಿಕತೆಯ ವಿರುದ್ಧವಾಗಿ ವ್ಯಕ್ತಪಡಿಸಿದ ಒಂದು ತೀವ್ರ ಪ್ರತಿಕ್ರಿಯೆಯನ್ನು ನೋಡಬಹುದಾಗಿದೆ.

ಗಾಗಿಯ ಕಲಾಶೈಲಿಯ ಪ್ರಭಾವವನ್ನು ಪಿಕಾಸೊ ಮೊದಲಾದ ಕಲಾವಿದರ ಕೃತಿಗಳಲ್ಲಿ ಕಾಣಬಹುದು. ಇದು ಮುಂದೆ ಘನಾಕೃತಿ ವಿಧಾನ (ಕ್ಯೂಬಿಸಂ) ಎಂಬ ಕಲಾಶೈಲಿಯ ಬೆಳವಣಿಗೆಗೆ ಪುಷ್ಟಿ ನೀಡಿತು. ಅಲ್ಲದೆ ಗಾಗಿ ಮುಂದೆ ಆಫ್ರಿಕದ ನೀಗ್ರೋ ಕಲೆಯ ಸೌಂದರ್ಯ ಸಮೀಕ್ಷೆಗೆ ಪ್ರೇರಣೆ ನೀಡಿದ. ತನ್ನ ಕಲಾಸಾಧನೆಯ ಗುಣವಿಶೇಷದಿಂದಾಗಿ ಮತ್ತು ನವ್ಯಕಲೆಯ ಮೇಲೆ ಬೀರಿದ ಅದ್ಭುತ ಪ್ರಭಾವದಿಂದಾಗಿ ನವ್ಯಕಲಾ ಪ್ರಪಂಚದಲ್ಲಿ ಗಾಗಿ ಒಂದು ಪ್ರಮುಖಸ್ಥಾನವನ್ನು ಪಡೆದಿದ್ದಾನೆ.

ಗಾಗಿ ಬರೆದಿರುವ ನೋವ-ನೋವ ಎಂಬ ಪುಸ್ತಕ ಆತನ ಸೌಂದರ್ಯಮೀಮಾಂಸಾ ತತ್ತ್ವವನ್ನು ವಿವರಿಸುತ್ತದೆ.

ಈತನ ಜೀವನದ ಪ್ರಧಾನ ಘಟನೆಗಳನ್ನು ಆಧರಿಸಿ ಸಾಮರ್‌ಸೆಟ್ ಮಾಮ್ ಎಂಬ ಪ್ರಸಿದ್ಧ ಸಾಹಿತಿ ದಿ ಮೂನ್ ಅಂಡ್ ಸಿಕ್ಸ್ ಪೆನ್ಸ್ ಎಂಬ ಕಾದಂಬರಿಯನ್ನು ರಚಿಸಿದ್ದಾನೆ (೧೯೧೯)

ಎಚ್. ಆರ್. ರಘುನಾಥ ಭಟ್[1]

---

1 ಕನ್ನಡ ವಿಶ್ವಕೋಶ. ಸಂ. ೬. ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ. ೧೯೭೩. ಪು. ೧೮೯–೧೯೦.

ಪ್ರೊ. ಬಿ. ಕೃಷ್ಣನ್

ವ್ಯಕ್ತಿತ್ವ : ಸಂಘಟನೆ ಮತ್ತು ವಿಕಾಸ *

ತನ್ನನ್ನು ತಾನೇ ತಿಳಿಯಲು ಮಾನವ ಬಹಳ ಪ್ರಾಚೀನ ಕಾಲದಿಂದಲೂ ಪ್ರಯತ್ನ ನಡೆಸಿದ್ದಾನೆ. ಗ್ರೀಕ್ ಸಂಸ್ಕೃತಿಯ ಕಾಲದಿಂದ ಇಂದಿನ ವರೆಗೂ "ನಿನ್ನನ್ನು ನೀನು ತಿಳಿ" (know thyself) ಎಂಬ ಸುಭಾಷಿತ ಒಂದು ನುಡಿಮುತ್ತಾಗಿರುವಂತೆಯೇ ಸಾಧನೀಯ ವಸ್ತುವೂ ಆಗಿದೆ. ಗ್ರೀಕರಿಗಿಂತ ಹಿಂದೆಯೇ ಭಾರತೀಯ ಋಷಿಗಳು ಆತ್ಮಸಾಕ್ಷಾತ್ಕಾರದ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಮನುಷ್ಯನ ಸ್ವಭಾವ ಮತ್ತು ವ್ಯಕ್ತಿತ್ವಗಳನ್ನು ತಿಳಿದುಕೊಳ್ಳಲು ಜಗತ್ತಿನ ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿ ಬಹಳ ಹಿಂದೆಯೇ ಪ್ರಯತ್ನ ನಡೆಸಿದವರೆಂದರೆ ತತ್ತ್ವಜ್ಞಾನಿಗಳು ಮತ್ತು ಲೇಖಕರು. ವೈಜ್ಞಾನಿಕ ಪರಿಶೀಲನೆಗೆ ಒಳಗಾಗಿದ್ದರೂ ವಿಜ್ಞಾನಪೂರ್ವ ಕಾಲದಲ್ಲಿ ಬೆಳಕಿಗೆ ಬಂದಿರುವ ಕೆಲವು ಒಳನೋಟಗಳು (insights) ಮನುಷ್ಯನ ಸ್ವಭಾವವನ್ನು ಹೆಚ್ಚು ಪ್ರಕಟಪಡಿಸುವಂತಿವೆ. ಷೇಕ್ಸ್‌ಪಿಯರ್ ಮತ್ತು ಇತರ ಅಸಾಧಾರಣ ಸಾಹಿತಿ ಶ್ರೇಷ್ಠರ ಹೇಳಿಕೆಗಳ ಬಗ್ಗೆ ಆಧುನಿಕ ಮನೋವಿಜ್ಞಾನಿಗಳು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿರುವುದೂ ಪಾಶ್ಚಾತ್ಯ ತತ್ತ್ವಜ್ಞಾನಿಗಳ ಬರವಣಿಗೆಗಳನ್ನು ಉದಾಹರಿಸಿರುವುದೂ ಹಾಗೆಯೇ ಪ್ರಾಚೀನ ಭಾರತೀಯ ಗ್ರಂಥರತ್ನಗಳ ಬಗ್ಗೆ ಪ್ರಸ್ತಾಪಿಸಿರುವುದೂ ಮೇಲಿನ ಅಂಶವನ್ನು ಸ್ಪಷ್ಟಪಡಿಸುತ್ತವೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ. ಮನೋರೋಗಗಳನ್ನು ಗುಣಪಡಿಸುವ ಕಾರ್ಯದಲ್ಲಿ ತೊಡಗಿದ್ದ ವೈದ್ಯರು ವ್ಯಕ್ತಿತ್ವದ ಬಗ್ಗೆ ವ್ಯವಸ್ಥಿತ ಅವಲೋಕನ ಮತ್ತು ಸೈದ್ಧಾಂತೀಕರಣಗಳನ್ನು ಬಳಸಿರುವುದು ಯಾರಿಗಾದರೂ ವೇದ್ಯವಾಗುತ್ತದೆ. ವೈದ್ಯಕೀಯ ಮನೋವಿಜ್ಞಾನದ (Medical Psychology)ಜಿತನೆನಿಸಿದ ಕ್ರೇಪ್ಲಿನ್ ಜರ್ಮನಿಯಲ್ಲಿ, ಯಾನೆ ಫ್ರಾನ್ಸಿನಲ್ಲಿ ಮತ್ತು ಫ್ರಾಯ್ಡ್ ವಿಯನ್ನದಲ್ಲಿ ಈ ದಿಸೆಯಲ್ಲಿ ಮೊದಲ ಮಾರ್ಗದರ್ಶನ ನೀಡಿದರು. ಅನಂತರ ಯೂಂಗ್, ಆಡ್ಲರ್, ಕ್ರೆಷ್ಮರ್, ಮೆಕ್‌ಡೂಗಲ್ ಹಾಗೂ ಈ ಕ್ಷೇತ್ರದ ಇತರ ಪ್ರತಿಭಾವಂತರು ಮತ್ತು ವಿಲಿಯಂ ಜೇಮ್ಸ್, ವಾರ್ಡ್ ಮತ್ತು ಕ್ಲೇಗ್ಸ್ ಇವರಂತಹ ಕೆಲವು ಮಂದಿ ವಿದ್ವಜ್ಜನರು ಕ್ರೇಪ್ಲಿನ್, ಯಾನೆ ಮತ್ತು ಫ್ರಾಯ್ಡರುಗಳನ್ನು ಅನುಸರಿಸಿದರು. ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವಲ್ಲಿ ಅವರೆಲ್ಲ ಬಳಸಿದ ವಿಧಾನವೆಂದರೆ ನೈದಾನಿಕ ಅವಲೋಕನ (clinical observation). ಅದನ್ನು ಆಧರಿಸಿಯೇ ಅವರು ತಮ್ಮ ಮಹತ್ವಪೂರ್ಣ ಕೊಡುಗೆಗಳನ್ನಿತ್ತಿದ್ದಾರೆ. ಹೀಗಿದ್ದರೂ. ತಮ್ಮ ಪ್ರಾಕ್ಕಲ್ಪನೆಗಳನ್ನು (hypotheses) ಪರಿಶೀಲಿಸಲು ಅವರು ಯಾವುದೇ ಮಾಪನವಿಧಿ (measerment)ಯನ್ನು ಅನುಸರಿಸಲಿಲ್ಲವೆಂಬುದು ಅವರ ಕೊಡುಗೆಗಳ ಬಗ್ಗೆ ಇರುವ ಪ್ರಮುಖ ಅಪವಾದ

---

* ಭಾರತೀಯ ವಿಜ್ಞಾನ ಕಾಂಗ್ರೆಸ್ ಸಂಸ್ಥೆಯ ವಜ್ರಮಹೋತ್ಸವದಲ್ಲಿ (ಚಂಡೀಗಢ. ಜನವರಿ 1973) ಮನೋವಿಜ್ಞಾನ ಮತ್ತು ಶಿಕ್ಷಣ ವಿಭಾಗದ ಅಧ್ಯಕ್ಷೀಯ ಭಾಷಣದ (Personality Organization and Development) ಅನುವಾದ

ಪರಿಮಾಣಾತ್ಮಕ (Quantitative) ಮತ್ತು ಪ್ರಾಯೋಗಿಕ (Experimental) ಪ್ರವಿಧಿಗಳನ್ನು ಬಳಸುವುದರ ಮೂಲಕ ವ್ಯಕ್ತಿತ್ವದ ಅಧ್ಯಯನವನ್ನು ನಡೆಸುವ ಪ್ರಯತ್ನಗಳು ನಡೆದದ್ದು ಈ ಶತಮಾನದ ಪ್ರಾರಂಭಕಾಲದಿಂದಷ್ಟೆ. ಇದರಿಂದ ರೂಪಿತವಾದ ಸಿದ್ಧಾಂತಗಳು ವರ್ತನಾತ್ಮಕ ಮಾಪನಗಳನ್ನು (Behavioural measurement) ಆಧರಿಸಿವೆ. ಇದಕ್ಕೂ ಹಿಂದೆ, ನೈದಾನಿಕ ಅವಲೋಕನಗಳನ್ನು ಆಧರಿಸಿ ರೂಪಿತವಾಗಿದ್ದ ಸಿದ್ಧಾಂತಗಳನ್ನು ಪರಿಶೀಲಿಸಲು ಕೆಲವು ಮನೋವಿಜ್ಞಾನಿಗಳು ಪ್ರಯತ್ನಿಸಿದರು. ಆದರೆ ಇತರರು ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲೆಂದು ಸಿದ್ಧಾಂತಗಳನ್ನು ರೂಪಿಸುವಲ್ಲಿ ತಾವು ಸಂಗ್ರಹಿಸಿದ ದತ್ತಾಂಶಗಳಿಂದ ಸೂಚಿತವಾದ ಸ್ವಂತ ವಿಚಾರಗಳನ್ನೇ ಅವಲಂಬಿಸಿದರು. ನೈದಾನಿಕ ಅವಲೋಕನಗಳನ್ನಾಗಲಿ ಪರಿಮಾಣಾತ್ಮಕ ಪ್ರವಿಧಿಗಳನ್ನಾಗಲಿ ಆಧರಿಸಿ ವ್ಯಕ್ತಿತ್ವದ ಸಿದ್ಧಾಂತಗಳನ್ನು ರೂಪಿಸುವಾಗ ಪರೀಕ್ಷಾಸಾಧ್ಯ (Testable) ಪ್ರಾಕ್ಕಲ್ಪನೆಗಳ ಬೆಳವಣಿಗೆಯಲ್ಲಿ ಮೂರು ಪ್ರಮುಖ ನೆಲೆ ನಿರ್ದೇಶನಗಳಿರುವುದನ್ನು (Orientations) ಯಾರಾದರೂ ಕಾಣಬಹುದು. ಇವಕ್ಕಾಗಿ ನೈದಾನಿಕರು (clinicians) ಬಳಸಿದ್ದು ಪ್ರಾಕ್ಕಲ್ಪನಾ-ಅನುಗಮನಾತ್ಮಕ (Hypothetico–inductive) ವಿಧಾನ. ಈ ವಿಧಾನದ ಪ್ರಕಾರ ಕೆಲವು ವ್ಯಕ್ತಿ ಸಂಗತಿ (cases)ಗಳನ್ನು ಅವಲೋಕಿಸುವುದರ ಮೂಲಕ ಸಾಮಾನ್ಯೀಕರಣಗಳನ್ನು (Generalization) ಮಾಡಿ ಸಿದ್ಧಾಂತವನ್ನು ರೂಪಿಸಲಾಗುತ್ತದೆ. ಆದರೆ ಈ ವಿಧಾನ ನಿಷಿದ್ಧ (Illicit) ಸಾಮಾನ್ಯೀಕರಣಗಳಿಗೆ ಅವಕಾಶ ಮಾಡಿಕೊಡುತ್ತದೆಯಲ್ಲದೆ. ಅಂಥ ಸಾಮಾನ್ಯೀಕರಣಗಳನ್ನು ಅನುಸರಿಸಿ ರೂಪಿಸಲಾದ ಸಿದ್ಧಾಂತ ಮುಂದೆ ಮಾರ್ಪಾಟಾಗುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಉದಾಹರಣೆಗೆ ಅಭಿಜಾತ ಮನೋವಿಶ್ಲೇಷಣೆಯನ್ನು (Classical Psychoanalysis) ಆಧರಿಸಿ ರೂಪುಗೊಂಡ ವ್ಯಕ್ತಿತ್ವ ಸಿದ್ಧಾಂತ ಅನೇಕ ಮಾರ್ಪಾಟುಗಳನ್ನು ಕಂಡಿತು. ತನ್ನ ಕೆಲವು ಅನಂತರದ ಬರವಣಿಗೆಗಳಲ್ಲಿ ಫ್ರಾಯ್ಡ್‌ನೇ ತನ್ನ ಮೊದಮೊದಲಿನ ಪರಿಕಲ್ಪನೆಗಳನ್ನು (concepts) ಮಾರ್ಪಡಿಸಿದ್ದಾನೆ. ಮುಂದೆ, ಮೂಲಭೂತ ಸಿದ್ಧಾಂತದಲ್ಲಿ ಮಹತ್ತರವಾದ ಮಾರ್ಪಾಟುಗಳನ್ನು ನವಫ್ರಾಯ್ಡ್‌ವಾದಿಗಳು (Neo-Freudians) ಮಾಡಿದರು. ಕಲಿಕೆಯ ಸಿದ್ಧಾಂತವನ್ನು (Learning theory) ಬಹಳ ಹಚ್ಚಿಕೊಂಡಿರುವ ಪ್ರಾಯೋಗಿಕ ಮನೋವಿಜ್ಞಾನಿಗಳು ಬಳಸಿದ ಪ್ರಾಕ್ಕಲ್ಪನಾ-ನಿಗಮನಾತ್ಮಕ (Hypothetico-deductive) ವಿಧಾನ ಮತ್ತೊಂದು. ಹಲ್ ಮತ್ತು ಅವನ ಅನುಯಾಯಿಗಳು, ಐಸೆಂಕ್ ಮತ್ತು ಇತರರು ಈ ವಿಧಾನವನ್ನು ಅನುಸರಿಸಿದರು. ಇದರ ಪ್ರಕಾರ ಪ್ರಾರಂಭದಲ್ಲಿ ಒಂದು ಸಿದ್ಧಾಂತವನ್ನು ರೂಪಿಸಿ ಅನಂತರ ಅದರಿಂದ ಪ್ರಾಕ್ಕಲ್ಪನೆಗಳನ್ನು ಊಹಿಸಲಾಗುತ್ತದೆ. ಅನಂತರ ಆ ಪ್ರಾಕ್ಕಲ್ಪನೆಗಳನ್ನು ಪರಿಶೀಲಿಸಲೋಸ್ಕರ ಪ್ರಯೋಗಗಳನ್ನು ಎಚ್ಚರಿಕೆಯಿಂದ ಯೋಜಿಸಲಾಗುತ್ತದೆ. ಇದು ಒಂದು ವೈಜ್ಞಾನಿಕ ಪ್ರವಿಧಿಯಾದರೂ ಈ ವಿಧಾನದ ಒಂದು ಪ್ರಮುಖ ದೌರ್ಬಲ್ಯವೆಂದರೆ, ಇದು ತನ್ನ ಅನ್ವಯದಲ್ಲಿ ಹೆಚ್ಚು ಅನಮ್ಯವಾಗಿದ್ದು (rigid) ಒಂದು ಸೀಮಿತ ವರ್ತನಾಕ್ಷೇತ್ರದಲ್ಲಿ ಮಾತ್ರ ನಿಯಂತ್ರಿತ ಅವಲೋಕನಕ್ಕೆ (Controlled observation) ಎಡೆಮಾಡಿಕೊಡುತ್ತದೆ.

ಮನೋಮಾಪನ (Psychometric) ಪ್ರವಿಧಿಗಳನ್ನು. ಅವರಲ್ಲಿಯೂ ತಥ್ಯಾಂಶಗಳ ವಿಶ್ಲೇಷಣೆಗಾಗಿ 'ಕಾರಕಾಂಶ ವಿಶ್ಲೇಷಣೆ'ಯನ್ನು (Factor analysis) ತಮ್ಮ ಪ್ರಮುಖ ಸಾಧನವನ್ನಾಗಿ ಬಳಸಿಕೊಂಡು ವ್ಯಕ್ತಿತ್ವ ಸಿದ್ಧಾಂತಗಳನ್ನು ರೂಪಿಸಿದವರಲ್ಲಿ ಕೆಲವರು 'ಅನುಗಮನಾತ್ಮಕ-ಪ್ರಾಕ್ಕಲ್ಪಿತ-ನಿಗಮನಾತ್ಮಕ (Inductive-hypothetco-deductive) ವಿಧಾನವನ್ನು ಉಪಯೋಗಿಸಿದರು. ಈ ಅಧ್ಯಯನಮಾದರಿಯ ಪ್ರಕಾರ, ಒಂದು ಸಂಶೋಧನ ಕಾರ್ಯಕ್ರಮದ ಅತ್ಯಂತ ಹೆಚ್ಚು ಸೃಜನಾತ್ಮಕ ಅಂಗವೆನಿಸಿರುವ ಪರಿಶೋಧನಾ ಹಂತದಿಂದ (Exploratory phase) ಸಂಶೋಧನೆ ಪ್ರಾರಂಭವಾಗುತ್ತದೆ. ನಾವು ಸಂಗ್ರಹಿಸಿದ ತಥ್ಯಾಂಶಗಳ ಆಧಾರದಿಂದ ಗುರುತಿಸಲು ಸಾಧ್ಯವಿರುವ ನಿಯಮಬದ್ಧತೆಯನ್ನು ಅರಿಯಲು, ಅನುಗಮನಾತ್ಮಕ ವಿವೇಚನೆಯನ್ನು (Inductive reasoning) ಆಶ್ರಯಿಸಬಹುದಲ್ಲದೆ, ಸಂಶೋಧನೆಯ ಫಲಿತಾಂಶಗಳಿಗೆ ಸಂಬಂಧಿಸಿ

ದಂತೆ ಅದರಿಂದ ಅನುಮಿತಿಗಳನ್ನೂ (Deductions) ರೂಪಿಸಬಹುದು. ಅಂಥ ಅನುಮಿತಿಗಳನ್ನು ಪ್ರಾಕ್ಕಲ್ಪನೆಗಳ ರೂಪದಲ್ಲಿ ಹೇಳಬಹುದಲ್ಲದೆ, ಪ್ರಾಯೋಗಿಕ ಅವಲೋಕನಗಳಿಗೂ (Experimental observation) ಒಳಪಡಿಸಬಹುದು. ಅನೇಕ ಅವಲೋಕನಗಳನ್ನು ಶೀಘ್ರವಾಗಿಯೂ ವಸ್ತುನಿಷ್ಠ ರೀತಿಯಲ್ಲೂ ವಿಶ್ಲೇಷಿಸಲು ಈ ಪ್ರವಿಧಿ ಅವಕಾಶ ಮಾಡಿಕೊಡುವುದಾದರೂ, ಹೊಸ ವಿಚಾರಗಳ ವಿಕಾಸಕ್ಕೆ ಇದು ಅವಕಾಶಕೊಡದಿರಬಹುದು.

ಯಾವ ಸಂಶೋಧಕನೇ ಆಗಲಿ, ವ್ಯಕ್ತಿತ್ವ ಸಿದ್ಧಾಂತಗಳ ರೂಪಣೆಯಲ್ಲಿ ವೈಜ್ಞಾನಿಕ ಕಾರ್ಯವಿಧಿಗಳನ್ನು (Procedures) ಅನುಸರಿಸಿದರೂ ಅವನ ಸ್ವಂತ ಜೀವನಾನುಭವಗಳು, ಸಮಕಾಲೀನ ಚೇತನ (The spirit of Times) ಮತ್ತು ಆತನ ಸಮೂಹದ ಸಾಂಸ್ಕೃತಿಕ ಲಕ್ಷಣಗಳನ್ನು ಪ್ರತಿಪಾದಿಸುವ ತಾತ್ವಿಕ ನಂಬಿಕೆಗಳೇ ಮುಂತಾದ ಕೆಲವು ವೈಯಕ್ತಿಕ ನಿರ್ಧಾರಕಗಳೂ ಸಂಶೋಧನೆಯ ಮೇಲೆ ಪ್ರಭಾವ ಬೀರುವಂತೆ ಕಂಡುಬರುತ್ತದೆ. ನಾನಾ ರೀತಿಯ ಅನುಭವಗಳನ್ನು ಸಮರ್ಪಕವಾಗಿ ಅಳೆಯುವುದರಲ್ಲಿ ಸೈದ್ಧಾಂತಿಕನ ವೈಯಕ್ತಿಕ ಅನುಭವಗಳೂ ಕೆಲವು ವೇಳೆ ಅಡೆತಡೆಗಳಾಗಬಹುದು. ಅಂಥ ಸಂದರ್ಭಗಳಲ್ಲಿ, ಅದು ಒಂದು ದೌರ್ಬಲ್ಯವಾಗಿ ಪರಿಣಮಿಸುವುದು ಸಹಜ. ಸಮಕಾಲೀನ ಚೇತನದ ಬಗ್ಗೆ ಹೇಳುವುದಾದರೆ, ಮಾನಸಿಕ ಬೆಳವಣಿಗೆಗೆ ಸಂಬಂಧಿಸಿದಂತೆ ವಿವಿಧ ದೃಷ್ಟಿಕೋನಗಳಿಗೆ ಯಾವ ರೀತಿಯ ಪ್ರಾಮುಖ್ಯವನ್ನು ಕೊಡಲಾಗಿದೆ ಎಂಬುದನ್ನು ಯಾರಾದರೂ ಅದರಿಂದ ಹೇಳಬಹುದು. ಒಂದು ಕಾಲದಲ್ಲಿ 'ಆತ್ಮ' (self) ಪರಿಕಲ್ಪನೆಯನ್ನೂ ಮನೋವೈಜ್ಞಾನಿಕ ಕ್ಷೇತ್ರದಲ್ಲಿ ಉಪಯೋಗಿಸುವುದು ನಿಷಿದ್ಧ ವಿಷಯವಾಗಿದ್ದಿತು. ಆದರೆ ಈ ಸಮಸ್ಯೆಯ ಬಗ್ಗೆ ನಡೆದಿರುವ ಸಂಶೋಧನ ಸ್ಫೋಟನದಿಂದಾಗಿ ಇಂದು ಇದು ಒಂದು ಗೌರವಾನ್ವಿತ ಸ್ಥಾನ ಪಡೆದಿದೆ.

ವ್ಯಕ್ತಿತ್ವಸಿದ್ಧಾಂತಗಳ ಬೆಳವಣಿಗೆಗೆ ಸಂಬಂಧಿಸಿದಂತೆ ಯುರೋಪ್, ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳಲ್ಲಿ ಪ್ರಭಾವ ಬೀರಿದ ದಾರ್ಶನಿಕ ನಂಬಿಕೆಗಳ ಒಂದು ಸುಂದರ ವಿಶ್ಲೇಷಣೆಯನ್ನು ಆಲ್‌ಪೋರ್ಟ್ ಕೊಡುತ್ತಾನೆ. ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳಲ್ಲಿ ವ್ಯಕ್ತಿತ್ವಸಿದ್ಧಾಂತಗಳು ಜಾನ್ ಲಾಕನ ತತ್ತ್ವದೃಷ್ಟಿಯಿಂದ ಪ್ರಭಾವಿತವಾಗಿರುವುದರಿಂದ ಮನುಷ್ಯನನ್ನು ಒಂದು 'ಸ್ವಚ್ಛ ಫಲಕ' (Tabularasa) ಎಂದು ಪರಿಗಣಿಸಲಾಗಿದ್ದಿತು. ಅಂದರೆ ಚೆನ್ನಾಗಿ ಒರೆಸಿದ ಕಪ್ಪು ಹಲಗೆಯ ಮೇಲೆ ಬರೆದ ಬರೆಹದಂತೆ. ಇದರ ಪ್ರಕಾರ ಮನುಷ್ಯ ಕೇವಲ ಬಾಹ್ಯ ಪ್ರಚೋದನೆಗಳಿಗೆ ಪ್ರತಿಕ್ರಿಯೆ ತೋರಿಸುತ್ತಾನೆ. ಅಂದಮೇಲೆ ಪ್ರತ್ಯಾವರಣಕ್ಕೆ ಇಲ್ಲಿ ಹೆಚ್ಚು ಮಹತ್ವ ಕೊಡಲಾಗಿದೆ. 'ಮನುಷ್ಯ' ಎಂಬ ಕಲ್ಪನೆ, ಅನೇಕ ಸನ್ನಿವೇಶಗಳಲ್ಲಿ ವ್ಯಕ್ತಿಯ ಪಾತ್ರಗಳು ಮತ್ತು ಪ್ರತಿಕ್ರಿಯೆಗಳಿಗೆ ಪ್ರಾಮುಖ್ಯವನ್ನು ಕೊಡುವುದರತ್ತ ನಮ್ಮನ್ನು ಕೊಂಡೊಯ್ದಿತು. ಇಂತಹ ಸಂಕಲ್ಪನೆಗಳನ್ನು ಆಧರಿಸಿರುವ ಸಿದ್ಧಾಂತಗಳು ವರ್ತನಾತ್ಮಕ ಒಲವಿನಿಂದ ಕೂಡಿವೆ.

ಮನುಷ್ಯ 'ಸ್ವಯಂ-ಕ್ರಿಯಾತ್ಮಕನೆಂಬುದನ್ನು (self-active) ಒತ್ತಿಹೇಳುವ ಯುರೋಪಿನ ಸಂಪ್ರದಾಯದ ಮೇಲೆ ಪ್ರಭಾವ ಬೀರಿದವರೆಂದರೆ, ಲಿಬ್ನಿಟ್ಸ್ ಮತ್ತು ಕ್ಯಾಂಟ್. ಅವರು ಮಾಡಿದ ತಾತ್ತ್ವಿಕ ಧ್ಯತಿಕಲ್ಪನೆಗಳು. ಮನುಷ್ಯನ ಕ್ರಿಯೆಯನ್ನು ನಿರ್ಧರಿಸುವಲ್ಲಿ ಬಾಹ್ಯ ಪ್ರತ್ಯಾವರಣಕ್ಕಿಂತ ಆತನ ಆಂತರಿಕ ಸ್ವಭಾವದ ಮಹತ್ವ್ವ ಹೆಚ್ಚೆಂಬುದನ್ನು ಗುರುತಿಸಲು ನೆರವಾದುವು. ತನ್ನೊಳಗೇ ಇರುವ ಸಂರಚನಾತ್ಮಕ (Constitutional) ಮತ್ತು ಸಹಜಪ್ರೇರಣಾತ್ಮಕ Instinctual) ಶಕ್ತಿಗಳಿಂದ ಮನುಷ್ಯ ಕಾರ್ಯಪ್ರವೃತ್ತನಾಗುತ್ತಾನೆ. ಈ ವಿಚಾರ ಇಂದ್ರಿಯ ವಿಷಯಜ್ಞಾನ (Phenomenalogy) ಮತ್ತು ಸಮಗ್ರಾಕೃತಿ (Gestalt) ಮನೋವಿಜ್ಞಾನಗಳ ಉಗಮಕ್ಕೆ ಕಾರಣವಾಯಿತಲ್ಲದೆ, ತನ್ನ ಲಕ್ಷಣದಲ್ಲಿ ಅದು ಇರುವಿಕೆಯನ್ನು ಎತ್ತಿ ಹಿಡಿಯುತ್ತದೆ. ಆಂಗ್ಲೊ-ಅಮೆರಿಕನ್ ಮತ್ತು ಯುರೋಪಿಯನ್—ಈ ಎರಡು ಸಂಪ್ರದಾಯಗಳು ವಿವಿಧ ರೀತಿಯ ಸಿದ್ಧಾಂತಗಳ ರೂಪಣೆ ಹಾಗೂ ವ್ಯಕ್ತಿತ್ವದ ಅಳತೆಗಾಗಿ ವಿವಿಧ ಮಾಪನಪ್ರವಿಧಿಗಳ ಬೆಳವಣಿಗೆಗಳಿಗೆ ಕಾರಣವಾಯಿತು. ಅಲ್ಲದೆ, ಭಾವಾತ್ಮಕ ಹತಾಶೆಯನ್ನು (Emotional distress) ಉಪಶಮನಗೊಳಿಸುವುದಕ್ಕಾಗಿ ವೈದ್ಯರು ಬೆಳೆಸಿದ ವಿವಿಧ ಮಾರ್ಗಗಳಿಗೂ ಅದೇ ಸಮಯದಲ್ಲಿ ಕಾರಣವಾದುವು.

ವ್ಯಕ್ತಿತ್ವ ಮನೋವಿಜ್ಞಾನ ತನ್ನ ಮಾತ್ರ ಮನೋವಿಜ್ಞಾನದಂತೆಯೇ ಭೌತಶಾಸ್ತ್ರ ಮತ್ತು ಇತರ ಕೆಲವು ವಿಜ್ಞಾನಗಳಲ್ಲಿ ಕಂಡುಬರುವಂತೆ ಒಂದು ಸಂಚಿತ (cumulative) ವಿಜ್ಞಾನದ ಪರಿಮಿತಿಯಲ್ಲಿ ಬರುವುದಿಲ್ಲವೆಂಬುದು ಮೇಲಿನ ಚರ್ಚೆಯಿಂದ ವ್ಯಕ್ತವಾಗುತ್ತದೆ. ಹೀಗಿರುವುದರಿಂದ, ಈ ಸಮಸ್ಯೆಯ ಅಧ್ಯಯನವನ್ನು ನಡೆಸಲು ಬಳಸಲಾಗಿರುವ ವಿವಿಧ ಮಾರ್ಗಗಳನ್ನು ಪರಿಶೀಲಿಸುವುದರ ಮೂಲಕ ವ್ಯಕ್ತಿತ್ವದ ಸಂಘಟನೆ ಮತ್ತು ಬೆಳವಣಿಗೆಗಳನ್ನು ಪರಿಗಣಿಸಬೇಕಾಗುತ್ತದೆ. ವ್ಯಕ್ತಿತ್ವದ ವೃದ್ಧಿ ಮತ್ತು ವಿಕಾಸಗಳು ಸಂರಚನೆ ಮತ್ತು ಪ್ರಕ್ರಿಯೆಗಳೊಂದಿಗೆ ಸಂಬಂಧಹೊಂದಿರುವ ಪ್ರವೃತ್ತಿಯನ್ನು ತೋರಿಸುತ್ತವೆ. ಆದ್ದರಿಂದ ಸಂರಚನೆಯಲ್ಲಿ ಆಗುವ ಬದಲಾವಣೆಗಳಿಗೂ ಶೈಶವ ಕಾಲದಿಂದ ಹಿಡಿದು ಪರಿಪಕ್ವನ ಕಾಲದ ವರೆಗೆ ವ್ಯಕ್ತಿ ತನ್ನ ಪ್ರತ್ಯಾವರಣದೊಂದಿಗೆ ವ್ಯವಹರಿಸುವಲ್ಲಿ ಕಂಡು ಬರುವ ಅನುಗುಣವಾದ ಚಲನಾತ್ಮಕ ಸಮಾಯೋಜನಗಳಿಗೂ(dynamic modes)ಕಾರಣವನ್ನೂ ವೃದ್ಧಿಯು ಒದಗಿಸಬೇಕಾಗುತ್ತದೆ. ವಿಕಾಸಕ್ಕೆ ಕಾರಣವಾಗುವ ಪ್ರಕ್ರಿಯೆಗಳನ್ನು ಅಂಥ ವೃದ್ಧಿಸಿದ್ಧಾಂತವೊಂದು (Growth theory) ಪರಿಗಣಿಸಬೇಕಾಗುತ್ತದೆಯಲ್ಲದೆ ಜೈವಿಕ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ನಿರ್ಧಾರಕಗಳನ್ನು ಹಾಗೂ ವಿವಿಧ ವೃದ್ಧಿ ವಿನ್ಯಾಸಗಳಿಗೆ (Growth patterns) ಅವು ಕೊಡುವ ಸಾಪೇಕ್ಷ ಕೊಡುಗೆಗಳೇನೆಂಬುದನ್ನು ಆ ಸಿದ್ಧಾಂತ ಪರಿಗಣಿಸಬೇಕಾಗುತ್ತದೆ. ವೃದ್ಧಿ, ಸಂರಚನೆ ಮತ್ತು ಪ್ರಕ್ರಿಯೆ ಈ ಪರಿಕಲ್ಪನೆಗಳಲ್ಲಿ ಯಾವುದೇ ಒಂದು ಉಳಿದವುಗಳಿಗಿಂತ ಹೆಚ್ಚು ಸ್ವತಂತ್ರವಾಗಿಲ್ಲದ ಪ್ರಯುಕ್ತ ಮನುಷ್ಯನ ವರ್ತನೆ ಮತ್ತು ಪ್ರಕ್ರಿಯೆಗಳಲ್ಲಿ ಒಂದು ವಿನ್ಯಾಸ ಹಾಗೂ ನಿಯಮಬದ್ಧತೆಯನ್ನು ಕಂಡುಕೊಳ್ಳುವುದರ ಮೇಲೆ ಈ ಪರಿಕಲ್ಪನೆಗಳು ಬೆಳಕು ಚೆಲ್ಲಬೇಕಾಗುತ್ತದೆ. ವ್ಯಕ್ತಿತ್ವ ಸಂರಚನೆಯ ನಿರ್ಮಾಣದ ಮೂಲಾಂಶಗಳ ಬಗ್ಗೆ ವ್ಯಕ್ತಿತ್ವಸೈದ್ಧಾಂತಿಕರಲ್ಲಿ ಯಾವುದೇ ಒಂದು ಸಹಮತವಿಲ್ಲ. ಕ್ರಿ.ಪೂ. ೫ನೆಯ ಶತಮಾನದಿಂದ ಕ್ರಿ.ಶ. ೭ನೆಯ ಶತಮಾನದವರೆಗೆ ಚಿತ್ತಪ್ರವೃತ್ತಿವಾದ (Humoural Doctrine) ಈ ಕ್ಷೇತ್ರದಲ್ಲಿ ಪ್ರಭಾವಶಾಲಿಯಾಗಿತ್ತು. ಈ ಸಿದ್ಧಾಂತದ ಪ್ರಕಾರ ವ್ಯಕ್ತಿತ್ವವನ್ನು ವಿವರಿಸಲು, ಉತ್ಸಾಹ (Sanguine), ಜಡತೆ (Phlegmatic), ಸಿಡುಕು (Choleric) ಮತ್ತು ವಿಷಣ್ಣತೆ (Melancholic) ಎಂಬ ನಾಲ್ಕು ರೀತಿಯ ಚಿತ್ತಪ್ರಕೃತಿಗಳನ್ನು ಪ್ರತಿಪಾದಿಸಲಾಗಿತ್ತು. ಮುಂದೆ ಸುಮಾರು ಇನ್ನೂರು ವರ್ಷಗಳ ವರೆಗೆ, ಮನಶ್ಶಕ್ತಿಗಳ (Faculties) ಸಿದ್ಧಾಂತ ಈ ಕ್ಷೇತ್ರದಲ್ಲೆಲ್ಲ ಪ್ರಭಾವಶಾಲಿಯಾಗಿತ್ತು. ತತ್ಫಲವಾಗಿ 'ಕಪಾಲ ಸಾಮುದ್ರಿಕ ಶಾಸ್ತ್ರ'ದ (Phrenology)ಉದಯವಾಯಿತು. ಜೋಸೆಫ್ ಗಾಲ್, ಸ್ಪರ್‌ಜೀಮ್ ಇವರು ಮಸ್ತಿಷ್ಕದಲ್ಲಿರುವ ಮನಶ್ಶಕ್ತಿಗಳಿಗೆ ಅಂಗಾಂಗಿಕ (anatomical) ಆಧಾರಗಳನ್ನು ಅರಸುವುದರ ಮೂಲಕ ಕಪಾಲ ಸಾಮುದ್ರಿಕ ಶಾಸ್ತ್ರದ ಪ್ರವರ್ತಕರಾದರು. ಆದರೆ ಡಾರ್ವಿನ್ನನ ವಿಕಾಸವಾದದ ಉದಯದಿಂದಾಗಿ ಸಹಜಪ್ರೇರಣೆಗಳತ್ತ ಗಮನ ಹರಿದುದರಿಂದ ಮನಶ್ಶಕ್ತಿಗಳನ್ನು ಕೈಬಿಡಲಾಯಿತು. ವ್ಯಕ್ತಿತ್ವವನ್ನು ವಿವರಿಸುವ ಪ್ರಯತ್ನದಲ್ಲಿ ಮೆಕ್‌ಡೂಗಲ್ ಸಹಜಪ್ರೇರಣೆಗಳು ಮತ್ತು ಅವುಗಳಿಂದ ಉದ್ಭವಿಸುವ ರಸಭಾವಗಳನ್ನು (Sentiments) ಪ್ರತಿಪಾದಿಸಿದ. ಮನುಷ್ಯನ ವರ್ತನೆಯಲ್ಲಿ ಸಹಜಪ್ರೇರಣೆಗಳ ಮಹತ್ತ್ವವನ್ನು ಒತ್ತಿ ಹೇಳಿದ ಇತರ ಸೈದ್ಧಾಂತಿಕರಲ್ಲಿ ಪ್ರಮುಖರಾದವರೆಂದರೆ ಫ್ರಾಯ್ಡ್ ಮತ್ತು ಬರ್ನಾರ್ಡ್. ವಾಟ್ಸನ್ ಮತ್ತು ಆತನ ಅನುಯಾಯಿಗಳು ಸಹಜ ಪ್ರೇರಣೆಗಳಿಗೆ ಬದಲಾಗಿ ಚೋದನೆಗಳನ್ನು (Drives) ಪ್ರತಿಪಾದಿಸಿದರು. ಕಲಿಯದಿರುವ ಅಂಶಗಳ ಮೂಲಕ ಅವರು ಚೋದನೆಗಳನ್ನು ವಿವರಿಸಿದರು. ಈ ಅಂಶಗಳು ಬಹುಮಟ್ಟಿಗೆ ಶಾರೀರಿಕ ಆಹಾರೇಚ್ಛೆಗಳು (Appetites) ಮತ್ತು ಹೇವರಿಕೆ (Aversions) ಗಳಾಗಿರುತ್ತವೆ. ಮರ್ರೆ, ಮೆಕ್ಲೆಲ್ಯಾಂಡ್ ಹಾಗೂ ಇತರ ಮನೋವಿಜ್ಞಾನಿಗಳು ಸಹಜಪ್ರೇರಣೆಗಳಿಗೆ ಬದಲಾಗಿ ಅಗತ್ಯಗಳನ್ನು (Needs) ಪ್ರತಿಪಾದಿಸಿದರು. ಆದರೆ ಮರ್ರೆ ಮುಂದೆ ಅಗತ್ಯಗಳಿಗೆ ಬದಲಾಗಿ ಮೌಲ್ಯದಿಕ್ಪರಿಮಾಣಗಳನ್ನು (Value-Vectors) ಪ್ರತಿಪಾದಿಸಿರುವುದು ಕಂಡುಬರುತ್ತದೆ. ಎರಡನೆಯವು ಮೊದಲನೆಯವುಗಳಿಗಿಂತ ಕಡಿಮೆ ಅಮೂರ್ತ ಸ್ವರೂಪದಿಂದಿರುವುದೇ ಇದಕ್ಕೆ ಕಾರಣ. ಒಟ್ಟಿನಲ್ಲಿ ಹದಿನಾಲ್ಕು ಮೂಲಮೌಲ್ಯಗಳು ಮತ್ತು ಹನ್ನೆರಡು ದಿಕ್ಪರಿಮಾಣಗಳನ್ನು ಹೇಳಲಾಗಿದೆ. ವ್ಯಕ್ತಿತ್ವ ರಚನೆಯ ಅಂಗಾಂಶಗಳನ್ನು ಅರಸುವ ಕಾರ್ಯ ಬಹಳ ಕಾಲದಿಂದ ಇದ್ದರೂ ಅವರ ಸ್ವಭಾವ ಮತ್ತು ರಚನೆಗಳ ಬಗ್ಗೆ ಇನ್ನೂ ಕೂಡ ಯಾವುದೇ ಒಮ್ಮತ

ವೇರ್ಪಟ್ಟಿಲ್ಲ. ನೈದಾನಿಕ ಅವಲೋಕನವನ್ನು ಆಧರಿಸಿರುವ ಸಿದ್ಧಾಂತಗಳ ಬಗ್ಗೆ ಹೇಳುವುದಾದರೆ, ಸುಪ್ತಚೇತನ (Unconscious), ಪೂರ್ವಪ್ರಬುದ್ಧ ಚೇತನ (Preconscious) ಮತ್ತು ಪ್ರಬುದ್ಧಚೇತನ (Conscious) ಇವುಗಳ ಸ್ವರೂಪದ ಚೌಕಟ್ಟಿನಲ್ಲಿಯೇ ಕಾರ್ಯಶೀಲವಾಗಿರುವ ಇದಂ (Id), ಅಹಂ (Ego) ಮತ್ತು ಅಧಿಅಹಂ (Superego) ಎಂಬ ಮೂರು ಪ್ರಧಾನ ವ್ಯವಸ್ಥೆಗಳನ್ನು ಫ್ರಾಯ್ಡ್ ಸಹಜವೆಂದು ಭಾವಿಸಿದ. ಈ ವ್ಯವಸ್ಥೆಗಳು ಹೆಚ್ಚು ಅಮೂರ್ತ ಸ್ವರೂಪಿಗಳಾಗಿದ್ದು ಅನವಲೋಕನಶೀಲವಾಗಿವೆ. ವ್ಯಕ್ತಿತ್ವರಚನೆಯ ಬಗ್ಗೆ ತಾನು ರೂಪಿಸಿದ ಸಂಕಲ್ಪನೆಯಲ್ಲಿ, ಯೂಂಗ್ ಪ್ರತ್ಯೇಕವಾಗಿದ್ದರೂ ಪರಸ್ಪರ ಸಾಹಚರ್ಯದಿಂದ ಕೂಡಿರುವ ಅಹಂ ಮತ್ತು ಸ್ವಂತ ಸುಪ್ತಚೇತನ (Personal unconscious) ಹಾಗೂ ಅದರ ಭಾವಗ್ರಂಥಿಗಳು (Complexes) ಮತ್ತು ಸಮಷ್ಟಿಸುಪ್ತಚೇತನ (Collective unconscious) ಹಾಗೂ ಅದರ ಪ್ರರೂಪಗಳು (Archetypes) ಮನುಷ್ಯಸ್ವಭಾವ (Persona), ಪಶುಸ್ವಭಾವ (Anima), ಆತ್ಮ (self) ಹಾಗೂ ಅಂತರ್ಮುಖಿತೆ (Introversion) ಮತ್ತು ಬಹಿರ್ಮುಖಿತೆಗಳಂಥ (Extroversion) ಅಭಿವ್ಯಕ್ತಿಗಳು (Attitude) ಮುಂತಾದವನ್ನು ಸೇರಿಸಿದ್ದಾನೆ. ಅಹಂ ಕ್ರಿಯೆಗಳಿಗೆ ಹೆಚ್ಚು ಮಹತ್ವವನ್ನು ಕೊಡುವುದರ ಮೂಲಕ ನವಫ್ರಾಯ್ಡ್‌ವಾದಿಗಳು ವ್ಯಕ್ತಿತ್ವದ ನಿರೂಪಣೆಯಲ್ಲಿ ಒಂದು ಸಾಮಾಜಿಕ ಆಯಾಮವನ್ನು (Dimension) ಸೇರಿಸುತ್ತಾರೆ. ಗೋಲ್ಡ್‌ಸ್ಟೀನನ ಅಹಂ-ವಾಸ್ತವೀಕರಣ (Self-actualization) ತತ್ತ್ವಕ್ಕೆ ಸದೃಶವಾಗಿರುವ ಶ್ರೇಷ್ಠತೆಗಾಗಿ ಹೋರಾಡುವ (Striving for Superiority) ತನ್ನ ಸಂಕಲ್ಪನೆಗೆ ಆಡ್ಲರ್ ಹೆಚ್ಚು ಮಹತ್ವವನ್ನು ಕೊಡುತ್ತಾನೆ.

ಪ್ರಚೋದಕ–ಅನುಕ್ರಿಯಾ (Stimulus-response) ಸೈದ್ಧಾಂತಿಕರು ಸನ್ನಿವೇಶಿಕ ವಿಶಿಷ್ಟತೆಯನ್ನು ಒತ್ತಿಹೇಳುತ್ತಾರೆಯಲ್ಲದೆ. ವ್ಯಕ್ತಿಗೆ ಹೊರತಾದ ಪ್ರತ್ಯಾವರಣ ಪ್ರಚೋದಕಗಳ ಪ್ರಾಮುಖ್ಯಕ್ಕೆ ಸಂಬಂಧಿಸಿರದ ವಿಶಾಲ ಅನುಕ್ರಿಯಾ–ಪೂರ್ವ ಚಿತ್ತವೃತ್ತಿಗಳ(Response Predispositions) ಪ್ರಾಮುಖ್ಯವನ್ನು ಕಡಿಮೆ ಮಾಡುತ್ತಾರೆ. ತತ್ಫಲವಾಗಿ ಅವರ ಪರಿಕಲ್ಪನೆಗಳಲ್ಲಿ ಅಮೂರ್ತತೆ ಕಡಿಮೆ. ಅಲ್ಲದೆ ವರ್ತನೆಯ ವಿವರಣೆಗೆ ಉಪಯೋಗದಲ್ಲಿರುವ ಅವುಗಳ ಸಂಖ್ಯೆಯೂ ಕಡಿಮೆ. ಪ್ರಚೋದಕ ಅನುಕ್ರಿಯಾ (ಪ್ರ.ಅ.) ಸಿದ್ಧಾಂತದಲ್ಲಿ ಅತ್ಯಂತ ಹೆಚ್ಚು ಪ್ರಮುಖವಾದ ರಚನಾಂಶ (Structural unit) ಎಂದರೆ 'ಅನುಕ್ರಿಯೆ'. ತಟಕ್ಕನೆ ಉಂಟಾಗುವಂಥ ಶಬ್ದವೊಂದರ ಒಂದು ಸರಳ ಪ್ರತಿವರ್ತದಿಂದ (Reflex) ಹಿಡಿದು, ಸಮಸ್ಯೆಯನ್ನು ಬಿಡಿಸುವಂಥ ಒಂದು ಜಟಿಲ ವರ್ತನಾಂಶದ ವರೆಗೆ ಅದು ವ್ಯಾಪಿಸಬಹುದು. ಈ ಸಿದ್ಧಾಂತಗಳ ಪ್ರಕಾರ, ಅನುಕ್ರಿಯೆ ಪ್ರತ್ಯಾವರಣದಲ್ಲಿಯ ಘಟನೆಗಳಿಗೆ ಸಂಬಂಧಿಸಿದ ಅವಲೋಕನಸಾಧ್ಯ ವರ್ತನೆಯೊಂದರ (Observable behaviour) ಅಂಶವಾಗಿರಬೇಕು. ಅನುಕ್ರಿಯೆಗಳ ಸಮೂಹವೊಂದನ್ನು ಅನುಕ್ರಿಯಾ ಅನುಕ್ರಮ ಶ್ರೇಣಿಯನ್ನಾಗಿ (Response hierachy) ವರ್ಗೀಕರಿಸಬಹುದು. ಉದಾಹರಣೆಗೆ, ಗೊತ್ತಿರುವ (Known) ಅಥವಾ ಗೊತ್ತಿಲ್ಲದ (Unknown) ಪ್ರಚೋದಕಗಳನ್ನು ಅವಲಂಬಿಸಿ ಸ್ಕಿನ್ನರ್ ಅನುಕ್ರಿಯೆಗಳನ್ನು ಹೊರಸೆಳೆದವು (Elicited) ಮತ್ತು ಹೊರಸೂಸಿದವು (Emited) ಎಂದು ಎರಡು ವರ್ಗಮಾಡಿದ. ಪ್ರಚೋದಕ–ಅನುಕ್ರಿಯೆಗಳ ಸಹಯೋಗವನ್ನು ಹಲ್ ಮತ್ತು ಅವನ ಅನುಯಾಯಿಗಳು ಅಭ್ಯಾಸವೆಂಬುದಾಗಿ ಕರೆಯುತ್ತಾರೆ. ಅದರಂತೆ ಅನುಕ್ರಮಶ್ರೇಣಿಯಾಗಿ ರೂಪಗೊಳ್ಳುವ ಅಭ್ಯಾಸಗಳನ್ನು ವ್ಯಕ್ತಿತ್ವ ಬಹುಮಟ್ಟಿಗೆ ಒಳಗೊಂಡಿರುತ್ತದೆ ಎಂದು ಅವರು ಹೇಳುತ್ತಾರೆ. 'ಚೋದನೆ' ಎಂಬ ಮತ್ತೊಂದು ಪದವನ್ನೂ ಹಲ್ ಬಳಸುತ್ತಾನೆ. ವರ್ತನೆಯನ್ನು ಸಕ್ರಿಯಗೊಳಿಸಲು (Activate) ಅದು ಬಲಶಾಲಿ ಪ್ರಚೋದಕವೆನಿಸುತ್ತದೆ.

ವ್ಯಕ್ತಿತ್ವರಚನೆಯನ್ನು ವಿವರಿಸುವಲ್ಲಿ, ಆಲ್ಪೋರ್ಟ್, ಕ್ಯಾಟೆಲ್, ಮತ್ತು ಐಸೆಂಕ್ ಇವರು ವಿಶೇಷಕಗಳನ್ನು (Traits) ಉಪಯೋಗಿಸುತ್ತಾರಾದರೂ ಅವುಗಳಿಗೆ ಅವರು ಕೊಡುವ ಅರ್ಥ ಬೇರೆಬೇರೆಯಾಗಿದೆ. ಕ್ರಿಯಾತ್ಮಕ ಸ್ವಾಯತ್ತತೆಯ (Functional autonomy) ಮೂಲಕ

ವಿಶೇಷಕಗಳ ಕಾರ್ಯವನ್ನು ಆಲ್‌ಪೋರ್ಟ್ ವಿವರಿಸುತ್ತಾನೆ. ಮೂಲ (Source) ಮತ್ತು ಗೌಣ (Surface) ವಿಶೇಷಕಗಳನ್ನು ಕ್ಯಾಟೆಲ್ ಹೇಳುತ್ತಾನೆ. ಜಟಿಲರೀತಿಯ ಗೌಣ ವಿಶೇಷಕಗಳನ್ನು ರೂಪಿಸಲು ಕೆಲವು ಮೂಲ ವಿಶೇಷಕಗಳು ಸಮಾವೇಶವಾಗಬಹುದು. ಕಾರಕ ವಿಶ್ಲೇಷಣೆಯಿಂದ (Factor Analysis) ಬೆಳಕಿಗೆ ಬಂದ ಮೂಲವಿಶೇಷಕಗಳು ವ್ಯಕ್ತಿತ್ವ ರಚನೆಯ ಮೂಲ ರಚನಾಂಶಗಳಾಗಿವೆ. ಮತ್ತೊಂದು ಕಡೆ, ಐಸೆಂಕ್ ವಿಶಿಷ್ಟ ಅನುಕ್ರಿಯೆಗಳಿಂದ (Specific repon-ses) ರೂಪಿತವಾದ ಅಭ್ಯಾಸಾತ್ಮಕ ಅನುಕ್ರಿಯೆಗಳನ್ನು (Habitual responses) ಆಧರಿಸಿ ಗುಂಪಾದ ವಿಶೇಷಕಗಳ ಪ್ರಬಂಧದಿಂದ ರೂಪಿತವಾದ ಪ್ರರೂಪಕ್ಕೆ ಹೆಚ್ಚು ಮಹತ್ವಕೊಡುತ್ತಾನೆ. ಆತ ನಡೆಸಿದ ಕಾರಕ ವಿಶ್ಲೇಷಣಾಧ್ಯಯನಗಳು ಮೂರು ವ್ಯಕ್ತಿತ್ವಪ್ರರೂಪಗಳು ಅಥವಾ ಆಯಾಮಗಳನ್ನು (Types or Dimensions) ಪ್ರತಿಪಾದಿಸಿವೆ. ಅವು, ಅಂತರ್ಮುಖತೆ-ಬಹಿರ್ಮುಖತೆ (Extroversion-introversion), ದುರ್ಬಲಮನಸ್ಕತೆ-ಅದುರ್ಬಲಮನಸ್ಕತೆ (Neuro-ticism-non-neuroticisim) ಮತ್ತು ಮನೋವಿಕ್ಷಿಪ್ತತೆ-ಅಮನೋವಿಕ್ಷಿಪ್ತತೆ (Psychotism-non-Psychotism).

ಜಾರ್ಜ್ ಕೆಲ್ಲಿ ಸಂಜ್ಞಾನಸಿದ್ಧಾಂತದ (Cognitive Theory) ಪ್ರವರ್ತಕ. ಜಗತ್ತಿನ ಆಗುಹೋಗುಗಳನ್ನು ನಿರೀಕ್ಷಿಸುವಲ್ಲಿ ಅಥವಾ ಅವುಗಳ ಅರ್ಥವಿವರಣೆಯನ್ನು ಕೊಡುವಲ್ಲಿ ವ್ಯಕ್ತಿಯೊಬ್ಬ ಉಪಯೋಗಿಸುವ ಸ್ವಂತ ಅರ್ಥಕಲ್ಪನೆ (Constructs) ಮೂಲಕ ವ್ಯಕ್ತಿತ್ವ ಸಂರಚನೆಯನ್ನು ಆತ ವಿವರಿಸುತ್ತಾನೆ. ವ್ಯಕ್ತಿಯು ಜಗತ್ತಿನ ಆಗುಹೋಗುಗಳನ್ನು ವಿವರಿಸಲು ಮಾತ್ರವಲ್ಲದೆ, ಆ ಘಟನೆಗಳನ್ನು ಮುಂಗಾಣುವ ಕಾರ್ಯದಲ್ಲೂ ಈ ಅರ್ಥಕಲ್ಪನೆಗಳನ್ನು ಬಳಸಲಾಗುತ್ತದೆ. ಕೇಂದ್ರೀಯ (Core) ಹಾಗೂ ಬಾಹ್ಯೀಯ (Peripheral) ಅರ್ಥಕಲ್ಪನೆಗಳನ್ನೂ, ವ್ಯಾಪ್ಯ (Permeable) ಹಾಗೂ ಅವ್ಯಾಪ್ಯ (Impermeable) ಅರ್ಥಕಲ್ಪನೆಗಳನ್ನೂ ಆತನು ಬಳಸುತ್ತಾನೆ. ಒಬ್ಬ ವ್ಯಕ್ತಿಯ ಸ್ವಂತ ಅರ್ಥಕಲ್ಪನಾ ವ್ಯವಸ್ಥೆಯನ್ನು (Personal construct system) ತಿಳಿದುಕೊಳ್ಳುವುದರ ಮೂಲಕ ಆತನ ವ್ಯಕ್ತಿತ್ವವನ್ನು ಅರಿತುಕೊಳ್ಳಲು ಮತ್ತು ಅದರ ಮುನ್ಸೂಚನೆ ಕೊಡಲು ಸಾಧ್ಯವಾಗುತ್ತದೆ ಎಂಬುದು ಕೆಲ್ಲಿಯ ಅಭಿಮತ.

ವ್ಯಕ್ತಿಯ ಪ್ರಮುಖ ಸಂರಚನಾ ಪರಿಕಲ್ಪನೆಯೆಂಬುದಾಗಿ ಇಂದ್ರಿಯ ಗೋಚರಾತ್ಮಕ ಆತ್ಮಕ್ಕೆ (Phenomenalogical self) ಕಾರ್ಲ್ ರೋಜರ್ಸ್ ಹೆಚ್ಚು ಮಹತ್ತ್ವಕೊಡುತ್ತಾನೆ. ಆತನ ಪ್ರಕಾರ, ತನ್ನ ಅವಿಭಾಜ್ಯ ಅಂಗ ಅಥವಾ ಲಕ್ಷಣ ಎಂಬುದಾಗಿ ವ್ಯಕ್ತಿ ಯಾವುದರ ಅನುಭವವನ್ನು ಪಡೆಯುತ್ತಾನೋ ಆ ಇಂದ್ರಿಯಗೋಚರ ಕ್ಷೇತ್ರದ ಎಲ್ಲ ವಿಭಾಗಗಳನ್ನೂ ಈ ಇಂದ್ರಿಯ ಗೋಚರ ಆತ್ಮ ಒಳಗೊಳ್ಳುತ್ತದೆ. ಸ್ವಾನುಭವಗಳನ್ನು (self-experiences) ಒಳಗೊಂಡಿರುವುದರಿಂದ, ಇಂದ್ರಿಯಗೋಚರಾತ್ಮಕ ಆತ್ಮ ಒಂದು ವಸ್ತುವೂ ಹೌದು ಮತ್ತು ವರ್ತನೆಯನ್ನು ನಿರ್ಧರಿಸುವ ಇಂದ್ರಿಯಗೋಚರ ಕ್ಷೇತ್ರದ ಒಂದು ಅಂಗವಾಗಿರುವುದರಿಂದ ಕರ್ತೃವೂ ಹೌದು. ಇದಕ್ಕೆ ಸಂಬಂಧಿಸಿದಂತೆಯೇ ರೋಜರ್ಸ್ ಕೊಟ್ಟಿರುವ ಮತ್ತೊಂದು ಪರಿಕಲ್ಪನೆಯೆಂದರೆ ಆದರ್ಶಾತ್ಮ (Ideal-self). ವ್ಯಕ್ತಿ ತಾನು ಪಡೆಯಬೇಕೆಂದು ಬಯಸುವ ಆತ್ಮಪರಿಕಲ್ಪನೆಯೇ ಈ ಆದರ್ಶಾತ್ಮ. ಆತ ಇದಕ್ಕೆ ಹೆಚ್ಚು ಮಹತ್ವಕೊಡುತ್ತಾನೆ.

ವಿಕಾಸದ ನಿರಂತರತೆಯನ್ನು ಎಲ್ಲ ಸೈದ್ಧಾಂತಿಕರೂ ಒತ್ತಿ ಹೇಳುವುದಿಲ್ಲ. ಫ್ರಾಯ್ಡ್, ಎರಿಕ್‌ಸನ್, ಮಿಲ್ಲರ್, ಡೋಲಾರ್ಡ್ ಇವರು ವಿಕಾಸದ ನಿರಂತರತೆಗೆ ಹೆಚ್ಚು ಮಹತ್ತ್ವ ಕೊಟ್ಟರೆ, ಆಡ್ಲರ್, ಸುಲ್ಲಿವನ್, ಆಂಗ್ಯಲ್ ಮತ್ತು ಮರ್ಫಿ ಇವರು ಅದಕ್ಕೆ ಸ್ವಲ್ಪ ಮಹತ್ತ್ವ ಕೊಡುತ್ತಾರೆ. ಹಿಂದಿನ ಘಟನೆಗಳು ಇಂದಿನ ಘಟನೆಗಳೊಂದಿಗೆ ಒಂದು ವ್ಯವಸ್ಥಿತ ಸಂಬಂಧವನ್ನು ಹೊಂದಿರುತ್ತವೆಯಲ್ಲವೆ. 'ವಿಕಾಸ ಒಂದೇ ರೀತಿಯ ತತ್ತ್ವಗಳ ಆಧಾರದಿಂದ ವಿವರಿಸಲು ಸಾಧ್ಯವಾಗುವಂಥ ಕ್ರಮವಾದ ಹಾಗೂ ಅವ್ಯಾಹತವಾದ ಒಂದು ಪ್ರಕ್ರಿಯೆ' (ಬಿ.ಸಿ.ಹ) ಎಂಬುದನ್ನು ವಿಕಾಸದ ನಿರಂತರತೆಯ ಪ್ರತಿಪಾದಕರು ಒತ್ತಿ ತೋರಿಸು

ತ್ತಾರೆ. ಶೈಶವ ಮತ್ತು ಬಾಲ್ಯಗಳಲ್ಲಿ ವ್ಯಕ್ತಿಯು ಬಾಯಿ (oral), ಗುದ (anal) ಮತ್ತು ಶಿಶ್ನ (phallic) ಹಂತಗಳ ಮೂಲಕ ಪ್ರಗತಿ ಹೊಂದುತ್ತಾನೆ ಎಂಬುದಾಗಿ ಫ್ರಾಯ್ಡ್ ತನ್ನ ಮನೋವಿಶ್ಲೇಷಣಾ ಸಿದ್ಧಾಂತದಲ್ಲಿ ಪ್ರತಿಪಾದಿಸುತ್ತಾನೆ. ವಿಕಾಸದ ಈ ಹಂತಗಳು ಮಾತ್ರವಲ್ಲದೆ, ವ್ಯಕ್ತಿತ್ವದ ವಿಕಾಸದ ಮೇಲೆ ಸ್ಥಿರಣ (Fixation) ಮತ್ತು ಹಿಂಜರಿತಗಳು (Regression) ಪ್ರಚಂಡ ಪ್ರಭಾವ ಬೀರುತ್ತವೆ. ವ್ಯಕ್ತಿತ್ವ ವಿಕಾಸದ ನಿರಂತರತೆಯನ್ನು ಹೇಳುವಾಗ ನವಫ್ರಾಯ್ಡ್‌ವಾದಿಗಳಲ್ಲಿ ಒಬ್ಬನಾದ ಎರಿಕ್‌ಸನ್ ಹೆಚು ನಿಖರದೃಷ್ಟಿಯನ್ನು ಹೊಂದಿರುವಂತೆ ಕಾಣುತ್ತದೆ. ವ್ಯಕ್ತಿಯ ವೃದ್ಧಿ ಮತ್ತು ವಿಕಾಸಗಳನ್ನು ವಿವರಿಸುವಾಗ ಆತನು ಜೀವಾಂಕುರ ಸೃಷ್ಟಿತತ್ತ್ವವನ್ನು (Epigenetic Principle) ಆಗಾಗ್ಗೆ ಪ್ರಸ್ತಾಪಿಸುತ್ತಾನೆ. ಸಾಮಾನ್ಯೀಕರಿಸಿದಾಗ. ಈ ತತ್ತ್ವ ಸ್ವಲ್ಪಮಟ್ಟಿಗೆ "ವೃದ್ಧಿಯಾಗುವ ಯಾವ ವಸ್ತುವೇ ಆಗಲಿ ಒಂದು ಅಡಿಪಾಯವನ್ನು (Ground plan) ಹೊಂದಿರುತ್ತದೆ. ಈ ಅಡಿಪಾಯದ ಮೇಲೆ ವಿವಿಧ ವಿಭಾಗಗಳು ಬೆಳೆಯುತ್ತವೆ. ಒಂದು ಕ್ರಿಯಾತ್ಮಕಪೂರ್ಣವಾಗಿ (Functional whole) ಪರಿಣಮಿಸಲು ಎಲ್ಲಾ ವಿಭಾಗಗಳೂ ಬೆಳೆಯುವ ವರೆಗೆ ಅವುಗಳಲ್ಲಿ ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ಹಿರಿಮೆಯನ್ನು (Ascendancy) ಹೊಂದಿರುತ್ತದೆ", (೪.೫೭೭) ಎಂಬುದಾಗಿ ತಿಳಿಸುತ್ತದೆ. ಈ ತತ್ತ್ವಕ್ಕೆ ಅನುಗುಣವಾಗಿಯೇ, ಪರಿಪಕ್ವನ ಕಾಲದ ವರೆಗಿನ ವ್ಯಕ್ತಿವಿಕಾಸದ ಎಂಟು ಹಂತಗಳನ್ನು ಎರಿಕ್‌ಸನ್ ಪ್ರಸ್ತಾಪಿಸುತ್ತಾನೆ. ಸಾಮಾಜಿಕ ಪ್ರಭಾವಗಳಿಗೆ ಒಳಗಾಗುವ ಹಂತಗಳನ್ನು ಆತ 'ನಿರ್ಧಾರಕ ಅವಧಿಗಳು' (Critical periods) ಎಂದು ಕರೆಯುತ್ತಾನೆ. ಶೈಶವ (Infancy) (ಹುಟ್ಟಿನಿಂದ ಸುಮಾರು ಒಂದು ವರ್ಷದ ವರೆಗೆ) ನಂಬಿಕೆ–ಅಪನಂಬಿಕೆ ಲಕ್ಷಣಗಳಿಂದಲೂ; ಉತ್ತರ ಶೈಶವ (Later infancy) (ಸುಮಾರು ಒಂದು ವರ್ಷದಿಂದ ಮೂರು ವರ್ಷದ ವರೆಗೆ) ಸ್ವಾಯತ್ತತೆ(autonomy)–ಲಜ್ಜೆ ಮತ್ತು ಶಂಕೆ ಈ ಲಕ್ಷಣಗಳಿಂದಲೂ; ಪೂರ್ವಬಾಲ್ಯ (Early childhood) (ಸುಮಾರು ನಾಲ್ಕರಿಂದ ಐದು ವರ್ಷಗಳ ವರೆಗೆ) ಉಪಕ್ರಮಿಸುವ (Initiating) ದೋಷಭಾವ (Guilt–feeling) ಲಕ್ಷಣಗಳಿಂದಲೂ; ಮಧ್ಯಮ ಬಾಲ್ಯ(Middle childhood) (ಸುಮಾರು ಆರರಿಂದ ಹನ್ನೆರಡು ವರ್ಷಗಳ ವರೆಗೆ) ಉದ್ಯೋಗಶೀಲತೆ (Industry)–ಕೀಳರಿಮೆ(Inferiority)ಲಕ್ಷಣಗಳಿಂದಲೂ; ಹರಯ ಮತ್ತು ತಾರುಣ್ಯಗಳು (Puberty and Adolescence) (ಸುಮಾರು ಹನ್ನೆರಡರಿಂದ ಇಪ್ಪತ್ತು ವರ್ಷಗಳ ವರೆಗೆ) ಅಹಂ–ತನ್ಮಯತೆ (Egoidentity)–ಪಾತ್ರಗೊಂದಲ (Role-confusion)ಲಕ್ಷಣಗಳಿಂದಲೂ; ಪೂರ್ವ ಪ್ರೌಢಾವಸ್ಥೆಯು (Early adulthood) ಆತ್ಮೀಯತೆ–ಏಕಾಕಿತನ (Isolation) ಲಕ್ಷಣಗಳಿಂದಲೂ; ಮಧ್ಯಮ ಪ್ರೌಢಾವಸ್ಥೆಯು ಉತ್ಪಾದಕತೆ (Generativity)–ಸ್ಥಗಿತತೆ (Stagnation) ಲಕ್ಷಣಗಳಿಂದಲೂ; ಉತ್ತರ ಪ್ರೌಢಾವಸ್ಥೆಯು ದೃಢತೆ (Integrity)–ಹತಾಶೆ (Despair) ಲಕ್ಷಣಗಳಿಂದಲೂ ಕೂಡಿರುತ್ತವೆ. ಇರುವಿಕೆಯ ಅಡೆತಡೆಗಳೊಂದಿಗೆ ವ್ಯಕ್ತಿತ್ವ ನಿರಂತರವಾಗಿ ಹೋರಾಡುತ್ತಿರುವುದರಿಂದ ವಿಕಾಸದ ಅವಧಿಯಲ್ಲಿ ಮೂಲಭೂತವಾದ ಸಮ ಮತ್ತು ವಿಷಮ (Positive and negative) ಅಂಶಗಳನ್ನು ವ್ಯಕ್ತಿ ಕಲಿತುಕೊಳ್ಳುತ್ತಾನೆ: ತನ್ನ ಜೀವಿತಾವಧಿಯ ವಿವಿಧ ಹಂತಗಳನ್ನು ಜಯಶಾಲಿಯಾಗಿ ದಾಟುವುದಾದರೆ. ಅದು ಆತನ ವ್ಯಕ್ತಿತ್ವ ಉತ್ತಮವಾಗಿ ವಿಕಾಸವಾಗಲು ಕಾರಣವಾಗುತ್ತದೆ. ಆದರೆ ಮೊದಮೊದಲ ಹಂತಗಳಲ್ಲಿ ಆಗುವ ಅಪಜಯಗಳು ಮುಂದಿನ ಹಂತಗಳಲ್ಲಿ ವ್ಯಕ್ತಿತ್ವದ ಬೆಳವಣಿಗೆ ಪೂರ್ಣರೀತಿಯಲ್ಲಿ ಆಗುವುದಕ್ಕೆ ಅಪಾಯಕಾರಿಗಳಾಗಬಹುದು. ಎರಿಕ್‌ಸನ್ನನ ಅಹಂ ವಿಕಾಸ (Ego development) ಸಿದ್ಧಾಂತ ಮತ್ತು ಹ್ಯಾವಿಗ್‌ಹರ್ಸ್ಟನ ವಿಕಾಸಕ್ರಿಯೆ (Developmental tasks)ಗಳ ಸಂಕಲ್ಪನೆ ಇವುಗಳ ನಡುವೆ ಸಾಮ್ಯವಿರುವುದನ್ನು ಕೆಲವರು ಕಾಣುತ್ತಾರೆ.

ಪ್ರ-ಅ ಸೈದ್ಧಾಂತಿಕರಲ್ಲಿ ವಿಕಾಸದ ನಿರಂತರತೆಯನ್ನು ಪ್ರತಿಪಾದಿಸುವವರೆಂದರೆ ಮಿಲ್ಲರ್ ಮತ್ತು ಡೋಲಾರ್ಡ್. ಪ್ರಾಯೋಗಿಕ ವಿಧಾನವನ್ನು ಮನೋವಿಶ್ಲೇಷಣಾತ್ಮಕ ಸಿದ್ಧಾಂತಗಳೊಂದಿಗೂ ಮಾನವಶಾಸ್ತ್ರೀಯ ಅಧ್ಯಯನಗಳಿಂದ ದೊರೆತ ಪುರಾವೆಗಳೊಂದಿಗೂ ಫಲಪ್ರದವಾಗಿ ಅವರು

ಸಮನ್ವಯಗೊಳಿಸುತ್ತಾರೆ. ಪ್ರೌಢವರ್ತನೆಯನ್ನು ನಿರ್ಧರಿಸುವಲ್ಲಿ, ಜೀವಿತದ ಮೊದಲ ಆರು ವರ್ಷಗಳ ಅವಧಿಯಲ್ಲಿ ಆಗುವ ಅನುಭವಗಳು ನಿರ್ಧಾರಕ ಪಾತ್ರವನ್ನು ನಿರ್ವಹಿಸುತ್ತವೆ ಎಂಬ ಮನೋವಿಶ್ಲೇಷಣೆ. ಸೈದ್ಧಾಂತಿಕ ನಂಬಿಕೆಗಳನ್ನು ಅವರು ಒಪ್ಪುತ್ತಾರೆ. ಶೈಶವದಲ್ಲಿ, ಮೊಲೆಯೂಡುವುದು. ಶೌಚ ತರಬೇತಿ, (Toilet training). ಲಿಂಗ ತರಬೇತಿ ಮತ್ತು ಕೋಪ ಹಾಗೂ ಆಕ್ರಮಣಗಳ ನಿಯಂತ್ರಣದ ತರಬೇತಿ–ಈ ರೀತಿಯ ನಾಲ್ಕು ಸನ್ನಿವೇಶಗಳನ್ನು ಅವರು ಗುರುತಿಸುತ್ತಾರೆ. ಈ ನಾಲ್ಕು ಸನ್ನಿವೇಶಗಳಲ್ಲಿ ತಂದೆತಾಯಿಗಳ ಮೂಲಕ ಪ್ರಕಟವಾಗುವ ಸಾಂಸ್ಕೃತಿಕ ಕೇಳಿಕೆಗಳು (Demands) ಮಗುವಿನ ಸಾಮಾನ್ಯ ವಿಕಾಸದ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಬೀರುವ ಸಾಧ್ಯತೆಯಿದೆ. ಮೇಲೆ ಹೇಳಲಾದ ನಾಲ್ಕು ಸನ್ನಿವೇಶಗಳೊಂದಿಗೆ ವ್ಯವಹರಿಸಲು ಬೇಕಾದ ಜಟಿಲ ರೀತಿಯ ವರ್ತನಾ ರೂಪಗಳನ್ನು ಕಲಿಯಲು ಬೇಕಾದ ಸಾಂಸ್ಕೃತಿಕ ಕೇಳಿಕೆಗಳಿಗೆ ಅನುಗುಣವಾಗಿ ನಡೆಯಲು ಮಗು ಇನ್ನೂ ಸಜ್ಜಾಗಿಲ್ಲದ ಕಾರಣದಿಂದಾಗಿ ತಂತ್ರಿಕಾತಾಪದ ಒಳತೋಟಿಗಳು (Neurotic Conflicts) ಅವನಲ್ಲಿ ಕಾಣಿಸಿಕೊಳ್ಳುತ್ತವೆ. ಅವುಗಳೇ ಮುಂದಿನ ಜೀವನದಲ್ಲಿ ಉಂಟಾಗಬಹುದಾದ ತೀವ್ರತರ ಸಂವೇಗಾತ್ಮಕ ಸಮಸ್ಯೆಗಳಿಗೆ ಮೂಲಗಳಾಗಿ ಪರಿಣಮಿಸುತ್ತವೆ.

ಯುಂಗ್. ಆಲ್ಪೋರ್ಟ್. ಲೆವಿನ್. ಕೆಲ್ಲಿ ಮತ್ತಿತರ ಸೈದ್ಧಾಂತಿಕರು. ವಿಕಾಸದಲ್ಲಿ ನಿರಂತರತೆಯ ಅಭಾವವಿರುವುದೆಂದು ಹೇಳುತ್ತಾರೆ. ಅವರ ಪ್ರಕಾರ ಪ್ರೌಢವ್ಯಕ್ತಿಯ ಕಾರ್ಯಶೀಲತೆ ಶೈಶವ ಮತ್ತು ಬಾಲ್ಯಾವಧಿಗಳಲ್ಲಿ ಆದ ಘಟನೆಗಳಿಂದ ಸಾಪೇಕ್ಷವಾಗಿ ಮುಕ್ತವಾಗಿರುತ್ತದೆ.

ಕೆಲವು ಮಂದಿ ಮನೋವಿಶ್ಲೇಷಕರು ಹೇಳುವಂತೆ. ಶೈಶವದಿಂದ ಪ್ರೌಢಾವಸ್ಥೆಯ ವರೆಗೆ ವ್ಯಕ್ತಿತ್ವ ವಿಕಾಸದಲ್ಲಿ ಕಂಡುಬರುವ ವಿಶಿಷ್ಟ ಹಂತಗಳನ್ನು ಯುಂಗ್ ನಿರ್ದಿಷ್ಟವಾಗಿ ಹೇಳುವುದಿಲ್ಲ. ಆದರೂ. ಕೆಲವು ವಯೋಮಾನಗಳಲ್ಲಿ ಸಾಧಾರಣವಾಗಿ ಕಂಡುಬರುವ ಚಟುವಟಿಕೆಗಳಲ್ಲಿ ಕಾಮವಾಂಛೆ ವ್ಯಯವಾಗುವುದನ್ನು ಆತ ಸ್ಪಷ್ಟಪಡಿಸುತ್ತಾನೆ. ಉದಾಹರಣೆಗೆ. ಲೈಂಗಿಕ ಮೌಲ್ಯಗಳು ಐದು ವರ್ಷಗಳಿಗೆ ಮುಂಚೆಯೇ ಕಾಣಿಸಿಕೊಂಡು ತಾರುಣ್ಯದಲ್ಲಿ ತಮ್ಮ ಉತ್ಕೃಷ್ಟ ಸ್ಥಿತಿಯನ್ನು ಮುಟ್ಟುತ್ತವೆ. ತಾರುಣ್ಯ ಸಾಮರ್ಥ್ಯಗಳಿಂದ ಕೂಡಿರುವ ನವಯುವಕನೋರ್ವ ಯಾವುದಾದರೂ ಉದ್ಯೋಗವನ್ನು ಕೈಕೊಂಡು ಕುಟುಂಬ ಜೀವನವನ್ನು ಪ್ರಾರಂಭಿಸಬಹುದು. ಮೂವತ್ತರ ಉತ್ತರಾರ್ಧ ಅಥವಾ ನಾಲ್ವತ್ತರ ಆದಿಭಾಗದಲ್ಲಿ ತಾರುಣ್ಯದ ಅಭಿರುಚಿಗಳು ಮತ್ತು ಹವ್ಯಾಸಗಳು ಬದಲಾಗುವ ಸಾಧ್ಯತೆಯಿದೆ. ಅಲ್ಲದೆ. ದೈಹಿಕ ಅಗತ್ಯಗಳಿಗಿಂತ ಹೆಚ್ಚಾಗಿ ಸಾಂಸ್ಕೃತಿಕ. ಸಾಮಾಜಿಕ. ಹಾಗೂ ಧಾರ್ಮಿಕ ಮೌಲ್ಯ ಲಕ್ಷಣಗಳಿಂದ ಕೂಡಿದ ಅಭಿರುಚಿಗಳು ಈ ಕಾಲದಲ್ಲಿ ಬೆಳೆಯಬಹುದು. ಈ ರೀತಿ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಆಗುವ ಅಂತರಣ (Transition) ಸರಳವಾಗಿರದೆ ಅಡೆತಡೆಗಳಿಂದ ಕೂಡಿದ್ದರೆ. ವ್ಯಕ್ತಿತ್ವ ಶಾಶ್ವತವಾಗಿ ಕುಂಠಿತವಾಗಬಹುದಲ್ಲದೆ. ಕಾಮವಾಂಛೆ ಶಾಶ್ವತವಾಗಿ. ಸುಪ್ತ ಚೇತನಕ್ಕೆ ಪಂಜರಿತವಾಗಿ ಪ್ರಗತಿಯ ತಡೆಗೆ ಕಾರಣವಾಗುತ್ತದೆ.

ನಿರಂತರತೆಯ ತತ್ತ್ವವನ್ನು ಆಲ್ಪೋರ್ಟ್ ಸಮರ್ಥಿಸುವುದಿಲ್ಲ. ಸಾಮಾನ್ಯ ವ್ಯಕ್ತಿತ್ವ ತನ್ನ ಶೈಶವ ಕಾಲೀನ ಅಭಿವ್ಯಕ್ತತೆಗಳನ್ನು ತನ್ನ ವಿಕಾಸದ ಜೊತೆಜೊತೆಗೆ. ತೆಗೆದುಕೊಂಡು ಹೋಗದೆ. ಅವುಗಳನ್ನು ಮೀರಿ ಬೆಳೆಯುತ್ತದೆ ಎಂಬುದು ಆತನ ವಾದ. ಆತನ ಪ್ರಕಾರ ಪರಿಪಕ್ವ ವ್ಯಕ್ತಿತ್ವ ಸಹಜ ಪ್ರೇರಣೋತ್ತರ ಬೆಳವಣಿಗೆ (Post-instinctive development) ರೀತಿಯನ್ನು ಪ್ರತಿನಿಧಿಸುತ್ತದೆ.

ವಯಸ್ಕ ತನ್ನ ಜೈವಿಕ ಅಗತ್ಯಗಳನ್ನು ಮಾತ್ರ ಹೊಂದಿರುವುದಿಲ್ಲ. ಆದರೆ ಅದೇ ಸಮಯದಲ್ಲಿ. ಕ್ರಿಯಾತ್ಮಕ ಸ್ವಾಯತ್ತತೆಯಲ್ಲಿ ಕೊನೆಗೊಳ್ಳುತ್ತಿರುವ. ಪೂರ್ಣವಾಗಿ ಸುಸಂಘಟಿತ ಅಹಂ ಆಗಿರುವ ಆತ ಸಮಾಜದ ಒಬ್ಬ ಸಂಘಜೀವಿಯೂ ಆಗಿರುತ್ತಾನೆ. ಆದರೆ. ಶಿಶುವು "ಅನಾಗರಿಕ ಅಗತ್ಯಗಳಿಂದ ಅಭಿಪ್ರೇರಿತವಾಗಿರುವ ಹಾಗೂ ತೀವ್ರತರವಾದ ಪ್ರತಿವರ್ತನದ ಅಸ್ತಿತ್ವವುಳ್ಳ ಒಂದು ಅನುವಂಶಿಕ ಜೀವಿ"ಯಾಗಿರುತ್ತದೆ. ಆದ್ದರಿಂದಲೇ ಶಿಶು ಮತ್ತು ವಯಸ್ಕ ಇವರುಗಳ ಅಭಿಪ್ರೇರಣಾ–ಸಂರಚನೆಗಳ (Motive-structure) ನಡುವೆ ವ್ಯತ್ಯಾಸವನ್ನು ಯಾರಾದರೂ ಕಾಣಲು ಸಾಧ್ಯ. ಚೋದನೆ–

ತಗ್ಗುವಿಕೆಯ (Drive-reduction) ಮಟ್ಟದಲ್ಲಿ ಶಿಶು ಪ್ರವರ್ತಿಸಿದರೆ. ಕ್ರಿಯಾತ್ಮಕ ಸ್ವಾಯತ್ತತೆ ಲಕ್ಷಣಗಳಿಂದ ಕೂಡಿದ ವ್ಯವಸ್ಥಿತ ಹಾಗೂ ಬಹುವಾಗಿ ಕೇಂದ್ರೀಕೃತವಾದ ವಿಶೇಷಕಗಳ ಒಂದು ಮಾತೃಕೆಯಿಂದ (Matrix)ವಯಸ್ಕ ಕಾರ್ಯನಿರ್ವಹಿಸುತ್ತಾನೆ. ವ್ಯಕ್ತಿತ್ವದ ಎರಡು ಸಿದ್ಧಾಂತ ಗಳಿಗೆ ಅವಕಾಶವಿರಬಹುದೆಂದು ಯಾರಾದರೂ ಆಲೋಚಿಸಲು ಇದು ಅನುವುಮಾಡಿಕೊಡುತ್ತದೆ. ಆ ಸಿದ್ಧಾಂತಗಳಲ್ಲಿ ಒಂದು ವಿಕಾಸದ ಮೊದಲ ಹಂತಗಳಿಗೆ ಸಂಬಂಧಿಸಿದ್ದರೆ, ಮತ್ತೊಂದು ಪರಿಪಕ್ವ ವ್ಯಕ್ತಿತ್ವಕ್ಕೆ ಸಂಬಂಧಿಸಿದೆ.

ವಿಕಾಸ ಒಂದು ನಿರಂತರಪ್ರಕ್ರಿಯೆ ಎಂಬುದಾಗಿ ಲೆವಿನ್ ನಂಬಿದರೂ, ಪ್ರತ್ಯೇಕವಾದ ಹಂತ ಗಳನ್ನು ಗುರುತಿಸುವುದು ಕಷ್ಟವೆಂದು ಆತ ಸ್ಪಷ್ಟಪಡಿಸುತ್ತಾನೆ. ಆದ್ದರಿಂದ ವಿಕಾಸವನ್ನು ವಿವರಿಸಲಿರುವ ಒಂದು ಆಯು-ಪ್ರಣಾಲಿ (Age-scale)ಮಾನಸಿಕ ವೃದ್ಧಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಅಸಮರ್ಥವಾಗುತ್ತದೆ ಎಂದು ಹೇಳಿ, ಆಯು-ಪ್ರಣಾಲಿ ಪರಿಕಲ್ಪನೆಯನ್ನು ಕೈಬಿಡಬೇಕೆಂದು ಆತ ವಾದಿಸುತ್ತಾನೆ. ಅದಕ್ಕೆ ಬದಲಾಗಿ ವಿಭೇದೀಕರಣ (Differentiation). ವ್ಯವಸ್ಥೆ (Organiza tion) ಮತ್ತು ಸಂಘಟನೆಗಳಂಥ (Integration) ಪರಿಕಲ್ಪನೆಗಳನ್ನು ಬಳಸುವುದನ್ನು ಸಮರ್ಥಿಸುತ್ತಾನೆ. ಆವರೆ ಮೂರು ವರ್ಷದ ಹಿಂದು ಮುಂಚಿನ ಕಾಲದಲ್ಲಿ ಮಹತ್ತ್ವಪೂರ್ಣ ಪರಿವರ್ತನೆ ಗಳು ಆಗುವುದನ್ನೂ ಅವುಗಳನ್ನು ಹಿಂಬಾಲಿಸಿ ತಾರುಣ್ಯದ ವರೆಗೆ ಸಾಪೇಕ್ಷ ಸ್ಥಿರತೆಯಿಂದ ಕೂಡಿರುವ ಅವಧಿಯನ್ನೂ ತಾರುಣ್ಯವಲ್ಲಿ ಆಗಬೇಕಾಗಿರುವ ಚರಾತ್ಮಕ ವ್ಯವಸ್ಥೆ (Dynamic Organiza tion) ಮತ್ತು ಕೊನೆಯದಾಗಿ ಅದು ಪ್ರೌಢಾವಸ್ಥೆಯ ಸ್ಥಿರತೆಯಲ್ಲಿ ಪರ್ಯವಸಾನವಾಗುವುದನ್ನೂ ಆತ ಗಮನಿಸುತ್ತಾನೆ. ವ್ಯಕ್ತಿತ್ವ ವಿಕಾಸದ ನಿರಂತರತೆಗೆ ಪ್ರಾಮುಖ್ಯ ಕೊಡದಿರುವ ರೋಜರ್ಸ್. ಮಾಸ್ಲೋ ಮತ್ತು ಇತರ ಕೆಲವು ಸೈದ್ಧಾಂತಿಕರನ್ನೂ ನಾವು ಇಲ್ಲಿ ಹೆಸರಿಸಬಹುದು.

ತುಡಿತ-ತಗ್ಗುವಿಕೆ (Tension-reduction) ಅಥವಾ ಚೋದನೆ-ತಗ್ಗುವಿಕೆಯನ್ನು (Drive-reduction) ಆಧರಿಸಿರುವ ಸಿದ್ಧಾಂತಗಳು (ಉದಾ: ಮನೋವಿಶ್ಲೇಷಣ ಮತ್ತು ಪ್ರ-ಅ ಸಿದ್ಧಾಂತಗಳು) ವ್ಯಕ್ತಿತ್ವದ ವಿಕಾಸಾತ್ಮಕ ಅಂಶಗಳನ್ನು ಒತ್ತಿ ಹೇಳಿದರೂ ಅವು ಒಂದು ಸಮಗ್ರ ವ್ಯಕ್ತಿತ್ವ ವ್ಯವಸ್ಥೆಯಲ್ಲಿರುವ ವಿನ್ಯಾಸ ಮತ್ತು ಸಂಘಟನೆಗೆ ಸಂಪೂರ್ಣವಾಗಿ ಕಾರಣವನ್ನು ಕೊಡಲಾರವು. ಹೆಚ್ಚೆಂದರೆ, ಅವು, ಅನುಭವಿಸಲಾದ ಚೋದನೆ ಅಥವಾ ತುಡಿತದ ತೀವ್ರತೆ ತಗ್ಗಿದಾಗ ವ್ಯಕ್ತಿಯ ಸಮ ತೋಲನಸ್ಥಿತಿಯನ್ನು ಪುನಃಸ್ಥಾಪಿಸುವುದನ್ನು ವಿವರಿಸುತ್ತವೆಯಷ್ಟೆ. ವಿಕಾಸದ ಒಂದು ಹಂತದ ವರೆಗೆ ವ್ಯಕ್ತಿತ್ವವನ್ನು ನಿರೂಪಿಸುವಲ್ಲಿ ಈ ಕಲ್ಪಿತಭಾವಗಳು ನೆರವಾಗಬಹುದು. ಶೈಶವದಿಂದ ಪರಿಪಕ್ವನದ ವರೆಗೆ ವ್ಯಕ್ತಿತ್ವವಿಕಾಸದ ಒಂದು ಪರಿಪೂರ್ಣ ಚಿತ್ರವನ್ನು ಕೊಡಲು ಹೆಚ್ಚು ಸಮರ್ಥವಾದ ಅರ್ಥ ಕಲ್ಪನೆಗಳ ಅಗತ್ಯವಿದೆ. ಯೂಂಗ್. ಆಲ್ಪೋರ್ಟ್. ಆಂಗ್ಯಲ್, ಫ್ರಾಮ್. ಮಾಸ್ಲೋ. ರೋಜರ್ಸ್, ಕ್ಯಾಟ್ರಿಲ್ ಮತ್ತು ಇತರ ಕೆಲವು ಸೈದ್ಧಾಂತಿಕರು ವ್ಯಕ್ತಿತ್ವದ ಪೂರ್ಣರೂಪದ ವಿಕಾಸವನ್ನೂ ವಿವರಿಸಲು ಪ್ರಯತ್ನಿಸಿದರು.

ವ್ಯಕ್ತಿತ್ವವಿಕಾಸದ ಅಂತಿಮಗುರಿಯೆಂದರೆ ತನ್ನತನದ (selfhood) ಸಾಕ್ಷಾತ್ಕಾರ ವೆಂಬುದನ್ನು ಒತ್ತಿ ಹೇಳಿದ ಮೊದಲಿಗನೆಂದರೆ ಯೂಂಗ್. ಒಂದು ಸ್ಥಿರವಾದ ಏಕತೆಯ ದಿಸೆಯಲ್ಲಿ ವಿಕಾಸವಾಗುವ ಪ್ರವೃತ್ತಿ ವ್ಯಕ್ತಿತ್ವಕ್ಕೆ ಇದೆ. ವ್ಯಷ್ಟೀಕರಣ ಪ್ರಕ್ರಿಯೆಯಿಂದ (Individuation Process) ಇದು ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯಿಂದಾಗಿ, ವ್ಯಕ್ತಿ ಹುಟ್ಟಿರುವ ಮೂಲ ಅವಿಭೇದಿತ ಪೂರ್ಣತೆಯಿಂದ, ವಿವಿಧ ವ್ಯಕ್ತಿತ್ವ ವ್ಯವಸ್ಥೆಗಳು ಸಂಪೂರ್ಣವಾಗಿ ವಿಭೇದನೆ ಹೊಂದುತ್ತವೆ ಉಪೇಕ್ಷೆಗೊಳಗಾದ ಹಾಗೂ ಬಡಕಲಾಗಿ ವಿಕಾಸ ಹೊಂದುವ ವ್ಯವಸ್ಥೆಗಳು ಪ್ರತಿರೋಧ (Resista- nce) ಕೇಂದ್ರಗಳಾಗಿ ಕಾರ್ಯನಿರ್ವಹಿಸಬಹುದಲ್ಲವೆ. ವ್ಯಕ್ತಿಯು ಮನೋತಂತುವಿಕಾರಿ (Psycho- neurotic) ಆಗುವಂತೆ ಅವು ಒತ್ತಡ ಹಾಕಬಹುದು. ಮನುಷ್ಯನ ವ್ಯಕ್ತಿತ್ವದ ವಿವಿಧ ಅಂಗಾಂಶ ಗಳು ಪರಿಪೂರ್ಣರೀತಿಯಲ್ಲಿ ವಿಭೇದನಗೊಳ್ಳುವುದರಿಂದ ಮತ್ತು ಅವುಗಳ ಸಂವಾದಾತ್ಮಕ ಮಿಲನದಿಂದ ಅಹಂಗೆ ಬದಲಾಗಿ ಆತ್ಮವು ಮಾನಸಿಕ ಕೇಂದ್ರವಾಗಿ ಪ್ರತಿಷ್ಠಿತವಾಗುತ್ತದೆಯಲ್ಲದೆ.

ವ್ಯಕ್ತಿ ತನ್ನ ಪರಮಗುರಿಯನ್ನು, ಅಂದರೆ ಆತ್ಮಸಾಕ್ಷಾತ್ಕಾರವನ್ನು. (self-actualization) ಪಡೆಯುತ್ತಾನೆ. ಸಾಧಿಸಲೆಂದು ಎಲ್ಲಾ ಜನರೂ ಹೋರಾಡುತ್ತಿರುವ ಪರಮಗುರಿಯೊಂದನ್ನು ಆಡ್ಲರನೂ ಸಂಕಲ್ಪಿಸುತ್ತಾನೆ. ಆ ಗುರಿಯನ್ನು 'ಶ್ರೇಷ್ಠತೆಗಾಗಿ ಹೋರಾಟ' (Striving Superiority) ಎಂದು ಆತ ಕರೆದಿದ್ದಾನೆ. 'ಶ್ರೇಷ್ಠತೆ' ಎಂಬ ಪದವನ್ನು ಸಾಮಾಜಿಕ ವಿಶಿಷ್ಟತೆಯ ಅರ್ಥದಲ್ಲಾಗಲಿ ಸಮಾಜದಲ್ಲಿ ಒಂದು ಅತ್ಯುತ್ಕೃಷ್ಟ ಸ್ಥಾನದ ಅರ್ಥದಲ್ಲಾಗಲಿ ಬಳಸದೆ, ಯೂಂಗನ ಅಥವಾ ಗೋಲ್ಡ್‌ಸ್ಟೀನನ ಆತ್ಮ ಸಾಕ್ಷಾತ್ಕಾರದ ಅರ್ಥದಲ್ಲಿ ಆತ ಬಳಸುತ್ತಾನೆ. ಈ ಶ್ರೇಷ್ಠತೆಗಾಗಿ ಆಗುವ ಹೋರಾಟವೇ ವ್ಯಕ್ತಿತ್ವಕ್ಕೆ ಸ್ಥಿರತೆ ಮತ್ತು ಏಕತೆಗಳನ್ನು ಒದಗಿಸಿಕೊಡುತ್ತದೆ. ಪ್ರಸಿದ್ಧ ತಂತ್ರಿಕಾ ಮನೋವೈದ್ಯನಾದ (Neuro-Psychiatrist) ಗೋಲ್ಡ್‌ಸ್ಟೀನನ ಪ್ರಕಾರ ಆತ್ಮಸಾಕ್ಷಾತ್ಕಾರ ಅಧಿ–ಅಭಿಪ್ರೇರಕ. (Master-motive) ಅಥವಾ ಸರ್ವೋತ್ಕೃಷ್ಟ ಚೋದನೆಯಾಗಿದೆ. ವ್ಯಕ್ತಿ ತನಗೆ ದೊರೆಯುವ ವಿಧಾನಗಳ ಮೂಲಕ, ತನ್ನಲ್ಲಿರುವ ಅಂತಃಸತ್ವಗಳನ್ನು ಸಾಕ್ಷಾತ್ಕರಿಸಿಕೊಳ್ಳಲು ನಿರಂತರವಾಗಿ ಹೋರಾಡುವಂತೆ ಈ ಚೋದನೆ ಪ್ರೇರೇಪಿಸುತ್ತದೆ. ಈ ಉದ್ದೇಶದ ಏಕಮುಖತೆಯೂ ಆತನ ವ್ಯಕ್ತಿತ್ವಕ್ಕೆ ದಿಗ್ದರ್ಶನ ಮತ್ತು ಗುರಿಗಳನ್ನು ಒದಗಿಸುತ್ತದೆ. ಆತ್ಮಸಾಕ್ಷಾತ್ಕಾರವನ್ನು ಪಡೆಯುವುದರಲ್ಲಿ ಒಬ್ಬ ಸಾಧಿಸಬಹುದಾದ ಪ್ರಗತಿ ಆತನ ಜನ್ಮಜಾತ ಅಂತಃಸತ್ವಗಳು ಮತ್ತು ಆತ ವಾಸಿಸುತ್ತಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ಅನುಕೂಲಶೀಲತೆಗಳನ್ನು ಅವಲಂಬಿಸುತ್ತದೆ. ಅಸ್ವಸ್ಥ ಮನಸ್ಸುಗಳಿಗೆ ಚಿಕಿತ್ಸೆ ಮಾಡುವಾಗ ಪಡೆದ ಅನುಭವಗಳನ್ನು ಆಧರಿಸಿ ಮನೋವೈದ್ಯರು ನೀಡಿರುವ ಸತ್ವಪ್ರಕಾಶಕ ಒಳನೋಟಗಳಿಗೆ ವಿರುದ್ಧವಾಗಿ, ಆರೋಗ್ಯವಂತರಾದ ಹಾಗೂ ಪರಿಪೂರ್ಣ ವ್ಯಕ್ತಿಗಳ ವ್ಯಕ್ತಿತ್ವವಿಕಾಸದ ದೃಷ್ಟಿಕೋನದಿಂದ ಆ ವ್ಯಕ್ತಿಗಳ ಮೇಲೆ ನಡೆಸಿದ ಅಧ್ಯಯನಗಳ ಮೂಲಕ ಮಾಸ್ಲೋ ಈ ಕ್ಷೇತ್ರದಲ್ಲಿ ಪ್ರವೇಶಿಸುತ್ತಾನೆ. ಒಂದು ಸ್ವಾಭಾವಿಕ ತುರ್ತು ಅನುಕ್ರಮ ಶ್ರೇಣಿಯಲ್ಲಿ (Hierarchy of urgency) ವ್ಯವಸ್ಥಿತವಾಗಿರುವ ಅಭಿಪ್ರೇರಣಾತ್ಮಕ ಸಂರಚನೆಯೊಂದು (Motivational structure) ಇರುವುದನ್ನೂ ಆತನ ಅಧ್ಯಯನಗಳು ತೋರಿಸಿಕೊಟ್ಟುವು. ಈ ಸಂರಚನೆಯು ಶಾರೀರಿಕ ಅಗತ್ಯಗಳಲ್ಲಿ ಮೊದಲಾಗಿ, ಸುರಕ್ಷಿತತೆ (safety). ಪ್ರೇಮ ಹಾಗೂ ಆತ್ಮಗೌರವದ (self-esteem) ಅಹಂ–ಅಗತ್ಯಗಳ (Ego-needs) ಮೂಲಕ ಹಾಯ್ದು ಕೊನೆಯಲ್ಲಿ ಆತ್ಮಸಾಕ್ಷಾತ್ಕರಣ ಅಗತ್ಯಗಳಲ್ಲಿ ಪರ್ಯವಸಾನವಾಗುತ್ತದೆ. ಮೂಲ ಅಗತ್ಯಗಳು ಸಂತೃಪ್ತಿ ಪಡೆದ ಅನಂತರ ವ್ಯಕ್ತಿ ತನಗೆ ಘನತೆ ಮತ್ತು ಗೌರವಗಳನ್ನು ತಂದು ಕೊಡುವ ಕೆಲಸದತ್ತ ತನ್ನ ಗಮನವನ್ನು ಹರಿಸುತ್ತಾನೆ. ಅಹಂ ಅಗತ್ಯಗಳಾದ ಆತ್ಮಗೌರವ ಮತ್ತು ಸ್ವೀಕಾರಗಳು (Recognition) ತೃಪ್ತಿ ಹೊಂದಿದ ಮೇಲೆ ಆತ್ಮ ಸಾಕ್ಷಾತ್ಕರಣದ ಅಗತ್ಯ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಆತ್ಮಸಾಕ್ಷಾತ್ಕಾರವನ್ನು ಸಾಧಿಸುತ್ತಿರುವವರನ್ನು ಸಾಮಾನ್ಯರಿಂದ ಪ್ರತ್ಯೇಕಿಸುವಂಥ ಸುಮಾರು ಹದಿಮೂರು ಲಕ್ಷಣಗಳನ್ನು ಮಾಸ್ಲೋ ಪಟ್ಟಿ ಮಾಡಿದ್ದಾನೆ. ಆತ್ಮಸಾಕ್ಷಾತ್ಕಾರವನ್ನು ಪಡೆಯುತ್ತಿರುವವರು ಯಾರೆಂದರೆ, "ಪರಿಪಕ್ವನ, ಆರೋಗ್ಯ ಮತ್ತು ಸ್ವಸಂತೃಪ್ತಿಗಳಲ್ಲಿ (Self-fulfilment) ಒಂದು ಮೇಲ್ಮಟ್ಟವನ್ನು ತಲುಪಿದವರು". ಆಲ್ಪೋರ್ಟ್ ಕ್ರಿಯಾತ್ಮಕ ಸ್ವಾಯತ್ತತಾ ತತ್ವಕ್ಕೆ ಮಹತ್ವ ಕೊಡುತ್ತಾನಲ್ಲದೆ. ವ್ಯಕ್ತಿ ಪರಿಪಕ್ವವ್ಯಕ್ತಿತ್ವವಾಗಿ ವಿಕಾಸ ಹೊಂದುವುದನ್ನೂ ಒತ್ತಿಹೇಳುತ್ತಾನೆ. ಇದು ಮಾಸ್ಲೋನ ಆತ್ಮಸಾಕ್ಷಾತ್ಕಾರ ಪರಿಕಲ್ಪನೆಯೊಂದಿಗೆ ನಿಕಟಸಾದೃಶ್ಯ ಹೊಂದಿದೆ. "ಪರಿಪೂರ್ಣ ರೀತಿಯಲ್ಲಿ ಕಾರ್ಯಶೀಲ ವ್ಯಕ್ತಿಗಳು" (Fully functioning individuals) ಎಂಬ ಪರಿಕಲ್ಪನೆಯನ್ನು ರೋಜರ್ಸ್ ಮುಂದಿಡುತ್ತಾನೆ. ಅವನ ಪ್ರಕಾರ ಪರಿಪೂರ್ಣರೀತಿಯಲ್ಲಿ ಕಾರ್ಯಶೀಲ ವ್ಯಕ್ತಿಯಾಗುವುದೇ ಆತ್ಮ ವಿಕಾಸದ ಗುರಿ. ಒಬ್ಬ ವ್ಯಕ್ತಿಯಲ್ಲಿರುವ ವೃದ್ಧಿಶಕ್ತಿಗಳನ್ನು (Growth forces) ಯಾವ ವಿಧವಾದ ಅಡೆತಡೆಗಳಿಲ್ಲದೆ ವೃದ್ಧಿ ಹೊಂದಲು ಬಿಟ್ಟರೆ, "ಜೀವಿಯ ಸ್ವಭಾವದಿಂದ ನಿರ್ದೇಶಿತವಾದ ದಿಕ್ಕಿನಲ್ಲಿ ವ್ಯಕ್ತಿತ್ವ ಅರಳುತ್ತದೆ". ಇಲ್ಲದಿದ್ದ ಪಕ್ಷದಲ್ಲಿ, ಅದು ಕುಂಠಿತ ವ್ಯಕ್ತಿತ್ವದಲ್ಲಿ ಪರ್ಯವಸಾನವಾಗುತ್ತದೆ. ರೋಜರ್ಸನಂತೆಯೇ ಕೆಲ್ಲಿಯೂ ಕೂಡ ಇಂದ್ರಿಯಗೋಚರ ವಸ್ತುಜ್ಞಾನವನ್ನು ಅನುಸರಿಸಿದರೂ, ವ್ಯಕ್ತಿತ್ವವಿಕಾಸದ ನಿರೂಪಣೆಯಲ್ಲಿ ಅವನು ಹೆಚ್ಚು ಎಚ್ಚರಿಕೆ ವಹಿಸುತ್ತಾನೆ. ಒಬ್ಬ ತನ್ನ ಚಿಂತನೆಯಲ್ಲಿ ಹೆಚ್ಚು

ಅಮೂರ್ತತೆ ಪಡೆದಂತೆಲ್ಲ ಜೀವನಘಟನೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಮತ್ತು ಅವುಗಳನ್ನು ಮುಂಗಾಣುವ ಕಾರ್ಯದಲ್ಲಿ, ಸ್ವಂತ ಅರ್ಥಕಲ್ಪನೆಗಳ ಗುಣ ಮತ್ತು ಬಹುಮುಖತೆಗಳಲ್ಲಿ ಆಗುವ ಬದಲಾವಣೆಯು ವ್ಯಕ್ತಿವಿಕಾಸವನ್ನು ಬಹುಮಟ್ಟಿಗೆ ಸೂಚಿಸುತ್ತದೆ. ತನ್ನ ಅನುಭವದ 'ಏಕೆ' ಎಂಬುದನ್ನು ಮನುಷ್ಯ ಅರಸುತ್ತಾನೆ ಎಂಬ ಪರಿಕಲ್ಪನೆಯನ್ನು ಕೊಟ್ಟಿರುವ ಹ್ಯಾಡ್ಲೆ ಕಾಂಟ್ರಿಲನನ್ನೂ ಇಲ್ಲಿ ಹೆಸರಿಸಬಹುದು.

ಇತ್ತೀಚೆಗೆ ಮನುಷ್ಯನ ವ್ಯಕ್ತಿತ್ವವನ್ನು ಪೂರ್ಣರೀತಿಯಲ್ಲಿ ಅರ್ಥಮಾಡಿಕೊಳ್ಳುವುದರತ್ತ ವ್ಯಕ್ತಿತ್ವದ ಮೇಲಿನ ಸಂಶೋಧನೆಗಳು ನಿರ್ದೇಶಿತವಾಗಿರುವುದು, ಈ ಕ್ಷೇತ್ರದ ಸಾಹಿತ್ಯವನ್ನು ಓದಿದಾಗ ಎದ್ದು ಕಾಣುತ್ತದೆ. ಯೂಂಗ್‌ವಾದಿಗಳು, ಆಡ್ಲೆರ್‌ವಾದಿಗಳು, ಫ್ರಾಯ್ಡನ ಅನಂತರ ಬಂದವರು, ರ್ಯಾಂಕ್‌ವಾದಿಗಳು, ಸರ್ವಾಂಗಿಕ (Organismic) ಮನೋವಿಜ್ಞಾನಿಗಳು, ಇಂದ್ರಿಯಗೋಚರ ವಸ್ತು ಮನೋವಿಜ್ಞಾನಿಗಳು, ಮಾನವೀಯತಾ (Humanistic) ಮನೋವಿಜ್ಞಾನಿಗಳು ಮುಂತಾದವರು ಸೇರಿದಂತೆ ಮನೋವಿಜ್ಞಾನಿಗಳ ಒಂದು ವಿಶಾಲ ಪಟಲವನ್ನೇ ಒಳಗೊಂಡಿರುವ ಒಂದು 'ಮೂರನೆಯ ಶಕ್ತಿ' ಸಮುದಾಯದ ಉಗಮವು, ಮಾನವಸ್ವಭಾವದ ಸಮಗ್ರ ಸಿದ್ಧಾಂತವೊಂದರ ರೂಪಣದತ್ತ ಮಾನವ ಪಡುತ್ತಿರುವ ಶ್ರಮವೇನೆಂಬುದನ್ನು ಸೂಚಿಸುತ್ತದೆ. ಮೇಲೆ ಹೇಳಲಾದ ಮನೋವಿಜ್ಞಾನಿಗಳು ನಡೆಸುತ್ತಿರುವ ಕಾರ್ಯ ಸುಮಾರು ಹನ್ನೆರಡು ನಿಯತಕಾಲಿಕಗಳಲ್ಲಿ ಪ್ರಕಟವಾಗುತ್ತಿದೆ. ಈ ವ್ಯಕ್ತಿತ್ವ ಮನೋವಿಜ್ಞಾನಿಗಳ ಕೊಡುಗೆಗಳ ಮೌಲ್ಯವನ್ನು ನಿರ್ಧರಿಸುವಾಗ, ಅವರು ಕಂಡುಹಿಡಿಯುವ ತಥ್ಯಾಂಶಗಳನ್ನು ಸ್ವೀಕರಿಸುವ ಮುನ್ನ ಅವರ ವೈಧಾನಿಕತೆಯಲ್ಲಿ (Methodology) ವೈಜ್ಞಾನಿಕ ನಿಷ್ಕೃಷ್ಟತೆಯ ಅಭಾವವಿರುವುದನ್ನು ಯಾರಾದರೂ ಟೀಕಿಸುವ ಸಾಧ್ಯತೆಯಿದೆ.

ಪಶ್ಚಿಮ ದೇಶಗಳಲ್ಲಿ ನಡೆದಿರುವ ಕಾರ್ಯದ ಒಂದು ಸ್ಥೂಲ ನೋಟದ ಅನಂತರ, ಈ ವ್ಯಕ್ತಿತ್ವ ಕ್ಷೇತ್ರದಲ್ಲಿ ನಮ್ಮವರು ನಡೆಸಿರುವ ಕೆಲಸದ ಒಂದು ಪರಿಶೀಲನೆಯನ್ನು ಮಾಡುವುದು ಸಮಂಜಸ ಎನಿಸುತ್ತದೆ. ನವದೆಹಲಿಯ ಭಾರತೀಯ ಸಮಾಜವಿಜ್ಞಾನ ಸಂಶೋಧನ ಮಂಡಲಿ (ICSSR) ೧೯೭೧ರಲ್ಲಿ ಪ್ರಕಟಿಸಿರುವ ಮನೋವಿಜ್ಞಾನ ಸಂಶೋಧನೆಗಳ ಒಂದು ಸಮೀಕ್ಷಾವರದಿ ಸುಮಾರು ಹತ್ತು ಕ್ಷೇತ್ರಗಳಲ್ಲಿ ನಮ್ಮ ದೇಶದಲ್ಲಿ ನಡೆದಿರುವ ಸಂಶೋಧನೆಗಳ ಒಂದು ಸಾಕ್ಷಿಚಿತ್ರದಂತಿದೆ. ಸಂಶೋಧನೆಯ ಗತಿಯ ಬಗ್ಗೆ ಇರುವ ವರದಿಯನ್ನೂ ವ್ಯಕ್ತಿತ್ವದ ಬಗ್ಗೆ ಅನುಬಂಧದಲ್ಲಿ ಕೊಡಲಾಗಿರುವ ಗ್ರಂಥಸೂಚಿಯನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಯಾವ ಕ್ಷೇತ್ರದಲ್ಲಿ ಕಾರ್ಯ ನಡೆದಿದೆ ಎಂಬುದೂ ದೇಶದ ಅಗತ್ಯಗಳ ಯುಕ್ತತೆ ಮತ್ತು ತುರ್ತುಸ್ಥಿತಿಯ ದೃಷ್ಟಿಯಿಂದ ಯಾವ ಕ್ಷೇತ್ರಗಳಲ್ಲಿ ಕಾರ್ಯವನ್ನು ನೆರವೇರಿಸಬೇಕಾಗಿದೆ ಎಂಬುದೂ ವೇದ್ಯವಾಗುತ್ತದೆ. ಸಿದ್ಧಾಂತರಚನೆ ಮತ್ತು ವ್ಯಕ್ತಿವಿಕಾಸಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವ ಸಲುವಾಗಿ ಈ ವರದಿಯನ್ನು ನೋಡಿದಾಗ ಅದು ನಿರಾಸೆಯನ್ನು ಹುಟ್ಟಿಸುವಂತಿದೆ. ವ್ಯಕ್ತಿತ್ವಸಂರಚನೆಯ ಮೇಲೆ ಬೆಳಕು ಚೆಲ್ಲುವಂತಹ ಯಾವುದೇ ಕೆಲಸ ನಿಜವಾಗಿ ನಮ್ಮ ದೇಶದಲ್ಲಿ ಆಗಿಲ್ಲ. ವರದಿಯಲ್ಲೇ ಪ್ರಸ್ತಾಪಿಸಿರುವಂತೆ, "ರೋಸೆನ್‌ಸ್ವಿಗ್, ಆಲ್‌ಪೋರ್ಟ್, ಮರ್ರೆ, ಮಾಸ್ಲೋ, ಕ್ಯಾಟೆಲ್, ಐಸೆಂಕ್ ಮತ್ತು ಮೆಕ್ಲಿಲ್ಯಾಂಡ್ ಇವರುಗಳ ಸಿದ್ಧಾಂತಗಳನ್ನು ಅನ್ವಯಿಸುವ ಮತ್ತು ಪರಿಶೀಲಿಸುವ ಕಾರ್ಯದತ್ತ ಪ್ರಯತ್ನಗಳು ಪ್ರಮುಖವಾಗಿ ಕೇಂದ್ರೀಕೃತವಾಗಿವೆ". ಇಲ್ಲಿಯೂ ಸಾಧನಗಳ ಬಗ್ಗೆಯೇ ಮುನ್ನೊಲವು ಇರುವುದಲ್ಲದೆ, ಸಿದ್ಧಾಂತಗಳ ಪರಿಶೀಲನೆಯ ಯತ್ನ ಇದ್ದಂತಿಲ್ಲ (೯,೨೬೭). ೧೯೧೬ರಷ್ಟು ಹಿಂದೆಯೇ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಒಂದು ಸ್ವತಂತ್ರ ವಿಷಯವಾಗಿ ಮನೋವಿಜ್ಞಾನ ಪ್ರಾರಂಭವಾಗಿದ್ದರೂ ಸಂಶೋಧನೆಯ ವಿಭಾಗದಲ್ಲಿ ನಡೆದಿರುವ ಪ್ರಗತಿ ಪ್ರೋತ್ಸಾಹದಾಯಕವಾಗಿಲ್ಲ. ನಮ್ಮ ದೇಶದಲ್ಲಿ ಒಂದು ಸುಸಂಘಟಿತ ಸಂಶೋಧನ ಕಾರ್ಯಕ್ರಮ ಅಸ್ತಿತ್ವದಲ್ಲಿಲ್ಲದ ಫಲವಾಗಿ ಮನೋವೈಜ್ಞಾನಿಕ ಸಂಶೋಧನೆ ಒಂದು ರೀತಿಯ ಅವ್ಯವಸ್ಥಿತ ರೂಪದಲ್ಲಿ ಆಗುತ್ತಿದೆ. ಆದಾಗ್ಯೂ, ಸಮಾಜವಿಜ್ಞಾನಗಳ ಇತರ ಶಾಖೆಗಳಲ್ಲಿರುವಂತೆಯೇ ಮನೋವಿಜ್ಞಾನದಲ್ಲೂ ಸಂಶೋಧನೆಯನ್ನು ವ್ಯವಸ್ಥಿತಗೊಳಿಸಿ ಒತ್ತಾಸೆಕೊಡುವಲ್ಲಿ ಮಾರ್ಗದರ್ಶನ ನೀಡಲು ಐ.ಸಿ.ಎಸ್.ಎಸ್.ಆರ್. ಮುಂದೆ ಬಂದಿರುವುದು ಶ್ಲಾಘನೀಯ ವಿಷಯ. ಈ ಸಂಶೋಧನೆ

ಗಳಲ್ಲಿ ನಮ್ಮ ದೇಶದ ಇಂದಿನ ಸಾಮಾಜಿಕ–ಮಾನಸಿಕ ಆಗುಹೋಗುಗಳಿಗೆ ಹೆಚ್ಚು ಪ್ರಾಮುಖ್ಯವನ್ನು ಕೊಡಲಾಗುತ್ತದೆ. ವ್ಯಕ್ತಿತ್ವಮಾಪನಕ್ಕಾಗಿ ಸಾಧನಗಳನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಡೆದಿರುವ ಪ್ರಯತ್ನಗಳೂ ನಿಕೃಷ್ಟವಾಗಿದ್ದು ಬಹಳ ಕಡಿಮೆ ಮೂಲರೂಪದವಾಗಿವೆ. ಕೆಲವು ಪಾಶ್ಚಾತ್ಯ ಪರೀಕ್ಷೆಗಳನ್ನೇ ಅಲ್ಪಸ್ವಲ್ಪ ಬದಲಾವಣೆಗಳಿಂದ ಸಂಶೋಧನೆಯ ಉದ್ದೇಶಗಳಿಗೆ ಉಪಯೋಗಿಸಲಾಗುತ್ತಿದೆ. ಸ್ಥಳೀಯ ಸ್ಥಿತಿಗತಿಗಳಿಗನುಗುಣವಾಗಿ ಕೆಲವು ಪರೀಕ್ಷೆಗಳನ್ನು ಇಂಗ್ಲಿಷಿನಲ್ಲೂ ಕೆಲವು ಭಾರತೀಯ ಭಾಷೆಗಳಲ್ಲೂ ಅಳವಡಿಸಿಕೊಳ್ಳಲಾಗಿದೆ. ಅವುಗಳಲ್ಲಿ ಜನಪ್ರಿಯವಾಗಿರುವ ಪರೀಕ್ಷೆಗಳೆಂದರೆ ಕ್ಯಾಟೆಲ್ ನಿರ್ಮಿಸಿದ ೧೬ ವ್ಯಕ್ತಿತ್ವಕಾರಕ ಪರೀಕ್ಷಣ (16 P. F. Test) ಮತ್ತು ಐಸೆಂಕನ ಮಾಡ್ಸ್ಲೆ ವ್ಯಕ್ತಿತ್ವ ಅಂಶಮಾಲೆ (M.P.I.) ಹಾಗೂ ಐಸೆಂಕ್ ವ್ಯಕ್ತಿತ್ವ ಅಂಶಮಾಲೆ (E.P.I). ಸುಪ್ರಸಿದ್ಧ ನೈದಾನಿಕ ಸಾಧನವಾದ ಮಿನೆಸೋಟ ಬಹುಮುಖೀ ವ್ಯಕ್ತಿತ್ವ ಅಂಕಮಾಲೆಯನ್ನು (MMPI) ಅಳವಡಿಸಿಕೊಂಡವರು ಅತಿವಿರಳ. ಇತರ ಪಾಶ್ಚಾತ್ಯ ಪರೀಕ್ಷಣಗಳಲ್ಲಿ ಸುಮಾರು ಹನ್ನೆರಡು, ಭಾರತೀಯ ಮನೋವಿಜ್ಞಾನಿಗಳಲ್ಲಿ ಆಸಕ್ತಿ ಹುಟ್ಟಿಸಿವೆ. ಆದರೂ ವ್ಯಕ್ತಿತ್ವದ ವಿವಿಧ ಹಾಗೂ ಬದಲಾಗುತ್ತಿರುವ ಅಂಗಾಂಶಗಳನ್ನು ಅಳೆಯಬಲ್ಲ ಮನೋಮಾಪನ ಸಾಧನಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತಿಲ್ಲ. ಈ ದೇಶದಲ್ಲೇ ರಚಿತವಾದ ಪರೀಕ್ಷಣಗಳೆಂದು ಹೇಳಲಾದ ಕೇವಲ ಕೆಲವು, ಪಾಶ್ಚಾತ್ಯರ ಕಾರ್ಯದಿಂದ ಬೆಳಕಿಗೆ ಬಂದ ವಿಚಾರಗಳಲ್ಲೇ ತಮ್ಮ ಸಂರಚನಾ ನೆಲೆಯನ್ನು ಹೊಂದಿವೆ. ರೋರ್ಷಾಕ್ ಅಲ್ಲದೆ, ಇಲ್ಲಿ ಬಳಕೆಯಲ್ಲಿರುವ ಇತರ ಪ್ರಕ್ಷೇಪಣ ಪ್ರವಿಧಿಗಳೆಂದರೆ (Projective techniques) ಟಿ.ಎ.ಟಿ., ಸಿ.ಎ.ಟಿ. ಮತ್ತು ಚಿತ್ರವ್ಯಾಘಾತ ಪರೀಕ್ಷಣಗಳು. ಇವು ಕೂಡ ಪಶ್ಚಿಮ ದೇಶಗಳಲ್ಲಿರುವ ಪರೀಕ್ಷಣಗಳ ರೂಪಾಂತರಗಳು, ಅಷ್ಟೆ. ಸಂಪೂರ್ಣವಾಗಿ ವ್ಯಕ್ತಿತ್ವ ಪರೀಕ್ಷಣಗಳ ವಿವರಣೆ ಮತ್ತು ಸಮೀಕ್ಷೆಗಳಿಗೇ ಮೀಸಲಾಗಿರುವ, ೧೯೭೦ರಲ್ಲಿ ಪ್ರಕಟವಾದ ಬ್ಯೂರೋಸ ಸಂಪುಟದಲ್ಲಿ ೫೧೩ ವ್ಯಕ್ತಿತ್ವ ಪರೀಕ್ಷಣಗಳನ್ನು ಪಟ್ಟಿಮಾಡಲಾಗಿದೆ. ಅವುಗಳಲ್ಲಿ ೪೩೭ ಅಪ್ರಕ್ಷೇಪಣ ಪರೀಕ್ಷಣಗಳಾಗಿದ್ದರೆ, ೭೬ ಪ್ರಕ್ಷೇಪಣ ಪರೀಕ್ಷಣಗಳು. ಈ ಸಂಖ್ಯೆಗಳೊಡನೆ ಹೋಲಿಸಿದಾಗ ನಮ್ಮ ದೇಶದಲ್ಲಿ ದೊರೆಯುವ ವ್ಯಕ್ತಿತ್ವ ಪರೀಕ್ಷೆಗಳ ಸಂಖ್ಯೆ ಅತ್ಯಲ್ಪವಾಗಿ ಕಾಣುತ್ತದೆ. ಮನೋಮಾಪನ ಮಾರ್ಗವಲ್ಲದೆ, ಮತ್ತೆರಡು ಮಾರ್ಗಗಳಾದ ನೈದಾನಿಕ ಮತ್ತು ಪ್ರಾಯೋಗಿಕ ಮಾರ್ಗಗಳಲ್ಲೂ ವ್ಯಕ್ತಿತ್ವದ ವೃದ್ಧಿ ಮತ್ತು ವಿಕಾಸಗಳನ್ನು ಅರಿಯುವತ್ತ ಕೊಡುಗೆ ನೀಡುವಲ್ಲಿ ಯಾವ ಮುನ್ನಡೆಯೂ ಆಗಿಲ್ಲ.

ವ್ಯಕ್ತಿತ್ವ ಕ್ಷೇತ್ರದಲ್ಲಿ ಕೇಂದ್ರೀಕೃತ ಸಂಶೋಧನೆಯ ಅಗತ್ಯವನ್ನು ಒತ್ತಿ ಹೇಳಬೇಕಾಗುತ್ತದೆ. ಏಕೆಂದರೆ, ಮನೆಯಲ್ಲಿ ತಮ್ಮ ಮಕ್ಕಳನ್ನು ಬೆಳೆಸುವುದರಲ್ಲಿ ತಂದೆತಾಯಿಗಳಿಗೂ ಶಿಕ್ಷಣದಲ್ಲಿ ನಿಜವಾದ ಧ್ಯೇಯವನ್ನು ಅರಿಯಲು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನೆರವಾಗಲು ಬೋಧಕರಿಗೂ, ರೋಗ ಕಾರಣ ಮತ್ತು ಚಿಕಿತ್ಸೆಯ ಮಾರ್ಗವನ್ನು ಉತ್ತಮವಾಗಿ ತಿಳಿದುಕೊಳ್ಳುವಲ್ಲಿ ಚಿಕಿತ್ಸಕರಿಗೂ, ಆತ್ಮವಿಶ್ವಾಸವನ್ನು ಒದಗಿಸಲೂ, ಈ ಸಂಶೋಧನೆ ಭದ್ರವಾದ ಬುನಾದಿಯನ್ನು ಹಾಕಿಕೊಡುತ್ತದೆ. ವ್ಯಕ್ತಿತ್ವ ಸಂಶೋಧನೆಯಲ್ಲಿ ಮತ್ತು ಅನ್ವಯ ವಿಭಾಗಗಳೆರಡಕ್ಕೂ ಸಮಾನ ಪ್ರಾಮುಖ್ಯವನ್ನು ಕೊಡಬೇಕಾಗುತ್ತದೆ. ವ್ಯಾವಹಾರಿಕ ಉಪಯುಕ್ತತೆಗಾಗಿ ಸಾಧನ ಸಲಕರಣೆಗಳನ್ನು ನಿರ್ಮಿಸಲು ಅಥವಾ ಮಾರ್ಪಾಟು ಮಾಡಿಕೊಳ್ಳಲು ಮೂಲಸಂಶೋಧನೆಗಳು ನೆರವಾಗುತ್ತವೆ. ಮತ್ತೊಂದೆಡೆ, ಅನ್ವಯ ಕ್ಷೇತ್ರದಲ್ಲಿ ಪಡೆದ ಅನುಭವ, ಸೈದ್ಧಾಂತಿಕ ಪರಿಕಲ್ಪನೆಗಳನ್ನು ಮಾರ್ಪಾಡು ಮಾಡುವುದರಲ್ಲಿ ಪುನರ್ಬಲನ ಶಕ್ತಿಯಾಗಿ ಪರಿಣಮಿಸುತ್ತದೆ. ಇಂದು ಸಂಶೋಧನೆಯ ಅರಿವು ನಮ್ಮಲ್ಲಿ ಮೂಡಬೇಕಾದರೆ, ಇಳಿಮುಖವಾಗಿರುವ ಸಂಶೋಧನಗತಿಯನ್ನು ಮೇಲೆತ್ತಬೇಕಾಗಿದೆ. ವ್ಯಕ್ತಿತ್ವಮಾಪನ ಸಾಧನಗಳ ಅಭಾವ ಮತ್ತು, ಇಲ್ಲವೇ ಇಲ್ಲವೆನ್ನಲಾಗದಿದ್ದರೂ, ಅಸಮರ್ಪಕ ರೀತಿಯಲ್ಲಿರುವ, ದತ್ತಾಂಶಗಳು– ಇವುಗಳಿಂದ ಅನೇಕ ಅನ್ವಯಕ್ಷೇತ್ರಗಳಲ್ಲಿ ತೀವ್ರವಾದ ಅಗತ್ಯಗಳು ಕಂಡುಬರುತ್ತಿವೆ. ಈಗ ದೊರೆಯುತ್ತಿರುವ ತಥ್ಯಾಂಶಗಳು ಬಹುವಾಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಸಲಾದ ಅಧ್ಯಯನಗಳಿಂದ ದೊರೆತಿವೆಯಷ್ಟೆ. ಆಡಳಿತ ಸೇವೆಗಾಗಿ ಜನರನ್ನು ಆರಿಸಿಕೊಳ್ಳಲು ಅಥವಾ ವ್ಯಾಪಾರ ಅಥವಾ ಇತರ ರಾಷ್ಟ್ರೀಯ ಉದ್ಯಮಗಳಲ್ಲಿ ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು,

ಅಪ್ಪೇಕೆ, ವಿದ್ಯಾರ್ಥಿಗಳನ್ನು ಹಂಗಾಮಿ ಕೆಲಸಗಳು ಅಥವಾ ತಾಂತ್ರಿಕ ತರಬೇತಿಗಳಿಗೆ ಆಯ್ಕೆಮಾಡಲು ಮನೋವೈಜ್ಞಾನಿಕ ನೆರವನ್ನು ಯಾವ ಮನೋವಿಜ್ಞಾನಿಯನ್ನಾದರೂ ಕೇಳಿದರೆ, ನಮ್ಮ ದೇಶದಲ್ಲಿ ಸಂಗ್ರಹಿಸಲಾದ ವಸ್ತುನಿಷ್ಠ ತಥ್ಯಾಂಶಗಳ ಅಭಾವದಿಂದಾಗಿ ತೊಂದರೆಗೊಳಗಾದಾಗ ಸಹಜವಾಗಿ ಆತ, ಪ್ರಸಕ್ತ ಸಮಸ್ಯೆಗೆ ಸಂಬಂಧಿಸಿದ ಪಾಶ್ಚಾತ್ಯ ಫಲಿತಾಂಶಗಳಿಗೇ ಶರಣುಹೋಗುವುದು ಅನಿವಾರ್ಯವಾಗುತ್ತದೆ. ಆದರೆ, ನಮ್ಮ ಸ್ಥಿತಿಗತಿಗಳಿಗೆ ಅವು ಅಷ್ಟಾಗಿ ಉಪಯುಕ್ತವಾಗದಿರಬಹುದು. ಇದೊಂದು ನ್ಯೂನತೆ. ನಮ್ಮ ದೇಶದಲ್ಲಿರುವ ಸಂಸ್ಥೆಗಳು, ಮನೋವೈಜ್ಞಾನಿಕ ನೆರವನ್ನು ಕೇಳಿದಾಗ, ಅದನ್ನು ಪರಿಣಾಮಕಾರಿಯಾಗಿ ನೀಡಬೇಕಾದರೆ ಈ ನ್ಯೂನತೆಯನ್ನು ಸರಿಪಡಿಸಲೇಬೇಕು. ನಮ್ಮ ದೇಶದಂಥ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದ ಸವಾಲುಗಳನ್ನು ಎದುರಿಸಲು ಅನ್ವಯಿಕ ಸಂಶೋಧನೆಯ (Applied research) ಅಗತ್ಯವನ್ನು ಒತ್ತಿಹೇಳಲಾಗುತ್ತಿದೆ. ಆದರೆ ಕೇಳಿಕೆಗಳನ್ನೂ ಸಮರ್ಥವಾಗಿ ಎದುರಿಸುವ ಸಲುವಾಗಿ ಈಗಿನ ಸಂಶೋಧನೆಯ ಗತಿಯನ್ನು ತ್ವರಿತಗೊಳಿಸಿ, ಸಮಸ್ತ ವ್ಯವಸ್ಥೆಯನ್ನು ಸಜ್ಜುಗೊಳಿಸದಿದ್ದರೆ, ಪರಿಣಾಮಕಾರಿಯಾದ ಸೇವೆಯನ್ನು ಸಲ್ಲಿಸುವುದು, ಅಸಾಧ್ಯವಾಗುತದೆ.

ಮನುಷ್ಯನ ಮನಸ್ಸಿನ ಸ್ವಭಾವ ಮತ್ತು ವ್ಯಾಪಾರಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಭಾರತೀಯ ಬರವಣಿಗೆಗಳು ಸಂಪದ್ಭರಿತವಾದ ಒಳನೋಟಗಳಿಂದ ತುಂಬಿವೆ. ಆದಾಗ್ಯೂ, ಆಧುನಿಕ ಮನೋವೈಜ್ಞಾನಿಕ ಸಂಶೋಧನೆ ಅವುಗಳ ಪ್ರಯೋಜನವನ್ನು ಪಡೆದುಕೊಂಡಿಲ್ಲ. ಮನುಷ್ಯನ ವರ್ತನೆಯ ಅಧ್ಯಯನಕ್ಕಾಗಿ ಪಾಶ್ಚಾತ್ಯರ ಪರಿಕಲ್ಪನೆ ಸಿದ್ಧಾಂತಗಳು ಮತ್ತು ಸಂಶೋಧನೆಯ ಮಾದರಿಗಳನ್ನೇ, ವಿವೇಚನೆಯಿಲ್ಲದೆ, ನಮ್ಮ ದೇಶದಲ್ಲಿ ಸ್ವೀಕರಿಸಲಾಗುತ್ತಿದೆ. ಸ್ಥಳೀಯ ಜನರ ವರ್ತನೆಯನ್ನು ತಿಳಿದುಕೊಳ್ಳುವುದರಲ್ಲಿ ಪರದೇಶೀಯ ಮಾದರಿಗಳ (exotic models) ಉಪಯೋಗದ ಮಿತಿ ಎಷ್ಟೆಂಬುದನ್ನು ಅಂತರ ಸಂಸ್ಕೃತಿ ವ್ಯತ್ಯಾಸಗಳ ಬಗ್ಗೆ ನಡೆಸಲಾಗಿರುವ ಅಧ್ಯಯನಗಳು ಸೂಚಿಸುತ್ತವೆ. ಒಂದು ಸಂಸ್ಕೃತಿಯಲ್ಲಿ ಕಂಡುಬರುವ ಪರಿವರ್ತನೆಗಳಿಗೆ ಅನುಸಾರವಾಗಿ ಪರಿಕಲ್ಪನೆ ತಮ್ಮ ಒಳ ಅರ್ಥದಲ್ಲಿ ವ್ಯತ್ಯಾಸವಾಗಬಹುದು. ಆದ್ದರಿಂದಲೇ ಮನುಷ್ಯನ ವ್ಯಕ್ತಿತ್ವವನ್ನು ನಿರೂಪಿಸುವಲ್ಲಿ, ಸಾಂಸ್ಕೃತಿಕ ಮೂಲಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಸಿದ್ಧಾಂತಗಳು ಮತ್ತು ಪ್ರವಿಧಿಗಳನ್ನು ಬೆಳೆಸುವ ಅಗತ್ಯವಿದೆ.

ಇಂದು ವ್ಯಕ್ತಿತ್ವದ ಬಗ್ಗೆ ನಡೆಯುತ್ತಿರುವ ಸಂಶೋಧನೆ, ಸೈದ್ಧಾಂತೀಕರಣಕ್ಕೆ ಸಂಬಂಧಿಸಿದಂತೆ ನಡೆಯುವ ಭರವಸೆಯ ಸೂಚನೆ ಕಂಡುಬರುತ್ತಿಲ್ಲವಲ್ಲದೆ ಮನೋವೈಜ್ಞಾನಿಕ ಜ್ಞಾನದ ಊರ್ಧ್ವಮುಖಿ ಬೆಳವಣಿಗೆಗೆ ಸಂಬಂಧಿಸಿದಂತೆ ಭೇದಿಸಿಕೊಂಡು ಮುನ್ನುಗ್ಗುವ ಸೂಚನೆಯೂ ಅದರಲ್ಲಿ ಕಂಡುಬರುತ್ತಿಲ್ಲ. ಆದಾಗ್ಯೂ ಮನುಷ್ಯನ ಸ್ವಭಾವ ಮತ್ತು ವಿಕಾಸಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಭಾರತೀಯ ಕೊಡುಗೆಯಾಗಬಲ್ಲಂಥ ಒಂದು ವೈಜ್ಞಾನಿಕ ಜ್ಞಾನಭಂಡಾರವನ್ನೇ ನಿರ್ಮಿಸಲು ನಮಗೆ ಸಾಧ್ಯವಾಗಬೇಕು. ಪರಿಶೀಲನಸಾಧ್ಯವಾದ ಪ್ರಾಕ್ಕಲ್ಪನೆಗಳನ್ನು ರೂಪಿಸಿ ಅವುಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಲು ಸಾಧ್ಯವಾಗುವಂತೆ ನಮಗೆ ನೆರವಾಗುವ ವಿಚಾರಗಳನ್ನು, ಪ್ರಾಚೀನ ಭಾರತೀಯ ಗ್ರಂಥಗಳ ಆಳವಾದ ಅಧ್ಯಯನದಿಂದ ಹೊರದೆಗೆಯಲು ಸಾಧ್ಯ. ಉದಾಹರಣೆಗೆ, ಇತ್ತೀಚೆಗೆ ಕೆಲವು ಯೋಗಿಗಳು 'ಧ್ಯಾನ' ಮತ್ತು 'ಸಮಾಧಿ' ಅವಸ್ಥೆಯಲ್ಲಿದ್ದಾಗ ಅವರಲ್ಲಿ ನಡೆಯುತ್ತಿದ್ದ ಶಾರೀರಿಕ ಕ್ರಿಯೆಗಳನ್ನು 'ಮಸ್ತಿಷ್ಕವಿದ್ಯುದಲೆ ಮಾಪನ' (electro encephalography) ವಿಧಾನದಿಂದ ಕಂಡು ಹಿಡಿಯಲು ಕೆಲವು ವಿಜ್ಞಾನಿಗಳು ಮಾಡಿದ ಪ್ರಯತ್ನವನ್ನು ಇಲ್ಲಿ ಪ್ರಸ್ತಾಪಿಸಬಹುದು. (೨೦.೪೯೯–೫೦೭). ಪತಂಜಲಿಯ ಪ್ರಕಾರ ಯೋಗದಲ್ಲಿ ಅವರೋಧ (Inhibition) ತತ್ತ್ವ ಅಡಕವಾಗಿದೆ. ಆಧುನಿಕ ಅವರೋಧ ಸಿದ್ಧಾಂತದ ಬೆಳಕಿನಲ್ಲಿ ಹಾಗೂ ಅವರೋಧ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಪ್ರಭಾವ ಬೀರುವ ಕಾರಕಗಳ ಜ್ಞಾನದ ಬೆಳಕಿನಲ್ಲಿ ಮನೋವೈಜ್ಞಾನಿಕ ಮತ್ತು ತಂತುದೈಹಿಕ (Neuro-Physiological) ಕೋನಗಳಿಂದ ಆ ತತ್ತ್ವವನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ. ಒಂದು ವೇಳೆ ಯಾವುದೇ ಧಾರ್ಮಿಕ ಒಲವೂ ಇಲ್ಲದೆ, ಯೋಗದ ವಿವಿಧ ವಿಭಾಗಗಳ ಒಂದು ಮನೋವೈಜ್ಞಾನಿಕ ಅಧ್ಯಯನವನ್ನು ಯಾರಾದರೂ ನಡೆಸುವುದಾದರೆ, ವ್ಯಕ್ತಿಯ ಪರಮ ವಿಕಾಸಕ್ಕಾಗಿರುವ ಅಂತಃಸತ್ತ್ವಗಳ

ಬಗ್ಗೆ ಅಂಥ ಅಧ್ಯಯನ ಬಹಳ ಬೆಳಕು ಚೆಲ್ಲಬಲ್ಲದು. ಉಪನಿಷತ್ತುಗಳು, ಗೀತೆ ಮತ್ತು ಇತರ ಪ್ರಾಚೀನ ಭಾರತೀಯ ಕೃತಿಗಳಲ್ಲಿ ವಿಪುಲವಾಗಿರುವ ಒಳನೋಟಗಳನ್ನು ವ್ಯಾವಹಾರಿಕ (empirical) ಅಧ್ಯಯನಗಳಿಗೆ ಒಳಪಡಿಸಲು ಮೇಲೆ ಹೇಳಿದಂಥ ಪ್ರಯತ್ನಗಳನ್ನು ಮಾಡಬಹುದು.

ಮದ್ದುಗಳ ಪ್ರಭಾವಕ್ಕೆ ಒಳಗಾದಾಗಲೂ ಸಂಮೋಹನ, ನಿದ್ರೆ, ಧ್ಯಾನ ಮತ್ತು ಸಮಾಧಿಗಳ ಅವಸ್ಥೆಗಳಲ್ಲಿದ್ದಾಗಲೂ ಚೇತನಸ್ಥಿತಿಗಳಲ್ಲಿ ಉಂಟಾಗುವ ಅವಸ್ಥಾಂತರಗಳ ಮೇಲೆ ಅಧ್ಯಯನ ನಡೆಸಲು ಇಂದು ಕಂಡುಬರುತ್ತಿರುವ ಆಸಕ್ತಿಯು ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವುದರಲ್ಲಿಯೂ ಮಹತ್ತ್ವಪೂರ್ಣವಾದ್ದು. ಬದಲಾದ ವಿಭಿನ್ನ ಚೇತನಾವಸ್ಥೆಗಳಿಗೆ ಕಾರಣವಾದ ಕಾರಕಗಳನ್ನೂ ಆ ಅವಸ್ಥೆಗಳನ್ನೂ ಅನುಸರಿಸಿ ಆಗುವ ಶಾರೀರಿಕ ಮತ್ತು ಮಾನಸಿಕ ಬದಲಾವಣೆಗಳು ಹಾಗೂ ಅವುಗಳಲ್ಲಿ ಹಲವುಗಳ ನಡುವೆ ಸಾಮಾನ್ಯವಾಗಿ ಕಂಡುಬರುವ ಮೂಲ ಲಕ್ಷಣಗಳನ್ನೂ ಕಂಡುಹಿಡಿಯುವುದು ಉಪಯುಕ್ತವಾದ್ದು. ಉಪನಿಷತ್ತುಗಳೊಂದರಲ್ಲಿ ವಿವರಿಸಿರುವ ನಾಲ್ಕು ಚೇತನಾವಸ್ಥೆಗಳ (ಜಾಗೃತ, ಸ್ವಪ್ನ, ಸುಷುಪ್ತಿ ಮತ್ತು ತುರೀಯ) (೧೧.೧೬೬-೧೭೭) ಬೆಳಕಿನಲ್ಲಿ ಅಂಥ ಅಧ್ಯಯನಗಳು ನಡೆದರೆ, ಅವುಗಳಿಂದ ದೊರೆತ ಫಲಿತಾಂಶಗಳ ವಿಶ್ಲೇಷಣೆ ನಮ್ಮ ಜ್ಞಾನಸಂಪತ್ತನ್ನು ಸಮೃದ್ಧಗೊಳಿಸುವುದಲ್ಲದೆ, ಬದಲಾಗುವ ಚೇತನಾವಸ್ಥೆಗಳ ನೈಜತೆಯ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಲು ಮುಂದಿನ ಸಂಶೋಧನೆಗಳನ್ನು ಪ್ರಚೋದಿಸಲೂಬಹುದು.

ಅತೀಂದ್ರಿಯಜ್ಞಾನ (E.S.P.) ಮತ್ತು ಮನೋವಸ್ತುಸಂಪರ್ಕಗಳಿಗೆ (Psycho-kinesis) ಸಂಬಂಧಿಸಿದ ಅತಿಮನೋವಿಜ್ಞಾನದಲ್ಲಿ (Parapsychology) ಆಗುತ್ತಿರುವ ಸಂಶೋಧನೆ, ವಿದ್ಯಾತ್ಮಕ (Academic) ಹಾಗೂ ಉಪಯೋಗಾತ್ಮಕ (Utilitarian) ದೃಷ್ಟಿಕೋನಗಳಿಂದ ನೋಡಿದಾಗ, ಇತ್ತೀಚಿನ ದಿನಗಳಲ್ಲಿ ಹೆಚ್ಚು ಗಮನವನ್ನು ಸೆಳೆಯುತ್ತಿರುವುದು ಕಂಡುಬರುತ್ತಿದೆ. ಅತಿಮನೋವಿಜ್ಞಾನ ಇತರ ವಿಜ್ಞಾನಗಳೊಂದಿಗೆ ಸಮಾನವಾಗಿ ನಿಲ್ಲಬಲ್ಲಂಥ ಜ್ಞಾನವಿಭಾಗವೆಂದು ಹಿಂದೆ ಸ್ವೀಕೃತವಾಗಿರಲಿಲ್ಲ. ಅತಿಸಾಮಾನ್ಯ ಘಟನೆಗಳ (Supernormal Phenomena) ಸಂಶೋಧನೆಯಲ್ಲಿ ವೈಜ್ಞಾನಿಕ ವಿಧಿಗಳನ್ನು ಬಳಸುವುದರಲ್ಲಿ ಕೆಲವು ಅತಿ-ಮನೋವಿಜ್ಞಾನಿಗಳು ಮಾಡಿದ ಸತತಪ್ರಯತ್ನಗಳ ಫಲವಾಗಿ ಇಂದು ಈ ಜ್ಞಾನವಿಭಾಗ ವೈಜ್ಞಾನಿಕ ಮಾನ್ಯತೆ ಪಡೆಯಲು ಸಾಧ್ಯವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ವೈಜ್ಞಾನಿಕ ಸಮುದಾಯವನ್ನು ಪ್ರತಿನಿಧಿಸುವ ಸಂಸ್ಥೆಯಾದ, ಮುಂದುವರಿದ ವಿಜ್ಞಾನಕ್ಕಾಗಿರುವ ಅಮೆರಿಕನ್ ಸಂಘ (American Association for Advanced Science) 1969ರಲ್ಲಿ ಅತಿಮನೋವೈಜ್ಞಾನಿಕ ಸಂಘಕ್ಕೆ (Parapsychology Association) ಪೂರ್ಣ ಸದಸ್ಯತ್ವವನ್ನು ನೀಡಿ ತನ್ನ ಅಂಗಸಂಸ್ಥೆಯನ್ನಾಗಿ ಮಾಡಿಕೊಂಡಿತು. ಈಗ ಅತಿಮನೋವಿಜ್ಞಾನದಲ್ಲಿ ಹೆಚ್ಚುಹೆಚ್ಚು ಜನರು ಅಭಿರುಚಿ ತೋರಿಸುತ್ತಿದ್ದಾರೆಯಲ್ಲದೆ, ಕಾಲಕಳೆದಂತೆ ಈ ಕ್ಷೇತ್ರದಲ್ಲಿ ಆಗಬಹುದಾದ ಸಂಶೋಧನೆಗಳು ಆಧುನಿಕ ಮನೋವಿಜ್ಞಾನದ ಸಂಕಲ್ಪನಾತ್ಮಕ ಸಂರಚನೆಯನ್ನು (Conceptual Structure) ಪರಿಷ್ಕರಿಸುವಲ್ಲಿ ಗಣನೀಯವಾದ ಪ್ರಭಾವವನ್ನು ಬೀರಬಹುದು. ಪ್ರಾಚೀನ ಭಾರತೀಯರ ಬರವಣಿಗೆಗಳಲ್ಲಿಯೇ ಕಂಡುಬರುವಂತೆ, ಅತೀಂದ್ರಿಯ ಘಟನೆಗಳ ಪ್ರಜ್ಞೆ ಅವರಿಗೆ ಪೂರ್ಣರೂಪದಲ್ಲಿದ್ದಂತೆ ಕಾಣುತ್ತದೆ. ಆದರೆ, ತಮ್ಮ ಆಧ್ಯಾತ್ಮಿಕ ಪ್ರಗತಿಯಲ್ಲಿ ಅವು ತೊಡಕುಗಳಾಗಿ ಪರಿಣಮಿಸಿದ್ದರಿಂದ ಅವುಗಳಿಗೆ ಅಷ್ಟಾಗಿ ಅವರು ಪ್ರಾಮುಖ್ಯ ಕೊಡಲಿಲ್ಲ. ಪ್ರಮುಖವಾಗಿ ವ್ಯಕ್ತಿತ್ವ ಕ್ಷೇತ್ರದಲ್ಲಿ ದೊರೆತಿರುವ ಕೆಲವು ಆಧುನಿಕ ಮನೋವೈಜ್ಞಾನಿಕ ಫಲಿತಾಂಶಗಳು ಹಾಗೂ ಪ್ರಾಚೀನ ಭಾರತೀಯ ಪರಿಕಲ್ಪನೆಗಳ ನಡುವೆ ನಿಕಟ ಸಾದೃಶ್ಯವಿರುವುದನ್ನು ಪಂಡಿತರು ಗಮನಿಸಿದ್ದಾರೆ (೧೦ ಮತ್ತು ೧೧). ಇದಕ್ಕೆ ಸಂಬಂಧಿಸಿದಂತೆ ನಮ್ಮ ದೇಶದಲ್ಲೇ ನಡೆದಿರುವ ಸ್ವಲ್ಪ ಕಾರ್ಯ ಬೆಳಕಿಗೆ ಬಂದಿದೆ. ಆದರೆ, ಪ್ರಾಚೀನ ಕೃತಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುವುದರಿಂದ, ಒಂದಕ್ಕಿಂತ ಹೆಚ್ಚು ಕ್ಷೇತ್ರಗಳು ಬೆಳಕಿಗೆ ಬರಬಹುದು. ಅಲ್ಲಿ ವಿವಿಧ ದೃಷ್ಟಿಕೋನಗಳಲ್ಲಿ ಸಂಪರ್ಕವಿರಬಹುದಲ್ಲದೆ ಅದೇ ಸಮಯದಲ್ಲಿ ಇತರ ಅನೇಕ ವಿಚಾರಗಳನ್ನೂ ಪ್ರಕಟಪಡಿಸಬಹುದು. ಅಂತಹ ವಿಚಾರಗಳ

ಮೇಲೆ ಅನುಭವಿಕ (empirical) ಪರಿಶೀಲನೆ ನಡೆಸಿದಾಗ ದೊರೆಯುವ ಫಲಿತಾಂಶ ಮಾನವ ವರ್ತನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಅದರ ಮುನ್ಸೂಚನೆ ಕೊಡುವಲ್ಲಿ, ಈಗಿರುವ ಜ್ಞಾನ ಭಂಡಾರವನ್ನು ಹೆಚ್ಚು ಸಮೃದ್ಧಗೊಳಿಸಬಹುದು.

ವ್ಯಕ್ತಿತ್ವಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ಆದ್ಯಪ್ರಾಮುಖ್ಯ ಇರಲೇಬೇಕು. ಮನುಷ್ಯನನ್ನು ಅರ್ಥಮಾಡಿಕೊಳ್ಳಲೋಸ್ಕರ ಕೇವಲ ತನ್ನ ಪರಿಣತಿಯ ಸಂಕುಚಿತ ಶಾಖೆಗೇ ಅಂಟಿಕೊಳ್ಳುವುದಕ್ಕೆ ಬದಲಾಗಿ, ಸಂಶೋಧಕ ತನ್ನ ಬಲೆಯನ್ನು ವಿಸ್ತಾರವಾಗಿ ಹರಡಿ, ವಿವಿಧ ಜ್ಞಾನಶಾಖೆಗಳಿಂದ ವಿಚಾರಗಳನ್ನು ಸಂಗ್ರಹಿಸಬೇಕಾಗುತ್ತದೆ. ಇಂದು ಮಾನವ ತನ್ನ ತಾಂತ್ರಿಕ ಕೌಶಲಗಳು ಮತ್ತು ಪ್ರಕೃತಿಯ ಮೇಲೆ ತನಗಿರುವ ಜ್ಞಾನ ಮತ್ತು ನಿಯಂತ್ರಣಗಳನ್ನು, ಆತ್ಮವಿನಾಶಕ್ಕೆ (self–annihilation) ಕಾರಣವಾಗುವಷ್ಟರ ಮಟ್ಟಿಗೆ ಸಂಪಾದಿಸಿಕೊಂಡಿದ್ದಾನೆ. ಆದರೆ, ಇದಕ್ಕೆ ಸರಿಸಮನಾಗಿ ಆತ್ಮಕಲ್ಯಾಣವನ್ನು ಸಾಧಿಸಲೋಸ್ಕರವಾಗಿಯೇ ಮಾನವಸ್ವಭಾವವನ್ನು ಅರಿತುಕೊಳ್ಳಲು ಮತ್ತು ನಿಯಂತ್ರಿಸಲು ಸಾಧ್ಯವಾಗುವಷ್ಟು, ನಮ್ಮ ಜ್ಞಾನದಲ್ಲಿ ಪ್ರಗತಿಯಾಗದಿರುವುದು ಶೋಚನೀಯ ವಿಷಯ. ಆದ್ದರಿಂದ ಒಂದು ಸುರಕ್ಷಿತವಾದ ಜಗತ್ತಿನಲ್ಲಿ ತನ್ನ ಅಂತಃಸತ್ವಗಳ ಪರಿಪೂರ್ಣ ಸಾಕ್ಷಾತ್ಕಾರವನ್ನು ಪಡೆಯುವತ್ತ ಮನುಷ್ಯ ವೃದ್ಧಿ ಮತ್ತು ವಿಕಾಸಗಳನ್ನು ಪಡೆಯುವುದಕ್ಕೆ ನೆರವಾಗಲು ಮನುಷ್ಯನ ವೈಜ್ಞಾನಿಕ ಅಧ್ಯಯನವನ್ನು ನಡೆಸುವುದರಲ್ಲಿ ನಿರತರಾಗಿರುವವರ ಮೇಲೆ ಈ ಮಹಾಹೊಣೆಗಾರಿಕೆ ಬಿದ್ದಿದೆ.

(ಅನುವಾದ : ಎ. ಎಸ್. ಧರಣೇಂದ್ರಯ್ಯ)

ಚಿಕ್ಕ ವಯಸ್ಸಿನಲ್ಲೇ, ಅಂದರೆ ಸಾಮಾನ್ಯವಾಗಿ ಐದು ವರ್ಷದ ಹೊತ್ತಿಗೆ ಪ್ರತಿಯೊಂದು ಮಗುವೂ ಸುಮಾರು ಖಾಯಂ ಆದ ಜೀವನವಿಧಾನವನ್ನು ನಿರೂಪಿಸಿಕೊಳ್ಳುತ್ತದೆ. ಇದರ ಉದ್ದೇಶ ಕೀಳರಿಮೆಯನ್ನು ಹೋಗಲಾಡಿಸಿಕೊಂಡು ಬದುಕಿನ ಮೂರು ಕ್ಷೇತ್ರಗಳಾದ ಸಾಮಾಜಿಕ ಹೊಂದಾಣಿಕೆ, ವೃತ್ತಿ ಮತ್ತು ಪ್ರೀತಿಯಲ್ಲಿ ಜಯ ಸಾಧಿಸುವುದೇ. ಸಾಮಾನ್ಯ ಜನರು ಜೀವನದ ಮುಖ್ಯ ಕೆಲಸಕ್ಕೆ ಪರಿಣಾಮಕಾರಿಯಾಗಿ ಮತ್ತು ಸಮಾಜಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ಹೊಂದಿಕೊಳ್ಳಲೂ ನೆರವಾಗುವ ಜೀವನೋದ್ದೇಶಗಳನ್ನು ಆರಿಸಿಕೊಳ್ಳುತ್ತಾರೆ; ಒಮ್ಮೊಮ್ಮೆ ಉಂಟಾಗಬಹುದಾದ ಸೋಲನ್ನು ಅವರು ಅಲಕ್ಷಿಸುತ್ತಾರೆ. ಅವರಲ್ಲಿ ಚಿಕ್ಕ ವಯಸ್ಸಿನಲ್ಲಿ ತಾಯಿಯೊಡನೆ ಅನುಕೂಲಕರವಾದ ಸಂಬಂಧ ಪಡೆದದ್ದರ ಫಲವಾಗಿ ಸರಿಯಾಗಿ ರೂಪುಗೊಂಡ ಸಾಮಾಜಿಕ ಪ್ರಜ್ಞೆ ಇದ್ದು, ಇದರಿಂದ ಅವರು ಸಹಕಾರಭಾವದವರು, ನೆರವಾಗುವ ಸ್ನೇಹಿತರು, ಒಳ್ಳೆಯ ಕೆಲಸಗಾರರು ಮತ್ತು ಒಳ್ಳೆಯ ದಂಪತಿಗಳು ಆಗುವುದು ಸಾಧ್ಯವಾಗುತ್ತದೆ. ದೈಹಿಕ ನ್ಯೂನತೆ ಮತ್ತು ಹೆಚ್ಚಿನ ಸಾಧನೆಗಳಿಗೆ ಪ್ರಚೋದಿಸುತ್ತವೆ. ದೌರ್ಬಲ್ಯಕ್ಕೆ ಪ್ರತಿಕ್ರಿಯೆಯಾಗಿ ಹಿರಿಮೆಯನ್ನು ಸಾಧಿಸಲಾಗುತ್ತದೆ. ಇದಕ್ಕೆ ಒಳ್ಳೆಯ ಉದಾಹರಣೆಗಳೆಂದರೆ ಪೋಲಿಯೋ ರೋಗದಿಂದ ಕುಂಟನಾಗಿದ್ದರೂ ಅಮೆರಿಕದ ಅಧ್ಯಕ್ಷನಾದ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಮತ್ತು ಕಿವುಡಾದ ಮೇಲೂ ಉತ್ತಮ ಸಂಗೀತಗಾರನಾಗಿಯೇ ಉಳಿದ ಬೀತೋವನ್.

ಜೇಮ್ಸ್ ಡಿ. ಪೇಜ್[1]

---

1 ಅಪಸಾಮಾನ್ಯ ಮನೋವಿಜ್ಞಾನ (ಅನುವಾದ: ಎಮ್. ಎನ್. ಹೆಗ್ಡೆ). ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ೧೯೭೧. ಪು. ೨೬೪.

ಡಾ. ಪಿ. ಗುರುರಾಜ ಭಟ್

ದಕ್ಷಿಣ ಕನ್ನಡದ ಶಿಲ್ಪಸಂಪತ್ತು

•

ದಕ್ಷಿಣ ಕನ್ನಡ ಜಿಲ್ಲೆಯ ಶಿಲ್ಪಗಳನ್ನು ಸೂಕ್ಷ್ಮವಾಗಿ ಹಾಗೂ ಜಾಗ್ರತವಾಗಿ ಮತ್ತು ಸಂಶೋಧನಾದೃಷ್ಟಿಯಿಂದ ಪರಿಶೀಲಿಸಬೇಕಾಗಿದೆ.

ಶಿಲ್ಪಶಾಸ್ತ್ರ ಮತ್ತು ಪ್ರತಿಮೆಗಳ ಅಭ್ಯಾಸದ ದೃಷ್ಟಿಯಿಂದ ಚರಿತ್ರೆಯಲ್ಲಿ ಒಂದು ಶಾಶ್ವತಸ್ಥಾನವನ್ನು ಗಳಿಸಿದ ಮತ್ತು ಪ್ರಸಿದ್ಧವಾದ ಕೆಲವು ಪ್ರತಿಮೆಗಳ ಕುರಿತಾಗಿ ಕೆಳಗೆ ಹೇಳಲಾಗಿದೆ:

ಲೋಕೇಶ್ವರ. ಮಂಜುನಾಥ ದೇವಾಲಯ, ಕದ್ರಿ, ಮಂಗಳೂರು: ಇದು ೧೫೦ ಸೆಂಮೀ. ಎತ್ತರದ ಉತ್ತಮ ತರದ ಕಂಚಿನ ವಿಗ್ರಹವೆಂದು ಹೇಳಬಹುದು. ಈ ವಿಗ್ರಹ ಪರ್ಯಂಕಾಸನದಲ್ಲಿದ್ದು ಮೂರು ಮುಖಗಳಿಂದ ಕೂಡಿ, ಕೌತುಕವನ್ನು ಕೆರಳಿಸುವಂತಿದೆ. ವಿಗ್ರಹದ ಪಾದಪೀಠದ ಬಳಿ ಕ್ರಿ.ಶ. ೯೬೮ರದೆಂದು ಸಮೂದಿಸಲಾದ ಒಂದು ಶಾಸನವಿದೆ. ಆಳುಪರಸನಾದ ಕುಂದವರ್ಮರಸ 'ಕದರಿತ ವಿಹಾರ'ದಲ್ಲಿ ಅದನ್ನು ೯೬೮ರಲ್ಲಿ ಪ್ರತಿಷ್ಠಾಪಿಸಿದನೆಂದು ಆ ಶಾಸನದಿಂದ ತಿಳಿದುಬರುತ್ತದೆ. ನಾಥಪಂಥದ ತತ್ತ್ವದ ಪ್ರಕಾರ ಆ ವಿಗ್ರಹ ಶಿವನನ್ನು ಪ್ರತಿನಿಧಿಸುತ್ತದೆ. ಭಾರತದ ಅತಿಶ್ರೇಷ್ಠ ಪಂಚಲೋಹದ ಮೂರ್ತಿ ಇದೆಂದು ತಿಳಿಯಬಹುದು.

ಕರಣಿಕ ಮುಖ್ಯಪ್ರಾಣ. ಮುಖ್ಯಪ್ರಾಣ ದೇವಾಲಯ, ಕಾರ್ ಸ್ಟ್ರೀಟ್, ಮಂಗಳೂರು: ಕಂಚಿನಿಂದ ರಚಿತವಾದ ಈ ವಿಗ್ರಹದ ಎತ್ತರ ೯೦ ಸೆಂಮೀ. ಇದು ಇಡೀ ಕರ್ನಾಟಕದಲ್ಲಿ ಅತ್ಯುತ್ತಮ ಪಂಚಲೋಹದ ಆಂಜನೇಯ (ಮುಖ್ಯಪ್ರಾಣ) ವಿಗ್ರಹವೆನ್ನಲಾಗಿದೆ. ಇದು ವಿಜಯನಗರ ರಾಜರ ಆಳ್ವಿಕೆಯ ಕಾಲದ ಆದಿಯಲ್ಲಿ ವಿಜಯನಗರ ಚಕ್ರಾಧಿಪತ್ಯಕ್ಕೆ ಸಂಬಂಧಿಸಿದ ಒಬ್ಬ ಕರಣಿಕನಿಂದ ಸ್ಥಾಪಿತವಾಗಿರಬೇಕು. ಈ ವಿಗ್ರಹ ಅತ್ಯಂತ ಪ್ರಕಾಶಮಾನವಾಗಿ ಹೊಗಳತಕ್ಕ ಓಜಸ್ಸಿನಿಂದ ಕೂಡಿದುದಾಗಿದೆ.

ಮಹಿಷಾಸುರ ಮರ್ದಿನಿ. ಸೋಮೇಶ್ವರ. ಬೈಂದೂರು: ಈ ವಿಗ್ರಹ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಬೈಂದೂರಿನ ಸೋಮೇಶ್ವರ ದೇವಾಲಯದ ನವರಂಗದಲ್ಲಿದೆ. ಮಾರ್ದವತ್ವ ಮತ್ತು ಕುಶಲತೆಗಳ ದೃಷ್ಟಿಯಿಂದ ಇದು ಕರ್ನಾಟಕದಲ್ಲೇ ಈ ಬಗೆಯ ಅತ್ಯುತ್ತಮ ವಿಗ್ರಹವೆಂದು ಪರಿಗಣಿಸಬಹುದಾಗಿದೆ. ಈ ವಿಗ್ರಹ ಒಂದು ಮೀಟರ್ ಎತ್ತರವಿದೆ. ಮೃದುವಾದ ಕಪ್ಪು ಬಳಪ್ಪ ಶಿಲೆಯಿಂದ ಕೆತ್ತಲ್ಪಟ್ಟಿದೆ. ಈ ದೇವಾಲಯದ ನವರಂಗದ ಒಂದು ಕೋಣೆಯಲ್ಲಿ ಈ ವಿಗ್ರಹವನ್ನಿಡಲಾಗಿದೆ. ಈ ವಿಗ್ರಹ ಕಲ್ಯಾಣದ ಚಾಳುಕ್ಯರ ಕಾಲದ ಶಿಲ್ಪಕಲೆಯನ್ನು ಪ್ರತಿನಿಧಿಸುತ್ತದೆ.

ಮಂಗಳಾದೇವಿ. ಮಂಗಳಾದೇವಿ ದೇವಾಲಯ, ಮಂಗಳೂರು: ಮಂಗಳೂರಿನ ಮಂಗಳಾದೇವಿ ದೇವಾಲಯದ ಮಂಗಳಾದೇವಿ ವಿಗ್ರಹ ಕರ್ನಾಟಕದ ಮೊತ್ತಮೊದಲಿನ ಬಿಂಬ ವಿಗ್ರಹವೆಂದು ಪರಿಗಣಿಸಬಹುದು. ಇದು ಶಿರಸ್ಸು, ಎದೆ ಮತ್ತು ಎರಡು ಬಾಹುಗಳಿಂದ ಮಾತ್ರ ಸೇರಿಕೊಂಡಿದೆ. ಇದು ಗೌರಿ ದೇವಿಯನ್ನು ಹೋಲುವಂತಿದೆ.

ಆದಿತ್ಯ. ಕುಂಭಾಶಿ: ಸಂಪೂರ್ಣ ಜೀರ್ಣಾವಸ್ಥೆಯಲ್ಲಿರುವ ಕುಂಭಾಶಿಯ ಒಂದು ದೇವಾಲಯದಲ್ಲಿ ಪ್ರತಿಷ್ಠಾಪಿಸಲಾದ ಈ ವಿಗ್ರಹ ಸು. ೪½ ಅಡಿ ಎತ್ತರವಿದೆ. ಶೋಭೆ, ಘನತೆ ಮತ್ತು ಸಮತೋಲನಗಳಿಗಾಗಿ ಈ ವಿಗ್ರಹ ಬಹಳ ಪ್ರಖ್ಯಾತವೆನಿಸಿದೆ. ಇದು ಕರ್ನಾಟಕದ ಮೊತ್ತಮೊದಲಿನ ಆದಿತ್ಯ ವಿಗ್ರಹವಾಗಿರಬಹುದೇ? ಈ ವಿಗ್ರಹ ೯ನೆಯ ಶತಮಾನದ್ದು.

ರಾಜರಾಜೇಶ್ವರಿ. ರಾಜರಾಜೇಶ್ವರಿ ದೇವಾಲಯ. ಪೊಳಲಿ: ಈ ವಿಗ್ರಹದ ಎತ್ತರ ೧೨ ಅಡಿ. ಇದು ಎರಡು ಕೈಗಳಿಂದ ಕೂಡಿ ಆಕರ್ಷಕವಾಗಿದೆ. ಈ ವಿಗ್ರಹ ೮–೯ನೆಯ ಶತಮಾನಕ್ಕೆ ಅನ್ವಯವಾಗುವುದು. ಕರ್ನಾಟಕದಲ್ಲಿಯ ಕಡು ಶರ್ಕರಪಾಕದ ಅತ್ಯಂತ ದೊಡ್ಡ ವಿಗ್ರಹ ಇದು. ಪೊಳಲಿ ಬಂಟ್ವಾಳ ತಾಲೂಕಿಗೆ ಸೇರಿದೆ.

ಉಡುಪಿ ಕೃಷ್ಣ. ಶ್ರೀಕೃಷ್ಣ ಮಠ. ಉಡುಪಿ: ಉಡುಪಿಯ ಶ್ರೀಕೃಷ್ಣ ಮಠದ ಶ್ರೀಕೃಷ್ಣ ವಿಗ್ರಹ ದಕ್ಷಿಣ ಭಾರತದಲ್ಲಿಯೇ ಅತಿ ಮೊದಲಿನದೆನ್ನಿಸಿಕೊಳ್ಳಬಹುದಾದ ವಿಗ್ರಹ. ಶ್ರೀಮಧ್ವಾಚಾರ್ಯರಿಂದ ಉಡುಪಿಯಲ್ಲಿ ಸ್ಥಾಪಿತವಾದ ಈ ವಿಗ್ರಹ ಸು. ೧೫ ಇಂಚು ಎತ್ತರವಿದೆ. ಕಲ್ಲಿನಿಂದ ಕಡೆದುದಾಗಿದೆ. ವಿಗ್ರಹದ ಎಡಗೈಯಲ್ಲಿ ಪಿಕ್ಕಸೂತ್ರವಿದೆ. ಬಲಗೈಯಲ್ಲಿ ದಂಡವಿದೆ. ಶಿಲ್ಪಶೈಲಿ ಚಿತ್ರರೇಖೆಯ. ೭ನೆಯ ಶತಮಾನದ್ದಿರಬಹುದು. ಶ್ರೀಪಾದ್ಮಾವಳಿಕರಿಂದ ಪ್ರತಿಷ್ಠಿತವಾದದ್ದೆನ್ನಲಾದ ವೇಣುಗೋಪಾಲಕೃಷ್ಣ ಪ್ರತಿಮೆಯೂ ಶ್ರೀಕೃಷ್ಣಮಠದಲ್ಲಿದೆ. ಅದು ದಾಕ್ಷಿಣಾತ್ಯ ಶ್ರೀಕೃಷ್ಣ ಶಿಲ್ಪದಲ್ಲಿ ಅತಿ ಪ್ರಾಚೀನವಾಗಿರಬಹುದು. ಎತ್ತರ ೧೫ ಇಂಚು.

ಪರವಾಸುದೇವ. ಪಾಜಕ ಕ್ಷೇತ್ರ: ೨೦ ಸೆಂಮೀ. ಎತ್ತರದ ಕಂಚಿನ ಈ ವಿಗ್ರಹ ಕರ್ನಾಟಕದಲ್ಲೆ ಅತ್ಯಂತ ಪ್ರಾಚೀನವಾದದ್ದು. ಮಧ್ವಾಚಾರ್ಯರ ತಂದೆಯಾದ ಮಧ್ಯಗೇಹ ಭಟ್ಟರಿಂದ ಈ ವಿಗ್ರಹ ಪೂಜಿಸಲ್ಪಡುತ್ತಿತ್ತೆಂದು ತಿಳಿದುಬಂದಿದೆ. ಈ ವಿಗ್ರಹ ಸು. ೯–೧೦ನೆಯ ಶತಮಾನಕ್ಕೆ ಸೇರಬಹುದು.

ಜನಾರ್ದನ. ತಕ್ಕುಂಜೆ. ಶಿವಳ್ಳಿ: ಶಿವಳ್ಳಿಯ ಭಾಗವಾದ ತಕ್ಕುಂಜೆಯ ಅಪ್ರಸಿದ್ಧ ದೇವಾಲಯವೊಂದರಲ್ಲಿ ಸ್ಥಾಪಿಸಲಾದ ಈ ವಿಗ್ರಹ ೨೨ ಇಂಚು ಎತ್ತರವಿದೆ. ಕರ್ನಾಟಕದ ಜನಾರ್ದನ ವಿಗ್ರಹಗಳಲ್ಲಿ ಇದು ಮೊದಲನೆಯದಾಗಿರಬೇಕು. ಅದರ ಎಲ್ಲ ಮುಖ್ಯ ಲಕ್ಷಣಗಳೂ ಪ್ರಾಚೀನತೆಯನ್ನು ಸ್ಪಷ್ಟೀಕರಿಸುತ್ತವೆ.

ಭೂತಬ್ರಹ್ಮ. ವೀರಭದ್ರ ದೇವಾಲಯ. ಹಿರಿಯಡ್ಕ: ಹಿರಿಯಡ್ಕದ ವೀರಭದ್ರ ದೇವಾಲಯದ ಎದುರಿರುವ ಕೆರೆಯಿಂದ ಮೇಲಕ್ಕೆ ತೆಗೆದು ಉಳಿಸಲಾದ ಈ ವಿಗ್ರಹ ಶಿಲೆಯಿಂದ ರಚಿತವಾಗಿದೆ. ಇದುವರೆಗೆ ನಮ್ಮ ಗಮನಕ್ಕೆ ಬಂದ ಈ ತರನಾದ ವಿಗ್ರಹಗಳಲ್ಲಿ ಇದು ಅತ್ಯಂತ ಪ್ರಾಚೀನವೆನಿಸಿದೆ. ಈ ವಿಗ್ರಹ ಸ್ವಲ್ಪ ಊನಗೊಂಡಿದೆ. ವಿಗ್ರಹದ ಎತ್ತರ ೨ ಅಡಿ. ಇದಕ್ಕೆ ಎರಡು ಬಾಹುಗಳು ಮತ್ತು ನಾಲ್ಕು ಮುಖಗಳು.

ಚಂದ್ರನಾಥ. ಸಾವಿರಕಂಬದ ಬಸದಿ. ಮೂಡಬಿದ್ರೆ: ಕಾರ್ಕಳ ತಾಲೂಕಿನ ಮೂಡಬಿದ್ರೆಯ ಹೊಸ ಬಸದಿಯ ಮೂಲಸ್ಥಾನ ವಿಗ್ರಹ ಕಂಚಿನದಾಗಿದ್ದು ೭ ಅಡಿ ಎತ್ತರವುಳ್ಳದ್ದಾಗಿದೆ. ಆಕರ್ಷಕವಾದ ಈ ವಿಗ್ರಹ ದಕ್ಷಿಣ ಭಾರತದಲ್ಲೇ ಅತಿ ದೊಡ್ಡದೆನಿಸಿದೆ.

ಗಣೇಶ. ರಾಜರಾಜೇಶ್ವರಿ ದೇವಾಲಯ. ಪೊಳಲಿ ಮತ್ತು ಶಿವಾಲಯ, ಮಧೂರು: ಪೊಳಲಿಯ ರಾಜರಾಜೇಶ್ವರಿ ದೇವಾಲಯದಲ್ಲಿ ಮತ್ತು ಮಧೂರಿನ ಶಿವದೇವಾಲಯದಲ್ಲಿ ಇರುವ ಗಣೇಶನ ವಿಗ್ರಹಗಳಿಗೆ ಕರ್ನಾಟಕದಲ್ಲಿ ಒಂದು ಭದ್ರಸ್ಥಾನವಿದೆ. ಈ ಎರಡೂ ವಿಗ್ರಹಗಳೂ ಕಡು ಶರ್ಕರಪಾಕದಿಂದ ರಚಿತವಾಗಿವೆ. ಪೊಳಲಿಯ ಗಣೇಶ ವಿಗ್ರಹ ಸು. ೮ ಅಡಿ ಎತ್ತರವಿದೆ. ಎರಡು ಬಾಹುಗಳಿಂದ ಕೂಡಿದೆ. ಮಧೂರಿನ ಗಣೇಶ ವಿಗ್ರಹ ಸು. ೬½ ಅಡಿ ಎತ್ತರವಿದೆ. ಪ್ರಮುಖ ಶಿಲ್ಪ ಲಕ್ಷಣಗಳನ್ನು ಒಳಗೊಂಡಿದೆ. ಎರಡೂ ವಿಗ್ರಹಗಳು ಸುಮಾರು ೮–೯ನೆಯ ಶತಮಾನದವಿರಬಹುದು.

ಮಹಿಷಮರ್ದಿನಿ. ಪಂಚಲಿಂಗೇಶ್ವರ ದೇವಾಲಯ. ವಿಠಲ: ಕರ್ನಾಟಕ ಹೆಮ್ಮೆ ಪಡಬಹುದಾದ, ಸ್ವಲ್ಪ ಊನಗೊಂಡ, ಈ ಮಹಿಷಮರ್ದಿನಿ ವಿಗ್ರಹವನ್ನು ಈಗ ಎಂ.ಜಿ.ಎಂ. ಕಾಲೇಜಿನ ಗೋವಿಂದ ಪೈ ಪ್ರದರ್ಶನಾಲಯದಲ್ಲಿ ಇರಿಸಲಾಗಿದೆ. ದ್ವಿಬಾಹುಗಳಿಂದ ಕೂಡಿದ ಈ ವಿಗ್ರಹ ಆಕರ್ಷಕವಾಗಿದ್ದು ನೋಟಕರನ್ನು ಮುಗ್ಧಗೊಳಿಸುವಂತಿದೆ. ಇದು ಸು. ೭ನೆಯ ಶತಮಾನಕ್ಕೆ ಸೇರಬಹುದಾದ ವಿಗ್ರಹ.

ಡಾ. ಎನ್. ಎಸ್. ವೀರಪ್ಪ

ಸೋವಿಯೆತ್ ಒಕ್ಕೂಟದಲ್ಲಿ ಶಿಕ್ಷಣ

ಸೋವಿಯೆತ್ ದೇಶ ಹದಿನೈದು ಗಣರಾಜ್ಯಗಳ ಒಕ್ಕೂಟ. ಅವರಲ್ಲಿ ೨೬ ಬಹುಸಂಖ್ಯಾತ ರಾಷ್ಟ್ರಿಕತೆಯವರೂ ೧೫೦ ಅಲ್ಪಸಂಖ್ಯಾತ ರಾಷ್ಟ್ರಿಕತೆಯವರೂ ಸೇರಿರುವರು. ಕಾರ್ಮಿಕರ ಸರ್ವಾಧಿಕಾರದ ನೇತೃತ್ವದಲ್ಲಿ ಏಕಪಕ್ಷದ ರಾಷ್ಟ್ರೀಯ ಸರ್ಕಾರ ಅಲ್ಲಿ ಆಡಳಿತ ನಡೆಸುತ್ತದೆ. ಚೀನ ಮತ್ತು ಭಾರತ ಇನ್ನು ಬಿಟ್ಟರೆ ಪ್ರಪಂಚದಲ್ಲಿ ಇದು ಅತಿ ಹೆಚ್ಚು ಜನಸಂಖ್ಯೆಯುಳ್ಳ ರಾಷ್ಟ್ರವಾಗಿದೆ. ಶಿಕ್ಷಣಸೇವಾಕಾರ್ಯ ಅಲ್ಲಿನ ಅತ್ಯಂತ ದೊಡ್ಡ ಉದ್ಯಮವಾಗಿದ್ದು ಜನಸಂಖ್ಯೆಯ ಮೂರನೆಯ ಒಂದು ಭಾಗ ಎಂದರೆ, ೭.೭ ಕೋಟಿ ಜನರು ಪಾತ್ರವಹಿಸುತ್ತಿದೆ. ಭಾಷೆಗಳ ವೈವಿಧ್ಯವಿದ್ದರೂ ಪ್ರಪಂಚದ ಅತ್ಯಂತ ದೊಡ್ಡ ಏಕರೂಪದ ಸಂಘಟಿತ ಶಿಕ್ಷಣ ಪದ್ಧತಿಯನ್ನು ಹೊಂದಿದೆ. ಆ ಸೇವಾಕಾರ್ಯದಲ್ಲಿ ೩೧ ಲಕ್ಷ ಮಂದಿ ಅಧ್ಯಾಪಕರು ಪಾತ್ರವಹಿಸುತ್ತಿರುವರು. ರಾಷ್ಟ್ರದ ಕಾರ್ಮಿಕ ವರ್ಗದ ಸೇ. ೯ರಷ್ಟು ಅಧ್ಯಾಪಕರೇ ಆಗಿದ್ದಾರೆ. ರಾಷ್ಟ್ರದ ಒಟ್ಟು ಆದಾಯದಲ್ಲಿ ಸುಮಾರು ೪೭%ಯಷ್ಟು ಆ ಸೇವಾಕಾರ್ಯಕ್ಕಾಗಿ ವಿನಿಯೋಗವಾಗುತ್ತಿದೆ.

ಐತಿಹಾಸಿಕ

೧೯೧೭ರ ಕ್ರಾಂತಿಗೆ ಹಿಂದೆ ರಷ್ಯದಲ್ಲಿ ಹಲವಾರು ಬಗೆಯ ಪ್ರೌಢಶಾಲೆಗಳಿದ್ದುವು. ಆದರೆ ಒಂದೊಂದು ವಿಧದ ಪ್ರೌಢಶಾಲೆಯಲ್ಲೂ ಪ್ರತ್ಯೇಕ ಪಠ್ಯಕ್ರಮ, ಪಠ್ಯಪುಸ್ತಕ ಮತ್ತು ಪಠ್ಯವಿಷಯಗಳನ್ನು ಗೊತ್ತು ಮಾಡಲಾಗುತ್ತಿತ್ತು. ಇದರಿಂದ ಪ್ರತಿಯೊಂದು ವಿಧದ ಶಾಲೆಯೂ ತನ್ನದೇ ಆದ ಕಾರ್ಯಕ್ರಮವನ್ನು ಹೊಂದಿತ್ತು. ವಿದ್ಯಾರ್ಥಿಗಳು ಅವುಗಳಲ್ಲಿ ಯಾವ ವಿಧದ ಶಾಲೆಗಾದರೂ ಸೇರಬಹುದಾಗಿತ್ತು. ೧೯೧೭ರ ಕ್ರಾಂತಿ ಹಳೆಯ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮೂಲ ಮಾಡಿದಂತೆ ಹಿಂದಿನ ಬಹುವಿಧದ ಪ್ರೌಢಶಾಲೆಗಳನ್ನು ತೆಗೆದುಹಾಕಿ ೧೯೧೮ರ ಶಾಸನದ ಮೂಲಕ ರಾಷ್ಟ್ರಕ್ಕೆಲ್ಲ ಏಕರೂಪದ ಕಾರ್ಮಿಕ ಶಾಲೆಗಳನ್ನು (ಲೇಬರ್ ಸ್ಕೂಲ್) ಅನುಷ್ಠಾನಕ್ಕೆ ತಂದಿತು. ಇಡೀ ರಾಷ್ಟ್ರದ ಶಾಲೆಗಳಲ್ಲಿ ಏಕರೀತಿಯ ಕಾರ್ಯಕ್ರಮವನ್ನು ಅನುಸರಿಸಲಾರಂಭಿಸಿದುವು. ತರಗತಿಗಳ ಪಠ್ಯಕ್ರಮದಲ್ಲೂ ಅದೇ ರೀತಿಯ ಏಕರೂಪತೆಯನ್ನು ರೂಪಿಸಲಾಯಿತು. ಯಾವ ಧಾರ್ಮಿಕ ಶಿಕ್ಷಣಕ್ಕೂ ಅವಕಾಶವೀಯದ ಪೂರ್ಣ ಲೌಕಿಕ ಶಿಕ್ಷಣ ಆಚರಣೆಗೆ ಬಂತು. ಈ ಕಾರ್ಮಿಕ ಶಾಲೆಗಳು ಸಂಕೀರ್ಣಕ್ರಮವೆಂಬ ಹೆಸರಿನಿಂದ ಜನಪ್ರಿಯತೆಯನ್ನು ಗಳಿಸಿದುವು. ಕಾರ್ಯಕ್ರಮ ಹಲವು ಪ್ರಧಾನ ಕ್ಷೇತ್ರಗಳಾಗಿ ವಿಂಗಡಣೆಯಾಯಿತು. ಉದಾ: ಭೌತಪ್ರಪಂಚ ಕ್ಷೇತ್ರ. ಜೀವವಿಜ್ಞಾನ, ರಸಾಯನಶಾಸ್ತ್ರ. ಭೌತಶಾಸ್ತ್ರ ಮತ್ತು ಗಣಿತವನ್ನು ಒಳಗೊಂಡಿತ್ತು. ಈ ಕಾಲದಲ್ಲಿ ಶಿಕ್ಷಣಕ್ಷೇತ್ರದಲ್ಲಿ ಅನೇಕ ಮೌಲಿಕ ಪ್ರಯೋಗಗಳು ನಡೆದಿದ್ದುವು. ಅವಕ್ಕೆ ಯಾವ ಅಡ್ಡಿಯೂ ಇಲ್ಲದೆ ಅವಕಾಶ ಸಿಕ್ಕುತ್ತಿತ್ತು. ಜಾನ್ ಡ್ಯೂಯಿ. ಕರ್ಷೆನ್ ಸ್ಟೈನರ್. ಪೆಸ್ಟಲೋಜಿ. ಪಾರ್ಕ್‌ಹರ್ಸ್ಟ್. ಮಾಂಟೆಸೋರಿ ಮುಂತಾದ ಪಾಶ್ಚಾತ್ಯ ಶಿಕ್ಷಣವೇತ್ತರ ತತ್ತ್ವಪದ್ಧತಿಯನ್ನು ಕುರಿತು ಬಗೆಬಗೆಯ ಪ್ರಯೋಗಗಳು ನಡೆದುವು. ಕೆಲವು ಶಿಕ್ಷಣವೇತ್ತರು ಔಪಚಾರಿಕ ಶಾಲಾವ್ಯವಸ್ಥೆಗೆ ಬದಲು ಸೇನಾಶಾಲೆಗಳನ್ನು ಆಚರಣೆಗೆ ತಂದು ಕೇವಲ ಪರೀಕ್ಷಣೆಯೊಂದರಿಂದಲೇ ಸಮಾಜದ

ಮತ್ತು ನಿಸರ್ಗದ ಪರಿಚಯ ಮಾಡಿಕೊಳ್ಳಬೇಕೆಂದೂ ಮಿಕ್ಕ ಕಾಲದಲ್ಲಿ ಅವರು ದುಡಿಮೆಯ ಕಾರ್ಯಕ್ರಮಗಳಲ್ಲಿ ಪಾತ್ರವಹಿಸುತ್ತ 'ಮಾಡಿ ಕಲಿಯುವ' ವಿಧಾನವನ್ನು ಆಚರಣೆಗೆ ತರಬೇಕೆಂದೂ ಪ್ರಚಾರ ಮಾಡಿದರು. ಅವರ ಪ್ರಕಾರ ರಸ್ತೆಯನ್ನು ನಿರ್ಮಿಸುವಾಗ ಭೌತವಿಜ್ಞಾನದ ತತ್ತ್ವ ನಿಯಮಗಳನ್ನೂ ಕಲಿವಿನ ಕಾರ್ಯಕ್ರಮವನ್ನು ತಂಡದವರಿಗೆ ಹಂಚುವಾಗ ಗಣಿತವನ್ನೂ ಸಾಮೂಹಿಕ ಗಾಯನಕ್ಕೆ ಅಣಿಪಡಿಸುವಾಗ ಪದ್ಯರಚನೆಯನ್ನೂ ಕಲಿಸಬೇಕೆನ್ನುತ್ತಿದ್ದರು. ಈ ವಿಧಾನವನ್ನು ಅನುಸರಣೆಗೆ ತಂದೆಡೆ ವೈಯಕ್ತಿಕ ಕಲಿವಿಗೆ ಬದಲು ಸಾಮೂಹಿಕ ಕಲಿವನ್ನೂ ವೈಯಕ್ತಿಕ ಸಾಧನೆ ಮತ್ತು ಪರೀಕ್ಷೆಗಳಿಗೆ ಬದಲು ಸಾಮೂಹಿಕ ಪರೀಕ್ಷೆಯನ್ನೂ ಆಚರಣೆಗೆ ತರುವ ಯತ್ನ ನಡೆಯಿತು. ನಿಜವಾದ ಸಾಂಪ್ರದಾಯಿಕ ಅರಿವಿಗಿಂತ ತಂಡದ ಕಾರ್ಯಕ್ರಮಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳೇ ಹೆಚ್ಚಾಗಿ ಸೇರಿರುತ್ತಿದ್ದುವು. ಅಷ್ಟೇ ಅಲ್ಲ. ಪಠ್ಯಪುಸ್ತಕಗಳಿಗೂ ಅಧ್ಯಾಪಕರಿಗೂ ಸ್ಥಾನವಿಲ್ಲವಾಯಿತು. ಬಂಡವಾಳಗಾರಿಕೆಯ ಕುರುಹಿನ ಅವಶೇಷವೆಂದು ಪರಿಗಣಿಸಿ ಶಾಲೆ. ಕುಟುಂಬ-ಇವುಗಳನ್ನೂ ತೊಡೆದು ಹಾಕುವ ಯತ್ನ ನಡೆಯಿತು. ೧೯೩೧ರ ವರೆಗೆ ಅವ್ಯಾಹತವಾಗಿ ನಡೆದ ಈ ಪ್ರಯೋಗದ ಫಲವಾಗಿ ಶಿಕ್ಷಣ ಕ್ಷೇತ್ರದಲ್ಲಿ ಅರಾಜಕತೆ ಹುಟ್ಟಿಕೊಂಡು ದಿಕ್ಕುಗೆಟ್ಟಂತಾಯಿತು. ಅಂದು ರಾಷ್ಟ್ರದಲ್ಲಿ ಉದ್ಯೋಗಗಳು ಅಗತ್ಯವಾಗಿ ಬೇಕಾಗಬೇಕಾಗಿತ್ತು. ಅದಕ್ಕೆ ಅಗತ್ಯವಾಗಿ ತಾಂತ್ರಿಕ ಶಿಕ್ಷಣ ಪಡೆದವರು ಬೇಕಾಗಿತ್ತು. ಈ ಅಗತ್ಯವನ್ನು ಮನಗಂಡು ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯೂ ಸರ್ಕಾರವೂ ಶಿಕ್ಷಣವನ್ನು ಆ ಕಾರ್ಯಕ್ಕೆ ಅನುಗೊಳಿಸಲು ನಿರ್ದಿಷ್ಟ ಕಾರ್ಯಕ್ರಮವನ್ನು ಕೈಕೊಂಡುವು. ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಮತ್ತೆ ಹಿಂದಿನಂತೆ ವ್ಯವಸ್ಥೆಗೊಳಿಸಿ ಅಲ್ಲಿಗೆ ಬೇಕಾದ ಭೌತಶಾಸ್ತ್ರ. ರಸಾಯನಶಾಸ್ತ್ರ. ಜೀವಶಾಸ್ತ್ರ, ಭೂಗೋಳ. ಭಾಷೆ. ಇತಿಹಾಸ ಮುಂತಾದ ಮೂಲವಿಷಯಗಳಲ್ಲಿ ತಜ್ಞರಾದ ಅಧ್ಯಾಪಕರನ್ನು ರೂಪಿಸುವ ಕಾರ್ಯಕ್ಕೆ ಪ್ರಾಧಾನ್ಯ ಬಂತು. ಮಾರ್ಕ್ಸ್ ಮತ್ತು ಲೆನಿನ್ನರ 'ತತ್ತ್ವಜ್ಞಾನ ಮತ್ತು ಅನುಷ್ಠಾನಗಳ ಸಂಯೋಜನೆ'ಯ ಮೂಲಮಂತ್ರಕ್ಕೆ ಹೊಸ ಅರ್ಥ ಕಲ್ಪಿಸುವುದು ಆರಂಭವಾಯಿತು. ಎಂದರೆ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ಜ್ಞಾನಕ್ಕೆ ಬೆಂಬಲವಾಗಿ ಅದನ್ನು ಆಧರಿಸಿದಂತೆ ಪ್ರಾಯೋಗಿಕ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲು ಯೋಜಿಸಿಕೊಂಡರು. ಆ ಮೂಲಕ ಜ್ಞಾನಾರ್ಜನೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿನಂತೆ ಪ್ರಾಧಾನ್ಯ ಬಂತು.

ಆನ್ಟನ್ ಎಸ್. ಮಕರೆಂಕೋ ಅಂದಿನ ಪ್ರತಿಭಾವಂತ ಶಿಕ್ಷಣತಜ್ಞನೆನಿಸಿದ್ದ. ಅವನ ತತ್ತ್ವ ಚಿಂತನೆಗೆ ರಾಷ್ಟ್ರದಲ್ಲಿ ತುಂಬ ಗೌರವವಿತ್ತು. ಅವನ ಸಾಮಾಜಿಕ ದೃಷ್ಟಿಯಲ್ಲಿ ವ್ಯಕ್ತಿಯ ಅವಶ್ಯಕತೆಗಿಂತ ಸಮೂಹ ಅಥವಾ ಸಮಾಜದ ಅವಶ್ಯಕತೆಗೆ ಆದ್ಯತೆಯಿರಬೇಕು: ವೈಯಕ್ತಿಕ ಆಶೋತ್ತರಗಳನ್ನು ಸಾಮೂಹಿಕ ಆಶೋತ್ತರಗಳಿಗಾಗಿ ನಿಗ್ರಹಿಸಿದಾಗಲೆ ವ್ಯಕ್ತಿಯ ಶಿಕ್ಷಣ ಸಾಧನೆಯಾಗುವುದು; ಸಮೂಹ ವ್ಯಕ್ತಿಗಳಲ್ಲಿ ಆ ವಿಧದ ಶಿಸ್ತನ್ನು ಮೂಡಿಸಲು ದಂಡ. ನಿಷೇಧ. ಬಹುಮಾನ. ಪ್ರಶಸ್ತಿ ಮುಂತಾದವುಗಳ ಮೂಲಕ ಪ್ರಯತ್ನಿಸಬೇಕು. ಅದ್ದರಿಂದ ವ್ಯಕ್ತಿಯ ಭಾವನೆ. ನಂಬಿಕೆ ಮತ್ತು ಕ್ರಿಯೆ ಸಮಾಜದ ಭಾವನೆ. ನಂಬಿಕೆ ಮತ್ತು ಕ್ರಿಯೆಗಳಿಗೆ ಅನುಗುಣವಾಗುವಂತೆ ಮಾಡುವ ಪರಿಸ್ಥಿತಿಯನ್ನು ರೂಪಿಸುವುದೇ ಶಿಕ್ಷಣದ ಗುರಿ. ಮಕರೆಂಕೋವಿನ ಅಭಿಪ್ರಾಯಕ್ಕೆ ಪ್ರಾಶಸ್ತ್ಯವೀಯುತ್ತಿದ್ದರೂ ಸೋವಿಯೆತ್ ಶಿಕ್ಷಣ ಕ್ಷೇತ್ರದಲ್ಲಿ ವ್ಯಕ್ತಿಯ ಆಸಕ್ತಿಗೂ ಗಮನಕೊಡುತ್ತಿದ್ದರು. ಆ ಮೂಲಕ ತಮ್ಮ ಕಾಣಿಕೆಯನ್ನು ಸಮಾಜದ ಉದ್ಧರಣಕ್ಕೆ ಅವರು ಸಲ್ಲಿಸಬಹುದೆಂಬ ಸಮಾಧಾನದ ದೃಷ್ಟಿ ಅವರದು. ಶಾಲೆಯಲ್ಲಿ ವೈಯಕ್ತಿಕ ಪ್ರಗತಿಗೂ ತರಗತಿಯ ವ್ಯವಸ್ಥೆಗೂ ಮತ್ತೆ ಅವಕಾಶ ಕಲ್ಪಿಸಿಕೊಂಡು ರಾಜಕೀಯ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಪಠ್ಯೇತರ ಚಟುವಟಿಕೆಗಳ ಪಟ್ಟಿಗೆ ಸೇರಿಸಿದರು. ವಿದ್ಯಾರ್ಥಿಗಳು ಅಧ್ಯಾಪಕರ ಬೋಧನೆಯಲ್ಲಿ ಕೈಹಾಕಿ ತೊಡಕುಂಟುಮಾಡುವುದು ತಪ್ಪಿ. ಶಾಲೆಯ ಹಾಗೂ ಪೋಷಕರ ಅಧಿಕಾರಕ್ಕೆ ಮತ್ತೆ ಪುರಸ್ಕಾರ ಬಂತು.

೧೯೩೧ರ ತರುವಾಯ ಹತ್ತು ವರ್ಷಗಳ ಶಾಲಾಶಿಕ್ಷಣ ಆಚರಣೆಗೆ ಬಂತು. ಪ್ರತಿ ತರಗತಿಗೂ ಎಲ್ಲ ವಿಷಯಗಳಲ್ಲೂ ವಿವರವಾದ ಅಭ್ಯಾಸಪತ್ರಿಕೆ ಗೊತ್ತುಮಾಡಿ ಶಿಸ್ತಿನ ಬೋಧನ ಕಾರ್ಯ ಅನುಷ್ಠಾನಕ್ಕೆ ಬಂತು. ಪರೀಕ್ಷೆಗಳನ್ನು ಹಿಂದಿನಂತೆ ಕಟ್ಟುನಿಟ್ಟಾಗಿ ನಡೆಸಲಾರಂಭವಾಗಿ ತರಗತಿಯಿಂದ

ತರಗತಿಗೆ ತೇರ್ಗಡೆಯಾಗಲು ವಿದ್ಯಾರ್ಥಿಗೆ ಎಲ್ಲ ವಿಷಯಗಳಲ್ಲೂ ನಿಷ್ಕರ್ಷಿಸಿದ ಅಂಕಗಳನ್ನು ತೆಗೆಯುವುದು ಅಗತ್ಯವಾಯಿತು. ಈ ನಿಷ್ಠೆಯ ಶಿಕ್ಷಣ ರಷ್ಯದಲ್ಲಿ ಸುಮಾರು ೨೫ ವರ್ಷಗಳ ತನಕ ನಡೆದುಕೊಂಡು ಬಂತು. ಅದರ ಫಲವಾಗಿ ಪಾಂಡಿತ್ಯಕ್ಕೂ ನಿಷ್ಠೆಯ ಅನುಷ್ಠಾನ ವಿಧಾನಗಳಿಗೂ ಸ್ಥಾನ ದೊರೆತು ಜ್ಞಾನಾರ್ಜನೆಯ ಮಟ್ಟ ಉತ್ತಮಗೊಂಡಿತು. ಈ ನಡುವೆ ಶಿಕ್ಷಣವೇತ್ತರ ಗಮನ ಶಾಲೆಗಳಿಂದ ನೂತನ ಸಮಸ್ಯೆಗಳ ಕಡೆ ಹರಿದು ಶಿಕ್ಷಣಕ್ಷೇತ್ರದಲ್ಲಿ ದಕ್ಷತೆಯನ್ನು ಹೆಚ್ಚಿಸಲು ಅವಕಾಶವಾಯಿತು.

ಈ ಶತಮಾನದ ಮಧ್ಯದ ವೇಳೆಗೆ ಪಾಶ್ಚಾತ್ಯ ರಾಷ್ಟ್ರಗಳು ತಾಂತ್ರಿಕ ಜನಬಲದ ನಿರ್ಮಾಣದಲ್ಲಿ ರಷ್ಯದೊಡನೆ ಸ್ಪರ್ಧಿಸಲಾರಂಭಿಸಿದ್ದುವು. ರಷ್ಯದ ನಾಯಕರು ಪ್ರೌಢಶಾಲೆಗಳ ವಿದ್ಯಾರ್ಥಿಗಳನ್ನು ಕಾಲೇಜು ಶಿಕ್ಷಣಕ್ಕೆ ಸಿದ್ಧಪಡಿಸುವುದರ ಜೊತೆಗೆ ಅವರು ವಿವಿಧ ಪ್ರಾಯೋಗಿಕ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಬಲ್ಲ ಶಿಕ್ಷಣವನ್ನೂ ಕೊಡಬೇಕೆಂದು ಸೂಚಿಸಿದರು. ೧೯೫೮ರಲ್ಲಿ ಆಚರಣೆಗೆ ತಂದ ಕ್ರುಷ್ಚೇವ್ ಸುಧಾರಣೆಯಲ್ಲಿ ಈ ಸೂಚನೆಯನ್ನು ಕಾರ್ಯರೂಪಕ್ಕೆ ತರುವ ಯತ್ನ ನಡೆಯಿತು. ಇದರಿಂದ ಸಾಂಪ್ರದಾಯಿಕವಾಗಿ ನಡೆಯುವ ತರಗತಿಯಲ್ಲಿ ಸೈದ್ಧಾಂತಿಕ ಜ್ಞಾನದ ಜೊತೆಗೆ ಕಡ್ಡಾಯವಾಗಿ ಕಾರ್ಖಾನೆ, ಕೃಷಿ, ಕಾರ್ಯಾಲಯಾದಿ ಕೆಲಸಗಳನ್ನು ಮಾಡುವುದು ಅಗತ್ಯವಾಯಿತು. ವಿದ್ಯಾರ್ಥಿಗಳು ತಮ್ಮ ೨೦ನೆಯ ವಯಸ್ಸಿನ ತನಕ ಕಾರ್ಖಾನೆಗಳಲ್ಲಿ ಕೆಲಸಮಾಡುವುದರ ಮೂಲಕ ರಾಷ್ಟ್ರದ ಆರ್ಥಿಕ ಸಂಪತ್ತು ಹೆಚ್ಚುವುದೆಂದೂ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣ ದೊರೆತಂತಾಗುವುದೆಂದೂ ಆಶಿಸಲಾಗಿತ್ತು. ಶಾಲೆಯ ಶಿಕ್ಷಣದ ಕಾಲಾವಧಿಯನ್ನು ೪+೪+೩ರ ಯೋಜನೆಯ ಮೂಲಕ ಒಂದು ವರ್ಷ ಹೆಚ್ಚಿಸಿ ಆ ಹೆಚ್ಚಿಗೆ ವರ್ಷವನ್ನು ಮುಖ್ಯವಾಗಿ, ಕಾರ್ಮಿಕ ಶಾಲೆಯಲ್ಲಿ ವಿನಿಯೋಗಿಸಬೇಕೆಂದು ಸೂಚಿಸಲಾಗಿತ್ತು. ಆದರೆ ಈ ಸುಧಾರಣೆ ೧೯೬೪ರ ವರೆಗೆ ಮಾತ್ರವಿತ್ತು. ಅದರಿಂದ ಯಾವ ಹೆಚ್ಚಿನ ಅನುಕೂಲವಾಯಿತು ಎಂಬುದರ ಮೌಲ್ಯಮಾಪನವನ್ನೂ ಮಾಡಹೋಗದೆ ಪಕ್ಷದ ಕೇಂದ್ರ ಸಮಿತಿ ಆ ವರ್ಷ ಅದನ್ನು ಮೊಟಕುಮಾಡಿತು.

ಸೋವಿಯೆತ್ ಶಿಕ್ಷಣ ವ್ಯವಸ್ಥೆಯಲ್ಲೂ (ಸಂಘಟನೆ) ಅನೇಕ ಪ್ರಯೋಗಗಳು ನಡೆದುವು. ೧೯೩೦ರ ವರೆಗೆ ಪ್ರಾಥಮಿಕ–ಮಾಧ್ಯಮಿಕ–ಪ್ರೌಢಶಿಕ್ಷಣ ೪–೩–೨ರ ಯೋಜನೆಯನ್ನು ಅನುಸರಿಸಿತ್ತು. ಅನಂತರ ೧೯೫೦ರ ತನಕ ೪–೩–೩ರ ಯೋಜನೆ ಆಚರಣೆಯಲ್ಲಿತ್ತು. ೧೯೫೮ರ ಕ್ರುಷ್ಚೇವರ ಸುಧಾರಣೆಯ ಫಲವಾಗಿ ೪–೩–೪ರ ಯೋಜನೆಗೇರಿತು. ೧೯೬೪ರಲ್ಲಿ ಈ ಸುಧಾರಣೆಯನ್ನು ಹಿಂತೆಗೆದುಕೊಂಡಂತೆ ಮತ್ತೆ ೪–೩–೩ರ ಯೋಜನೆ ಆಚರಣೆಗೆ ಬಂತು. ಶಿಕ್ಷಣದ ಸಂಘಟನೆಯಲ್ಲಾದ ಈ ಬದಲಾವಣೆಗಳಿಗೆ ಹಲವು ಕಾರಣಗಳಿದ್ದುವು: ಮೊದಲನೆಯದಾಗಿ ಸ್ಟಾಲಿನ್ನನ ಕಾಲದಿಂದ ತಾಂತ್ರಿಕ ಆಡಳಿತಾಧಿಕಾರಿಗಳನ್ನು ರೂಪಿಸುವುದಕ್ಕಾಗಿ ಏಕಮಾರ್ಗೀಯ ವ್ಯಾಸಂಗಕ್ರಮವನ್ನು ಆಚರಣೆಗೆ ತರಲಾಗಿತ್ತು. ಆ ರೀತಿ ಶಿಕ್ಷಣ ಪಡೆದವರು ಮಾತ್ರ ಮುಂದೆ ರಾಷ್ಟ್ರದ ಉನ್ನತ ಪದವಿಗೇರುತ್ತಿದ್ದರು. ಈ ಗುತ್ತಿಗೆಯನ್ನು ಕೊನೆಗಾಣಿಸಲು ಬಹುಮಾರ್ಗೀಯ ಪ್ರೌಢಶಾಲೆಗಳನ್ನು ಆರಂಭಿಸಬೇಕಾಯಿತು. ಎರಡನೆಯದಾಗಿ, ಈ ಶತಮಾನದ ಮಧ್ಯಕಾಲದಲ್ಲಿ ಪ್ರೌಢಶಿಕ್ಷಣ ಇತರ ಕ್ಷೇತ್ರಗಳಿಗಿಂತ ತೀವ್ರವೇಗದಲ್ಲಿ ವಿಸ್ತರಿಸಿ ಅಲ್ಲಿಂದ ಶಿಕ್ಷಣಕ್ಕೆ ಬರುವವರಿಗೆಲ್ಲ ಉನ್ನತ ಶಿಕ್ಷಣದ ಸೌಲಭ್ಯ ಕಲ್ಪಿಸುವುದು ಅಸಾಧ್ಯವಾಗುತ್ತ ಬರುತ್ತಿತ್ತು. ಮೂರನೆಯದಾಗಿ. ಕೇವಲ ಜ್ಞಾನಪ್ರದ ಪಠ್ಯಕ್ರಮವನ್ನು ವೈವಿಧ್ಯಗೊಳಿಸಿ ವೃತ್ತಿಮುಖಿಕ್ಕೂ ತಿರುಗಿಸಬೇಕಾಗಿತ್ತು. ಸುಧಾರಣೆಗಳಿಂದ ಪ್ರೌಢಶಾಲೆಯ ಶಿಕ್ಷಣ ಉತ್ತಮಗೊಳ್ಳದಿದ್ದುದನ್ನೂ ವಿದ್ಯಾರ್ಥಿಗಳು ವೃತ್ತಿಕೌಶಲ ಪಡೆಯದಿದ್ದುದನ್ನೂ ಕಂಡಾಗ ಮತ್ತೆ ೧೧ ವರ್ಷದಿಂದ ೧೦ ವರ್ಷಕ್ಕೆ ಮರಳಬೇಕಾಯಿತು. ಇಂಥ ಬಗೆ ಬಗೆಯ ಪ್ರಯೋಗಗಳು ನಡೆದು ರಷ್ಯ ಈಗ ವಾಸ್ತವಿಕತೆಯ ಕಡೆಗೆ ಗಮನಕೊಡುತ್ತಿದೆ. ೧೯೬೪ರಿಂದ ಹತ್ತು ವರ್ಷದ ಶಾಲಾ ಶಿಕ್ಷಣವನ್ನು ಆಚರಣೆಗೆ ತಂದಿದೆ. ಪ್ರೌಢಶಾಲೆಯ ಕೊನೆಯ ಹಂತದಲ್ಲಿ ಕಡ್ಡಾಯ ಕಾರ್ಖಾನೆ ಕೆಲಸವನ್ನೂ ತೆಗೆದುಹಾಕಿದೆ. ಹಿಂದಿನ ಸಾಂಪ್ರದಾಯಿಕ ಬೋಧನ ವಿಧಾನಗಳು ಮತ್ತೆ ಆಚರಣೆಗೆ ಬಂದಿವೆ. ವಿಜ್ಞಾನವನ್ನು ಬೋಧಿಸಲು ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರದಲ್ಲಿರುವ ಬೋಧನ ಕ್ರಮಗಳನ್ನೂ ಆಚರಣೆಗೆ ತರಲಾಗಿದೆ: ಸ್ವತಃ ಕಲಿ ಶಿಕ್ಷಣದ ಅಂಗವಾಗಿ ನಿಯೋಜಿತ ಪಠ್ಯಪುಸ್ತಕಗಳನ್ನೂ ಬಳಸಲಾಗುತ್ತಿದೆ.

ಪ್ರಾಥಮಿಕಪೂರ್ವದ ಶಿಕ್ಷಣ

ಪುರುಷರೊಡನೆ ಸಮಾನಸ್ಥಾನ ಪಡೆದಿರುವ ಸೋವಿಯೆತ್ ಮಹಿಳೆಯರು ರಾಷ್ಟ್ರದ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಉದ್ಯೋಗ ನಿರತರಾಗಿರುವುದರಿಂದ ಅವರ ಮಕ್ಕಳಿಗೆ ತಕ್ಕ ಶಿಕ್ಷಣರಕ್ಷಣಾದಿಗಳ ವ್ಯವಸ್ಥೆ ಸ್ವಾಭಾವಿಕವಾಗಿ ಅನಿವಾರ್ಯವಾಗುತ್ತದೆ. ಸರ್ಕಾರ ದೇಶಾದ್ಯಂತ ಅದಕ್ಕಾಗಿ ವಿಧವಿಧವಾದ ಶಿಶುಶಿಕ್ಷಣ ಸಂಸ್ಥೆಗಳನ್ನು ಏರ್ಪಡಿಸಿದೆ. ಹಗಲು ವೇಳೆಯ ಶಿಶುರಕ್ಷಣಾಲಯಗಳೂ ಶಿಶುವಿಹಾರಗಳೂ ಇವೆ. ಆರು ತಿಂಗಳಿಂದ ಮೂರು ವರ್ಷದ ವರೆಗಿನ ಮಕ್ಕಳಿಗೂ ಮೂರು ವರ್ಷದಿಂದ ಏಳು ವರ್ಷದ ವರೆಗಿನ ಮಕ್ಕಳಿಗೂ ಅಲ್ಲಿ ಸೇರಲು ಅವಕಾಶವಿದೆ. ಅವುಗಳಲ್ಲಿ ಕೆಲವು ಮಕ್ಕಳ ಊಟ ವಸತಿಗಳಿಗೂ ಏರ್ಪಡಿಸಿದ್ದು ಇಡೀ ವಾರವೆಲ್ಲ ಅವರನ್ನು ನೋಡಿಕೊಳ್ಳುವುವು. ಇನ್ನು ಕೆಲವು ದಿನದ ಪೂರ್ಣಕಾಲದಲ್ಲಿ ಕೆಲಸ ಮಾಡುವುವು. ಮತ್ತೆ ಕೆಲವು ಅರ್ಧದಿನದಲ್ಲಿ ಮಾತ್ರ ಕೆಲಸಮಾಡುವುವು. ಕೆಲವು ಶಾಲೆಗಳು ಇಡೀ ವರ್ಷದಲ್ಲಿ ತೆರೆದಿರುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಮಾಸಗಳಲ್ಲಿ ಮಾತ್ರ ಕೆಲಸ ಮಾಡುತ್ತವೆ. ಪ್ರಾಥಮಿಕಪೂರ್ವದ ಶಾಲೆಗಳನ್ನು ಟ್ರೇಡ್‌ಯೂನಿಯನ್‌ಗಳೂ ಇತರ ಉದ್ಯಮ ಕೇಂದ್ರಗಳೂ ನಡೆಸುತ್ತವೆ. ಪೋಷಕರಿಂದ ಶುಲ್ಕವನ್ನು ಸಂಗ್ರಹಿಸುತ್ತವೆ. ವಿಧವಿಧವಾದ ಸರ್ಕಾರೇತರ ಆರ್ಥಿಕ ಮೂಲಗಳಿಂದ ನಡೆಯುವ ಈ ಸಂಸ್ಥೆಗಳು ವ್ಯವಸ್ಥೆಯಲ್ಲಿ ತೀರ ಭಿನ್ನ ಸ್ವರೂಪವನ್ನು ಪ್ರದರ್ಶಿಸುತ್ತವೆ. ಸಾರ್ವಜನಿಕ ಆರೋಗ್ಯಶಾಖೆ ಈ ಸಂಸ್ಥೆಗಳ ಮೇಲ್ವಿಚಾರಣೆ ನೋಡುತ್ತದೆ; ಅಲ್ಲಿಗೆ ದಾದಿಯರ ನೇಮಕಕ್ಕೆ ಅನುಮತಿಯನ್ನೂ ನೀಡುತ್ತದೆ. ಪಾಠ ಪ್ರವಚನಗಳನ್ನು ಶಿಕ್ಷಣಶಾಖೆ ನೋಡಿಕೊಳ್ಳುವುದಲ್ಲದೆ ಅಧ್ಯಾಪಕರ ನೇಮಕಕ್ಕೆ ಅನುಮತಿಯನ್ನೂ ನೀಡುತ್ತದೆ. ಅಲ್ಲಿ ೩ರಿಂದ ೭ ವರ್ಷದ ಮಕ್ಕಳಿಗೆ ಓದುವುದು. ಬರೆವಣಿಗೆ. ಲೆಕ್ಕ ಮುಂತಾದ ವಿಷಯಗಳಲ್ಲಿ ಶಿಕ್ಷಣನೀಡುವರು. ಜೊತೆಗೆ ಅವರ ಆಟಪಾಟಗಳು. ಸಂಗೀತ. ಆಹಾರ. ಕಲಾಜೀವನ–ಇವುಗಳ ಕಡೆಯೂ ಗಮನಕೊಡುವರು. ದುಡಿಮೆಗೆ ಹೋಗುವ ತಾಯಂದಿರಿಗೆ ಅನುಕೂಲ ಕಲ್ಪಿಸುವುದರ ಜೊತೆಗೆ ಮಕ್ಕಳ ಎಳೆಯ ಮನಸ್ಸಿನ ಮೇಲೆ ಕಮ್ಯೂನಿಸ್ಟ್ ತತ್ವದ ಹಾದಿಯಲ್ಲಿ ಹೋಗುವ ಅಭ್ಯಾಸ ಮಾಡಿಸುವುದೂ ಈ ಸಂಸ್ಥೆಗಳ ಕಾರ್ಯಕ್ರಮಗಳ ಉದ್ದೇಶವಾಗಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಮಕ್ಕಳು ತಮ್ಮ ಏಳನೆಯ ವರ್ಷದಲ್ಲಿ ಶಾಲೆಗೆ ಸೇರುತ್ತಾರೆ. ನಾಲ್ಕು ವರ್ಷದ ಪ್ರಾಥಮಿಕ ಶಾಲೆಗಳೂ ನಾಲ್ಕು ವರ್ಷದ ಕಿರಿಯ ಪ್ರೌಢಶಾಲೆಗಳೂ ಪ್ರತ್ಯೇಕವಾಗಿದ್ದರೂ ಅವೆರಡನ್ನೂ ಒಳಗೊಂಡ ಎಂಟು ವರ್ಷದ ಸಂಯೋಜಿತ ಶಾಲೆಗಳೂ ಇವೆ. ೧೯೬೦ರ ಸುಮಾರಿನಲ್ಲಿ ಹತ್ತು ವರ್ಷದ ಸಂಯೋಜಿತ ಶಾಲೆಗಳೂ ಇದ್ದುವು. ಸಾಮಾನ್ಯವಾಗಿ ನಾಲ್ಕು ವರ್ಷದ ಕಿರಿಯ ಪ್ರೌಢಶಾಲೆಯ ಅನಂತರ ಎರಡು ವರ್ಷದ ಪ್ರತ್ಯೇಕ ಹಿರಿಯ ಪ್ರೌಢಶಾಲೆಗಳಿವೆ. ಇವೆಲ್ಲ ಸಾಮಾನ್ಯ ಶಿಕ್ಷಣಕ್ಕಾಗಿ. ಈ ಶತಮಾನದ ಏಳನೆಯ ದಶಕದಲ್ಲಿ ಅಲ್ಲಿ ಒಟ್ಟು ೮೫,೦೦೦ ಪ್ರಾಥಮಿಕ ಶಾಲೆಗಳೂ ೫೫,೦೦೦ ಎಂಟು ವರ್ಷದ ಸಂಯೋಜಿತಶಾಲೆಗಳೂ ೪೦,೦೦೦ ಹತ್ತು ವರ್ಷದ ಸಂಯೋಜಿತ ಶಾಲೆಗಳೂ ಇದ್ದುವು. ಅವುಗಳಲ್ಲಿ ಏಕೋಪಾಧ್ಯಾಯ ಶಾಲೆಗಳಿಂದ ಹಿಡಿದು ಸಹಸ್ರಾರು ವಿದ್ಯಾರ್ಥಿಗಳನ್ನುಳ್ಳ ಬಹುದೊಡ್ಡ ಶಾಲೆಗಳೂ ಇದ್ದುವು. ಈಚೆಗೆ ಏಕೋಪಾಧ್ಯಾಯ ಶಾಲೆಗಳನ್ನು ಕಡಮೆಮಾಡುವ ಪ್ರಯತ್ನ ನಡೆಯುತ್ತಿದೆ. ನಾಲ್ಕನೆಯ ತರಗತಿಯಲ್ಲಿ ಪ್ರತಿ ವಿಷಯಕ್ಕೂ ಪ್ರತ್ಯೇಕ ಅಧ್ಯಾಪಕರನ್ನು ನೇಮಿಸುವುದರ ಮೂಲಕ ಈ ಸುಧಾರಣೆ ಆಚರಣೆಗೆ ಬರುತ್ತಿದೆ. ಕ್ರಮಕ್ರಮವಾಗಿ ಅಂಥ ಸಣ್ಣ ಸಣ್ಣ ನಾಲ್ಕು ವರ್ಷದ ಪ್ರಾಥಮಿಕ ಶಾಲೆಗಳನ್ನು ಕೈಬಿಡುವ ಆಶಯವೂ ಇದೆ.

ಸಾಮಾನ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಷ್ಯದಲ್ಲಿ ಭಿನ್ನತೆ ವ್ಯಕ್ತಪಡಿಸುವ ಪ್ರಮುಖ ಅಂಶ ಶಿಕ್ಷಣ ಮಾಧ್ಯಮ. ಸೇ. ೭೦ರಷ್ಟು ಶಾಲೆಗಳು ರಷ್ಯನ್ ಭಾಷೆಯನ್ನು ಬಳಸುವುವು. ಪ್ರಾಂತೀಯ ಭಾಷೆಯನ್ನು ಬೋಧನಮಾಧ್ಯಮವಾಗಿ ಬಳಸುವ ಶಾಲೆಗಳಲ್ಲಿ ರಷ್ಯನ್ ಭಾಷೆಯ ವ್ಯಾಸಂಗ ಕಡ್ಡಾಯ ಮಾಡಲಾಗುತ್ತಿದೆ. ರಷ್ಯನ್ ಭಾಷೆ ಬೋಧನಮಾಧ್ಯಮವಾಗಿರುವ ಅನ್ಯಭಾಷಾಪ್ರಾಂತ್ಯದಲ್ಲಿ ಆ ಪ್ರಾಂತೀಯ

ಭಾಷೆ ಮತ್ತು ಸಾಹಿತ್ಯವನ್ನು ಐಚ್ಛಿಕವಾಗಿ ಅಧ್ಯಯನ ಮಾಡುವುದುಂಟು. ೧೯೫೮ರ ವರೆಗೂ ಕಡ್ಡಾಯವಾಗಿ ರಷ್ಯನ್ ಮತ್ತು ಪ್ರಾಂತೀಯ ಭಾಷೆಗಳೆರಡನ್ನೂ ವ್ಯಾಸಂಗ ಮಾಡುವ ದ್ವಿಭಾಷಾ ಸೂತ್ರ ಆಚರಣೆಯಲ್ಲಿತ್ತು. ಇಡೀ ಒಕ್ಕೂಟದ ಶಾಲೆಗಳಲ್ಲೆಲ್ಲ ಏಕರೀತಿಯ ಅಭ್ಯಾಸಪತ್ರಿಕೆ ಆಚರಣೆಯಲ್ಲಿದೆ. ಹತ್ತು ವರ್ಷದ ಸಂಯೋಜಿತ ಶಾಲೆಯಲ್ಲಿ ಸೇ. ೩೭ರಷ್ಟು ಕಾಲವನ್ನು ಗಣಿತ, ಪ್ರಕೃತಿ ಪಾಠ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಖಗೋಳಶಾಸ್ತ್ರಗಳ ವ್ಯಾಸಂಗಕ್ಕೆ ಮೀಸಲಾಗಿರಿಸಿದೆ; ಸೇ. ೪೦ರಷ್ಟು ಕಾಲ ರಷ್ಯನ್ ಭಾಷೆ ಮತ್ತು ಸಾಹಿತ್ಯ, ಸಂಗೀತ, ಕಲೆ, ಚರಿತ್ರೆ, ಸಮಾಜಪಾಠ, ಭೂಗೋಳ ಮತ್ತು ಒಂದು ಅನ್ಯಭಾಷೆ ಇವುಗಳ ಅಧ್ಯಯನಕ್ಕೆ ಗೊತ್ತುಮಾಡಿದೆ. ಇನ್ನುಳಿದ ಸೇ. ೨೩ರಷ್ಟು ಕಾಲವನ್ನು ದೈಹಿಕ ಶಿಕ್ಷಣಕ್ಕೂ ಕಾರ್ಯಾಗಾರದ ಪ್ರಾಯೋಗಿಕ ಶಿಕ್ಷಣಕ್ಕೂ (ಪಾಲಿಟೆಕ್ನಿಕ್ ಶಿಕ್ಷಣ) ವಿನಿಯೋಗಿಸಲಾಗುತ್ತಿದೆ. ಮೊದಲ ನಾಲ್ಕು ತರಗತಿಗಳಿಗೆ ಎಲ್ಲ ಪಾಠವನ್ನೂ ಒಬ್ಬ ಅಧ್ಯಾಪಕರು ಬೋಧಿಸುವರು. ಐದನೆಯ ತರಗತಿಯಿಂದ ಪ್ರತಿವಿಷಯವನ್ನೂ ಆಯಾ ವಿಷಯದಲ್ಲಿ ವಿಶೇಷ ಶಿಕ್ಷಣ ಪಡೆದಿರುವ ಅಧ್ಯಾಪಕರು ಬೋಧಿಸುವರು. ೧೯೫೮ರ ವರೆಗೆ ವಾರ್ಷಿಕ ಪರೀಕ್ಷೆಯೊಂದರ ಫಲಿತಾಂಶದ ಆಧಾರದ ಮೇಲೆ ತೇರ್ಗಡೆ ಮಾಡಲಾಗುತ್ತಿತ್ತು. ನಾಲ್ಕನೆಯ ತರಗತಿಯ ವರೆಗೆ ಪರೀಕ್ಷೆ ನಡೆಸದೆಯೆ ತೇರ್ಗಡೆ ಮಾಡಿಸುವುದು ವಾಡಿಕೆ. ೮ ಮತ್ತು ೧೦ನೆಯ ತರಗತಿಯ ಪರೀಕ್ಷೆ ಸಾರ್ವತ್ರಿಕ ರೀತಿಯದಾಗಿದ್ದು ಇಡೀ ರಾಷ್ಟ್ರಕ್ಕೆಲ್ಲ ಏಕರೀತಿಯ ಪ್ರಶ್ನಪತ್ರಿಕೆಗಳನ್ನು ತಯಾರಿಸುವರು.

೧–೪ ತರಗತಿಗಳಲ್ಲಿ ಆ ವಯೋಮಾನದ ಮಕ್ಕಳೆಲ್ಲ ಶಾಲೆಗೆ ಸೇರಿರುವರು; ೫–೮ನೆ ತರಗತಿಗಳಿಗೆ ಆ ವಯೋಮಾನದ ಶೇ. ೯೦ರಷ್ಟು ಸೇರಿರುವರು; ೯–೧೦ನೆಯ ತರಗತಿಗಳಲ್ಲಿ ಆ ವಯೋಮಾನದ ಕೇವಲ ಸೇ. ೨೭ರಷ್ಟು ಮಾತ್ರ ಸೇರಿರುತ್ತಾರೆ. ಏಕೆಂದರೆ ಅಲ್ಲಿ ಸೇರತಕ್ಕವರು ಕಠಿಣತಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಅಲ್ಲಿಗೆ ಸೇರಲಾರದವರು ಕುಶಲ ಅಥವಾ ಅರ್ಧಕುಶಲ ಕಾರ್ಮಿಕರನ್ನು ರೂಪಿಸುವ ಔದ್ಯೋಗಿಕ ಶಾಲೆಗಳಿಗೂ ಟೆಕ್ನಿಕಂ ಎಂಬ ಔದ್ಯೋಗಿಕ ಪ್ರೌಢಶಾಲೆಗೂ ಸೇರುವರು. ಹತ್ತನೆಯ ತರಗತಿಯ ಕೊನೆಯಲ್ಲಿ ನಡೆಯುವ ರಾಷ್ಟ್ರವ್ಯಾಪಿ ಸಾರ್ವತ್ರಿಕ ಪರೀಕ್ಷೆಯನ್ನು ಕೇಂದ್ರ ಶಿಕ್ಷಣ ಸಚಿವ ಶಾಖೆ ನಡೆಸುತ್ತದೆ. ಅದರಲ್ಲಿ ಮೌಖಿಕ ಪರೀಕ್ಷೆಯೂ ಸೇರಿರುತ್ತದೆ. ಅದರಲ್ಲಿ ಉತ್ತೀರ್ಣರಾದವರಿಗೆ ಉನ್ನತ ಶಿಕ್ಷಣಕ್ಕೆ ಪ್ರವೇಶಾವಕಾಶ ಸಿಕ್ಕುತ್ತದೆ.

ವಿಶಿಷ್ಟ (ಪ್ರಾಥಮಿಕ-ಪ್ರೌಢ) ಶಿಕ್ಷಣ ಸಂಸ್ಥೆಗಳು

ರಷ್ಯದಲ್ಲಿ ಮಂದಬುದ್ಧಿಯ ಹಾಗೂ ಅಂಗವಿಕಲ ಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕ ಪಾಠಶಾಲೆಗಳಿವೆ. ಅವು ಸಾಮಾನ್ಯ ಶಿಕ್ಷಣದ ಪಾಠಶಾಲೆಗಳ ಕಾರ್ಯಕ್ರಮಗಳನ್ನು ಅನುಸರಿಸಿದರೂ ಆ ಮಕ್ಕಳ ಆವಶ್ಯಕತೆಗಳಿಗೆ ಗಮನ ಕೊಟ್ಟು ವಿಶೇಷ ರೀತಿಯಲ್ಲಿ ಶಿಕ್ಷಣವೀಯುತ್ತವೆ. ವೈಯಕ್ತಿಕ ಬೋಧನೆ, ವಿಶೇಷ ಶಿಕ್ಷೋಪಕರಣಗಳ ಬಳಕೆ, ಕಸಬು ಕಲಿಗಳಲ್ಲಿ ತರಬೇತು–ಇವು ಅಲ್ಲಿನ ಶಿಕ್ಷಣದ ವಿಶೇಷ ಲಕ್ಷಣಗಳು. ಈ ಪ್ರೌಢಶಾಲೆಗಳಲ್ಲಿ ಕಳೆದ ಅರ್ಧಶತಮಾನದಿಂದಲೂ ವಿದ್ಯಾರ್ಥಿ ಸಂಖ್ಯೆ ಅಷ್ಟಾಗಿ ಹೆಚ್ಚುತ್ತಿಲ್ಲ.

ಕೆಲವು ಪ್ರಯೋಗಾರ್ಥ ಪಾಠಶಾಲೆಗಳೂ ಇವೆ. ಅಲ್ಲಿ ಅನ್ಯಭಾಷಾ ಬೋಧನೆ, ಗಣಿತ, ವಿಜ್ಞಾನ ವಿಷಯಗಳನ್ನು ಸಾಂಪ್ರಬೋಧನ ವಿಧಾನಗಳಿಂದ ಬೋಧಿಸುವ ಪ್ರಯೋಗಗಳನ್ನು ನಡೆಸುವರು. ಅವು ವಿಶ್ವವಿದ್ಯಾಲಯ, ಅಧ್ಯಾಪಕರ ವೃತ್ತಿ ಶಿಕ್ಷಣ ಸಂಸ್ಥೆ, ಅನ್ಯಭಾಷಾ ಸಂಸ್ಥೆ–ಇವುಗಳಿಗೆ ಸೇರಿದಂತಿದ್ದು ಆ ಸಂಸ್ಥೆ ಅಲ್ಲಿ ಪ್ರಯೋಗಗಳನ್ನು ನಡೆಸುತ್ತವೆ. ಇವುಗಳ ಜೊತೆಗೆ ಸಾರ್ರ ಕಾಲದಿಂದಲೂ ಉಳಿದುಕೊಂಡೇ ಬಂದಿರುವ ಕೆಲವು ಲಲಿತಕಲಾಶಾಲೆಗಳೂ ಅಸ್ತಿತ್ವದಲ್ಲಿವೆ. ಅವು ಬ್ಯಾಲೆ, ಕಲಾ ಪ್ರದರ್ಶನ ಸಂಸ್ಥೆ, ರಕ್ಷಣಾಗೃಹ, ಗಾನಗೋಷ್ಠಿ ಮುಂತಾದವಕ್ಕೆ ಸೇರಿದಂತೆ ಕೆಲಸಮಾಡುತ್ತವೆ.

ಮೇಲಿನ ವಿಶಿಷ್ಟ ಶಾಲೆಗಳ ಗುಂಪಿಗೆ ಸೇರಿಸಬಹುದಾದ ವಸತಿ ವಿದ್ಯಾಲಯಗಳೂ ಅಧಿಕ ಸಂಖ್ಯೆಯಲ್ಲಿವೆ. ಅವು ಇಂಗ್ಲಿಷ್ ಪಬ್ಲಿಕ್ ಸ್ಕೂಲುಗಳಂತಿದ್ದರೂ ಅಲ್ಲಿ ಸೇರತಕ್ಕವರು ಶ್ರೀಮಂತರ ಮಕ್ಕಳಲ್ಲ; ನಿರ್ಗತಿಕರು, ತಬ್ಬಲಿ ಮಕ್ಕಳು, ವಿಧವೆಯರು, ಅವಿವಾಹಿತ ಮಹಿಳೆಯರು. ಅಲ್ಲಿಗೆ ಅವರು

ಶಿಕ್ಷಣರಕ್ಷಣೆಗಾಗಿ ಸೇರುವರು. ಅಲ್ಲಿನ ಕಾರ್ಯಕ್ರಮಗಳು ಸಾಮಾನ್ಯ ಶಾಲೆಗಳಂತೆಯೆ ಇದ್ದರೂ ಕಸಬು. ಕಲೆ. ವೃತ್ತಿ ಮುಂತಾದವುಗಳ ಬೋಧನೆಗೆ ಅಲ್ಲಿ ಪ್ರಾಮುಖ್ಯವುಂಟು. ಈಗ ಅಲ್ಲಿ ಸುಮಾರು ಹತ್ತು ಲಕ್ಷ ಮಂದಿ ವಿದ್ಯಾರ್ಥಿಗಳಿರುವರು. ಅವುಗಳ ವ್ಯವಸ್ಥೆ ಅಧಿಕ ವೆಚ್ಚಕ್ಕೆ ಅವಕಾಶವಾಗುತ್ತಿರುವುದರಿಂದ ಅವನ್ನು ಹೆಚ್ಚಿಸುವ ಕಾರ್ಯಕ್ಕೆ ಕೈಹಾಕುತ್ತಿಲ್ಲ. ಇದೇ ಮಾದರಿಯ ಹಗಲು ಶಾಲೆಗಳೂ ಇವೆ. ಅಲ್ಲಿ ಸುಮಾರು ೩೩ ಲಕ್ಷ ಮಂದಿ ವ್ಯಾಸಂಗ ಮಾಡುತ್ತಿದ್ದಾರೆ. ಇವುಗಳು ಕಾರ್ಯನಿರತ ತಾಯಂದಿರ ಮಕ್ಕಳಿಗಾಗಿ ರೂಪುಗೊಂಡಿದ್ದು ಸಾಧಾರಣ ಶಾಲೆಗಳಿಗಿಂತ ಹೆಚ್ಚು ವೇಳೆ ತೆರೆದಿರುತ್ತವೆ.

ವಯಸ್ಕರ ಹಾಗೂ ಯುವಜನರ ಶಾಲೆಗಳು

ಬಾಲ್ಯದಲ್ಲಿ ಸಾಮಾನ್ಯ ಶಿಕ್ಷಣವನ್ನು ಪೂರ್ಣವಾಗಿ ಪಡೆಯಲಾಗದೆ ಕೆಲಸಕ್ಕೆ ಸೇರಿರುವವರ ಅಥವಾ ಇತರ ವಯಸ್ಕರ ಶಿಕ್ಷಣಕ್ಕಾಗಿ ದೇಶದಲ್ಲಿ ಸುಮಾರು ೨೦.೦೦೦ ಯುವಜನ ಶಾಲೆಗಳಿವೆ. ಅವು ಸಾಮಾನ್ಯ ಶಾಲೆಗಳ ಕಾರ್ಯಕ್ರಮಗಳನ್ನು ಅನುಸರಿಸಿದರೂ ಔದ್ಯೋಗಿಕ ಸಂಘಸಂಸ್ಥೆಗಳಿಂದ ನಡೆಸಲ್ಪಡುತ್ತಿವೆ. ಕೆಲವು ಕ್ರಮವಾದ ಸಂಜೆಯ ಶಾಲೆಗಳಾಗಿ ಕೆಲಸಮಾಡುತ್ತಿವೆ.

ವೃತ್ತಿ ಮತ್ತು ತಾಂತ್ರಿಕ ಶಾಲೆಗಳು

೮ನೆಯ ಪ್ರೌಢಶಾಲೆಯ ಮಟ್ಟದ ಸುಮಾರು ೧೩.೦೦ ಪಾಠಶಾಲೆಗಳಿವೆ. ವೃತ್ತಿ ಮತ್ತು ತಾಂತ್ರಿಕ ಶಿಕ್ಷಣದ ಸಚಿವಾಲಯದವರು ನಡೆಸುತ್ತಿರುವ ಈ ಶಾಲೆಗಳು ೮ನೆಯ ತರಗತಿ ಮುಗಿಸಿದವರನ್ನು ಸೇರಿಸಿಕೊಂಡು ೬ರಿಂದ ೧೮ ತಿಂಗಳ ಕಾಲಾವಧಿಯ ಶಿಕ್ಷಣನೀಡುತ್ತವೆ. ಅಲ್ಲಿ ಸಾಮಾನ್ಯ ಶಿಕ್ಷಣದ ಕೆಲವು ವಿಷಯಗಳನ್ನು ಬೋಧಿಸಿದರೂ ಮುಖ್ಯವಾಗಿ ಯಾವುದಾದರೂ ಒಂದು ನಿರ್ದಿಷ್ಟ ಉದ್ಯೋಗದಲ್ಲಿ ತರಬೇತು ನೀಡಲಾಗುತ್ತದೆ. ಅಲ್ಲಿನ ಶಿಕ್ಷಣ ಮುಗಿಸಿದವರು ಸಾಮಾನ್ಯ ಪ್ರೌಢಶಿಕ್ಷಣದ ಪ್ರಮಾಣಪತ್ರ ಪಡೆಯಬೇಕಾದರೆ ಸಂಜೆಯ ಸಾಮಾನ್ಯ ಪ್ರೌಢಶಾಲೆಗಳಲ್ಲಿ ಸೇರಿ ಶಿಕ್ಷಣ ಪಡೆಯಬೇಕು.

ಕಾರ್ಖಾನೆ. ವಾಣಿಜ್ಯ. ಕೃಷಿ. ಕಾರ್ಯಾಲಯ ಮುಂತಾದ ಉದ್ಯಮಗಳು ಉಮೇದುವಾರರನ್ನು ಕೆಲಸಕ್ಕೆ ಸೇರಿಸಿಕೊಂಡು ಅಲ್ಲೇ ಆಯಾ ಉದ್ಯೋಗದಲ್ಲಿ ತರಬೇತು ನೀಡುವ ವ್ಯಾಪಕವಾದ ವ್ಯವಸ್ಥೆಯಿದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಶಿಕ್ಷಣ ಮುಗಿದಿರಲಿ. ಇಲ್ಲದಿರಲಿ. ವಯಸ್ಸು ಎಷ್ಟೇ ಆಗಿರಲಿ. ಅವರಿಗೆಲ್ಲ ಅವು ಅವಕಾಶ ನೀಡುತ್ತವೆ. ಅಲ್ಲಿನ ತರಬೇತು ಬೇರೆಬೇರೆ ಮಟ್ಟದ್ದಾಗಿರಬಹುದು. ಈ ಉಮೇದುವಾರಿ ಶಿಕ್ಷಣಕ್ಕೆ ಹೋಗತಕ್ಕವರ ಸಂಖ್ಯೆ ಅಧಿಕವಾಗಿಯೇ ಇದೆ. ಅವರು ಸಾಮಾನ್ಯ ಶಿಕ್ಷಣ ಮುಗಿಸಲು. ಬೇಕಾದರೆ. ವಯಸ್ಕರ ಸಂಜೆಯ ಶಾಲೆಗೆ ಸೇರಬಹುದು.

ಟೆಕ್ನಿಕಂ

೮ನೆಯ ತರಗತಿಯನ್ನು ಮುಗಿಸಿದವರಿಗೆ ನಾಲ್ಕು ವರ್ಷದ ಮತ್ತು ಹತ್ತನೆಯ ತರಗತಿಯನ್ನು ಮುಗಿಸಿದವರಿಗೆ ಎರಡು ವರ್ಷದ ವೃತ್ತಿಶಿಕ್ಷಣನೀಡುವ ಸಂಸ್ಥೆಗಳು ಟೆಕ್ನಿಕಂ ಎಂಬ ಹೆಸರಿನಿಂದ ದೇಶಾದ್ಯಂತ ಪ್ರಚಾರದಲ್ಲಿವೆ. ಸುಮಾರು ೬೦೦ ವೃತ್ತಿಗಳಿಗೆ ಸಂಬಂಧಿಸಿದಂತೆ ಅವುಗಳಲ್ಲಿ ವೃತ್ತಿಶಿಕ್ಷಣ ಏರ್ಪಡಿಸಿದೆ. ಉದ್ಯೋಗ. ಸಾರಿಗೆ. ಕಟ್ಟಡ. ಕೃಷಿ. ವಾಣಿಜ್ಯ. ಉಪವೈದ್ಯ. ಅಧ್ಯಾಪನ. ಗ್ರಂಥಾಲಯ ವಿಜ್ಞಾನ. ಲಲಿತಕಲೆ—ಇವು ಅಲ್ಲಿನ ಮುಖ್ಯವೃತ್ತಿಗಳು. ನಾಲ್ಕು ವರ್ಷದ ಟೆಕ್ನಿಕಂನಲ್ಲಿ ಅರ್ಧಕಾಲವನ್ನು ಸಾಮಾನ್ಯ ಶಿಕ್ಷಣ ಮತ್ತು ಸೈದ್ಧಾಂತಿಕ ಜ್ಞಾನಕ್ಕೂ ಇನ್ನರ್ಧವನ್ನು ವೃತ್ತಿ ಶಿಕ್ಷಣಕ್ಕೂ ವಿನಿಯೋಗಿಸುವರು. ಅಲ್ಲಿನ ಶಿಕ್ಷಣ ಮುಗಿಸಿದವರು ಉನ್ನತ ಶಿಕ್ಷಣ ಸಂಸ್ಥೆಗೆ ಪ್ರವೇಶ ಪಡೆಯಬಹುದು. ಟೆಕ್ನಿಕಂಗಳನ್ನು ಸಂಬಂಧಿಸಿದ ಸಚಿವಾಲಯ ನಡೆಸುತ್ತದೆ. ಉದಾ: ಔದ್ಯೋಗಿಕ ಶಿಕ್ಷಣವನ್ನು ಉದ್ಯೋಗ ಸಚಿವಾಲಯವೂ ಉಪವೈದ್ಯ ಶಿಕ್ಷಣವನ್ನು ಸಾರ್ವಜನಿಕ ಆರೋಗ್ಯ ಸಚಿವಾಲಯವೂ ಕೃಷಿ ಶಿಕ್ಷಣವನ್ನು ಕೃಷಿ ಸಚಿವಾಲಯವೂ ನಡೆಸುತ್ತವೆ. ಟೆಕ್ನಿಕಂನಲ್ಲಿ ಶಿಕ್ಷಣ ಮುಗಿಸಿದವರಿಗೆ ಆಯಾ ವೃತ್ತಿ ಶಿಕ್ಷಣದ ಡಿಪ್ಲೊಮ ನೀಡಲಾಗುವುದು. ಡಿಪ್ಲೊಮ ಪಡೆದವರು ತತ್‌ಕ್ಷಣ ಕೆಲಸಕ್ಕೆ ಸೇರಿ ೨ ವರ್ಷಗಳ ಕಾಲ

ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು. ಆದರೆ ಅವರಲ್ಲಿ ಮೇಲ್ದರ್ಜೆಯಲ್ಲಿ ಉತ್ತೀರ್ಣರಾದ ಕೆಲವರಿಗೆ ಮಾತ್ರ (ಸೇ. ೫) ಕೂಡಲೆ ಉನ್ನತ ಶಿಕ್ಷಣಕ್ಕೆ ಹೋಗಲು ಅವಕಾಶವೀಯಲಾಗುವುದು. ಸೋವಿಯೆತ್ ಉದ್ಯೋಗ ಮತ್ತು ತಂತ್ರಶಾಸ್ತ್ರದ ಕ್ಷೇತ್ರಗಳಿಗೂ ರಾಷ್ಟ್ರದ ಆರ್ಥಿಕ ಸಂವರ್ಧನೆಗೂ ಈ ಶಿಕ್ಷಣ ಸಂಸ್ಥೆಗಳು ಬಹು ಮೌಲಿಕ ಸೇವೆಸಲ್ಲಿಸುತ್ತಿವೆಯೆಂದು ಪರಿಗಣಿಸಲಾಗಿದೆ.

ಉನ್ನತ ಶಿಕ್ಷಣ

ಅಕ್ಟೋಬರ್ ಕ್ರಾಂತಿಯ ಅನಂತರ ರಷ್ಯ ಉನ್ನತ ಶಿಕ್ಷಣದ ವಿಸ್ತರಣಕ್ಕೂ ಗುಣವರ್ಧನಕ್ಕೂ ಅತ್ಯಂತ ಹೆಚ್ಚು ಗಮನವಿತ್ತಿದೆಯೆಂದು ಹೇಳುವುದುಂಟು. ಅಲ್ಲಿ ಈಗ ಸುಮಾರು ೬೫ ವಿಶ್ವವಿದ್ಯಾಲಯಗಳೂ ೮೦೦ ಉನ್ನತ ಶಿಕ್ಷಣ ಸಂಸ್ಥೆಗಳೂ (VUZ) ಉನ್ನತ ಶಿಕ್ಷಣಕ್ಕೂ ಸಂಶೋಧನೆಗಳಿಗೂ ಸೌಲಭ್ಯ ಒದಗಿಸುತ್ತಿವೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲವು ಹಲವಾರು ಎಂಜಿನಿಯರಿಂಗ್ ವಿದ್ಯೆಗಳಿಗೆ ಶಿಕ್ಷಣ ನೀಡುವ ಪಾಲಿಟೆಕ್ನಿಕ್ಕುಗಳಂಥ ವಿದ್ಯಾಲಯಗಳು. ಮಿಕ್ಕವು ಉನ್ನತಮಟ್ಟದ ಸಿವಿಲ್, ಲೋಹಶಾಸ್ತ್ರ, ಸಾರಿಗೆ ಮುಂತಾದ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣವೀಯುತ್ತವೆ. ಇನ್ನುಕೆಲವು ವೈದ್ಯ, ಶಿಕ್ಷಣವೆ ಕೃಷಿ, ಅರ್ಥಶಾಸ್ತ್ರ, ನ್ಯಾಯ, ಕಲೆ ಇವುಗಳ ಶಿಕ್ಷಣಕ್ಕೆ ಮೀಸಲಾಗಿವೆ. ಸೋವಿಯೆತ್ ಉನ್ನತ ಶಿಕ್ಷಣ ಕ್ಷೇತ್ರ ೨೦ ವಿವಿಧ ವಿದ್ಯಾರಂಗಗಳಿಗೂ ೩೫೦ ವಿಶಿಷ್ಟ ಕ್ಷೇತ್ರಗಳಿಗೂ ಸಂಬಂಧಿಸಿದ್ದು, ಶಿಕ್ಷಣ ಮತ್ತು ಕೃಷಿ ನಾಲ್ಕು ವರ್ಷದವೂ, ಎಂಜಿನಿಯರಿಂಗ್ ಶಿಕ್ಷಣ ೪ ಅಥವಾ ೪½ ವರ್ಷದ್ದು ಆಗಿವೆ. ವೃತ್ತಿಶಿಕ್ಷಣದಲ್ಲಿ ಮೂರನೆಯ ಒಂದು ಭಾಗದಷ್ಟು ಕಾಲವನ್ನು ಸಾಮಾನ್ಯ ವಿಜ್ಞಾನಕ್ಕೂ ಇನ್ನುಳಿದ ಮೂರನೆಯ ಎರಡು ಭಾಗವನ್ನು ವೃತ್ತಿವಿಷಯಕ್ಕೂ ವಿನಿಯೋಗಿಸಲಾಗುತ್ತಿದೆ. ವೃತ್ತಿ ಶಿಕ್ಷಣದ ಪ್ರಾಯೋಗಿಕ ಭಾಗ ಕಾರ್ಯಕ್ಷೇತ್ರದಲ್ಲಿ ಉಮೇದುವಾರಿ ರೂಪದಲ್ಲಿ ಏರ್ಪಟ್ಟು ಅದಕ್ಕೆ ಸೇ. ೧೫ರಷ್ಟು ಕಾಲವನ್ನು ವಿನಿಯೋಗಿಸಲಾಗುತ್ತಿದೆ. ಉನ್ನತ ಶಿಕ್ಷಣಕ್ಕೆ ಪ್ರವೇಶ ಸ್ಪರ್ಧೆ ತೀವ್ರವಾಗಿದ್ದು ಕೇವಲ ಆ ವಯೋಮಾನದವರಲ್ಲಿ ಸೇ. ೨೦ರಷ್ಟು ಮಾತ್ರ ಪ್ರವೇಶಾವಕಾಶ ಪಡೆಯುತ್ತಾರೆ. ಹಿರಿಯ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿದವರಲ್ಲಿ ಅರ್ಧಕ್ಕಿಂತ ಕಡಮೆ ಸಂಖ್ಯೆಯಲ್ಲಿ ಉನ್ನತ ಶಿಕ್ಷಣಕ್ಕೆ ಬರಲು ಪ್ರಯತ್ನಿಸುತ್ತಾರೆ.

ಉನ್ನತ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು ೧೦ ಲಕ್ಷ ಮಂದಿ ಸಿಬ್ಬಂದಿಯವರೂ ಅಧ್ಯಾಪಕರೂ ಕಾರ್ಯನಿರತರಾಗಿದ್ದಾರೆ. ಉನ್ನತ ಮತ್ತು ಪ್ರೌಢ ವಿಶಿಷ್ಟ ಶಿಕ್ಷಣ ಸಚಿವಾಲಯ ಅಲ್ಲಿನ ಉನ್ನತ ಶಿಕ್ಷಣದ ಆಡಳಿತವನ್ನು ನೋಡಿಕೊಳ್ಳುತ್ತಿದೆ. ಉನ್ನತ ಶಿಕ್ಷಣ ಮೂರು ರೀತಿಯ ತರಗತಿಗಳಲ್ಲಿ ಏರ್ಪಡುತ್ತಿದೆ–ಪೂರ್ಣಕಾಲದ ತರಗತಿಗಳು, ಸಂಜೆ ತರಗತಿಗಳು ಮತ್ತು ವಿಸ್ತರಣ ಮತ್ತು ಅಂಚೆ ತರಗತಿಗಳು. ಅವುಗಳಲ್ಲೆಲ್ಲ ಒಟ್ಟು ೪೫ ಲಕ್ಷ ಮಂದಿ ಶಿಕ್ಷಣ ಪಡೆಯುತ್ತಿರುವರು. ಶಿಕ್ಷಣ ಮುಗಿಸಿದವರಿಗೆ ಪದವಿಗೆ ಬದಲು ಡಿಪ್ಲೊಮ ನೀಡುವರು. ಡಿಪ್ಲೊಮ ಪಡೆದವರಿಗೆ ಒಂದು ಉದ್ಯೋಗಕ್ಕೆ ಹಕ್ಕು ಬರುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಪಡೆಯುವವರ ಸೇಕಡವಾರು ಹೀಗಿದೆ: ಎಂಜಿನಿಯರಿಂಗ್ ೪೦%, ಕೃಷಿ ೧೦%, ವೈದ್ಯ ೭%, ಶಿಕ್ಷಣ ೩೫%, ಇತರ ಉದ್ಯೋಗ ಶಿಕ್ಷಣ ೮%. ವಿಶ್ವವಿದ್ಯಾಲಯಗಳು ಮಾನವಿಕ, ಕಲೆ ಮತ್ತು ವಿಜ್ಞಾನಶಾಸ್ತ್ರಗಳಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿವೆ. ವಿದ್ಯಾರ್ಥಿಗಳು ಎಂಜಿನಿಯರಿಂಗ್ ಮತ್ತು ಅನ್ವಯಿಕ ವಿಜ್ಞಾನ ಶಾಖೆಗಳಲ್ಲಿ ಶಿಕ್ಷಣ ಪಡೆಯಲು ಹೆಚ್ಚಿನ ಒಲವನ್ನು ತೋರಿಸುವರು.

ರಷ್ಯದಲ್ಲಿ ಉನ್ನತ ಶಿಕ್ಷಣಕ್ಕೆ ಮೇಲಿನ ಸಂಸ್ಥೆಗಳ ಜೊತೆಗೆ ಕೆಲವು ವಿಶಿಷ್ಟ ರೀತಿಯ ಸಂಸ್ಥೆಗಳೂ ಇವೆ. ರಕ್ಷಣೆ, ಕಮ್ಯುನಿಸ್ಟ್ ಪಕ್ಷದ ವಿದ್ಯಾಲಯ, ಉನ್ನತ ಕಾರ್ಯನಿರ್ವಹಣಾ ವಿದ್ಯಾಲಯ–ಇವುಗಳಿಗೆ ಸ್ಪರ್ಧಾ ಪರೀಕ್ಷೆಗಳ ಮೂಲಕ ಪ್ರವೇಶ. ಅದರಲ್ಲಿ ಶಿಕ್ಷಣ ಪಡೆದವರನ್ನು ಆಯಾ ಸಚಿವಶಾಖೆ ಉನ್ನತ ಹುದ್ದೆಗಳಿಗೆ ನೇಮಿಸಿಕೊಳ್ಳುತ್ತದೆ.

ಸಂಶೋಧನೆ ಮತ್ತು ಪದವಿಗಳು

ರಷ್ಯದಲ್ಲಿ ಉನ್ನತೋನ್ನತ ಶಿಕ್ಷಣವೆಂದರೆ ಸಂಶೋಧನೆಯ ಕಾರ್ಯದಲ್ಲಿ ನೀಡುವ ಪ್ರಶಿಕ್ಷಣ. ಸುಮಾರು ಅರ್ಧದಷ್ಟು ಉನ್ನತ ಶಿಕ್ಷಣ ಸಂಸ್ಥೆಗಳೂ ೬೦೦ ಪ್ರತ್ಯೇಕ ಸಂಶೋಧನ ಸಂಸ್ಥೆಗಳೂ ಈ ಸೌಲಭ್ಯವನ್ನೊದಗಿಸುತ್ತವೆ. ಉನ್ನತ ಶಿಕ್ಷಣದ ಡಿಪ್ಲೊಮ ಪಡೆದವರು ಅಲ್ಲಿ ಮೂರು ವರ್ಷದ ಸಂಶೋಧನೆ ನಡೆಸಿ ಮಹಾಪ್ರಬಂಧವನ್ನು ಸಲ್ಲಿಸಿದ ಮೇಲೆ 'ಆ್ಯಸ್ಪಿರ್ಯಾಂಟುರ' ಎಂಬ ಪದವಿ ಪಡೆಯಬಹುದು. ಅದನ್ನು 'ಕ್ಯಾಂಡಿಡೇಟ್' ಪದವಿ ಎಂದೂ ಕರೆಯುವರು. ಆ ಪದವಿ ಪಡೆದವರು ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಸಂಶೋಧನ ಸಂಸ್ಥೆಗಳಲ್ಲೂ ಕೆಲಸಕ್ಕೆ ಅರ್ಹತೆ ಪಡೆಯುತ್ತಾರೆ. ವರ್ಷಂಪ್ರತಿ ಸುಮಾರು ಒಂದು ಲಕ್ಷ ಮಂದಿ ಈ ಪದವೀ ಶಿಕ್ಷಣಕ್ಕೆ ಸೇರುತ್ತಾರೆ. ಅವರಲ್ಲಿ ಸುಮಾರು ಐದನೆಯ ಒಂದು ಭಾಗದಷ್ಟು ಮಂದಿಗೆ ಆ ಪದವಿ ಲಭಿಸುತ್ತದೆ. ಆ್ಯಸ್ಪಿರ್ಯಾಂಟುರ ಪದವಿ ಪಡೆದವರು ಸಂಶೋಧನೆ ಮತ್ತು ಪ್ರಕಟನೆಗಳ ಮೂಲಕ ದ್ವಿತೀಯ ಉನ್ನತ ಪದವಿಯಾದ ಡಾಕ್ಟರೇಟನ್ನೂ ಪಡೆಯಬಹುದು. ಇವೆರಡು ಪದವೀ ಕಾರ್ಯಕ್ರಮಗಳನ್ನೂ 'ಸುಪ್ರೀಂ ಅಟೆಸ್ಟೇಷನ್ ಕಮಿಷನ್' ಎಂಬ ರಾಷ್ಟ್ರೀಯ ಆಯೋಗ ನೋಡಿಕೊಳ್ಳುವುದಲ್ಲದೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಸಂಶೋಧನ ಸಂಸ್ಥೆಗಳಲ್ಲೂ ಪ್ರಾಧ್ಯಾಪಕರನ್ನೂ ಸಂಶೋಧಕರನ್ನೂ ನೇಮಿಸುತ್ತದೆ.

ಆಡಳಿತ

ರಷ್ಯದ ಶಿಕ್ಷಣದ ನೀತಿಯಲ್ಲಾದ ಬದಲಾವಣೆಗಳನ್ನು ಹಿಂಬಾಲಿಸಿ ಆಡಳಿತ ವ್ಯವಸ್ಥೆಯಲ್ಲೂ ಬಗೆಬಗೆಯ ಪರಿವರ್ತನೆಗಳಾಗುತ್ತ ಬಂದಿವೆ. ಪಕ್ಷದ ಕೇಂದ್ರ ಸಮಿತಿ ಶಿಕ್ಷಣದ ನೀತಿಯನ್ನು ರೂಪಿಸುತ್ತದೆ. ರಾಷ್ಟ್ರೀಯ ಸರ್ಕಾರ ಆ ನೀತಿಯನ್ನು ಕಾರ್ಯರೂಪಕ್ಕೆ ತರುತ್ತದೆ. ವೈಯಕ್ತಿಕ ಲಾಭಗಳಿಕೆಯ ಸ್ಥಳದಲ್ಲಿ ಸಾಮಾಜಿಕ ಸೇವೆಯನ್ನು ಎತ್ತಿ ಹಿಡಿಯುವುದು ಸೋವಿಯೆತ್ ಶಿಕ್ಷಣದ ವಿಶಿಷ್ಟ ನೀತಿ. ಕೇವಲ ಜ್ಞಾನ ಮತ್ತು ಸಂಸ್ಕೃತಿಗಳನ್ನು ಅರಿತು ಮುಂದುವರಿಯುವುದಕ್ಕಿಂತಲೂ ಸಮಾಜಕ್ಕೆ, ರಾಷ್ಟ್ರಕ್ಕೆ ಉಪಯುಕ್ತನೆನಿಸಬಲ್ಲ ಪೌರನನ್ನಾಗಿ ಮಾಡುವುದು ಶಿಕ್ಷಣ ಸಂಸ್ಥೆಗಳ ನಿಯೋಜಿತ ಕರ್ತವ್ಯ. ಅದಕ್ಕಾಗಿ ಅವು ವ್ಯಕ್ತಿಗೆ ಉತ್ಪನ್ನ ಕಾರ್ಯದಲ್ಲಿ ನೆರವಾಗಬಲ್ಲ ಕೌಶಲವನ್ನು ನೀಡಬೇಕು. ಜೊತೆಗೆ ವ್ಯಕ್ತಿಗಳಲ್ಲಿ ಏಕರೂಪದ ಕಮ್ಯೂನಿಸ್ಟ್ ತತ್ತ್ವನಿಷ್ಠೆಯನ್ನೂ ಅದೇ ರೂಪದ ಮನೋಭಾವ ವರ್ತನೆ ಮತ್ತು ಮೌಲ್ಯಗಳನ್ನೂ ಅಲ್ಲಿನ ಶಿಕ್ಷಣ ಸಂಸ್ಥೆಗಳು ರೂಪಿಸಬೇಕು. ಪಠ್ಯ ಮತ್ತು ಪಠ್ಯೇತರ ಕಾರ್ಯಕ್ರಮಗಳ ಮೂಲಕ ಕಮ್ಯೂನಿಸ್ಟ್ ತತ್ತ್ವದೃಷ್ಟಿಯನ್ನು ಎತ್ತಿಹಿಡಿಯಬೇಕು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮಾನವಿಕ ಮತ್ತು ಸಮಾಜಶಾಸ್ತ್ರಗಳಲ್ಲಿ ಆ ಭಾವನೆಗೆ ಪುರಸ್ಕಾರವೀಯಬೇಕು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲರೂ ಕಮ್ಯೂನಿಸ್ಟ್ ಮೌಲ್ಯಗಳಿಗೆ ನಿಷ್ಠೆಯಿಂದಿರುವ ಶಿಕ್ಷಾಬೋಧನೆಗೆ ಸೇರಬೇಕು. ಎಲ್ಲ ವ್ಯಕ್ತಿಗಳೂ ಆ ಮೂಲಕ ನೂತನ ಜನಾಂಗವಾಗಬೇಕು. ಅವರ ಮಾನಸಿಕ ಮತ್ತು ದೈಹಿಕ ಚಟುವಟಿಕೆಗಳಲ್ಲೂ ಸಮನ್ವಯ ಏರ್ಪಡಬೇಕು. ಎಂದರೆ ಜ್ಞಾನಾರ್ಜನೆಯ ಜೊತೆಗೆ ದುಡಿಮೆಯೂ ಸೇರಬೇಕು. ಆಗ ಜ್ಞಾನ ಜೀವನಕ್ಕೂ ದುಡಿಮೆಯ ಜೀವನಕ್ಕೂ ಇರುವ ಕೃತಕ ಅಂತರವೂ ಭೇದವೂ ಅಳಿದುಹೋಗುವುವು. ಎಂದರೆ ಶಿಕ್ಷಣ ಸಂಪನ್ಮೂಲಗಳನ್ನು ಬಳಸಿಕೊಂಡು ಸಾಮಾಜಿಕ ನೂತನ ಮೌಲ್ಯಗಳನ್ನು ಕಲಿತು ಸೋವಿಯೆತ್ ಜನಾಂಗದ ಸೇವಾದೀಕ್ಷೆಯನ್ನು ಹೊತ್ತು ನಿರ್ವಹಿಸಬಲ್ಲ ವ್ಯಕ್ತಿಗಳನ್ನು ರೂಪಿಸಬೇಕು. ಈ ಉದ್ದೇಶ ಸಾಧನೆಗಾಗಿಯೆ ಶಿಕ್ಷಣ ಸಂಘಟನೆಯಲ್ಲೂ ಆಡಳಿತದಲ್ಲೂ ೧೯೧೭ರಿಂದ ಏಕಪ್ರಕಾರವಾಗಿ ಪ್ರಯೋಗಗಳು ನಡೆಯುತ್ತ ಬಂದಿವೆ. ಈ ನೀತಿ ಕಾರ್ಯರೂಪಕ್ಕೆ ಬರಬೇಕಾದರೆ ರಾಷ್ಟ್ರೀಯ ಸರ್ಕಾರ ಅದರ ಆಡಳಿತ ಸೂತ್ರವನ್ನು ನಿಯಂತ್ರಿಸುವುದು ಅಗತ್ಯವಾಗುತ್ತದೆ. ಈ ಸಂಬಂಧದ ಶಾಸನ, ಆಡಳಿತ ನಿಯಮ, ಶಿಕ್ಷಣ ಸಂಘಟನೆ, ಅಧ್ಯಾಪಕರ ನೇಮಕ, ಬೋಧನ ವಿಷಯ, ಪಠ್ಯಪುಸ್ತಕ—ಇವೇ ಮೊದಲಾದ ಅಂಶಗಳಿಗೆ ಸಂಬಂಧಿಸಿದ ಮೂಲ ನೀತಿನಿಯಮಗಳನ್ನು ಅದು ಮಾಡುತ್ತದೆ. ಪ್ರತಿ ಶಿಕ್ಷಣ ಸಂಸ್ಥೆ ತಾನು ಸೇರಿರುವ ಕೇಂದ್ರ ಸಚಿವಾಲಯದ ಮೂಲಕ ಆ ತಿಳಿವಳಿಕೆಯನ್ನು ಪಡೆದುಕೊಳ್ಳುತ್ತದೆ. ಶಿಕ್ಷಣ ಸಂಸ್ಥೆಗಳು ಹಲವಾರು ಸಚಿವಾಲಯಗಳಿಗೆ ಸೇರಿದ್ದರೂ ಅವೆಲ್ಲವೂ ಪಕ್ಷದ ನೀತಿಗನುಗುಣವಾಗಿ ಸಂಸ್ಥೆಗಳನ್ನು ನಡೆಸುತ್ತವೆ.

ಸೋವಿಯೆತ್ ಒಕ್ಕೂಟದಲ್ಲಿರುವ ಹದಿನೈದು ಪ್ರಾಂತ್ಯಗಳಲ್ಲೂ ಆಯಾ ಪ್ರಾಂತ್ಯದ ಶಿಕ್ಷಣ ಸಚಿವರು ಸಾಮಾನ್ಯ ಶಿಕ್ಷಣದ ಆಡಳಿತ ನಡೆಸುವರು. ಎಲ್ಲ ಪ್ರಾಂತ್ಯಗಳ ಆಡಳಿತದಲ್ಲೂ ಏಕರೂಪತೆಯನ್ನೂ ಸಮನ್ವಯವನ್ನೂ ಕೇಂದ್ರದ ಸಾರ್ವಜನಿಕ ಶಿಕ್ಷಣದ ಸಚಿವಾಲಯ ನಿರ್ವಹಿಸುತ್ತದೆ. ವೃತ್ತಿ ಮತ್ತು ಉದ್ಯೋಗ ಶಿಕ್ಷಣ ಸಂಸ್ಥೆಗಳ ಹಾಗೂ ಶಿಕ್ಷಣ ಸಂಶೋಧನ ಸಂಸ್ಥೆಗಳ ಆಡಳಿತ ಆಯಾ ಸಚಿವಾಲಯಕ್ಕೆ ಸೇರಿದ್ದರೂ ಅವುಗಳಲ್ಲಿ ಸಮನ್ವಯವನ್ನು ಮೂಡಿಸುವ ಕಾರ್ಯ ಯೋಜನಾ ಆಯೋಗಕ್ಕೆ ಸೇರಿರುತ್ತದೆ.

ಪಾಠಶಾಲೆಯ ಮತ್ತು ಇತರ ಶಿಕ್ಷಣ ಸಂಸ್ಥೆಗಳ ಮುಖ್ಯರು ರಾಷ್ಟ್ರ ರೂಪಿಸಿರುವ ನೀತಿನಿಯಮಗಳನ್ನನುಸರಿಸಿ ಗೊತ್ತುಮಾಡಿರುವ ಅಭ್ಯಾಸಪತ್ರಿಕೆಯಂತೆ ಕಾರ್ಯ ನಿರ್ವಹಿಸುವರು. ಸರ್ಕಾರ ಒದಗಿಸಿದ ಹಣವನ್ನು ಕಾರ್ಯಕರ್ತರಿಗೆ ಸಂಬಳದ ರೂಪದಲ್ಲಿ ಹಂಚುವರು. ಆದರೆ ಅಲ್ಲಿನ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ನೀತಿನಿಯಮಗಳ ನಿರೂಪಣೆಯಲ್ಲಿ ಅವರು ಪಾಲುಗೊಳ್ಳುವುದಿಲ್ಲ.

ಸೋವಿಯೆತ್ ಯೋಜನೆಗಳಲ್ಲಿ ಶಿಕ್ಷಣ

ರಷ್ಯದ ಕೇಂದ್ರೀಯ ಯೋಜನೆಯಲ್ಲಿ ಸಾಮಗ್ರಿ. ಹಣಕಾಸು. ದುಡಿಮೆ—ಇವು ಮೂರೂ ಮೂರು ಮುಖ್ಯ ಅಂಶಗಳು. ದುಡಿಮೆಗೆ ಅಗತ್ಯವಾದ ವಿವಿಧ ಕ್ಷೇತ್ರಗಳ ವಿವಿಧ ಮಟ್ಟಗಳ ಜನಬಲದ ಅಗತ್ಯವನ್ನು ಲೆಕ್ಕಹಾಕಿ ಅವನ್ನು ಒದಗಿಸುವ ಕಾರ್ಯವನ್ನು ಶಿಕ್ಷಣ ಸಂಸ್ಥೆಗಳಿಗೆ ಯೋಜನಾ ಆಯೋಗ ವಹಿಸುವುದು. ಯೋಜನಾ ಆಯೋಗದ ಈ ಅಂದಾಜಿನ ಆಧಾರದ ಮೇಲೆ ರಾಷ್ಟ್ರದ ಪ್ರೌಢಶಾಲಾ ಮಟ್ಟದ ಎಲ್ಲ ಶಿಕ್ಷಣ ಸಂಸ್ಥೆಗಳಿಗೂ ಪ್ರವೇಶಾವಕಾಶ ನೀಡಬೇಕಾದ ಸಂಖ್ಯೆಯನ್ನು ಪ್ರತ್ಯೇಕವಾಗಿ ತಿಳಿಸುವರು. ವಿದ್ಯಾರ್ಹತೆ. ರಾಜಕೀಯ ಅರ್ಹತೆ—ಇವೆರಡನ್ನೂ ಆಧಾರಮಾಡಿಕೊಂಡು ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ತನಗೆ ನಿಗದಿಯಾಗಿರುವಷ್ಟು ಮಂದಿಯನ್ನು ಶಿಕ್ಷಣಕ್ಕೆ ಸೇರಿಸಿಕೊಳ್ಳುತ್ತದೆ. ಶಿಕ್ಷಣ ಮುಗಿದೊಡನೆ ಅವರು ನೇಮಕವಾಗುವ ಕೆಲಸವನ್ನು ಪ್ರಕಟಿಸುವರು. ಶಿಕ್ಷಣ ಪಡೆದವರೆಲ್ಲ ಅಲ್ಲಿಗೆ ತಮ್ಮ ಶಿಕ್ಷಣ ಮುಗಿಸಿ ಉದ್ಯೋಗಕ್ಕೆ ಸೇರಿಕೊಳ್ಳುವರು. ಏಳನೆಯ ತರಗತಿಗಿಂತ ಮೇಲಿನ ಶಿಕ್ಷಣ ಸಂಸ್ಥೆಗಳು ರಾಷ್ಟ್ರೀಯ ಜನಬಲ ಸಮಿತಿ ಸೂಚಿಸುವ ಗುರಿಯನ್ನು ಸಾಧಿಸುತ್ತವೆ. ಉನ್ನತ ವೃತ್ತಿ. ತಂತ್ರಶಾಸ್ತ್ರ. ಶಿಲ್ಪ ಮುಂತಾದ ಕ್ಷೇತ್ರಗಳಿಗೆ ಬೇಕಾದ ಜನಬಲವನ್ನು ನಿರ್ಧರಿಸುವಾಗಲೂ ಇದೇ ನೀತಿಯನ್ನು ಅನುಸರಿಸುತ್ತಾರೆ. ಆದರೆ ಕೆಳ ಅಂತಸ್ತಿನ ಶಿಕ್ಷಣ ಮುಗಿಸಿದವರು ತಮ್ಮ ಶಿಕ್ಷಣವನ್ನು ಮುಂದುವರಿಸಿ ನಿಯೋಜಿತ ಕಾಲಕ್ಕೆ ಸರಿಯಾಗಿ ಅವರು ತಮ್ಮ ಶಿಕ್ಷಣವನ್ನು ಮುಗಿಸುವಂತೆ ನಿಯೋಜಿಸಲಾಗಿರುತ್ತದೆ. ಅದಕ್ಕನುಕೂಲಿಸುವಂತೆ ಶಿಕ್ಷಣ ವ್ಯವಸ್ಥೆಯಲ್ಲಿ ವಿವಿಧತೆಗೂ ವ್ಯಾಪಕವಾಗಿ ದೇಶಾದ್ಯಂತ ಸಂಸ್ಥೆಗಳನ್ನು ಏರ್ಪಡಿಸುವುದಕ್ಕೂ ಅವಕಾಶ ಕಲ್ಪಿಸಿಕೊಂಡಿದೆ. ನಿಜವಾಗಿ ಹೇಳಬೇಕಾದರೆ ಅಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿ ಕಂಡುಬರುವ ಈ ವಿವಿಧತೆಗೆ ಯೋಜನೆಯ ವಿಭಿನ್ನ ಜನಬಲದ ಅಗತ್ಯವೇ ಕಾರಣವೆನ್ನಬೇಕಾಗುತ್ತದೆ. ಪ್ರತಿಯೊಂದು ವಿಶಿಷ್ಟ ಉದ್ಯೋಗಕ್ಷೇತ್ರಕ್ಕೂ ಜನಬಲವನ್ನು ಒದಗಿಸುವ ಅನೇಕ ಸಂಸ್ಥೆಗಳ ಕಾರ್ಯಕ್ರಮದಲ್ಲಿ ಯೋಜನೆಯ ಮೂಲಕ ಏಕರೂಪತೆಯನ್ನೂ ಸಮನ್ವಯವನ್ನೂ ಸಾಧಿಸಲಾಗುತ್ತಿದೆ.

ಉಪಸಂಹಾರ

ಏಳು ಪ್ರೌಢಶಾಲೆ. ಟೆಕ್ನಿಕಂ. ಉನ್ನತ ಶಿಕ್ಷಣ ಸಂಸ್ಥೆ ಮುಂತಾದವುಗಳಲ್ಲಿ ವಿದ್ಯಾರ್ಥಿ ಸಂಖ್ಯೆ ೧೯೬೦ರ ವೇಳೆಗೆ ದ್ವಿಗುಣವಾಗಬಹುದೆಂದು ಅಂದಾಜು ಮಾಡಲಾಗಿದೆ. ಅದಕ್ಕೆ ಅನುಕೂಲಿಸುವಂತೆ ಆ ಮಟ್ಟದ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಏಳನೆಯ ತರಗತಿಯ ವರೆಗೆ ಆ ವಯೋಮಾನದ ಸೇ. ೭೦ರಷ್ಟು ಮಂದಿ ಶಾಲೆಗೆ ಸೇರಿದ್ದರೂ ಅಲ್ಲಿನ ಶಿಕ್ಷಣಸನ್ನಿವೇಶಾದಿ ಸೌಲಭ್ಯಗಳ ಕೊರತೆಯಿಂದಾಗಿ ಅದರ ಶಿಕ್ಷಣದ ಮಟ್ಟ ಸಮರ್ಪಕವಾಗಿರಲಾರದು. ಅಂಥವರು ಅಧಿಕ ಸಂಖ್ಯೆ

ಯಲ್ಲಿ ಮೇಲಿನ ಅಂತಸ್ತಿಗೆ ಶಿಕ್ಷಣಕ್ಕೆ ಬರುವುದರಿಂದ ಅಲ್ಲೂ ಅದರ ಮಟ್ಟ ಸ್ವಾಭಾವಿಕವಾಗಿ ಕುಸಿಯುತ್ತದೆ. ಇದು ಅಲ್ಲಿನ ಶಿಕ್ಷಣ ಕ್ಷೇತ್ರ ಎದುರಿಸಬೇಕಾಗುವ ಒಂದು ಸಮಸ್ಯೆ. ಬಹುಮಾರ್ಗೀಯ ಪಠ್ಯಕ್ರಮವನ್ನು ಮಿತಿಯೇ ಇಲ್ಲದೆ ಹೆಚ್ಚಿಸುತ್ತ ಹೋಗುವ ಪ್ರವೃತ್ತಿಯೂ ಕಡಮೆಯಾಗುವಂತೆ ತೋರುತ್ತದೆ. ಇದರಿಂದಾಗಿ ಅಧ್ಯಯ ವಿಷಯ ಕ್ಷೇತ್ರಕ್ಕೂ ಒಂದು ಮಿತಿಯನ್ನು ಕಲ್ಪಿಸಿದಂತಾಗುತ್ತದೆ. ಹತ್ತು ವರ್ಷಗಳ ಕಾಲದ ಸಾರ್ವತ್ರಿಕ ಶಿಕ್ಷಣವನ್ನು ಆಚರಣೆಗೆ ತರುವ ಯತ್ನವೂ ನಡೆಯುತ್ತಿದೆ. ಆ ಬಗ್ಗೆ ಅಗತ್ಯ ಸಂಶೋಧನೆಗಳೂ ನಡೆಯುತ್ತಿವೆ. 'ಅಕಾಡೆಮಿ ಆಫ್ ಪೆಡಗಾಗಿಕಲ್ ಸೈನ್ಸ್' ಸಂಸ್ಥೆಗೆ ಈ ಕಾರ್ಯವನ್ನು ವಹಿಸಿದೆ. ಜೊತೆಗೆ ಆ ಸಂಸ್ಥೆ ಪಠ್ಯಕ್ರಮ, ಬೋಧನ ವಿಧಾನ, ವ್ಯಕ್ತಿತ್ವ—ಮುಂತಾದ ಕ್ಷೇತ್ರಗಳಲ್ಲೂ ಸಂಶೋಧನೆಗೆ ಅವಕಾಶ ಕಲ್ಪಿಸಿದೆ.

ಡಾ. ಬಾ. ರಾ. ಗೋಪಾಲ್

ಬೀದರ್ ಜಿಲ್ಲೆಯ ಶಾಸನಗಳು-೪

ರಂಜೋಲ್ ಗ್ರಾಮದ ಸಿಂದರ ಶಾಸನ

ಬೀದರ್ ಜಿಲ್ಲೆಯ ಬೀದರ್ ತಾಲೂಕಿನ ಗ್ರಾಮ ರಂಜೋಲ್. ಖೇಣಿ ರಂಜೋಲ್ ಎಂದೂ ಇದನ್ನು ಕರೆಯುತ್ತಾರೆ. ಈ ಗ್ರಾಮದ ದ್ವಾರದಲ್ಲಿಯೇ ಹನುಮಾನ್ ಗುಡಿ. ಈ ಗುಡಿಯ ಗೋಡೆಯ ಪಕ್ಕಕ್ಕೆ ಒಂದು ಶಾಸನದ ಕಲ್ಲು ಒರಗಿ ನಿಂತಿದೆ. ಅಲ್ಲದೆ ಗುಡಿಯ ಹಿಂದೆ ಸುಮಾರು ಐದು ಅಡಿಗಳಿಗೂ ಮಿಕ್ಕಿದ ಎತ್ತರದ ಕಲ್ಲಿನ ಮೇಲೆ ಕೊರೆದ ಶಾಸನವಿದೆ. ಈಗ ಪ್ರಕಟವಾಗುತ್ತಿರುವುದು ಈ ಶಾಸನವೇ. ಆದರೆ ಈ ಕಲ್ಲಿನ ಕೆಳಭಾಗ ಒಡೆದುಹೋಗಿರುವ ಕಾರಣ ಶಾಸನ ಅಪೂರ್ಣವಾಗಿದೆ. ಗುಡಿಯ ಹಿಂದೆ ಸ್ವಲ್ಪ ದೂರದಲ್ಲಿ ಸಮಾಧಿ ಸ್ಥಳವೊಂದಿದೆ. ಅಲ್ಲೂ ಎರಡು ತುಂಡುಕಲ್ಲಿನ ಶಾಸನಗಳಿವೆ. ಬಹುಶಃ ಅವು ಪ್ರಸ್ತುತ ಶಾಸನದ ಭಾಗಗಳಾಗಿರಬಹುದು. ಆದರೆ ಸ್ಪಷ್ಟವಾಗಿ ಏನನ್ನೂ ಹೇಳಲಾಗದು.

ಈ ಶಾಸನವನ್ನು ಕುರಿತು ಈ ಮೊದಲು ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ' ಯಲ್ಲಿ ಚರ್ಚಿಸಿದ್ದೇನೆ[1]. ಆದರೆ ಶಾಸನಪಾಠ ಪ್ರಕಟವಾಗುತ್ತಿರುವುದು ಈಗಲೇ. ಇದು ಚಾಲುಕ್ಯ ಆರ್ರಡಿ ವಿಕ್ರಮಾದಿತ್ಯನ ಕಾಲದ ಶಾಸನ. ಆತನ ಆಳ್ವಿಕೆಯನ್ನೂ ಇದರಲ್ಲಿ ಪ್ರಸ್ತಾಪಿಸಿದೆ. ಪ್ರಾಸಂಗಿಕವಾಗಿ ಅರಸನ ಪೂರ್ವಜರನ್ನು ಹೆಸರಿಸಿದೆ. ಇಲ್ಲಿ ಕೆಲವು ವಿಷಯಗಳನ್ನು ಗಮನಿಸಬೇಕು. ಮೊದಲು ಆಳಿದ ಬಾದಾಮಿಯ ಚಾಲುಕ್ಯರ ಕತ್ತಿಯರನ್ನು ರಟ್ಟಾನ್ವಯದವರು ಬದಿಗೊತ್ತಿದರೆಂದಿದೆ. ಈ ಕತ್ತಿಯರ ಇಮ್ಮಡಿ ಕೀರ್ತಿವರ್ಮನೆಂಬುದು ತಿಳಿದಿದೆ. ಇಂತಹ ರಟ್ಟರನ್ನು ಚಾಲುಕ್ಯ ತೈಲಪ ಹೊರದೂಡಿ ಮತ್ತೊಮ್ಮೆ ಚಾಲುಕ್ಯ ರಾಜ್ಯವನ್ನು ಸ್ಥಾಪಿಸಿದ.

ತೈಲಪನ ಅನಂತರ ಆಳಿದ ಅರಸರಲ್ಲಿ ದಶವರ್ಮ, ಜಯಸಿಂಹ, ಆಹವಮಲ್ಲ ಮತ್ತು ವಿಕ್ರಮರನ್ನು ಶಾಸನದಲ್ಲಿ ಹೆಸರಿಸಲಾಗಿದೆ. ಆದರೆ ದಶವರ್ಮ ರಾಜ್ಯವಾಳಲಿಲ್ಲ. ತೈಲಪನ ಹಿರಿಯ ಮಗ ಇರಿವಬೆಡಂಗ ಸತ್ಯಾಶ್ರಯ ತಂದೆಯ ಅನಂತರ ಪಟ್ಟಕ್ಕೆ ಬಂದ. ಈತನ ಆಳಿಕೆಯ ಕಾಲದಲ್ಲಿ ದಶವರ್ಮ ಮೃತನಾದ. ಪ್ರಸ್ತುತ ಶಾಸನದಲ್ಲಿ ಸತ್ಯಾಶ್ರಯ, ಐದನೆಯ ವಿಕ್ರಮಾದಿತ್ಯ ಹಾಗೂ ಇಮ್ಮಡಿ ಸೋಮೇಶ್ವರರ ಪ್ರಸ್ತಾಪವೇ ಇಲ್ಲ. ಆರ್ರಡಿ ವಿಕ್ರಮಾದಿತ್ಯ, "ಘನಬಾಹು ಗರ್ವದಿಂ ಗರ್ವಿತರಿಪುನೃಪರಂ ಯುದ್ಧದೊಳು ತೊಟ್ಟು ಸಿಂಹಾಸನಮಂ ಕೈಕೊಂಡ"ನೆಂದಿದೆ. ಹಿರಿಯ ಸೋದರನನ್ನು ಹೊರದೂಡಿ ರಾಜ್ಯವನ್ನು ಸ್ವವಶಮಾಡಿಕೊಂಡನೆಂಬುದು ಬಹುಶಃ ಇಲ್ಲಿ ಧ್ವನಿತವಾಗಿದೆ.

ಕುಸ್ತಳ ವಿಷಯದೊಳಗಿನ ಅಟ್ಟಳಿನಾಡನ್ನು ಆ ಬಳಿಕ ವರ್ಣಿಸಲಾಗಿದೆ. ಎಟಂಜೇಱು ಇದರ ರಾಜಧಾನಿ. ಈ ನಾಡು ಸಿಂದವಂಶದ ಮಾಂಡಲಿಕರ ಅಧಿಕಾರಕ್ಕೊಳಪಟ್ಟಿತ್ತು. ಈ ವಂಶದ ಮೂಲ

1 ಸಂಪುಟ೧, ಸಂಚಿಕೆ೧, ಪು.೧೪೭–೧೫೭

ಪುರುಷ. ಐತಿಹಾಸಿಕ ವ್ಯಕ್ತಿ ಹಜ್ಜ. ಆದರೆ ಶಾಸನದಲ್ಲಿ ಈ ಸಿಂದವಂಶವನ್ನು ಕುರಿತ ಕತೆಯೊಂದಿದೆ. ಉರಗಲೋಕಾಧಿಪ ಧರಣೇಂದ್ರ. ಈತನ ಅಗ್ರಮಹಿಷಿ ಪದ್ಮಾವತಿ. ಇವರ ರಾಜಧಾನಿ ಭೋಗಾವತೀಪುರ. ಇಲ್ಲಿ ಈ ದಂಪತಿಗಳು ಸುಖದಿಂದಿದ್ದಾಗ ಪದ್ಮಾವತಿಗೆ ಗರ್ಭಚಿಹ್ನೆಗಳು ಕಾಣಿಸಿಕೊಂಡುವು. ಸಿಂಧೂನದಿಯ ನೀರಿನಲ್ಲಿ ಜಲಕ್ರೀಡೆಯಾಡಬೇಕೆಂಬ ಬಯಕೆ ಆಕೆಗೆ ಉಂಟಾಯಿತು. ದಂಪತಿಗಳು ಧರಣೀತಳಕ್ಕೆ ಬಂದರು. ಹರಿಯುವ ಸಿಂಧೂನದಿಯಲ್ಲಿ ಆ ತರುಣಿ ಜಲಕ್ರೀಡೆಯಾಡಿದಳು. ಆಗ ಉದಯಿಸುತ್ತಿದ್ದ ಸೂರ್ಯನನ್ನು ಕಂಡ ಆ ಗರ್ಭಿಣಿ ಆತನಿಗೆ ಅರ್ಘ್ಯವನ್ನಿತ್ತು "ನಿನ್ನಂದದ ಕಂದಂ ಜನಿಯಿಸುಗೆನಗೆ" ಎಂದು ಪ್ರಾರ್ಥಿಸಿದಳು. ಆಕೆಯ ಆ ಬೇಡಿಕೆ ಈಡೇರಿದಂತೆ "ತರುಣಾರ್ಕಪ್ರಭಂ ನಂದನಂ" ಜನಿಸಿದ. ಉರಗಲೋಕದ ಪದ್ಮಾವತಿಗೆ ಧರಣೀತಳದಲ್ಲಿ ಪುತ್ರ ಜನಿಸಿದನಾದ್ದರಿಂದ ಸೂರ್ಯನ ಸೌಂದರ್ಯ, ಸಾಮರ್ಥ್ಯಗಳನ್ನು ಪಡೆದ ಈ ಕಂದ ಇಲ್ಲಿಯೇ ಅರಸನಾಗಿದ್ದು ಬಾಳಲಿ ಎಂದು ಆ ದಂಪತಿಗಳು ಆಶಿಸಿ ಮಗುವನ್ನು "ವನಶಾರ್ದೂಲಗೆ ನಿರೂಪಿಸಿ" ತಾವು ಹಿಂತಿರುಗಿದರು.

ಆ ಮಗುವಾದರೋ ಹುಲಿಯ ಮೊಲೆಯುಂಡು ಬೆಳೆಯಿತು. ಅವನ ಪುಣ್ಯೋದಯದಿಂದ ಆ ಹುಲಿ ಅವನಿಗೆ ಮೊಲೆಯೂಡಿಸಿತು. ಹೀಗೆ ಬೆಳೆಯುತ್ತಿದ್ದ ಮಗುವನ್ನು ತಳಾರನೊಬ್ಬ ಕಂಡು ಮುಗ್ಧನಾಗಿ ಅಹಿಚ್ಛತ್ರದ 'ಲೋಕವಿಖ್ಯಾತ ವಿಪ್ರೋತ್ತಮ'ರಿಗೆ ತಿಳಿಸಿದ. ಅವರು ಆ ಮಗುವನ್ನು ಪರಿಗ್ರಹಿಸಿ ಅಹಿಚ್ಛತ್ರಪುರಕ್ಕೊಯ್ದರು. ಮಗುವನ್ನು ಧರಣೀತಳದಲ್ಲಿ ಬಿಟ್ಟು ಹೋಗುವಾಗ ಅವನ 'ಉಡೆಯೊಳು' ಒಂದು ಪಟವನ್ನು ಬರೆದು ಕಟ್ಟಿತ್ತು. ಅದನ್ನು ಕಂಡ ವಿಪ್ರೋತ್ತಮರು ಆ ಮಗುವಿಗೆ ಯಥಾವಿಧಿ ಜಾತಕರ್ಮ, ಅನ್ನಪ್ರಾಶನ, ಚೌಲೋಪನಯನಗಳನ್ನು ಮಾಡಿಸಿದರು. ಸಿಂದುವಿನ ನೆರಳಲ್ಲಿ ಬೆಳೆದ ಅವನು ಸಿಂದನೆಂಬ ಹೆಸರನ್ನು ಪಡೆದ. ಅವನಿಗೆ ನಾನಾ ಶಾಸ್ತ್ರಗಳನ್ನೋದಿಸಿದರು. ಸಮಸ್ತ ಶಸ್ತ್ರಶಾಸ್ತ್ರಗಳಲ್ಲಿ ಪರಿಣತನಾದ ಆತ ಅಹಿಚ್ಛತ್ರದಲ್ಲಿ ರಾಜ್ಯವಾಳತೊಡಗಿದ. ಅನುಪಮ ಯೌವನಮವನಿಗಮರ್ದಿತ್ತು. ಆಗ ಅವನಿಗೆ ಸೂಕ್ತವಾದ ಕನ್ಯೆಯನ್ನಿತ್ತು ವಿವಾಹಮಾಡಲೆಂದು ಯೋಚಿಸಲಾಯಿತು. ಅವನಿಗೆ ಸಮನಾದವನು 'ಲಲಾಟಲೋಚನನ ಮಯೂರವರ್ಮ'? ಆ ಕದಂಬ ವಂಶಾಧಿಪನ ಸುತೆ. ಲಕ್ಷ್ಮೀಮತಿ. ಅವನಿಗೆ ಅನುರೂಪಳಾದ ಕನ್ಯೆ ಎಂದು ಭಾವಿಸಿ ಕೆಲವರು ವಿಪ್ರರು ಬನವಾಸೆ ದೇಶಕ್ಕೆ ಹೋದರು–ಕನ್ಯಾರ್ಥಿಗಳಾಗಿ. ತಾವು ಬಂದ ಕಾರ್ಯವನ್ನು ಆ ಅರಸನಿಗೆ ನಿವೇದಿಸಿದಾಗ ಆತನ ತತ್ಕ್ಷಣದ ಪ್ರತಿಕ್ರಿಯೆ ಕೋಪ! ತನ್ನ ಮಗಳನ್ನು ಬಯಸಿ ಬಂದ ಈತ ಯಾರು? ಕುಲಗೋತ್ರಗಳೇನು? ಇದಕ್ಕೆ ಸಮಾಧಾನವಿತ್ತವನು 'ಆ ವಿಪ್ರರಲ್ಲಿ ಪ್ರಮುಖನಾದ ಅಭಿನವವ್ಯಾಸನೆನಿಸಿದ ನಂದಾಚಾರ್ಯ.

ಈ ಸಿಂದನ ತಂದೆ 'ಪಾತಾಳವರಸಂ ಧರಣೇಂದ್ರಂ'. ಎಂತಲೇ ಈತ ಪಾತಾಳಚಕ್ರವರ್ತಿ. "ಪದ್ಮಾವತೀದೇವಿ ಪೆತ್ತ ಮೋಹದಿಂ ಬರವಂಕೊಟ್ಟಳಪ್ಪುದಱಿಂ ಪದ್ಮಾವತೀಲಬ್ಧವರಪ್ರಸಾದನುಂ ಭೋಗಾವತೀಪುರಮೆ ನಿಜರಾಜಧಾನಿಯಪ್ಪುದಱಿಂ ಭೋಗಾವತೀಪುರವರಾಧೀಶ್ವರನುಂ ಅಹಿಚ್ಛತ್ರ ಪುರಧರಾಮರರಂ ರಕ್ಷಿಸಿದನಪ್ಪುದಱಿಂದಹಿಛತ್ರಪುರಧರಾಮರರಕ್ಷದಕ್ಷದಕ್ಷಿಣಭುಜಾದಂಡನುಂ...... ಪುಲಿಯ ಮೊಲೆಯುಂಡು ಬೆಳೆದನಪ್ಪುದಱಿಂ ವ್ಯಾಘ್ರಲಾಂಛನನುಂ ಫಣೀಂದ್ರ ವಂಶೋದ್ಭವನಪ್ಪುದಱಿಂ ಫಣೀಂದ್ರಕೇತನನುಂ ನಿನ್ನ ನೊಸಲ ಕಣ್ಣಿನಿದ್ದುರಿಯುಂ ನಿಮಿರ್ದ ಕರತಳದಿಂ ನಂದಿಪ್ಪೊಯ್ದನಪ್ಪುದಱಿಂ ನಿಡುದೋಳ ಸಿಂದನುಮೆಂಬ ಪೆಸರ್ಗಂ ನೆಲೆಯಾದಂ", ಎಂದು ಆ ನಂದಾಚಾರ್ಯ ವರ್ಣಿಸಿದ. ಇಲ್ಲಿ ನಂದಾಚಾರ್ಯ ಚಮತ್ಕಾರದಿಂದ ಮಯೂರವರ್ಮನನ್ನು ಸಾಂತ್ವನಗೊಳಿಸಿದ ಬಗೆಯನ್ನು ಗಮನಿಸಬೇಕು. ಮಯೂರವರ್ಮ ಮುನಿದಿದ್ದ. ಆತ ಲಲಾಟಲೋಚನ. ಎಂತಲೇ ಕೋಪದಿಂದ ನೊಸಲಕಣ್ಣಿನಲ್ಲಿ ಉರಿ. ಈ ಉರಿಯನ್ನು ಸಿಂದ ತನ್ನ ನಿಡಿದಾದ ತೋಳಿನಿಂದ ಆರಿಸಿದ. ಎಂತಲೇ ನಿಡುದೋಳ ಸಿಂದನೆನಿಸಿದ. ಇಲ್ಲಿ ಶಾಸನಕವಿಯ ಚಮತ್ಕಾರವನ್ನು ಗಮನಿಸಬೇಕು. ಮೇಲೆ ಹೇಳಿದ ಘಟನೆ ಅವಾಸ್ತವಿಕ. ಆದರೆ ಅದನ್ನು ಪ್ರಯೋಗಿಸಿ ನಿಡುದೋಳಸಿಂದನೆಂಬ ಹೆಸರಿಗೆ ಕೊಟ್ಟ ಅರ್ಥ ರಂಜನೀಯವಾಗಿದೆ.

ಇವರ ಪರಿಣಾಮವಾಗಿ ಲಕ್ಷ್ಮೀಮತಿ ನಿಡುಮೋಳಸಿಂದನನ್ನು ವರಿಸಿದಳು. ಈ ದಂಪತಿಗಳಿಗೆ ನಾಲ್ವರು ತನಯರು—ಪ್ರಭುಸೇವ್ಯ, ಸತ್ಯಸೇವ್ಯ, ಜಗತ್ಸೇವ್ಯ, ಬುಧಸೇವ್ಯ ಎಂಬವರು. ಇವರು ಸಕಲ ವಿದ್ಯಾಪ್ರವೀಣರಾಗಿ ದಕ್ಷಿಣಕ್ಕೆ ಬಂದು ಒಬ್ಬೊಬ್ಬರೂ ಕ್ರಮವಾಗಿ ಪಳಿಯುಂಡ, ಬಾಗಡಗೆ, ಬಳ್ಳರೆ ಮತ್ತು ಅಟ್ಟಳಿ ನಾಡುಗಳ ಅಧಿಪತಿಗಳಾಗಿ ನೆಲಸಿದರು. ಈ ನಾಲ್ವರ ಹೆಸರುಗಳೂ ಕಲ್ಪನೆಯಾಗಿರ ಬಹುದು. ಆದರೆ ಸಮಕಾಲೀನವಾಗಿ ಪಳಿಯುಂಡ—ಪ್ರತ್ಯಂಡಕಚತುಸ್ಸಹಸ್ರ; ಆಂಧ್ರಪ್ರದೇಶದ ಉಸ್ಮಾನಾಬಾದ್ ಜಿಲ್ಲೆಯ ಸುತ್ತಲಿನ ಪ್ರದೇಶ—ಬಾಗಡಗೆ, ಬಳ್ಳಾರಿ ಮತ್ತು ಬೀದರ್ ಜಿಲ್ಲೆಯ ಅಟ್ಟಳಿ ನಾಡುಗಳಲ್ಲಿ ಸಿಂದವಂಶದ ಮಾಂಡಲಿಕರು ಆಳುತ್ತಿದ್ದರೆನ್ನುವುದು ಗಮನಾರ್ಹವಾಗಿದೆ. ಅಟ್ಟಳಿ ನಾಡಿಗೆ ಬಂದ ಜಗತ್ಸೇವ್ಯ ತನ್ನೊಡನೆ ಬಂದ ದ್ವಿಜರಿಗೆ ಘಲ್ಲುಂಕೆಯನ್ನು—ಈಗಿನ ಭಾಲ್ಕಿ—ತೆರಿಗೆ ಗಳಿಂದ ಮುಕ್ತಮಾಡಿಕೊಟ್ಟ.

ಈ ಜಗತ್ಸೇವ್ಯನ ವಂಶದಲ್ಲಿ ಕುಸ್ಸುಲ ಮತ್ತು ಬೊಪ್ಪುಲರೆಂಬ ವೀರರು ಜನಿಸಿದರು. ಇವರ ಬಳಿಕ ಪಲರು: ಅನಂತರ 'ಮಗ್ಗತಿಯು ಪರಕತಿಯುಮೆಂಬ ಭೂಭುಜರೆಸೆದರು'. ಇವರೂ ಐತಿಹಾಸಿಕ ವ್ಯಕ್ತಿಗಳಲ್ಲ. ಶಾಸನದ ಈ ಭಾಗದಿಂದ ಮುಂದೆ ಕಲ್ಲು ಒಡೆದಿದೆ. ಆದರೂ ಮೂರು ತಲೆಮಾರಿನ ಮಾಂಡಲಿಕರ ಹೆಸರುಗಳು ಲಭಿಸಿವೆ.

ಅಲ್ಲಮ

↓

ಬದ್ದಿಗ

↓ ↓

ಗೊಣ್ಣ ಗೊಂಕ

ಅನಂತರ ಪಜ್ಜನ ಪ್ರಸ್ತಾಪ ಬಂದಿದೆ. ಪಜ್ಜನಿಗೂ ಗೊಂಕ ಅಥವಾ ಗೊಣ್ಣರಿಗೂ ಇರಬಹುದಾದ ಸಂಬಂಧ ತಿಳಿಯದು.

ಈ ಶಾಸನದಲ್ಲಿ ಕಂದ, ವಚನ, ತರಳ, ಮಣಿವಿಭೂಷಣ, ಉಪೇಂದ್ರವಜ್ರ ವೃತ್ತಗಳಿಗೆ ಸೇರಿದ ಪದ್ಯಗಳಿವೆ. ಶಾಸನಕವಿಯ ಹೆಸರು ಲಭ್ಯವಾಗದಿರುವುದು ದುರದೃಷ್ಟಕರ.

ಶಾಸನ ಪಾಠ

೧ ◯ ✳ ಓಂ ಜಯತಿ ಜಗತಿ ದೇವ್ರೋ ದೇವದೈತೇಯಕೋಟಿ ಮಕುಟ
ಘಟಿತರತುನದ್ಯೋತವಿಭ್ರಾಜಿತಾಂಘ್ರಿಃ ಕ್ಷಿತಿಜಳನಿಧಿವಾತವ್ಯೋ
ಮ ಚಂದ್ರಾರ್ಕ್ಕಯಜ್ವನು ಪ್ರಥಿತತನುರುಮೇಶಃಸ್ಸಬ್ಬಲೋ

೨ ಕೈಕಭರ್ತ್ತಾ॥ ಎಳೆಯುಂ ಮುಂನವನೇಕರಾಷ್ಟ್ರರಸಚ್ಚೋಳುಕ್ಯರನ್ನಾ
ಮಹೀತಳಮಂ ಪೊಳ್ದು ಮಾಡಿ ಕತ್ತಿಯರಸಂ ಕಟ್ಟಿಟ್ಟು ರಟ್ಟಾನ್ವಯಂ
ತಳೆದೆತ್ತಿಂ ತನಸಾನುಮಸ್ತರಿಸಿದೀ ಭೂಚಕ್ರಮಂ ಕಾದಿದೋರ್ವ್ವ

೩ ಳದಿಂ ಮತ್ತೆಮಗುಚ್ಚಿ ದಂ ದಳಿಸೆ ಚಾಳುಕ್ಯೋಂನತಂ ತೈಲಪ॥ ಆ ವಸುಧಾ
ಧಿಪಂಗೆ ದಶವರ್ಮ್ಮನೃಪಂ ಸುತನಾನ್ನೃಪಂಗೆ ಧಾತ್ರೀಪಸುತಂಗೆ ಸಂದ
ಜಯಸಿಂಹನೃಪಂ ಮಗನಾತ್ಮಜಾತನಾ ವಿಭುಗೆಂಬ್ಬಿ ಪಂಪ್ರವಜೆದಾ

೪ ಹವಮಲ್ಲನವಂಗೆ ಪುಟ್ಟಿದಂ ಭಾಪಿಪ ಧಾತ್ರೀಪಿಕ್ರಮನೆ ವಿಕ್ರಮನೂರ್ಜ್ಜಿತ
ಬಾಹುವಿಕ್ರಮ॥ ಘನಬಾಹುಗರ್ವ್ವದಿಂ ಗರ್ವ್ವಿತರಿಪುನೃಪರಂ ಯುದ್ಧದೊಳು
ತೂಳ್ದು ಸಿಂಹಾಸನಮಂ ಕೈಕೊಂಡ ವೀರಪ್ರವಿಳಮಗಧಮಾಳ

೫ ವ್ಯಕಾಂಭೋಜರಾಜಾಧಿನರೇಂದ್ರವ್ರಾತಮಂ ಸಂಗರದೊಳಳಜಿಬೆಂಕೊಂಡ
ತೇಜಂ [ಶ್ರೀ]ಪಾದಾಂಬ್ಜನೆ ಬಾಪ್ಪಂದ್ರಮ್ಮ ಸತ್ಯಾಶ್ರಯಕುಳತಿಳಕಂ ವಿಕ್ರಮಾದಿತ್ಯ
ದೇವ॥ಪ್ರಸಸ್ತಿ॥ ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭಂ ಮ

೬ ಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯಕುಳ
ತಿಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರಿಭುವನಮಲ್ಲದೇವರ ವಿಜಯರಾಜ್ಯ
ಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂ ಸಲುತ್ತ[ಮಿ]

೭ ರೆಯೆರೆ ಮತ್ತೆ ॥ಕಂ॥ ಪಿರಿಯೊಳು ಮಿಗಿಲೆನಿಸಿದ ಕುನ್ತಳ ವಿಷಯೋತ್ತಂಸ
ಮೆನಿಸಿ ಪಲತೆಜದಿಂದಪ್ಪೆನಾಡು ಚೆಲ್ವಿನಾಗರವಳುಂಬವಾನಾಳ್ಕೆ ನಾಡುಗಳು
ಪಡಿಯೊಳವೆ ಎನೆ ಪೊಗಳ್ವ ಪೊಗತ್ತೆಗೆ ನೆಲೆಯೆನಿಪಟ್ಟೆನಾಳ್ಕೆ ತಿಳಕ...

೮ ದಂ ಸಜ್ಜನಿತಾ ಸೇಬ್ಯಂ ಜಿಂಜೇಜು ನಿವಾಸಸ್ಥಾನಮೆನಿಸಿ ಸಿಂದಾಸ್ವಯದಾ॥
ಆ ಪುರದೊಳಂಗಕುಳಮಂಗಡೀಪಂ ಸುಖಸಂಕತಾ ವಿನೋದಂದೊಳಿರ್ಪ್ಪ
ಭೂಪತಿಯಾಮಣಿ ಹಜ್ಜಮಹಿವನ ಪಂಶಾವತಾರಮೆನ್ತನೆ ಪೇಳ್ವ॥
ಶ್ರೀಮಲ್ಲೋಕ

೯ ತ್ರಯಜೂಡಾಮಣಿಗೆ ಶಿವಂಗೆ ತಾನೆ ಭೂಷಣಮೆನಿಪ್ಪವ್ಯಾಮ
ಮಹಿಮಂ ಭುಜಂಗಶಿಖಾಮಣಿ ಧರಣೇಂದ್ರನುರಗಲೋಕಾಧೀಶ॥
ಧರಣೇಂದ್ರನಗ್ರಮಹಿಷಿ ಪರಮಪವಿಖ್ಯಾತಿವಡೆದ ಪದ್ಮಾವತಿಯೊಳು
ನೆರೆದತಿ

೧೦ ಶಯ ಭೋಗವತೀಪುರದೊಳು ನಿಜರಾಜಧಾನಿಯೊಳು ಸುಖಮಿರ್ದ್ದ॥...
ಯಿರೆ ಕೆಲದೆವಸಕ್ಕಾ ಧರಣೇಂದ್ರನ ಸತಿಗೆ ಗರ್ಭಚಿಂಹ್ನಂಗಳು ಬಿತ್ತರಿಸಿದವತಿ
ಶಯಮನೆ ಬಿತ್ತರಿಪ್ಪಾರೆ ಸಕಳ ಭುವನಜನಪುಣ್ಯಫಳ ॥ತರಳ॥

೧೧ ಕುಳನಗಂಗಳಸಾನುನಂದನದೊಳು ವಿನೋದಮನಾಪಲುಂ ಕುಳ[ಪ್ರ್ವ] ಗಂಗೆಯ.
ಮೆ ಸಿಂಧುವ ನೀರಲೋಕುಳಿಯಾಡಲುಂ ಬೆಳಗುತಿಪ್ಪ ಸಶಾಂಕಸೂರ್ಯ್ಯ
ರ ನಾವವತ್ತಿಯೆ ನೋಡಲುಂ ಜಳಜವಕ್ತ್ರೆಗಳುಂಬಮಾಗಿರೆ ಗರ್ಬ್ಭ
ದೋಹ

೧೨ ಳಮಪ್ಪುದು॥ ಧರಣೆತಳಕೆ ವಿಮಾನಂ ಬೆರಸಾದಂಪತಿಗಳೊಗೆದು ಸಿಂಧು
ಕ್ಷಿತಿಯೊಳು ಪರಿವ ನದಿ ಸಿಂಧುವಿನೊಳಾ ತರುಣಿ ಜಳಕ್ರೀಡೆಯಾಡಿ ತದನಂತರ
ದೊಳು ॥ವೃ॥ ಉದಯಂಗೆಯ್ವರ್ಕ್ಕನಂ ಪಂನೆಗಪತಿಸತಿಕಂಡರ್ಗ್ಘ್ಯಮಂ
ಕೊ

೧೩ ಟ್ಟು ನಿಂನಂದದ ಕಂದಂ ವಂಶರತ್ನಂ ಜನೆಯಿಸುಗೆನಗಿಂನೆಂಬುದುಂ
ಮಂತ್ರಸಾಮಾರ್ತ್ಥ್ಯದೆ ಮಾರ್ತಂಡಪ್ರಸಾದಂ ದೊರೆಕೊಳೆ ತರುಣಾರ್ಕ್ಕ
ಪ್ರಭಂ ನಂದನಂ ಪುಟ್ಟಿದನಾ ಪದ್ಮಾವತಿದೇವಿಗೆ ಭುವನಜನಾಶ್ಚರ್ಯ್ಯ
ಸೌರ್ಯ್ಯಪ್ರಭಾವ॥

೧೪ ಅನ್ತು ಪುಟ್ಟುವುದು ॥ಕಂ॥ ಧರಣೀತಳದೊಳಗಿವನವತರಿಸಿದನೀಧರೆ
ಯನೊಸೆದು ಪಾಳಿಸುಗೆಂದಾದರದಿಂ[ಪ]ನಸಾದ್ವ್ರಾಳಿಗೆ ನಿರವಿಸಿ ದಂಪತಿಗಳ
ತ್ತ ಪೋಪುದುಮಿತ್ತ॥ಮೊಲೆಯೂಡಿದುದಯಿಸುತನಂ ಪುಲಿಸಿಂದು

೧೫ ಗ್ಗಿನಡಿಯುಲಭ್ಭರ್ಕಂ ಮಱಿಯೊಡನಾ ಪುಲಿಯ ಮೊಲೆಯುಂಡು ಬಳೆದಂ
ಪುಲಿಯುಂ ಮೊಲೆಯಿತ್ತುದವನ ಪುಣ್ಯೋದಯದಿ ॥ವೃ॥ ಅವನಾಗಳು ಕಂಡು
ವೀರೋತ್ತಮನೆನಿಪ ತಳಾರಂ ಬರುತ್ತಂದಹಿಛತ್ರದ ಲೋಕಖ್ಯಾತ ವಿಪ್ರೋತ್ತಮ

೧೬ ರ್ಗ್ಗಱುಪುವುದುಂಶೇಸೆ ಪೂಮಾಲೆ ಕುಂಭಂ ಪುದಿದಿರ್ದುತ್ತುಂಗವೇದಧ್ವನಿಗುಡಿ
ಪಟಹಂ ತೋರಣಂ ರಂಜಿಸಲು ಬಂದಿದಿಗ್ಗೊರ್ಂಡುಯ್ದುಂದಹಿಛತ್ರದೊಳಿರಿಸಿ
ಕನತ್ಸೌಧದೊಳು ವಿಪ್ರಮುಖ್ಯರು ॥ಕ॥ಧರಣೇಂದ್ರನೊಂದು ಪಟಮಂ
ಬರೆದುಡೆಯೊಳು

೧೭ ಕಟ್ಟಿಪೋದವಡಂತಾಪಟಮುಂ ನಿರುತಂ ಬಾಜಿಸಿ ಕಂಡಾದರದಿಂದಂ ಜಾತಕರ್ಮ್ಮ
ಮುಂ ಮಾಡಿಸಿದರು॥ ಪಾತಾಳಚಕ್ರವರ್ತ್ತಿ ವಿನೂತಗುಣಂ ಭೋಗವತಿ
ಗೆ ಪತಿ ಧರಣೇಂದ್ರಂ ತಾತಂ ಪದ್ಮಾವತಿ ತಾಯಿ ಮಾತೇನೀತಂ ಮಹಾತ್ಮ
ನುತ್ತಮವಂಶ॥ಸಿಂದುಗಿನ

೧೮ ನೆಳಲೊಳನುನಯದಿಂದಮಿವಂ ಪುಲಿಯ ಮೊಲೆಯನುಣುತಿರ್ದ್ದುದಱಿಂ ಸಿಂ
ದುಗಿ ಮನೆದೆಯ್ದುಂ ಪೆಸರಿಂದಮಿವಂ ಸಿಂದನೆಂದು ನುಡಿದರ್ವ್ವಿಪ್ರರು॥
ಆ ಸಿಶುರತ್ನಕ್ಕಂನಪ್ರಾಶನಚೌಲೋಪನಯನಮಂ ಮಾಡಿಸಿ ವಾಗೀಶನಿವನೆಂ
ಬಿನಂ ನಾನಾಶಾ

೧೯ ಸ್ತ್ರಗಳುಮನಕ್ಕಱಿಂದೋದಿಸಿದರು॥ ಕರಿತುರಗಸ್ಯಂದನರಣಪರಿಣತಿಯೊಳು
ಚಾಪಮಾದಿಯಾಗಿರೆ ಮೂವತ್ತೆರಡಱ ಮುಕ್ತಚತುಷ್ಟಯಪರಿಣತಿಯೊಳು
ತಾನೆ ಭುವನ ಭುಂಭುಕನಾದ ॥ವಚನ॥ ಅಸ್ತು ಸಮಸ್ತ ಶಸ್ತ್ರಶಾಸ್ತ್ರ

೨೦ ದೋಳತಿಪರಿಚಿತನಾಗಿರ್ದ್ದಹಿಛತ್ರದೊಳು ಸುಖಸಂಕಥಾವಿನೋದದಿಂ ರಾಜ್ಯಂ
ಗೆಯ್ಯುತ್ತಮಿರ್ದ್ದ ಕುಮಾರನಂ ನೋಡಿ ॥ವೃ॥ ಅನುಪಮಯವ್ವನೋದಯ
ಮಿವಂಗಮದ್ದ್ರತುಸಮಂ ಲಲಾಟಲೋಚನದ ಮಯೂರವರ್ಮ್ಮ
ನೃಪನಿರ್ದ್ದಪನಲ್ತೆ ಕಡಂಬವಂಶ

೨೧ ನಾತನ ಸುತೆಯೊಳು ವಿವಾಹಮನೊಡಚ್ಚುವಮೀಗಳೆ ಪೋಗಿಮೆಂದು
ಮಾಜನಮದೆ ಪೇಳ್ವುದುಂ ಕೆಲಬರೆಯ್ದಿದರಾ ಬನವಾಸೆದೇಶಮಂ॥ಕ॥
ಬಂದು ಕಡಂಬ ನೃಪಂಗವರೆಂದರ್ನಿಜಸುತೆಯನೊಸೆದು ಲಕ್ಷ್ಮೀಮತಿಯಂ
ಸಿಂದಮಹೀಪತಿಗೀವುದು

೨೨ ಬಂದೆವಹಿಛತ್ರದಿಂದವೆನೆ ಮುನಿದನವ ॥ಮಣಿವಿಭೂಷಣ॥ ಆವುದಾತನ
ಕುಲಂ ಒಲಮಾವುದೊ ತಂದೆ ಪೇಳಾವನಂಬಿಕೆಯದಾವಳೋ ಮಂಡಳಮಾವು
ದಿಂತಾವುದೀತೆರಮೊ ನೋಡಿರೆ ತಂನುಮನೆಂನುಮಂಗಾವಿಲಂಬಗೆಯೆ
ದಟ್ಟಿದನೆಂದು ಮಹೀಭುಜ ॥ಕ॥

೨೩ ಕಡುಮುಳಿದು ನೊಸಲ ಕಣ್ಣಿಂದಡರೆ ನಿರೀಕ್ಷಿಪುದುಮಾಯತಂ ಕರತಳವಾಗ
ದೆ ನಿಮಿರ್ದುನಡೆಪೊಯ್ಯಲು ಪಡೆದಂ ನಿಡುದೋಳಸಿಂದವೆಸರಂ ಸಿಂದ॥
ಉಪೇಂದ್ರವಜ್ರ॥ಸಾಮರ್ಥ್ಯಮಂ ಕಂಡು ಮಯೂರವರ್ಮ್ಮಂ ರೋಮಾಂಚಿತಾಗೆ
ದ್ವಿಜಗ್ಗೆಂದನಾಗಳು ಸಾಮಾಂನ್ಯನಲ್ಲಂ

೨೪ ನಿಡುದೋಳಸಿಂದಂ ನೀಮಾತನಾಗ್ಗೆಂಬುದನೆಯ್ದಿ ಪೇಳಿ ॥ವಚನ॥ ಎಂಬುದುಂ
ಮವರೊಳಗಭಿನವವ್ಯಾಸನೆನಿಸಿದ ಸಂದಾಚಾರ್ಯಂ ಪೇಳ್ಗುಂ ಪಾತಾಳ
ದರಸಂ ಧರಣೇಂದ್ರಂ ಜನಕನಪ್ಪುದಱಿಂ ಪಾತಾಳ ಚಕ್ರವರ್ತಿಯುಂ
ಪದ್ಮಾವತಿದೇವಿ ಪೆತ್ತ ಮೋಹದಿಂ ಬರವಂ ಕೊ

೨೫ ಟ್ಟೀಳಪ್ಪುದಱಿಂ ಪದ್ಮಾವತೀಲಬ್ಧವರಪ್ರಸಾದನುಂ ಭೋಗಾವತೀಪ್ರರಮೆ
ನಿಜಾನ್ವಯರಾಜಧಾನಿಯಪ್ಪುದಱಿಂ ಭೋಗಾವತೀಪುರವರಾಧೀಶ್ವರನುಂ . ಅಹಿ
ಛತ್ರಪ್ರರಧರಾಮರರಂ ರಕ್ಷಿಸಿದನಪ್ಪುದಱಿಂದಹಿಛತ್ರಪುರಧರಾಮರರಕ್ಷ
ದಕ್ಷದಕ್ಷಿಣ

೨೬ ಭುಜಾದಂಡನುಂ ಜಗಮೆಲ್ಲಂ ನಚ್ಚಿ ಮೆಚ್ಚಿ ಪೊಗಳ್ವುದಱಿಂ ಜಗಮೆಚ್ಚೆಗಂಡನುಂ
ಕನಸಿನಲಪ್ಪಡಂ ಪೆರಪೆಣ್ಣನೋಲ್ಲದುದಱಿಂ ಪರವಧೂಕಂದನುಂ
ವಿವಗ್ಧವಿದ್ವಜ್ಜನಕ್ಕೆ ಬೇಡಿದುದನಿತ್ತುದಱಿಂ ವಿವಗ್ಧವಿದ್ವಜ್ಜನಪಾರಿಜಾತನುಂ
ರಾಜನೀತಿಯುಲು ನಡವನಪ್ಪುದಱಿಂ ರಾಜಮಾಂಧಾ

೨೭ ತನುಂ ಪುಲಿಯ ಮೊಲೆಯುಂಡು ಬಳೆದನಪ್ಪುದಿಂ ವ್ಯಾಘ್ರಲಾಂಛನನುಂ
ಫಣೀಂದ್ರವಂಶೋದ್ಭವನಪ್ಪುದಱಿಂ ಫಣೀಂದ್ರಕೇತನನುಂ ನಿನ ನೊಸಲ
ಕಣ್ಣಿನಿಚ್ಛೆಯಿಂ ನಿಮಿರ್ದ ಕರತಳದಿಂ ನಂದಿ ಪೊಯ್ವನಪ್ಪುದಱಿಂ ನಿಡು
ದೋಳಸಿಂದನುಮೆಂಬ ಪೆಸ

೨೮ ಗ್ಗಿಂ ಪೊಗಳ್ಪ ಪೊಗತ್ತೆಗಂ ನೆಲೆಯಾದನಾತಂ ನಿನಗಳಿಯನಾಗಲು ತಕ್ಕನೆಂಬುದುಂ
ಮಯೂರವರ್ಮ್ಮಂ ಮನದೆಗೊಂಡು ಬಳಿಯನಟ್ಟಿ ಬರಿಸಿ ॥ಕಂ॥ ಭುವನ
ಪ್ರಖ್ಯಾತ ಕದಂಬವಂಶತಿಳಕಂ ಮಯೂರವರ್ಮ್ಮನೃಪನುತ್ಸವದಿಂ ನಿಜ
ಪುತ್ರಿಯೊಳಿೊ

೨೯ ನೆದು ವಿವಾಹಂ ಮಾಡೆ ನೆರೆದ್ದ ಲಕ್ಷ್ಮೀಮತಿಯೊಳು॥ಶ್ರೀಮತು ಸಿಂದಾನ್ವಯ
ಚೂಡಾಮಣಿಗಂ ಶ್ರೀ ಕದಂಬ ವಂಶೋತ್ತಮೆ ಲಕ್ಷ್ಮೀಮತಿಗಂ ಪುಟ್ಟಿದರುದ್ದಾಮ
ಪರಾಕ್ರಮಿಗಳೆನಿಪ ನಾಲ್ವತ್ತನೆಯರು॥ ಅಬ್ಜಜ ಸೌಯ್ಯರಂ ಪ್ರಭುಸೇಬ್ಯನುಮಂ
ಸ

೩೦ ತ್ರಸೇಬ್ಯನುಮನಂತೆ ಜಗತ್ಸೇಬ್ಯನುಮಂ ಪದೆಯ್ದೆದಸೇಬ್ಯನುಮಂಭುವನ
ಭಂಭುಕರನಾತ್ಮಜರ ॥ಅಂತವರು ಶಸ್ತ್ರಶಾಸ್ತ್ರಂಗಳೊಳತಿಪ್ರವೀಣರಾಗಿ॥ ಅಂದು
ತಱಿಸಂದು ನಾಲ್ವರ್ಗ್ಗಂದವನರಂ ಧರೆಯನೆಯ್ದೆ ಪಾಲ್ಯೆಳಿಸಲಿತ್ತಂದದ್ವರಕ್ಷಿಣಭೂ

೩೧ ಮಿಂಗೆ ಸಂದ ವಿಕ್ರಮದೊಳೆಸಗದುಂತೇಕಿಪ್ಪರು॥ ಅಗಳು ಪೊಜಿಮಟ್ಟು ಮನೋರಾಗ
ದಿನೊಪೆಪಂದರಮು ಭೂದೇವಪ್ಪೇದಾಗಮಯುತಕ್ಕೆಲಂಬರ್ ಧ್ವಜ ಸಹಿತ
ರಿಪರಹಿಛತ್ರದವರು॥ ಅಂತವಪ್ಪೆರಸು ಬಂದು ॥ವೃ॥ ಪಳಿಯಂಪಕ್ಷಿತಿ

೩೨ ಮಂಪಲಕ್ಕರಸನಾದಂ ಸತ್ರಸೇಬ್ಯಂ ಧರಾತಳದೊಳು ಮೇಲೆನಿಸಿದ್ದ ಬಾಗಡಗೆ
ದೇಶಾಧೀಶನಾದಂ ಬುಜಬಳದಂತಂ ಪ್ರಭುಸೇಬ್ಯನಲ್ಲಿ ಬುಧಸೇಬ್ಯಂ ದ್ರೋಹರಂ ಕೊಂದ
ನಾಕುಳದಿಂ ಬಳ್ಳರೆನಾಪನಾಟ್ಟನೆಸದತ್ತಿಂತಲ್ಲಿ ಸಿಂದಾನ್ವಯ ॥ಕ॥ ಅವರೊಳಗೆ ಜಗ

೩೩ ತ್ಸೇಬ್ಯಂಭುವನಜನಾಶ್ರಯನಸೌರ್ಯನುಂ ಸಿಂದಕುಳಾರ್ಣ್ಣವಪ್ರಗಲಕ್ಷನು
ಮೆನಿಪುತ್ತವದಿ. . .ಟಿದದೊಪ್ಪುವಟ್ಟಳೆ ನಾಡೊಳು॥ ಭುವನೋತ್ತಮರೆನಿ
ಸಿದ ಸಿಂದವಂಶಭವರೊಪನೆಯುವಹಿಛತ್ರದ ಭೂದಿವಿಜಗ್ಗೆನಮಶ್ಯಮ
ನಯ್ಯವೊ

೩೪ ಳೆಯುಮಂ ಕೊಟ್ಟರೊಸೆದು ಭಲ್ಲಂಕೆಯುಮ॥ ಕಲಿತನದೊಳು ಚಲದೊಳು
ಭುಜಬಲದೊಳು ತೇಜದೊ[ಳು]. .ಸಾಹಸದೊಳು ತತ್ಕುಲದೊಳ್ಪಂಪಳಿ
ಕ್ಕರಂನುಲನುಂ ಬಪ್ಪುಲನುಮೆಂಬ ವೀರನ್ನೆಗಟ್ಟಿರ್॥ ಅತಿಶಯಮಾ ಬೊಪ್ಪುಲನಿಂ

೩೫ ಕ್ಷಿತೀಶ್ವರಪ್ಪ್ರ ಲರುಮವನಿಯಂ ಪಾಳಿಸಲುಂನತರೂರ್ಜ್ಜಿತತೇಜ
ದ್ದುರ್ಗ್ಗತಿಯುಂ ಪರಕತಿಯುಮೆಂಬ ಭೂಭುಜರೆಸೆದರು...... ತದ್ವಂಶ
ದೊಳುಪ್ಪೂತರ್ ಭುಜಗರ್ಬ ದರ್ಪಿತರಿಪುಸಂಘಾತ ನೆಗಟ್ಟಿಲ್ಲಮ
ನಂತಾತನ ತನೆಯಂ ಪ್ರತಾಪಿ ಬದ್ದೆಗ ಭೂಪ ॥ಪಲ

೩೬ ವಜಜಿಕೊಳ್ಳಂಬದ್ದನಪಂ ಚಲವಲುಗಿದಡೆವಜುವಪಿತಮಂಡಳಿಕರ ತೋಳ್ವಲ
ಮುಂ ಬೆಳ್ಪು[ವೆ]ರೆವಜುಂ ತೊಲಗುಗು ಮಾತಂಗೆ ಗೊಂಣ್ಣ ಗೊಂಕತ್ತ್ರನಯರು
..........ರುಚಮೂನಾಥರು. ಪ್ರೀತಿಯಿಂ ಮೇದಿನಿಯಂ
ಕೈಕೊ. . .

೩೭ , ಸನಮನಮಗೆನುತಿಪ್ಪ್ರದುಂ ಚಕ್ರಿಪೇಳಲುಮುನಿದುಗ್ರಾರಾತಿ ಸೈನ್ಯಂಗಳನೆ
ತುಳಿದು ಕೊಂದಿರ್ಕೆ ಚಾಳುಕ್ಯ ಸಿಂಹಾಸನವಂ ಚಂದ್ರಾರ್ಕತಾರಂ
ಸಲೆ ನಿಲಿಪ್ಪು..........

೩೮ ಜ್ಜೋಳನನಚ್ಚಿಸಲೊಂದೆಪಗಲೊಬದೋಡಿಸಿ ತುದಿಯೊಳು ಗೊಂಕನೆನಿ
ಸಿದಂ ಗೊಂಕನೃಪ ॥ತ ....

೩೯ ನತರಿಪುನೃಪತಿ..........ಸ್ಥಾನ॥ [ಹಿ?] ರಾಜವಂಶನಿಧಾನಂ
ಸ್ಮರಲೀಲನತಿ..........

೪೦ ರು॥ ಅದಿರದಿದಿಚ್ಚಿನಿಂದರಿನೃಪಾಳ ಪತಾಕೆ ನಿಮಗು. ಮುಗುಚ್ಚಿದನೆಜದಂ
ತೆ..........

೪೧ ಹಜ್ಜ ನೃಪೇಂದ್ರನ ವಿಚಿತ್ರಚರಿತವೇತೆಂದಡೆ॥ ಪರಿಯಿಳೆ ಕೊಡಲೂರ
....

೪೨ ....ಹಜ್ಜ ಮಹಿಪನ ಕೋಪವಹ್ನಿಯಿ..[ನ]ದಿರೆ..........

೪೩ ದೆನುತಿಃ..........

೪೪ ...ಅಿಂಜೇಜಿ ಹಜ್ಜ..........

೪೫ ಳೆ..........

ಶಾಸನಗಳನ್ನು ಸಾಹಿತ್ಯವೆಂದು ಪರಿಗಣಿಸುವಾಗ ಒಂದು ಸಂಗತಿಯನ್ನು ನೆನಪಿನಲ್ಲಿಡಬೇಕು: ಸಾಹಿತ್ಯನಿರ್ಮಾಣ ಶಾಸನಗಳ ಮೂಲೋದ್ದೇಶವಲ್ಲ; ಅವು ಪ್ರಧಾನವಾಗಿ ಅಧಿಕೃತ ಸ್ವರೂಪದ ದಾಖಲೆಗಳು. ಆದರೆ ನಡೆದ ಘಟನೆಯೊಂದನ್ನು ವರ್ಣಿಸುವಾಗ ಕಾವ್ಯಗಳ ಪ್ರಭಾವದಿಂದ ಅಥವಾ ವರ್ಣಿಸುವವನ ಭಾವಪೂರ್ಣತೆಯಿಂದ ಶಾಸನಗಳಲ್ಲಿ ಕಾವ್ಯಾಂಶ ಕಾಣಿಸಿಕೊಳ್ಳಬಹುದು. ಅಂಥ ಕಡೆಗಳಲ್ಲಿ ಶಾಸನಗಳ ಸಾಮಾಜಿಕ, ಧಾರ್ಮಿಕ, ಚಾರಿತ್ರಿಕ ಮೌಲ್ಯಗಳ ಜೊತೆಗೆ ಸಾಹಿತ್ಯಕ ಮೌಲ್ಯವೂ ಗಮನಾರ್ಹವಾಗುತ್ತದೆ. ಎಷ್ಟೋ ಕಡೆಗಳಲ್ಲಿ ಇದು ಇತರ ಮೌಲ್ಯಗಳನ್ನು ಮರೆಸಿಬಿಡುವಷ್ಟರ ಮಟ್ಟಿಗೆ ಎದ್ದು ಕಾಣುವುದೂ ಉಂಟು. ಸಾಹಿತ್ಯಾಭ್ಯಾಸಿಗಳು ಶಾಸನಗಳ ಅನ್ಯಮುಖಗಳನ್ನು ಬಿಟ್ಟು ಕಾವ್ಯಮುಖವೊಂದನ್ನೇ ಅಧ್ಯಯನ ಮಾಡುವುದೂ ಸಾಧ್ಯ. ಹೀಗಾಗಿ ಶಾಸನಗಳಿಗೆ ಚರಿತ್ರೆಯಲ್ಲಿ ಮಾತ್ರವಲ್ಲದೆ ಸಾಹಿತ್ಯಚರಿತ್ರೆಯಲ್ಲೂ ಉಚಿತಸ್ಥಾನವಿದೆ.

ಶಾಸನಗಳ ಕಾವ್ಯಮೌಲ್ಯಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಮುಖ್ಯಾಂಶವೊಂದಿದೆ.ಕಾವ್ಯಾಂಶ ರಹಿತವಾದ ಶಾಸನಗಳನ್ನು ವರ್ಜಿಸಿ ಉಳಿದುವನ್ನೆಲ್ಲ ನೋಡಿದಾಗ ಶಾಸನಕವಿಗಳದೇ ಒಂದು ವರ್ಗವೆಂಬುದು ತಿಳಿದುಬರುತ್ತದೆ. ಅವರು ಯಾರೂ ಪ್ರಥಮ ವರ್ಗದ ಕವಿಗಳಾಗಿ ತೋರುವುದಿಲ್ಲ; ಶಾಸನಕ್ಷೇತ್ರ ನಮಗೆ ದ್ವಿತೀಯ ವರ್ಗದ, ಸಾಮಾನ್ಯಶಕ್ತಿಯ, ಕವಿಗಳನ್ನು ಕಾಣಿಸಬಲ್ಲುದೇ ಹೊರತು ಮಹಾಕವಿಗಳನ್ನಲ್ಲ. ಈ ಶಾಸನಕವಿಗಳಲ್ಲಿ ಸಾಮಾನ್ಯ ಪ್ರತಿಭೆಗಿಂತ ಪಾಂಡಿತ್ಯ ಹಾಗೂ ಅನುಕರಣ ಪ್ರವೃತ್ತಿ ಅಧಿಕವಾಗಿರುತ್ತದೆ. ಇವರಲ್ಲಿ ಕಾವ್ಯ ಶಾಸನಗಳೆರಡನ್ನೂ ರಚಿಸಿದವರು ಕೆಲವರಾದರೆ, ಬಹುಮಂದಿ ಕಾವ್ಯರಚನೆಗೆ ಕೈಹಾಕದೆ ಶಾಸನರಚನೆಯಲ್ಲಿ ತಮ್ಮ ಶಕ್ತಿಯನ್ನು ಪ್ರಕಟಿಸಿ ಸಂತೃಪ್ತರಾದರು. ಅಷ್ಟಾಗಿ ಪಾಂಡಿತ್ಯವೇನೂ ಇಲ್ಲದೆ ತಮ್ಮ ಜನಪದಸತ್ತ್ವದಿಂದ ಸ್ವೋಪಜ್ಞತೆಯನ್ನು ಮೆರೆದಿರುವ ಕವಿಗಳೂ ಉಂಟು. "ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್" ಎಂಬ ಉಕ್ತಿ ಇಂಥವರಿಗೂ ಅನ್ವಯಿಸಬಲ್ಲುದು. ಒಟ್ಟಿನಲ್ಲಿ ಶಾಸನಗಳಲ್ಲಿ ನಾವು ಮಹೋನ್ನತವಾದ ಕಾವ್ಯವನ್ನು ನೋಡಲಾರೆವು; ಹಾಗೆ ಶ್ರೇಷ್ಠವಾದ ಕಾವ್ಯ ಅಲ್ಲಿ ಗೋಚರಿಸಿದರೂ, ಅದು ಕಾವ್ಯ ಪ್ರಪಂಚದ ಅನುಕರಣವಾಗಿರುವುದೇ ಹೆಚ್ಚು. ಹೀಗಾಗಿ ಶಾಸನಗಳು ತಮ್ಮ ಸಾಹಿತ್ಯಮೌಲ್ಯದಲ್ಲಿಪ್ರಮಾಣದಲ್ಲಿ ಕಾವ್ಯಗಳಿಗೆ ಹೊಯ್‌ಕಯ್ಯಾಗಿ ನಿಲ್ಲಲಾರವು ಎಂಬುದು ಸ್ಪಷ್ಟ. ಆದರೆ ಮಹೋನ್ನತ ಕವಿತೆಯೊಂದೇ ಕವಿತೆಯಲ್ಲ. ಅದಕ್ಕೂ ಕೆಳಗಿನ ಕಾವ್ಯಸ್ತರಗಳು ಹಲವಾರು. ಅವುಗಳಲ್ಲಿ ಬಹುಪಾಲನ್ನು ಶಾಸನಲೋಕ ನಮಗೆ ನೀಡುತ್ತದೆ. ಉದಾತ್ತಕವಿತೆ ('great poetry') ಯನ್ನಲ್ಲದಿದ್ದರೂ ಉತ್ಕೃಷ್ಟಕವಿತೆ ('good poetry') ಯನ್ನಲ್ಲಿ ಆಸ್ವಾದಿಸಬಹುದು. ಎಂತಲೇ ಸಾಹಿತ್ಯದೃಷ್ಟಿಯಿಂದಲೂ ಶಾಸನಗಳಿಗೆ ಮಹತ್ತ್ವವಿದೆ.

–ಡಾ. ಸಿ. ಪಿ. ಕೃಷ್ಣಕುಮಾರ್[1]

---

[1]ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ಪ್ರ. ಸಂ: ಡಾ. ಹಾ. ಮಾ. ನಾಯಕ, ಸಂ: ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ), ಮೈಸೂರು ವಿಶ್ವವಿದ್ಯಾನಿಲಯ (೧೯೭೫), ಪ್ರ. ೪೫೮–೪೫೯.

ಬಿ. ಚನ್ನಕೇಶವ

ಪ್ರಾಚೀನ ಭಾರತದಲ್ಲಿ ನಿಯೋಗಪದ್ಧತಿ

ಪುತ್ರನಿಲ್ಲದ ಪುರುಷನ ಹೆಂಡತಿ, ಮಕ್ಕಳಾಗದೆ ವಿಧವೆಯಾಗಿರುವ ಸ್ತ್ರೀ, ಇವರು ಗುರು ಹಿರಿಯರ ಇಚ್ಛೆಯಂತೆ ಅವರಿಂದ ನಿಯುಕ್ತನಾದ ಬೇರೊಬ್ಬ ಪುರುಷನಿಂದ ಮಕ್ಕಳನ್ನು ಪಡೆಯುವುದಕ್ಕೆ 'ನಿಯೋಗ' ವೆಂದು ಹೆಸರು. ಭಾರತೀಯ ಸಂಸ್ಕೃತಿಯಂತೆ ವಿವಾಹಕ್ಕೆ ಮುಖ್ಯವಾಗಿ ಮೂರು ಉದ್ದೇಶಗಳಿವೆ: ೧ ಧರ್ಮ, ೨ ಸಂತಾನ ಮತ್ತು ೩ ಸಂಭೋಗ. ಈ ಮೂರರಲ್ಲಿ ಎರಡನೆಯದಾದ ಸಂತಾನಪ್ರಾಪ್ತಿ ಶ್ರೇಷ್ಠವಾದದ್ದೆಂದೂ ವಿವಾಹದ ಪರಮೋದ್ದೇಶವೆಂದೂ ಸನಾತನಕಾಲದಿಂದಲೂ ಪರಿಗಣಿಸಲ್ಪಟ್ಟಿದೆ. ಕಾಳಿದಾಸ ರಘುರಾಜರನ್ನು ವರ್ಣಿಸುವಾಗ ರಘುವಂಶದ ಪ್ರಾರಂಭದಲ್ಲಿಯೇ "ಪ್ರಜಾಯೈ ಗೃಹಮೇ-ಧಿನಾಂ" (ಮಕ್ಕಳಿಗೋಸ್ಕರ ಗೃಹಸ್ಥಾಶ್ರಮ ಹೊಂದಿರುವಂತಹ) ಎಂದು ವರ್ಣಿಸಿದ್ದಾನೆ. ಸಂತಾನ ಪ್ರಾಪ್ತಿಯ ರೂಪದಲ್ಲಿಯೇ ಉಳಿದ ಎರಡು ಉದ್ದೇಶಗಳೂ ಒಂದು ರೀತಿಯಲ್ಲಿ ಸಫಲವಾಗುತ್ತವೆ. ನಿಯೋಗಪದ್ಧತಿಯ ಹುಟ್ಟೂ ಪುತ್ರೋತ್ಪತ್ತಿಯನ್ನು ಲಕ್ಷ್ಯವಾಗಿಟ್ಟುಕೊಂಡೇ ಆಗಿರುವಂತೆ ತೋರುತ್ತದೆ. ದೀರ್ಘಕಾಲದ ವರೆಗೆ ರೋಗಿಯಾಗಿದ್ದು ಅಥವಾ ನಪುಂಸಕನಾಗಿದ್ದು ಪುರುಷನು ಪುತ್ರನಿಲ್ಲದೆಯೇ ಗತಿಸಿದರೆ ವಿವಾಹದ ಮೂಲ ಉದ್ದೇಶಕ್ಕೇ ಭಂಗ ಬಂದಂತಾಗುತ್ತದೆ. ಆದ್ದರಿಂದಲೇ ಇಂತಹ ಪ್ರಸಂಗಗಳಲ್ಲಿ ನಿಯೋಗದ ಮೂಲಕ ಪುತ್ರನನ್ನು ಪಡೆದು ವಿವಾಹದ ಮೂಲ ಉದ್ದೇಶಕ್ಕೆ ಚ್ಯುತಿಯುಂಟಾಗದಂತೆ ನೋಡಿಕೊಳ್ಳಬಹುದಾಗಿದ್ದಿತು.

ಐತಿಹಾಸಿಕವಾಗಿ ನಿಯೋಗಪದ್ಧತಿ ಯಾವಾಗ ಪ್ರಾರಂಭವಾಗಿರಬಹುದು? ಋಗ್ವೇದಗಳ ಕಾಲದಲ್ಲಿಯೇ ಈ ಪದ್ಧತಿ ಭಾರತದಲ್ಲಿ ಬಳಕೆಯಲ್ಲಿತ್ತೆಂದು ಬಹಳ ಮಂದಿ ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಆದರೆ ಈ ವಾದವನ್ನು ವಿರೋಧಿಸುವವರೂ ಇಲ್ಲದಿಲ್ಲ. ವೇದಗಳ ಕಾಲದಲ್ಲಿ 'ವಿಧವಾ ವಿವಾಹ' ಜಾರಿಯಲ್ಲಿತ್ತಾದ್ದರಿಂದ ನಿಯೋಗಪದ್ಧತಿಯ ಅಗತ್ಯವೇ ಆಗ ಇರಲು ಸಾಧ್ಯವಿಲ್ಲವೆಂದು ಅವರ ಅಭಿಪ್ರಾಯ. ಸ್ವಾಮಿ ದಯಾನಂದ ಸರಸ್ವತಿಯವರು ತಮ್ಮ ಸತ್ಯಾರ್ಥಪ್ರಕಾಶದಲ್ಲಿ (೪ನೆಯ ಸಮುಲ್ಲಾಸ, ಪುಟಗಳು ೬೯–೭೪) ಅನೇಕ ಋಗ್ವೇದ ಮಂತ್ರಗಳ ಆಧಾರವನ್ನು ತೋರಿಸಿ ವೇದಗಳ ಕಾಲದಲ್ಲಿ ಭಾರತದಲ್ಲಿ ನಿಯೋಗಪದ್ಧತಿ ಬಳಕೆಯಲ್ಲಿತ್ತೆಂದು ಅಭಿಪ್ರಾಯಪಡುತ್ತಾರೆ. ಪ್ರಸಿದ್ಧ ಸಂಶೋಧಕರಾದ ಎ. ಎ. ಮ್ಯಾಕ್ಡೊನಲ್ ಮತ್ತು ಎ. ಬಿ. ಕೀತ್‌ರವರೂ ಮೇಲಿನ ಅಭಿಪ್ರಾಯವನ್ನೇ ಪುಷ್ಟೀಕರಿಸಿದ್ದಾರೆ. ಮನುಧರ್ಮಶಾಸ್ತ್ರದ ಭಾಷ್ಯಕಾರನಾದ ಮೇಧಾತಿಥಿಯೂ ದಯಾನಂದ ಸರಸ್ವತಿಯವರು ಉದ್ಧರಿಸಿರುವ ಋಗ್ವೇದ ಮಂತ್ರವು ನಿಯೋಗಪದ್ಧತಿಯನ್ನೆ ಸೂಚಿಸುತ್ತದೆಂದು ಅಭಿಪ್ರಾಯ ಪಟ್ಟಿದ್ದಾನೆ (ವ್ಯಾಖ್ಯಾನ ೯.೬೬ಕ್ಕೆ). ಋಗ್ವೇದದ ಈ ಮಂತ್ರಗಳ ಸರಿಯಾದ ಅರ್ಥದ ಬಗ್ಗೆ ವಿದ್ವಾಂಸರಲ್ಲಿ ಬಹಳ ವಾದವಿವಾದವಿದ್ದರೂ ಬಹಳ ಮಂದಿ ವಿದ್ವಾಂಸರು ಈ ಮಂತ್ರಗಳ ಆಧಾರದಿಂದ ವೇದಗಳ ಕಾಲದಲ್ಲಿ ನಿಯೋಗಪದ್ಧತಿ ಪ್ರಚಲಿತವಾಗಿತ್ತೆಂದು ಅಭಿಪ್ರಾಯಪಡುತ್ತಾರೆ.

ಮುಂದೆ ಬ್ರಾಹ್ಮಣಗಳಲ್ಲಿಯಾಗಲಿ ಗೃಹ್ಯಸೂತ್ರಗಳಲ್ಲಿಯಾಗಲಿ ಇದರ ಪ್ರಸ್ತಾಪ ಕಂಡು ಬರುವುದಿಲ್ಲ. ಆದರೆ ಮಹಾಭಾರತ, ಸೂತ್ರಗಳು ಮತ್ತು ಕೆಲವು ಸ್ಮೃತಿಗಳಲ್ಲಿ ಇದರ ವಿವರವಾದ ಪ್ರಸ್ತಾಪವಿದ್ದು, ಅವುಗಳ ಕಾಲಕ್ಕೆ ಇದು ಆಗಲೇ ಸಮಾಜದಲ್ಲಿ ರೂಢಮೂಲವಾಗಿತ್ತೆಂದು ನಿಸ್ಸಂದೇಹವಾಗಿ

ತಿಳಿದುಬರುತ್ತದೆ. ಮಹಾಭಾರತದ ಅನೇಕ ಪ್ರಸಿದ್ಧ ವ್ಯಕ್ತಿಗಳು ನಿಯೋಗದ ಮೂಲಕವೇ ಜನ್ಮ ತಳೆದ ವಿಷಯ ಸ್ಪಷ್ಟವಾಗಿಯೇ ಇದೆ. ಒಂದು ರೀತಿಯಲ್ಲಿ ಸಮಸ್ತ ಕುರುವಂಶವೇ ನಿಯೋಗಪದ್ಧತಿಗೆ ಋಣಿಯಾಗಿರಬೇಕಾಗಿದೆ. ಮಹಾಭಾರತ ಮತ್ತು ಧರ್ಮಸೂತ್ರಗಳಲ್ಲಿ ನಿಯೋಗಪದ್ಧತಿಯ ವಿಪುಲವಾದ ವಿಚಾರವಿದ್ದರೂ ರಾಮಾಯಣದಲ್ಲಿಯಾಗಲಿ ಪರವರ್ತಿ ಸಾಹಿತ್ಯದಲ್ಲಿಯಾಗಲಿ ಎಲ್ಲಿಯೂ ಇದರ ಪ್ರಸ್ತಾಪ ಇಲ್ಲದೆ ಇರುವುದು ಗಮನಾರ್ಹವಾಗಿದೆ.

ಮಹಾಭಾರತದಲ್ಲಿ ಕಂಡುಬರುವ ನಿಯೋಗಪದ್ಧತಿಯ ಪ್ರಸಂಗಗಳನ್ನು ಗಮನಿಸಿದರೆ ನಿಯೋಗ ಮುಖ್ಯವಾಗಿ ಎರಡು ಪ್ರಸಂಗಗಳಲ್ಲಿ ಆಚರಣೆಯಲ್ಲಿತ್ತೆಂದು ತಿಳಿದುಬರುತ್ತದೆ. ೧ ಪತಿ ಪುತ್ರಹೀನನಾಗಿಯೇ ಮಡಿದರೆ ಮೃತನ ವಿಧವೆ ನಿಯೋಗದ ಮೂಲಕ ಮಗನನ್ನು ಪಡೆಯುವುದು. ೨ ಪತಿ ದೀರ್ಘಕಾಲದ ರೋಗಕ್ಕೆ ತುತ್ತಾಗಿದ್ದರೆ ಅಥವಾ ಸ್ವಭಾವದಿಂದಲೇ ನಪುಂಸಕನಾಗಿದ್ದರೆ ಅವನ ಇಚ್ಛೆ ಮತ್ತು ಅನುಮತಿಯಿಂದಲೇ ಅವನು ನಿಯೋಜಿಸಿದ ಪುರುಷನಿಂದ ಮಕ್ಕಳನ್ನು ಹೊಂದುವುದು. ಅಂಬಿಕೆ ಮತ್ತು ಅಂಬಾಲಿಕೆಯರು ಪತಿಯಾದ ವಿಚಿತ್ರವೀರ್ಯನ ಮರಣದ ಅನಂತರ ವ್ಯಾಸರೊಡನೆ ನಿಯೋಗ ಹೊಂದಿ ಮಕ್ಕಳನ್ನು ಪಡೆದರು. ಕುಂತಿ ಮತ್ತು ಮಾದ್ರಿಯರು ಪತಿಯಾದ ಪಾಂಡು ಜೀವಿಸಿರುವಾಗಲೇ ಅವನ ಇಚ್ಛೆಯಂತೆಯೇ ಇಂದ್ರಾದಿಗಳಿಂದ ಮಕ್ಕಳನ್ನು ಪಡೆದರು. ವಿಧವೆಯಾದ ಅನಂತರ ಮಕ್ಕಳನ್ನು ಪಡೆದ ಉದಾಹರಣೆ ಮೇಲೆ ಹೇಳಿದ ಅಂಬಿಕೆ ಮತ್ತು ಅಂಬಾಲಿಕೆಯರ ಪ್ರಸಂಗವನ್ನು ಬಿಟ್ಟರೆ ಮಹಾಭಾರತದಲ್ಲಿ ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಮಹಾಭಾರತದ ಉಳಿದ ಎಲ್ಲ ಪ್ರಸಂಗದಲ್ಲಿಯೂ ಪತಿಯೇ ಬದುಕಿದ್ದು ತಾನೇ ನಿಯೋಗಕ್ಕೆ ಸಮ್ಮತಿಸುತ್ತಾನೆ. ಆದ್ದರಿಂದ ಪ್ರಾಯಃ ನಾನಾ ಕಾರಣಗಳಿಂದಾಗಿ ಮಕ್ಕಳನ್ನು ಪಡೆಯಲಾಗದ ಪತಿಯ ಇಚ್ಛೆಯಿಂದಲೇ ಈ ಪದ್ಧತಿ ಪ್ರಾರಂಭವಾಗಿರಬಹುದು. ವೇದಗಳ ಕಾಲದಲ್ಲಿ ಗಂಡುಮಗುವಿಗೆ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಪ್ರಧಾನ ಸ್ಥಾನ ಇದ್ದಂತೆ ತಿಳಿದುಬರುತ್ತದೆ. ಕೌಟುಂಬಿಕ ಲಾಭ. ವಂಶವೃದ್ಧಿ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ ಆಗಿನ ಗೃಹಸ್ಥರಿಗೆ ಪುತ್ರೋತ್ಪತ್ತಿ ಅನಿವಾರ್ಯವಾಗಿದ್ದು ಅಂತಹ ಮಕ್ಕಳನ್ನು ಪಡೆಯಲಾಗದ ಹತಭಾಗ್ಯನಾದ ಪತಿ ಅನ್ಯಮಾರ್ಗ ಇಲ್ಲದೆ ನಿಯೋಗವನ್ನು ಒಪ್ಪಬೇಕಾಗಿ ಬಂದಿರಬಹುದು. ಕಾಲಾಂತರದಲ್ಲಿ ವಿಧವಾವಿವಾಹ ಕಮ್ಮಿಯಾಗುತ್ತ ಬಂದಂತೆ ಇದೇ ಉದ್ದೇಶದಿಂದಲೇ ವಿಧವೆಯರಿಗೂ ಈ ರೀತಿಯ ಅವಕಾಶ ಕೊಡಲ್ಪಟ್ಟಿರಬಹುದು.

ಪ್ರಾಚೀನ ಕಾಲದಲ್ಲಿ ಸ್ತ್ರೀಗೆ ತನ್ನ ಗಂಡನಲ್ಲದೆ ಅನ್ಯ ಪುರುಷನ ಸಂಪರ್ಕ ಹೊಂದಿ ಮಕ್ಕಳನ್ನು ಪಡೆಯಬೇಕಾಗಿ ಬಂದಾಗ ಅಂತಹ ಭಾವನಾತ್ಮಕ ಆತಂಕವೇನೂ ಇದ್ದಂತೆ ಕಾಣುವುದಿಲ್ಲ. ಏಕೆಂದರೆ ಆಗ ವಧುವನ್ನು ಒಬ್ಬ ವರನಿಗೆ ಕೊಟ್ಟು ಮದುವೆ ಮಾಡುವ ಪದ್ಧತಿ ಇದ್ದಾಗ್ಯೂ ಮನೆಗೆ ಬಂದ ವಧುವನ್ನು 'ಪರಿವಾರದ ಸ್ವತ್ತು' ಎಂದು ಪರಿಗಣಿಸುತ್ತಿದ್ದರು. ಆಪಸ್ತಂಬ. 'ಕುಲಾಯ ಹಿ ಸ್ತ್ರೀ ಪ್ರದೀಯತೇ ಇತ್ಯುಪದಿಶಂತಿ (೨-೧೦-೨೭-೩)' ಎಂಬುದಾಗಿ ಹೇಳಿದ್ದಾನೆ. ಆದ್ದರಿಂದಲೇ ಪರಿವಾರದ ಸುಖ ಮತ್ತು ಸಮೃದ್ಧಿಯನ್ನು ಗಮನದಲ್ಲಿಟ್ಟುಕೊಂಡು. ಪತಿ ಮಕ್ಕಳಿಲ್ಲದೆ ಗತಿಸಿದರೆ ಅದೇ ಕುಲದ ಮತ್ತೊಬ್ಬ ಯೋಗ್ಯನಾದ ಪುರುಷನಿಂದ ಪರಿವಾರಕ್ಕಾಗಿ ಮಕ್ಕಳನ್ನು ಪಡೆಯುವುದರಲ್ಲಿ ದೋಷವೇನೂ ಇಲ್ಲವೆಂಬ ಭಾವನೆ ಬೆಳೆದುಬಂದಂತೆ ಕಾಣುತ್ತದೆ. ಮಕ್ಕಳಿಲ್ಲದ ರಾಜರಿಗಂತೂ ಆಧ್ಯಾತ್ಮಿಕ ಮತ್ತು ಪಾರಲೌಕಿಕ ನಷ್ಟಕ್ಕಿಂತಲೂ ಇಹಲೋಕದ ನಷ್ಟವೇ ಬಹಳ ದುಃಖದಾಯಕವಾಗಿದ್ದಿರಬಹುದು. ಏಕೆಂದರೆ ಉತ್ತರಾಧಿಕಾರಿಯಿಲ್ಲದೆ ಅವರ ಸಮಸ್ತ ರಾಜ್ಯವೂ ಪರರ ಪಾಲಾಗುತ್ತಿದ್ದಿತು. ಇಂತಹ ಪ್ರಸಂಗದಲ್ಲಿ ನಿಯೋಗದ ಮೂಲಕ ಮಕ್ಕಳನ್ನು ಪಡೆಯಲು ಇಚ್ಛಿಸಿದ್ದರೆ ಆಶ್ಚರ್ಯವೇನೂ ಇಲ್ಲ.

ಇಷ್ಟೇ ಅಲ್ಲದೆ ನಿಯೋಗಪದ್ಧತಿಯ ಉಗಮದ ಹಿಂದೆ ಒಂದು ಪ್ರಬಲವಾದ ಮನೋವೈಜ್ಞಾನಿಕ ಕಾರಣವೂ ಇದ್ದಂತಿದೆ. ಪತಿ ದೀರ್ಘಕಾಲದ ರೋಗಿ ಅಥವಾ ನಪುಂಸಕನಾಗಿದ್ದರೆ ಅಥವಾ ಅಕಾಲದಲ್ಲಿ ಮೃತನಾದರೆ ಸ್ತ್ರೀಯ ಸಹಜವಾದ ಕಾಮೇಚ್ಛೆ ಕೈಗೂಡದೆ ಅವಳಲ್ಲಿ ಒಂದು ರೀತಿಯ ಅತೃಪ್ತಿ ಕಾಣಿಸಿಕೊಳ್ಳುತ್ತದೆ. ಸ್ವಾಭಾವಿಕವಾದ. ಆದ್ದರಿಂದಲೇ ಅದಮ್ಯವಾದ. ಕಾಮದ ಬಯಕೆಯನ್ನು ಸಹಿಸಲಾರದೆ ಸಂದರ್ಭ ಬಂದಾಗ ವ್ಯಭಿಚಾರಿಣಿಯಾಗುವ ಅಪಾಯವೂ ತಪ್ಪಿದ್ದಲ್ಲ. ಆದ್ದರಿಂದಲೇ

ಪ್ರಾಯಃ ಸಮಾಜದ ಒಳಿತಿಗಾಗಿಯೇ ಸಮಾಜ ಇಂತಹ ಸ್ತ್ರೀಯರ ಬಗ್ಗೆ ಸ್ವಲ್ಪ ಉದಾರವಾಗಿ ವರ್ತಿಸಿರಬಹುದು. ನಿಯೋಗದಿಂದ ಮಕ್ಕಳನ್ನು ಹೊಂದಿದ ಸ್ತ್ರೀ ತನ್ನ ಸ್ತ್ರೀತ್ವದ ಸಂಪೂರ್ಣ ವಿಕಾಸದಿಂದ ಸಂತುಷ್ಟಳಾಗಿ ಮಾತೃತ್ವದ ಸುಖ ಹೊಂದಿ ಅನಂತರ ತನ್ನ ಮಕ್ಕಳ ಅಭಿವೃದ್ಧಿಯಲ್ಲಿ ತನ್ನೆಲ್ಲ ಗಮನವನ್ನು ಕೇಂದ್ರೀಕರಿಸುತ್ತಿದ್ದಳು. ಹೀಗಾಗುವುದರಿಂದ, ದುಃಖಿತಳಾದ ಅವಳಿಗೆ ಒಂದು ರೀತಿಯ ಆಧಾರ ಸಿಕ್ಕುತ್ತಿತ್ತಲ್ಲದೆ ಬಹಳಷ್ಟು ಆರ್ಥಿಕ ಪಾರತಂತ್ರ್ಯವೂ ತಪ್ಪುತ್ತಿದ್ದಿತು. ದಯಾನಂದ ಸರಸ್ವತಿಯವರೂ ನಿಯೋಗಪದ್ಧತಿಯಿಂದ ವ್ಯಭಿಚಾರ ಗಮನೀಯವಾಗಿ ಕಮ್ಮಿಯಾಗುತ್ತದೆಂಬ ಅಭಿಪ್ರಾಯವನ್ನು ಉಳ್ಳವರಾಗಿದ್ದಾರೆ (ಸ.ಪ್ರ.ಪು. ೭೦).

ವೇದಗಳ ಕಾಲದಲ್ಲೇ ದತ್ತು ಪದ್ಧತಿ ಬಳಕೆಯಲ್ಲಿತ್ತಾದರೂ ಕುಲಪರಂಪರೆ ಮತ್ತು ರಕ್ತಶುದ್ಧಿಯ ದೃಷ್ಟಿಯಿಂದ ನಿಯೋಗದ ಮೂಲಕ ಪಡೆದ ಮಗನೇ ದತ್ತು ಮಗನಿಗಿಂತ ಶ್ರೇಷ್ಠ ಎಂಬ ಭಾವನೆ ಇದ್ದಂತೆ ಕಂಡುಬರುತ್ತದೆ. ಋಗ್ವೇದದ ಒಂದು ಮಂತ್ರದ ಅರ್ಥ ಹೀಗಿದೆ: "ನಾವು ಬೇರೆ ಕುಲದ ಸಂತಾನ ಉಳ್ಳವರಾಗುವುದು ಬೇಡ. ಅವನನ್ನು ಹೃದಯ ಎಂದಿಗೂ ತನ್ನದೆಂದು ಸ್ವೀಕರಿಸುವುದಿಲ್ಲ." (ಋ. ೭.೪.೭–೮) ದತ್ತು ತೆಗೆದುಕೊಂಡ ಮಗನ ರಕ್ತ ಮತ್ತು ಸಂಸ್ಕಾರಗಳು ಬೇರೆಯಾದ್ದರಿಂದ ಅವನು ಹೊಸ ಪರಿಸರಕ್ಕೆ ಎಷ್ಟೆಂದರೂ ಸರಿಹೊಂದುವುದಿಲ್ಲ. ನಿಯೋಗದಿಂದ ಪಡೆದ ಮಗನಲ್ಲಿ ತಮ್ಮ ಪರಿವಾರದ ರಕ್ತವೇ ಇರುತ್ತದಾದ್ದರಿಂದ ಪರಿವಾರದ ಸಮತೆ ಮತ್ತು ಶಾಂತಿಗೆ ಭಂಗ ಬರುವುದಿಲ್ಲವೆಂದು ಅವರು ಭಾವಿಸಿರಬಹುದು. ಆದ್ದರಿಂದಲೇ ಸ್ಮೃತಿಗಳಲ್ಲಿ ಪುತ್ರರ ತಾರತಮ್ಯದಲ್ಲಿ ಔರಸ ಪುತ್ರನ ಅನಂತರ ಕ್ಷೇತ್ರಜಪುತ್ರನನ್ನು ಪರಿಗಣಿಸಲಾಗಿದೆ.

ನಿಯೋಗಕ್ಕೆ ಯೋಗ್ಯನಾದ ಪುರುಷ ಯಾರು? ಈ ನಿಟ್ಟಿನಲ್ಲೂ ಸ್ಮೃತಿಗಳಲ್ಲಿ ಸಾಕಷ್ಟು ವಿಚಾರ ನಡೆದಿದೆ. ಸಾಮಾನ್ಯವಾಗಿ ಎಲ್ಲ ಧರ್ಮಶಾಸ್ತ್ರಗಳಲ್ಲೂ ದೇವರ (ಮೈದುನ), ಸಪಿಂಡ ಅಥವಾ ಸಗೋತ್ರ ಪುರುಷ ನಿಯೋಗಕ್ಕೆ ಅರ್ಹನಾದವನೆಂಬ ಅಭಿಪ್ರಾಯ ಕಂಡುಬರುತ್ತದೆ. ಗೌತಮ (೨.೯.೪–೭) ಈ ಮೂವರಲ್ಲದೆ ಸಪ್ರವರನನ್ನೂ ಯೋಗ್ಯನೆಂದು ಪರಿಗಣಿಸಿದ್ದಾನೆ. ಕೌಟಿಲ್ಯ (೩.೬.೩೩) ಮಾತೃಬಂಧುಗಳನ್ನು ನಿಯೋಗಕ್ಕೆ ಅರ್ಹರಾದವರೆಂದು ತಿಳಿಸಿದ್ದಾನೆ. ಮಹಾಭಾರತದಲ್ಲಿ ಸಾಮಾನ್ಯವಾಗಿ ದೇವರನು ನಿಯೋಗಕ್ಕೆ ಉಪಯುಕ್ತನಾದವನೆಂದು ಹೇಳಲಾಗಿದ್ದರೂ ಅದರಲ್ಲಿಯೇ ಈ ಅಭಿಪ್ರಾಯಕ್ಕೆ ವಿರುದ್ಧವಾದ ಅನೇಕ ಉದಾಹರಣೆಗಳು ಕಂಡುಬರುತ್ತವೆ.

ಸಾಮಾನ್ಯವಾಗಿ ದೇವರನೆಂದರೆ ಪತಿಯ ತಮ್ಮ. ಗೌತಮನ ೨.೯.೪ ಸೂತ್ರವನ್ನು ವ್ಯಾಖ್ಯಾನಿಸುತ್ತ ಹರದತ್ತನೂ, ಯಾಜ್ಞವಲ್ಕ್ಯರ ೧.೬೮ಕ್ಕೆ ವ್ಯಾಖ್ಯಾನಿಸುವಾಗ ವಿಜ್ಞಾನೇಶ್ವರನೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮ್ಯಾಕ್ಡೊನೆಲ್ ಮತ್ತು ಕೀತ್‌ರವರೂ ಇದೇ ಅರ್ಥವನ್ನು ಒಪ್ಪಿದ್ದಾರೆ (ವೇದಿಕ್ ಇಂಡೆಕ್ಸ್ ಪ್ರ. ೪೨೪). ಆದರೆ ನಿರುಕ್ತದಲ್ಲಿ 'ದೇವರ' ಶಬ್ದಕ್ಕೆ ಬಹಳ ವಿಚಿತ್ರವಾದ ವ್ಯುತ್ಪತ್ತಿಯನ್ನು ಯಾಸ್ಕ ಹೇಳುತ್ತಾನೆ: 'ದೇವರಃ ಕಸ್ಮಾತ್ ದ್ವಿತೀಯೋ ವರ ಉಚ್ಯತೇ' (ದೇವರನೆಂದರೆ ಎರಡನೆಯ ವರ). ದಯಾನಂದ ಸರಸ್ವತಿಯವರು ಈ ಅರ್ಥವನ್ನೇ ಪುಷ್ಟೀಕರಿಸಿದ್ದಾರೆ. 'ತಮ್ಮನಾಗಲಿ ಅಣ್ಣನಾಗಲಿ, ಅದೇ ವರ್ಣದವನಾಗಲಿ, ಉತ್ತಮ ವರ್ಣಕ್ಕೆ ಸೇರಿದವನಾಗಲಿ, ಯಾವನೊಡನೆ ನಿಯೋಗವನ್ನು ಆಚರಿಸಲಾಗುತ್ತದೋ ಅವನಿಗೆ ದೇವರನೆಂದು ಹೆಸರು,' ಎಂದು ಅವರು ಹೇಳುತ್ತಾರೆ (ಸ.ಪ್ರ. ಪು.೭೧)

ಮಹಾಭಾರತದ ಸತ್ಯವತೀ ಮತ್ತು ಭೀಷ್ಮರ ಸಂಭಾಷಣೆಯನ್ನು ನೋಡಿದರೆ 'ದೇವರ' ಶಬ್ದಕ್ಕೆ ಪತಿಯ ಅಣ್ಣ ಎಂಬ ಅರ್ಥವೂ ಇದ್ದದ್ದು ತಿಳಿದುಬರುತ್ತದೆ. ಶಂತನುವಿಗೆ ಭೀಷ್ಮ ಹಿರಿಯ ಮಗನಾಗಿದ್ದು, ವಿಚಿತ್ರವೀರ್ಯಾದಿಗಳು ಭೀಷ್ಮನಿಗಿಂತ ಚಿಕ್ಕವರಾಗಿದ್ದರು. ವಿಚಿತ್ರವೀರ್ಯ ಪುತ್ರಹೀನನಾಗಿಯೆ ಮೃತನಾದ ಮೇಲೆ ಸತ್ಯವತಿ ಭೀಷ್ಮನನ್ನು ಕುರಿತು, "ಮಗನೇ, ನಿನ್ನ ತಮ್ಮನ ಪತ್ನಿಯರಾದ, ಕಾಶಿರಾಜನ ಈ ಇಬ್ಬರು ಪುತ್ರಿಯರೂ ರೂಪ ಯೌವನ ಲಾವಣ್ಯಗಳಿಂದ ಕೂಡಿದ್ದು ಮಕ್ಕಳನ್ನು ಪಡೆಯಲು ಇಚ್ಛಿಸುತ್ತಿದ್ದಾರೆ. ನಮ್ಮ ಕುಲದ ಸಂತಾನಪರಂಪರೆಯನ್ನು ಅವಿಚ್ಛಿನ್ನವಾಗುವಂತೆ

ಉಳಿಸಲು ನೀನು ಇವರಲ್ಲಿ ಮಕ್ಕಳನ್ನು ಹುಟ್ಟಿಸು". ಎಂದು ಒತ್ತಾಯಪಡಿಸುತ್ತಾಳೆ. ಆದರೆ ಭೀಷ್ಮ ತನ್ನ ಪ್ರತಿಜ್ಞೆಗೆ ಭಂಗ ಬರುತ್ತದೆಂಬ ಕಾರಣದಿಂದ ಅವಳ ಮಾತನ್ನು ಪುರಸ್ಕರಿಸಲಿಲ್ಲ.

ಅನಂತರ ಭೀಷ್ಮನ ಸೂಚನೆಯಂತಲೇ ಸತ್ಯವತಿ ತಾನು ಕೌಮಾರ್ಯಾವಸ್ಥೆಯಲ್ಲಿದ್ದಾಗಲೇ ಪಡೆದ ಮಗನಾದ (ಕಾನೀನಪುತ್ರ) ವ್ಯಾಸರನ್ನು ನಿಯೋಗಕ್ಕೆ ಒಪ್ಪಿಸುತ್ತಾಳೆ. ತನ್ನ ಸೊಸೆಯನ್ನು ಅವರಲ್ಲಿಗೆ ಕಳುಹಿಸುವಾಗಲೂ, "ಇಂದು ರಾತ್ರಿ ನಿನ್ನ ದೇವರನು ನಿನ್ನಲ್ಲಿಗೆ ಗರ್ಭಾಧಾನಕ್ಕೆ ಬರುತ್ತಾನೆ" ಎಂದು ತಿಳಿಸುತ್ತಾಳೆ (೧.೧೦೦.೨). ಸತ್ಯವತಿ ಕೌಮಾರ್ಯಾವಸ್ಥೆಯಲ್ಲಿ ವ್ಯಾಸರನ್ನು ಪಡೆದದ್ದರಿಂದ ವ್ಯಾಸರು ವಿಚಿತ್ರವೀರ್ಯಾದಿಗಳಿಗಿಂತ ಸ್ಪಷ್ಟವಾಗಿಯೇ ದೊಡ್ಡವರು. ಆದರೂ ಸತ್ಯವತಿ ವ್ಯಾಸರನ್ನು ತನ್ನ ಸೊಸೆಯ ದೇವರನೆಂದೇ ಹೇಳಿದ್ದಾಳೆಂಬುದನ್ನು ಗಮನಿಸಬಹುದು. "ನಿನ್ನ ತಮ್ಮಂದಿರ ಪತ್ನಿಯರಲ್ಲಿ ನಿಯೋಗದಿಂದ ನೀನು ಮಕ್ಕಳನ್ನು ಸೃಜಿಸು". ಎಂದು ಸತ್ಯವತಿ ವ್ಯಾಸರಿಗೆ ಸ್ಪಷ್ಟವಾಗಿ ತಿಳಿಸಿದ್ದರೂ ವ್ಯಾಸರು ತಾಯಿ ಮಾತನ್ನು ಅಲ್ಲಗಳೆಯದೆ ಅಂಗೀಕರಿಸಿಕೊಳ್ಳುತ್ತಾರೆ.

ಇದಲ್ಲದೆ 'ದೇವರ' ಶಬ್ದಕ್ಕೆ ಪತಿಯ ಅಣ್ಣ ಎಂಬರ್ಥ ಬರುತ್ತಿತ್ತೆಂದು ಮತ್ತೊಂದು ಪ್ರಸಂಗದಿಂದಲೂ ತಿಳಿಯಬಹುದು. ಸತ್ಯವತಿಯಿಂದ, "ದೇವರನೊಡನೆ ನೀನು ಗರ್ಭಾಧಾನ ಹೊಂದು". ಎಂದು ನಿಯುಕ್ತಳಾದ ಅಂಬಿಕೆ ಶಯನಾರೂಢಳಾಗಿ ದೇವರ ರೂಪದಲ್ಲಿ ಭೀಷ್ಮನನ್ನು ನಿರೀಕ್ಷಿಸುತ್ತಿರುತ್ತಾಳೆ. (೧.೧೦೦.೩) ಮನುಧರ್ಮಶಾಸ್ತ್ರದಲ್ಲೂ 'ದೇವರ' ಶಬ್ದಕ್ಕೆ 'ಪತಿಯ ಅಣ್ಣ' ಎಂಬ ಅರ್ಥ ಇತ್ತೆಂಬುದಕ್ಕೆ ಸಮರ್ಥನೆ ದೊರೆಯುತ್ತದೆ. "ಹಿರಿಯಣ್ಣನ ಹೆಂಡತಿಯನ್ನು ಗುರುಪತ್ನಿಯೆಂದೂ, ತಮ್ಮನ ಹೆಂಡತಿಯನ್ನು ಪುತ್ರವಧುವೆಂದೂ" ತಿಳಿಯಬೇಕೆಂದು ಹೇಳಿದ್ದರೂ ಆಪದ್ಧರ್ಮವಾಗಿ ಪತಿಯ ಅಣ್ಣನನ್ನು (ದೇವರ) ಯೋಗ್ಯನೆಂದು ಒಪ್ಪಿದ್ದಾನೆ (9.63).

ಪತಿಯ ತಮ್ಮ, ಸಪಿಂಡ ಅಥವಾ ಸಗೋತ್ರದವನೊಡನೆ ವಿವಾಹವಾಡಿಕೊಂಡು ಅಥವಾ ನಿಯೋಗವನ್ನು ಹೊಂದಿ ಮಕ್ಕಳನ್ನು ಪಡೆಯುವ ಕ್ರಮವನ್ನು ಈಗಲೂ ನಾವು ಪ್ರಪಂಚದ ನಾನಾ ಭಾಗಗಳಲ್ಲಿ ಕಾಣಬಹುದಾಗಿದೆ. ಅನೇಕ ಕಾರಣಗಳಿಂದಾಗಿ ಈ ಪದ್ಧತಿ ಬಳಕೆಗೆ ಬಂದಿರಬಹುದೆಂದು ಊಹಿಸಬಹುದು. ಹೀಗೆ ಮಾಡಿದಾಗ ಹುಟ್ಟಿದ ಮಗುವಿಗೆ ಅದೇ ವಂಶದ ಗುಣ ಸ್ವಭಾವಗಳು ಬರುತ್ತವೆಂಬುದು ಎಲ್ಲಕ್ಕಿಂತ ಮುಖ್ಯವಾದ ಕಾರಣವಿರಬಹುದು. ಪತಿಯ ಅಣ್ಣ ಅಥವಾ ತಮ್ಮನೊಡನೆ ನಿಯೋಗ ಹೊಂದುವುದರಿಂದ ಹುಟ್ಟುವ ಕ್ಷೇತ್ರಜನಿಗೂ ಪರಿವಾರದ ಬೇರೆ ಮಕ್ಕಳಿಗೂ ಒಂದು ರೀತಿಯ ಸ್ನೇಹ ಸಮಾನತೆಗಳು ಉಳಿಯಲವಕಾಶವಿರುತ್ತದೆ. ಒಂದು ವೇಳೆ ತಮ್ಮ ಪರಿವಾರಕ್ಕಿಂತ ತೀರ ಭಿನ್ನನಾದ ಬೇರೆ ಒಬ್ಬ ವ್ಯಕ್ತಿಯೊಡನೆ ನಿಯೋಗ ಹೊಂದಿ ಮಕ್ಕಳನ್ನು ಪಡೆದರೆ ಹುಟ್ಟಿದ ಮಗುವಿಗೆ ಅನ್ಯಸಂಸ್ಕಾರಗಳು ಪ್ರಬಲವಾಗಿ ಮನೆಯ ಉಳಿದ ಸದಸ್ಯರೊಡನೆ ಹೊಂದಾಣಿಕೆ ಆಗದೆ ಹೋಗಬಹುದು. ಕೊನೆಗೆ ಬೆಳೆದ ತನ್ನ ಮಗನಿಗೆ ಆ ಭಿನ್ನ ಪುರುಷ ದುರ್ಬೋಧನೆ ಮಾಡಿ ಪರಿವಾರದ ಸಂಪತ್ತಿನಲ್ಲಿ ಪಾಲನ್ನು ಅಪಹರಿಸುವಂತಾಗಬಹುದು. ಆದ್ದರಿಂದಲೇ ವಸಿಷ್ಠ, "ಲೋಭಾನ್ನಾಸ್ತಿ ನಿಯೋಗಃ," ಎಂಬುದಾಗಿ ಧನದ ಲೋಭದಿಂದ ನಿಯೋಗ ಮಾಡುವುದನ್ನು ಸ್ಪಷ್ಟವಾಗಿಯೇ ನಿಷೇಧಿಸಿದ್ದಾನೆ.

ಕೆಲವು ಸ್ಮೃತಿಗಳು ಎಲ್ಲ ಸಂದರ್ಭಗಳಲ್ಲೂ ಬ್ರಾಹ್ಮಣ ನಿಯೋಗಕ್ಕೆ ಅರ್ಹನೆಂದು ತಿಳಿಸುತ್ತವೆ. ಮಹಾಭಾರತದ ಬಹುತೇಕ ನಿಯೋಗಪ್ರಸಂಗಗಳಲ್ಲಿ ಬ್ರಾಹ್ಮಣನನ್ನೇ ನೇಮಿಸಿರುವುದನ್ನು ಕಾಣುತ್ತೇವೆ. ರಾಜನಾದ ಬಲಿ ತನ್ನ ಪತ್ನಿಯಾದ ಸುದೇಷ್ಣೆಯಲ್ಲಿ ಮಕ್ಕಳನ್ನು ಪಡೆಯಲು ನಿಯೋಗಕ್ಕಾಗಿ ಒಬ್ಬ ಅಂಧ ಬ್ರಾಹ್ಮಣನನ್ನು ನೇಮಿಸುತ್ತಾನೆಂದು ತಿಳಿಯುತ್ತದೆ. ವಸಿಷ್ಠ ಋಷಿ ಕಲ್ಮಾಷಪಾದ ರಾಜನ ಹೆಂಡತಿಯಾದ ಮದಯಂತಿಯಲ್ಲಿ ನಿಯೋಗದ ಮೂಲಕ ಮಕ್ಕಳನ್ನು ಸೃಜಿಸುತ್ತಾನೆ. ಪ್ರಾರಂಭದಲ್ಲಿ ಬ್ರಾಹ್ಮಣನನ್ನು ನಿಯೋಗಕ್ಕೆ ಆಹ್ವಾನಿಸದಿದ್ದರೂ ಕಾಲಾನಂತರ ಸಮಾಜದಲ್ಲಿ ವರ್ಣವ್ಯವಸ್ಥೆ ಬಿಗಿಯಾಗುತ್ತ ಬಂದು ಬ್ರಾಹ್ಮಣರ ಪ್ರತಿಷ್ಠೆ ಹೆಚ್ಚುತ್ತಾ ಬಂದಂತೆ ಅವರನ್ನು ನಿಯೋಗಕ್ಕೆ ಅತ್ಯಂತ ಅರ್ಹರು ಎಂದು ತಿಳಿಯುವ ಭಾವನೆ ಉಂಟಾದಂತೆ ಕಂಡುಬರುತ್ತದೆ. ಮಹಾಭಾರತ ಒಂದರಲ್ಲಿಯೇ ಈ ಅಭಿಪ್ರಾಯಕ್ಕೆ ಸಾಕಷ್ಟು ಪುಷ್ಟಿ ದೊರೆಯುತ್ತದೆ. ಸತ್ಯವತಿ ಭೀಷ್ಮನನ್ನು ತನ್ನ ಸೊಸೆಯರೊಡನೆ

ನಿಯೋಗ ಹೊಂದಲು ಒತ್ತಾಯಿಸಿದಾಗ ಅವನು ಅದನ್ನು ತಿರಸ್ಕರಿಸಿ ಯಾರಾದರೂ ಒಬ್ಬ ಸದ್ಬ್ರಾಹ್ಮಣನನ್ನು ಗೊತ್ತುಮಾಡುವಂತೆ ಸೂಚಿಸುತ್ತಾನೆ. ಈ ಮಾತುಗಳನ್ನು ಕೇಳಿ ಸತ್ಯವತಿ ಚಿಂತಿತಳಾಗುತ್ತಾಳೆ. ಆಗ ಭೀಷ್ಮ, 'ಪರಶುರಾಮ 21 ಬಾರಿ ಭೂಮಂಡಲವನ್ನೆಲ್ಲ ಸುತ್ತಿ ಕ್ಷತ್ರಿಯರನ್ನೆಲ್ಲ ನಿರ್ಮೂಲ ಮಾಡಿದರೂ ಕ್ಷತ್ರಿಯರು ಅಳಿಯದೆ ಉಳಿದರು. ಏಕೆಂದರೆ ಕ್ಷತ್ರಿಯರ ಪತ್ನಿಯರು ನಿಯೋಗದ ಮೂಲಕ ಬ್ರಾಹ್ಮಣರಿಂದ ಮಕ್ಕಳನ್ನು ಪಡೆಯುತ್ತಿದ್ದರು." ಎಂದು ಹೇಳಿ ಅವಳನ್ನು ಸಮಾಧಾನ ಪಡಿಸಲೆತ್ನಿಸುತ್ತಾನೆ.

ಆದರೆ ಮಹಾಭಾರತದ ಕಾಲದಲ್ಲೇ ಬ್ರಾಹ್ಮಣರನ್ನು ನೇಮಿಸುವ ಬಗ್ಗೆ ಸಾಕಷ್ಟು ಅತೃಪ್ತಿ ಇದ್ದುದೆ ಕಂಡುಬರುತ್ತದೆ. ಸಭಾಪರ್ವದಲ್ಲಿ ಶಿಶುಪಾಲ ತುಂಬಿದ ಸಭೆಯಲ್ಲೇ ಭೀಷ್ಮನನ್ನು "ತನ್ನ ತಮ್ಮನ ವಿಧವಾಪತ್ನಿಯರಲ್ಲಿ ಮಕ್ಕಳನ್ನು ಪಡೆಯಲು ಬ್ರಾಹ್ಮಣನನ್ನು ನಿಯೋಜಿಸಿದವನು." ಎಂದು ಹಳಿಯುತ್ತಾನೆ. ಅರ್ಜುನನೂ ಒಮ್ಮೆ ಕೃಷ್ಣನೊಡನೆ, ವಸಿಷ್ಠರು ಮುನಿಗಳಾಗಿದ್ದು ಧರ್ಮವನ್ನು ತಿಳಿದವರಾದರೂ ಕಲ್ಮಾಷಪಾದ ರಾಜನ ಹೆಂಡತಿಯ ಸಹವಾಸ ಮಾಡಿದ್ದರ ಔಚಿತ್ಯವನ್ನು ಪ್ರಶ್ನಿಸುತ್ತಾನೆ.

ಈ ರೀತಿಯಾಗಿ ಒಂದೆ ವ್ಯಾಪಕವಾಗಿ ಬಳಕೆಯಲ್ಲಿದ್ದ ನಿಯೋಗಪದ್ಧತಿ ಯಾವಾಗೆಂದರೆ ಆಗ ವ್ಯಭಿಚಾರದಲ್ಲಿ ಪರ್ಯವಸಾನಗೊಳ್ಳಬಹುದೆಂಬ ಅರಿವಿನಿಂದ ಸ್ಮೃತಿಕಾರರು ಹಾಗಾಗದಂತೆ ನೋಡಿಕೊಳ್ಳಲು ಬಹಳಷ್ಟು ಎಚ್ಚರ ವಹಿಸಿದ್ದಾರೆ. ನಿಯೋಗಪದ್ಧತಿಯ ಉದ್ದೇಶದ ಪಾವಿತ್ರ್ಯ ಉಳಿದು ಅದು ವ್ಯಭಿಚಾರದ ಮಟ್ಟಕ್ಕಿಳಿಯದಂತೆ ತಡೆಯಲು ಅನೇಕ ನಿಯಮಗಳನ್ನು ಮಾಡಿದ್ದಾರೆ: ೧ ನಿಯೋಗವನ್ನು ಕೇವಲ ಆಪದ್ಧರ್ಮವಾಗಿ ಉಪಯೋಗಿಸಬಹುದಾಗಿತ್ತು. ವಂಶಲೋಪದ ಭಯ ಉಂಟಾದಾಗ ಮಾತ್ರ ನಿಯೋಗವನ್ನು ಅನುಸರಿಸಬಹುದಿತ್ತು. ಸತ್ಯವತಿ ಭೀಷ್ಮನೊಡನೆ ಮತ್ತು ಪಾಂಡು ಕುಂತಿಯೊಡನೆ ಇದೇ ಭಯವನ್ನು ವ್ಯಕ್ತಪಡಿಸುತ್ತಾರೆ. ೨ ಹಿರಿಯರು ಅಥವಾ ಪತಿ ನಿಯೋಗಕ್ಕೆ ಯಾರನ್ನು ನೇಮಿಸುತ್ತಾರೋ ಅಂತಹವರೊಡನೆ ಮಾತ್ರ ನಿಯೋಗಸಂಪರ್ಕ ಹೊಂದಬಹುದಾಗಿತ್ತು. ಸ್ತ್ರೀ ತನಗಿಷ್ಟ ಬಂದ ಪುರುಷನೊಡನೆ ನಿಯೋಗ ಹೊಂದುವಂತಿರಲಿಲ್ಲ. ಭೀಷ್ಮ ಮತ್ತು ಸತ್ಯವತಿಯರು ಅಂಬಿಕೆ ಮತ್ತು ಅಂಬಾಲಿಕೆಯರಿಗೆ ವ್ಯಾಸನನ್ನು ನಿಯೋಗಕ್ಕಾಗಿ ನೇಮಿಸಿದ್ದರು. ಆದರೆ ಅವರಿಗೆ ಕುರೂಪಿಗಳಾದ ವ್ಯಾಸರಲ್ಲಿ ಅಷ್ಟಾಗಿ ಆಸಕ್ತಿ ಇದ್ದಂತೆ ಕಾಣುವುದಿಲ್ಲ. ಆದ್ದರಿಂದಲೇ ಅಂಬಿಕೆ ಎರಡನೆಯ ಸಲ ವ್ಯಾಸರಲ್ಲಿಗೆ ಹೋಗಬೇಕಾಗಿ ಬಂದಾಗ ತಾನು ಹೋಗದೆ ಗುಟ್ಟಾಗಿ ಒಬ್ಬ ದಾಸಿಯನ್ನು ಕಳುಹಿಸುತ್ತಾಳೆ. ೩ ನಿಯೋಗದ ಮುಖ್ಯ ಉದ್ದೇಶ ಸಂತಾನಪ್ರಾಪ್ತಿಯಾದ್ದರಿಂದ ಅದಕ್ಕೆ ಯೋಗ್ಯವಾದ ಋತುಕಾಲದಲ್ಲಿ ಮಾತ್ರ ಅವರು ಸೇರಬಹುದಾಗಿತ್ತು. ನಿಯುಕ್ತರಾದ ಸ್ತ್ರೀ ಮತ್ತು ಪುರುಷರು ಸರ್ವಥಾ ಆರೋಗ್ಯದಿಂದಿದ್ದು ಸ್ವಸ್ಥರಾಗಿರಬೇಕಿತ್ತು. ೪ ನಿಯೋಗ ಒಂದು ಕರ್ತವ್ಯ ಮಾತ್ರವಾಗಿದ್ದು ಅದರಲ್ಲಿ ಲಾಭದ ಲೋಭ ಇರುವಂತಿರಲಿಲ್ಲ. ೫ ನಿಯುಕ್ತನಾದ ಪುರುಷ ಶುದ್ಧವಾದ ಬೆಲೆಬಾಳುವ ವಸ್ತ್ರಾಭರಣಗಳನ್ನು ತೊಡದೆ ಅವನ್ನು ಕಳಚಿರಬೇಕಿತ್ತು ಮತ್ತು ಅವನು ಯಾವ ರೀತಿಯ ಬಾಹ್ಯಸುರತದಲ್ಲಿ ತೊಡಗುವಂತಿರಲಿಲ್ಲ. ಸ್ತ್ರೀಯೊಡನೆ ವಿನಾಕಾರಣ ಹೆಚ್ಚಾಗಿ ಮಾತಾಡುವಂತಿರಲಿಲ್ಲ. ಅವರಿಬ್ಬರಲ್ಲಿ ಯಾವ ರೀತಿಯ ಭಾವನಾತ್ಮಕ ಸಂಬಂಧ ಉಂಟಾಗದಂತಿರಲು ಈ ರೀತಿಯ ನಿಯಮವನ್ನು ಮಾಡಿರುವಂತೆ ಕಾಣುತ್ತದೆ. ೬ ಒಮ್ಮೆ ಸ್ತ್ರೀ ಗರ್ಭಧರಿಸಿದಳೆಂದರೆ ಅವರು ಮತ್ತೆ ಸೇರುವಂತಿರಲಿಲ್ಲ. ಮನು, "ಒಮ್ಮೆ ನಿಯೋಗದ ಕೆಲಸ ಮುಗಿದ ಅನಂತರ ಅವರು ಪರಸ್ಪರ ಸೊಸೆ ಮತ್ತು ಮಾವನಂತೆ ನಡೆದುಕೊಳ್ಳಬೇಕು", (೯.೬೨) ಎಂದು ತಿಳಿಸಿದ್ದಾನೆ.

ನಿಯೋಗದ ಮೂಲಕ ಎಷ್ಟು ಮಕ್ಕಳನ್ನು ಪಡೆಯಬಹುದು? ಈ ವಿಷಯದಲ್ಲಿ ಶಾಸ್ತ್ರಕಾರರಲ್ಲಿ ಒಮ್ಮತ ಇದ್ದಂತಿಲ್ಲ. ಗೌತಮ (೨.೯.೮) ನಿಯೋಗದಿಂದ ಕೇವಲ ಒಬ್ಬ ಮಗನನ್ನು ಮಾತ್ರ ಪಡೆಯಬೇಕೆಂದು ತಿಳಿಸಿದ್ದಾನೆ. ಮನುವೂ (೯.೬೦) ಇದೇ ಅಭಿಪ್ರಾಯ ಹೊಂದಿದ್ದಾನೆ. ಆದರೆ ಮನು "ಎರಡು ಪುತ್ರರನ್ನು ಪಡೆಯಬಹುದು". ಎಂಬ ಅನ್ಯಶಾಸ್ತ್ರಕಾರರ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾನಲ್ಲದೆ ಅದಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿದ್ದಾನೆ. ಮಹಾಭಾರತದಲ್ಲಿ ಕುಂತಿ (೧.೧೨೩.೭೫) ನಿಯೋಗದಿಂದ ಮೂರು ಜನಕ್ಕಿಂತ ಹೆಚ್ಚಿಗೆ ಮಕ್ಕಳನ್ನು ಪಡೆಯುವವಳನ್ನು ಸ್ಪಷ್ಟವಾಗಿ 'ಪುಂಶ್ಚಲೀ'

ಎಂದು ಹೇಳುತ್ತಾಳೆ. ಕುಂತಿಯೂ ನಿಯೋಗದಿಂದ ಕೇವಲ ಮೂರು ಜನ ಮಕ್ಕಳನ್ನು ಪಡೆದಳು ಎಂಬ ವಿಚಾರ ಗಮನಾರ್ಹವಾಗಿದೆ.

ಮಹಾಭಾರತದಲ್ಲಿ ನಿಯೋಗ ಪ್ರಸಂಗದಲ್ಲಿ ಹುಟ್ಟಿದ ಮಕ್ಕಳೆಲ್ಲವೂ ಗಂಡುಮಕ್ಕಳೇ ಆಗಿದ್ದು, ಹೆಣ್ಣು ಮಕ್ಕಳು ಹುಟ್ಟಿದ ವಿಚಾರ ಎಲ್ಲಿಯೂ ಸಿಕ್ಕುವುದಿಲ್ಲ. ಧರ್ಮಶಾಸ್ತ್ರಗಳಲ್ಲೂ ಈ ವಿಚಾರ ಅಷ್ಟಾಗಿ ಪ್ರಸ್ತಾಪಿಸಲ್ಪಟ್ಟಿಲ್ಲ. ಅದ್ದರಿಂದ ನಿಯೋಗದಿಂದ ಹುಟ್ಟುವ ಮಕ್ಕಳೆಲ್ಲವೂ (ಹೆಚ್ಚೆಂದರೆ ಮೂರು) ಹೆಣ್ಣು ಮಕ್ಕಳೇ ಆದರೆ ಅಂತಹ ಪ್ರಸಂಗದಲ್ಲಿ ಏನು ಮಾಡಬೇಕು ಎಂಬ ವಿಚಾರ ಹಾಗೆಯೇ ಉಳಿಯುತ್ತದೆ. ಶಾಸ್ತ್ರಕಾರರೆಲ್ಲ ನಿಯೋಗದಿಂದ ಹುಟ್ಟುವ ಮಕ್ಕಳು ಗಂಡುಮಕ್ಕಳೇ ಆಗಿರುತ್ತಾರೆಂಬ ಅಭಿಪ್ರಾಯ ತಳೆದಿದ್ದರೇ? ಇದು ಕೇವಲ ಊಹೆಯ ಮಾತಾಗುತ್ತದೆಯೇ ಹೊರತು ಸಮಂಜಸವಾದ ಉತ್ತರವೆನಿಸುವುದಿಲ್ಲ. ಪ್ರಾಯಃ ಅವರು ನಿಯೋಗದಿಂದ ಹೆಣ್ಣು ಮಕ್ಕಳು ಹುಟ್ಟಿದರೂ ಅವರನ್ನು ಗಮನಕ್ಕೆ ತೆಗೆದುಕೊಳ್ಳದೆ ಕೇವಲ ಗಂಡುಮಕ್ಕಳಿಂದ ವಂಶಾಭಿವೃದ್ಧಿಯಾಗುತ್ತದೆಂಬ ಅಭಿಪ್ರಾಯ ಬಹಳ ಬಲವಾಗಿದ್ದುದರಿಂದ ಹುಟ್ಟುವ ಗಂಡು ಮಕ್ಕಳನ್ನು ಮಾತ್ರ ಗಮನಿಸುತ್ತಿದ್ದರೆಂದು ಭಾವಿಸಬಹುದು. ಅಂದರೆ ನಿಯೋಗದಿಂದ ಮುಂಚೆ ಹೆಣ್ಣು ಮಕ್ಕಳಾದರೂ ಅವರು ಗಂಡು ಮಗ ಅಥವಾ ಮಕ್ಕಳನ್ನು ಪಡೆಯುವ ವರೆಗೆ ಮತ್ತೆಮತ್ತೆ ಸಂಪರ್ಕಹೊಂದಲು ಅವಕಾಶವಿದ್ದಿರಬಹುದೆಂದು ಕಂಡುಬರುತ್ತದೆ.

ನಿಯೋಗವನ್ನು ಆಚರಿಸುವವರು ಮೇಲೆ ಹೇಳಿದ ಎಲ್ಲ ನಿಯಮಗಳನ್ನೂ ಚಾಚೂ ತಪ್ಪದೆ ಪಾಲಿಸಬೇಕಾಗಿತ್ತು. ಅವುಗಳನ್ನು ಉಲ್ಲಂಘಿಸಿದವರು ಶಿಕ್ಷೆಯನ್ನನುಭವಿಸಬೇಕಾಗುತ್ತಿತ್ತು. ಮನು (೯.೫೮, ೯.೧೪೪), ನಾರದ (೧೨.೮೫.೮೬), ಯಾಜ್ಞವಲ್ಕ್ಯ (೧.೬೮) ಮುಂತಾದವರು ನಿಯೋಗದ ನಿಯಮಗಳನ್ನು ಉಲ್ಲಂಘಿಸಿದವರನ್ನು 'ಪತಿತ'ರೆಂದು ಹೇಳಿರುತ್ತಾರೆ. ಅವರ ಅಭಿಪ್ರಾಯದಲ್ಲಿ ಅಂಥ ಸ್ತ್ರೀಪುರುಷರಿಗೆ ಹುಟ್ಟುವ ಮಕ್ಕಳು ಜಾರಜರಾಗಿದ್ದು ಅವರಿಗೆ ವಂಶದ ಸಂಪತ್ತಿನ ಮೇಲೆ ಯಾವುದೇ ಅಧಿಕಾರವಿರುವುದಿಲ್ಲ.

ನಿಯೋಗದಿಂದ ಹುಟ್ಟಿದ ಮಗು ಸ್ತ್ರೀಯ ನಿಜವಾದ ಪತಿಯದೇ ಅಥವಾ ಹುಟ್ಟಿಸಿದ ಪುರುಷನದೆ? ನ್ಯಾಯವಾಗಿ ಈ ರೀತಿಯ ಪ್ರಶ್ನೆಯೇ ಏಳುವಂತಿಲ್ಲ. ಏಕೆಂದರೆ ನಿಯೋಗದ ಮೂಲ ಉದ್ದೇಶವೇ ಮಕ್ಕಳಿಲ್ಲದವರು ಅಪದ್ಧರ್ಮವಾಗಿ ಮಕ್ಕಳನ್ನು ಹೊಂದುವಂತಾಗಬೇಕೆಂಬುದಾಗಿರುವಾಗ ಹುಟ್ಟುವ ಮಗು ನ್ಯಾಯವಾಗಿ ಸತಪ್ರಷ್ಟ ಪತಿಯದೇ ಹೊರತು ನಿಯುಕ್ತನಾದ ಪುರುಷನದಾಗಬಾರದು. ಆದರೆ ಈ ವಿಚಾರವಾಗಿ ಧರ್ಮಶಾಸ್ತ್ರಗಳು ಬಹಳಷ್ಟು ವಿಚಾರ ಮಾಡಿ ನಾನಾ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿವೆ. ಗೌತಮ (೨.೯. ೯.೧೩) ಮತ್ತು ವಸಿಷ್ಠರು (೧೭.೮.೯) ಈ ರೀತಿ ಮೂರು ಪರಸ್ಪರ ವಿರೋಧಿ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ.

ಗೌತಮ (೨.೯.೧೧) ಯಾಜ್ಞವಲ್ಕ್ಯನ ಟೀಕಾಕಾರನಾದ ವಿಜ್ಞಾನೇಶ್ವರ (೨.೧೨೭ ವ್ಯಾಖ್ಯಾನ) ಮತ್ತು ಮಹಾಭಾರತ (೧.೧೦೦) ಇವುಗಳ ಅಭಿಪ್ರಾಯದಂತೆ ಪತಿಯಿಂದ ನಿಯುಕ್ತಳಾದ ಸ್ತ್ರೀ ನಿಯೋಗದಿಂದ ಪಡೆಯುವ ಮಗು ಪತಿಯದೇ ಆಗುತ್ತದೆ. ಅದ್ದರಿಂದಲೇ ಕುಂತಿಗೆ ಧರ್ಮ, ವಾಯು, ಇಂದ್ರರಿಂದ ಹುಟ್ಟಿದ ಮಕ್ಕಳು ಪಾಂಡುವಿನ ಮಕ್ಕಳೇ ಆಗಿ ಪಾಂಡವರೆನಿಸಿಕೊಂಡರು. ದಯಾನಂದ ಸರಸ್ವತಿಯವರು ಋಗ್ವೇದದ ೧೦.೧೮.೮ ಮಂತ್ರವು, "ಪತಿ ಮೃತನಾಗಿದ್ದರೂ ಗುರುಹಿರಿಯರಿಂದ ನಿಯುಕ್ತಳಾದ ಅವನ ಹೆಂಡತಿ ಪಡೆಯುವ ಮಗು ಮೃತನಾದ ಪತಿಯದೇ," ಎಂಬ ಅರ್ಥವನ್ನು ಕೊಡುತ್ತದೆ, ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅದ್ದರಿಂದಲೇ ಅಂಬಿಕೆಗೆ ವ್ಯಾಸರಿಂದ ಜನಿಸಿದ ಮಗುವೂ ವಿಚಿತ್ರವೀರ್ಯನ ಮಗುವೇ ಆಗುತ್ತದೆ.

ಋಗ್ವೇದದ ೭.೭.೪. ೭–೮ ಮಂತ್ರಗಳಿಗೆ ನಿರುಕ್ತ ಅರ್ಥಮಾಡುತ್ತ, ನಿಯೋಗದಿಂದ ಹುಟ್ಟಿದ ಮಗು ನಿಯುಕ್ತನಾದ ಪುರುಷನದೇ (ಬೀಜೀ) ಎಂದು ತಿಳಿಸುತ್ತದೆ. ಅಪಸ್ತಂಬ (೨.೬.೧೩.೫) ಬ್ರಾಹ್ಮಣ ಗ್ರಂಥಗಳ ಆಧಾರವನ್ನು ತೋರಿಸಿ, "ಹುಟ್ಟಿದ ಮಗು ಹುಟ್ಟಿಸಿದ ತಂದೆಯದು,"

ಎಂದು ಅಭಿಪ್ರಾಯಪಟ್ಟಿದ್ದಾನೆ. ಮನುವೂ ಇದೇ ಭಾವನೆಯನ್ನು ಹೊಂದಿದ್ದಾನೆ ಮಕ್ಕಳಿಲ್ಲದವರಿಗೆ ವಂಶವೃದ್ಧಿಗಾಗಿ ಮಕ್ಕಳಾಗುವಂತಾಗಲು ನಿಯೋಗಪದ್ಧತಿಯನ್ನು ಒಪ್ಪಿಯೂ ಮನು ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿರುವುದು ಬಹಳ ವಿಚಿತ್ರವಾಗಿದೆ. ಮನು ಸ್ಪಷ್ಟವಾಗಿಯೇ "ಯಸ್ಯ ತೇ ಬೀಜತೋ ಜಾತಾಃ ತಸ್ಯ ತೇ ನೇತರಸ್ಯತು" ಎಂಬುದಾಗಿ ಹೇಳಿದ್ದಾನೆ.

ಮಹಾಭಾರತದಲ್ಲಿ ಒಂದು ವಿಚಿತ್ರ ಪ್ರಸಂಗ ಬರುತ್ತದೆ ಸತ್ಯವತಿಯಿಂದ ನಿಯುಕ್ತಳಾದ ಅಂಬಿಕೆ ತನ್ನ ಮೈದುನನ ರೂಪದಲ್ಲಿ ಭೀಷ್ಮರಿಗಾಗಿ ಕಾಯುತ್ತಿರುತ್ತಾಳೆ. ಅವಳ ನಿರೀಕ್ಷೆ ಸುಳ್ಳಾಗಿ ಅಲ್ಲಿಗೆ ವ್ಯಾಸರು ಬರುತ್ತಾರೆ ಆದರೆ ವ್ಯಾಸರನ್ನು ಅಂಬಿಕೆಯ ಮನಸ್ಸು ಒಪ್ಪುವುದಿಲ್ಲ. ವಿಧಿ ಇಲ್ಲದೆ ಅವಳು ಸಮ್ಮತಿಸಬೇಕಾಗುತ್ತದೆ. ಆದ್ದರಿಂದಲೇ ಹುಟ್ಟಿದ ಮಗು ಅಂಧನಾಗಿ (ಧೃತರಾಷ್ಟ್ರ) ಹುಟ್ಟುತ್ತದೆ. ಇದರಿಂದ ಬೇಸರಗೊಂಡ ಸತ್ಯವತಿ ಅವಳನ್ನು ಮತ್ತೊಮ್ಮೆ ವ್ಯಾಸರಲ್ಲಿಗೆ ಹೋಗಲು ಒಪ್ಪಿಸುತ್ತಾಳೆ. ಆದರೆ ಈ ಸಲ ಅಂಬಿಕೆ ತಾನು ಹೋಗದೆ ಉಪಾಯವಾಗಿ ತನ್ನ ಒಬ್ಬ ದಾಸಿಯನ್ನು ಕಳಿಸುತ್ತಾಳೆ. ಅವಳಿಗೆ ಜನಿಸಿದ ಶಿಶುವೇ ಮಹಾವಿವೇಕಿಯೂ ಜ್ಞಾನಿಯೂ ಆದ ವಿದುರ. ಈಗ ವಿದುರ ಯಾರ ಮಗು? ಇದರ ಬಗ್ಗೆ ಮಹಾಭಾರತದಲ್ಲಿಯೇ ವಿಚಾರ ನಡೆದಿದೆ. ಅಂಬಿಕೆ ಸತ್ಯವತಿಯಿಂದ ನಿಯುಕ್ತಳಾಗಿದ್ದರೂ ಅವಳಿಂದ ನೇಮಿಸಲ್ಪಟ್ಟ ದಾಸಿ 'ಅನಿಯುಕ್ತ'ಳೇ ಆಗುವುದರಿಂದ ವಿದುರ ವ್ಯಾಸರ ಮಗನೇ ಹೊರತು ವಿಚಿತ್ರವೀರ್ಯನ ಮಗನಲ್ಲ ಎಂಬುದಾಗಿ ಅಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ. (೧.೧೦೦. ೨೧.೨೫–೨೭). ಅಂಧನಾದ ಬ್ರಾಹ್ಮಣ ಮುನಿ ಮತ್ತು ರಾಜನಾದ ಬಲಿ ಹಾಗೂ ಅವನ ಹೆಂಡತಿ ರಾಣಿ ಸುದೇಷ್ಣೆಯರ ಪ್ರಸಂಗವೂ ಇದೇ ರೀತಿಯಾಗಿದೆ (ಭಾರತ ೧.೯೮. ೧೮–೨೯).

ನಿಯೋಗದಿಂದ ಹುಟ್ಟಿದ ಮಗು ಇಬ್ಬರಿಗೂ ಸೇರುತ್ತದೆಂದು ನಾರದ (೧೨.೫೮), ಬೋಧಾಯನ (೨.೨.೧೮–೧೯) ಮತ್ತು ಯಾಜ್ಞವಲ್ಕ್ಯ (೨.೧೨೭) ಇವರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದಲೇ ಅವರ ಅಭಿಪ್ರಾಯದಂತೆ ನಿಯೋಗದಿಂದ ಹುಟ್ಟಿದ ಪುತ್ರ ಇಬ್ಬರು ತಂದೆಯುಳ್ಳವನಾಗಿದ್ದು ಇಬ್ಬರ ಉತ್ತರಾಧಿಕಾರವನ್ನು ಹೊಂದಿ ಅವರ ಆಸ್ತಿಗೆ ಹಕ್ಕುದಾರನಾಗುತ್ತಾನೆ. ಹೀಗೆಯೇ ಧರ್ಮಾನುಸಾರ ಅವನು ಎರಡು ಗೋತ್ರಗಳಿಂದ ಕೂಡಿದ್ದು ಇಬ್ಬರು ತಂದೆಯರಿಗೂ ಪಿಂಡದಾನ ಮಾಡಬಹುದಾಗಿದೆ.

ಈ ರೀತಿಯಾಗಿ ಅನೇಕ ಗ್ರಂಥಗಳಲ್ಲಿ ವಿವರಿಸಲ್ಪಟ್ಟು ಬಳಕೆಯಲ್ಲಿದ್ದ ಈ ಪದ್ಧತಿ ಸಾಮಾನ್ಯವಾಗಿ ಕ್ರಿ.ಶ. ೩ನೆಯ ಶತಮಾನದ ವರೆಗೆ ಪ್ರಚಾರದಲ್ಲಿದ್ದು ಅನಂತರ ಕ್ರಮಕ್ರಮವಾಗಿ ಅಳಿಸಿಹೋದಂತೆ ಕಂಡುಬರುತ್ತದೆ. ಸಮಾಜದಲ್ಲಿ. ಅದರಲ್ಲೂ ಬಹುತೇಕ ಸ್ತ್ರೀಯರಲ್ಲಿ ಪಾತಿವ್ರತ್ಯಭಾವನೆ ಹೆಚ್ಚುಹೆಚ್ಚು ಸ್ಥಾನ ಗಳಿಸುತ್ತ ಬಂದಂತೆ ನಿಯೋಗಪದ್ಧತಿ ಅವರ ತಿರಸ್ಕಾರಕ್ಕೊಳಗಾದಂತೆ ತೋರುತ್ತದೆ. ಆಪಸ್ತಂಬನು ವ್ಯಕ್ತವಾಗಿಯೇ ಈ ಪದ್ಧತಿಯನ್ನು ಖಂಡಿಸಿದ್ದಾನೆ. ನಿಯೋಗದಿಂದ ಹುಟ್ಟುವ ಮಗು ಹುಟ್ಟಿಸಿದ ಪುರುಷನದೇ (ಬೀಜೀ) ಆಗುವುದರಿಂದ ವಂಶಾಭಿವೃದ್ಧಿಯೆಂಬ ನಿಯೋಗಪದ್ಧತಿಯ ಮೂಲ ಉದ್ದೇಶಕ್ಕೆ ಚ್ಯುತಿ ಬರುತ್ತದೆ. ಆದ್ದರಿಂದ ಇದು ತ್ಯಾಜ್ಯ ಮತ್ತು ದೂಷ್ಯ. "ಹಿಂದೆ ಋಷಿಗಳು ಬಹಳ ತೇಜಸ್ವಿಗಳಾಗಿದ್ದುದರಿಂದ ಅವರ ಕರ್ಮ ಪಾಪಕರ್ಮವಲ್ಲದಿದ್ದರೂ ಈಗ ಅದು ಪಾಪಕರ್ಮ," ಎಂದು ಅವನ ಅಭಿಪ್ರಾಯ (೨.೬.೧೩.೫–೮). "ಈಗ ಮನುಷ್ಯರಲ್ಲಿ ಇಂದ್ರಿಯಸಂಯಮವಿರುವುದಿಲ್ಲ. ಆದ್ದರಿಂದ ಮನೋದೌರ್ಬಲ್ಯದಿಂದ ಕೂಡಿದವರಿಗೆ ನಿಯೋಗ ನಿಷಿದ್ಧ. ನಿಯೋಗದಿಂದ ಮಕ್ಕಳನ್ನು ಪಡೆಯುವುದಕ್ಕಿಂತ ವೈವಾಹಿಕ ಪಾವಿತ್ರ್ಯವನ್ನು ಉಳಿಸಿಕೊಳ್ಳುವುದರಿಂದ ಪರಲೋಕದಲ್ಲಿ ಸಿಕ್ಕುವ ಫಲವೇ ಶ್ರೇಯಸ್ಕರವಾದದ್ದು," ಎಂದು ಅವನು ಅಭಿಪ್ರಾಯಪಡುತ್ತಾನೆ.

ಮನುವಿನ ಟೀಕಾಕಾರನಾದ ಬೃಹಸ್ಪತಿ, "ಮನು ಮೊದಮೊದಲು ನಿಯೋಗವನ್ನು ಅನುಮೋದಿಸಿದ್ದರೂ ಕಲಿಗಾಲದಲ್ಲಿ ಅದು ಕೂಡದೆಂದು ನಿಷೇಧಿಸಿದ್ದಾನೆ," ಎಂದು ಅಭಿಪ್ರಾಯಪಟ್ಟಿದ್ದಾನೆ. ವಸಿಷ್ಠನೂ ನಿಯೋಗಪದ್ಧತಿಯನ್ನು ನಿಷಿದ್ಧವೆಂದೇ ಹೇಳಿದ್ದಾನೆ. ಸೋದರನ ಅಥವಾ ಸವತಿಯ ಮಕ್ಕಳೂ ತನ್ನ ಮಕ್ಕಳ ಸಮಾನರೇ ಆಗಿರುವುದರಿಂದ ನಿಯೋಗದಿಂದ ಮಕ್ಕಳನ್ನು ಪಡೆಯುವುದು ಅನುಪಯುಕ್ತವಾದದ್ದೆಂದು ಅವನು ಭಾವಿಸಿದ್ದಾನೆ. (೧೭.೧೧.೧೨)

ಈ ರೀತಿಯಾಗಿ ಪಾರಿವಾರಿಕ ಸೌಖ್ಯ ಮತ್ತು ಸ್ತ್ರೀಯ ಸುಸ್ಥಿತಿಯನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಯಾವ ನಿಯೋಗಪದ್ಧತಿ ಪ್ರಾರಂಭವಾಯಿತೋ ಅಂಥ ನಿಯೋಗಪದ್ಧತಿ ಬಹಳ ಬೇಗ ಕಾಲಗರ್ಭದಲ್ಲಿ ಸೇರುವಂತಾಗಲು ಅನೇಕ ಕಾರಣಗಳಿದ್ದಂತೆ ಕಂಡುಬರುತ್ತದೆ. ೧ ಪಾರಿವಾರಿಕ ಪಾವಿತ್ರ್ಯ ಮತ್ತು ಶಾಂತಿಗೆ ಈ ಪದ್ಧತಿಯಿಂದ ಬಹಳ ಹಾನಿ ಉಂಟಾಗಿದ್ದಿರಬಹುದು. ಏಕೆಂದರೆ ಪರಿವಾರದ ಪುರುಷರಿಗೆ ಮನೆಗೆ ಸೇರುವ ವಧುಗಳ ವಿಚಾರದಲ್ಲಿ ಕಾಮವಿಕಾರ ಉಂಟಾಗಬಹುದಿತ್ತು. ವಿಧವೆಯರನ್ನು ಕಂಡರೆ ಕುಟುಂಬದ ಉಳಿದ ಹೆಂಗಸರಿಗೆ ಸವತಿ ಮಾತ್ಸರ್ಯ ಉಂಟಾಗಲವಕಾಶವಿತ್ತು. ೨ ಪರಿವಾರದ ಒಬ್ಬ ಪುರುಷ ಪುತ್ರಹೀನನಾಗಿಯೇ ಮೃತನಾದರೆ ಅವನ ಆಸ್ತಿ ಪರಿವಾರದ ಉಳಿದ ಪುರುಷರಿಗೆ ಸೇರುತ್ತಿತ್ತು. ಆದರೆ ಗತಿಸಿದವನ ಪತ್ನಿ ನಿಯೋಗದಿಂದ ಮಕ್ಕಳನ್ನು ಪಡೆದರೆ ಹುಟ್ಟಿದ ಕ್ಷೇತ್ರಜರಿಗೆ ಆ ಆಸ್ತಿ ಸೇರಬೇಕಾಗಿದ್ದಿತು. ಆದ್ದರಿಂದ ಸ್ವಾಭಾವಿಕವಾಗಿಯೇ ತಮ್ಮ ಆಸ್ತಿಯನ್ನು ಬೇರೆಯವರಿಗೆ ಕೊಡಲು ಇಚ್ಛಿಸದ ಹಿರಿಯರು ವಿಧವೆಯರ ನಿಯೋಗವನ್ನು ನಿಷೇಧಿಸುತ್ತ ಬಂದಿರಬಹುದು. ಭಾಸನ ದೂತವಾಕ್ಯದಲ್ಲಿ (೧.೧೨) ದುರ್ಯೋಧನ, ನಿಯೋಗದಿಂದ ಹುಟ್ಟಿದ ಧರ್ಮಾದಿಗಳು ಪಾಂಡುವಿನ ಮಕ್ಕಳೇ ಅಲ್ಲವಾದ್ದರಿಂದ ಅವರಿಗೆ ಆಸ್ತಿಯಲ್ಲಿ ಹಕ್ಕಿಲ್ಲ ಎಂದು ಹೇಳುತ್ತಾನೆ. ೩ ವೇದಗಳ ಕಾಲದಲ್ಲಿ ಸುಸ್ಥಿತಿಯನ್ನೂ ಪ್ರತಿಷ್ಠೆಯನ್ನೂ ಪಡೆದಿದ್ದ ಸ್ತ್ರೀಯು ಸಾಮಾಜಿಕ ಸ್ಥಾನಮಾನ ಬರಬರುತ್ತಾ ಕಮ್ಮಿಯಾದ್ದರಿಂದ ಪರವರ್ತೀ ಶಾಸ್ತ್ರಕಾರರು ಅವರ ಅಪೇಕ್ಷೆಗಳ ಬಗ್ಗೆ ಅಷ್ಟಾಗಿ ಗಮನಿಸಿರುವಂತೆ ಎನಿಸುವುದಿಲ್ಲ. ಆದ್ದರಿಂದಲೇ ಸಹಜವಾದ ಕಾಮದ ಅನುಭವದಿಂದ ವಂಚಿತರಾದ ದುರ್ಭಾಗ್ಯ ಸ್ತ್ರೀಯರಿಗಿದ್ದ ಒಂದು ಅವಕಾಶವೂ ಮುಂದೆ ಶಾಸ್ತ್ರಕಾರರ ವಿಧಿಯಿಂದ ಅವರಿಗಿಲ್ಲವಾಗುತ್ತದೆ.

ಹೀಗೆ ವಿವಾಹದ ಮುಖ್ಯೋದ್ದೇಶವಾದ ಪುತ್ರಸಂತಾನವನ್ನು ಹೊಂದುವಂತಾಗಲು ನಿಯೋಗ ಪದ್ಧತಿ ಬಳಕೆಗೆ ಬಂದಿತಾದರೂ ಕಾಲಾನುಕ್ರಮದಲ್ಲಿ ವೈವಾಹಿಕ ಪಾವಿತ್ರ್ಯದ ಕಡೆಗೆ ಅಧಿಕ ಗಮನ ಹರಿದು ಸಮಾಜದ ನೈತಿಕ ಮೌಲ್ಯಗಳಲ್ಲೂ ಗಣನೀಯವಾದ ಬದಲಾವಣೆಯಾದ್ದರಿಂದ ಕ್ರಮಕ್ರಮವಾಗಿ ನಿಷೇಧಿಸಲ್ಪಟ್ಟು ನಿಧಾನವಾಗಿ ಲುಪ್ತವಾಗಿರುವಂತೆ ಕಂಡುಬರುತ್ತದೆ.

ದೇವರ ಕೊಂಡಾರೆಡ್ಡಿ

ಶಾಸನಗಳ ಮೊರಸುನಾಡು

ಶಾಸನಗಳನ್ನು ಅವಲೋಕಿಸುವಾಗ ನಮ್ಮ ಗಮನವನ್ನು ಅನೇಕ ಸಂಗತಿಗಳು ಸೆಳೆಯುತ್ತವೆ. ಅವುಗಳಲ್ಲಿ ಊರು, ನಾಡುಗಳ ಹೆಸರುಗಳೂ ಒಂದು. ಈ ಹೆಸರುಗಳು ಸಾಮಾನ್ಯವಾಗಿ ಭೌಗೋಲಿಕ ಕಾರಣಗಳಿಂದ ಬಂದಿರಬಹುದು. ಇಲ್ಲವೆ ಯಾವುದಾದರೂ ಗತ ಘಟನೆಯ ನೆನಪಾಗಿರಬಹುದು. ಅಥವಾ ಯಾವುದಾದರೂ ವ್ಯಕ್ತಿಯ ಅಥವಾ ಜಾತಿಯ ಹೆಸರಿನಲ್ಲಿ ಪ್ರಸಿದ್ಧಿ ಹೊಂದಿರಬಹುದು. ಕೆಲವು ಹೆಸರುಗಳು ಮೂಲದಿಂದ ಇಂದಿಗೂ ಹಾಗೆಯೇ ಬದಲಾವಣೆಯಿಲ್ಲದೆ ಬಂದಿವೆ[1]. ಕೆಲವು ಅಲ್ಪಸ್ವಲ್ಪ ಬದಲಾವಣೆ ಹೊಂದಿವೆ[2]. ಮತ್ತೆ ಕೆಲವು ತಮ್ಮ ಮೂಲದ ಹೆಸರನ್ನು ಬದಲಾಯಿಸಿಕೊಂಡು ಬೇರೆ ಹೆಸರನ್ನು ಪಡೆದಿವೆ[3]. ಕೆಲವೊಮ್ಮೆ ಬೇರೆ ಭಾಷೆ ಜನರ ಸಂಪರ್ಕಪಡೆದು ಆ ಭಾಷೆಯ ಹೆಸರುಗಳನ್ನು ಸ್ವೀಕರಿಸುವುದನ್ನು ಕಾಣಬಹುದು. ಕೆಲವು ಕಡೆ ಹೆಸರು ಮಧ್ಯೆ ಬದಲಾವಣೆ ಹೊಂದಿದ್ದರೂ ಮೂಲದ ಹೆಸರೇ ಉಳಿದುಬಂದಿರುವುದನ್ನು ಕಾಣುತ್ತೇವೆ[4]. ಮೇಲಿನ ಅನೇಕ ಸಂದರ್ಭಗಳಲ್ಲಿ ಆ ನಾಡುಗಳ ಅಥವಾ ಊರುಗಳ ಹೆಸರುಗಳ ಅರ್ಥವನ್ನು ತಿಳಿಯುವುದು ಕಷ್ಟವಾಗುತ್ತದೆ.

ಬೆಂಗಳೂರು ಜಿಲ್ಲೆಯ ಶಾಸನಗಳನ್ನು ನಾವು ಅವಲೋಕಿಸುವಾಗ ನಮಗೆ ಪದೇ ಪದೇ ಗೋಚರಿಸುವ ನಾಡುಗಳೆಂದರೆ ಕನ್ನಡ ಶಾಸನಗಳಲ್ಲಿ ಯಲಹಕ್ಕನಾಡು, ಅವ್ವತಿನಾಡು, ಹೆಮುರೆನಾಡು, ತೊರವಳಿನಾಡು, ಮೊರಸುನಾಡು, ಕುಕ್ಕಲನಾಡು, ಹೊಮ್ಮಳಿಗೆನಾಡು, ಸೀಗಲನಾಡು, ಇತ್ಯಾದಿ. ತಮಿಳು ಶಾಸನಗಳಲ್ಲಿ ಏರಿವಿನಾಡು, ಮಾಸಂಡಿನಾಡು, ಮುರಸುನಾಡು, ಇಳೈಪಾಕ್ಕನಾಡು, ಪೊನ್ನೈಯಾಂಡಾರ್ಣಡನಾಡು, ಐಯುಮಿಗೂರುನಾಡು, ವೆಳವೂರುನಾಡು, ಇತ್ಯಾದಿ. ಇವುಗಳಲ್ಲಿ ಕನ್ನಡಶಾಸನಗಳಲ್ಲಿ ಉಕ್ತವಾಗಿರುವ ನಾಡುಗಳನ್ನು ಸುಲಭವಾಗಿ ಗುರುತಿಸಬಹುದು. ಯಲಹಕ್ಕನಾಡು ಈಗಿನ ಬೆಂಗಳೂರು ಜಿಲ್ಲೆಯ ಯಲಹಂಕದ ಸುತ್ತಮುತ್ತಲ ಪ್ರದೇಶ. ಇದನ್ನೇ ತಮಿಳು ಶಾಸನಗಳಲ್ಲಿ ಇಳೈಪಾಕ್ಕನಾಡೆಂದು ಕರೆದಿರುವುದು. ಅವ್ವತಿಯ ಸುತ್ತಮುತ್ತಲ ಪ್ರದೇಶ ಅವ್ವತಿನಾಡು. ಕನ್ನೆಲ್ಲಿಯ ಸುತ್ತಮುತ್ತಲ ಪ್ರದೇಶ ಕುಕ್ಕಲನಾಡು. ಆದರೆ ಮೊರಸುನಾಡು ಇದೇ ಪ್ರದೇಶಕ್ಕೆ ಸೇರಿದ್ದೆಂದು ಗುರುತಿಸುವುದು ಕಷ್ಟ. ಮೊರಸುನಾಡಿನ ಬಗ್ಗೆ ಚರ್ಚಿಸುವುದು ಈ ಲೇಖನದ ಉದ್ದೇಶ.

ಕರ್ಣಮಂಗಲಂ ಶ್ರೀಕಂಠಯ್ಯನವರು ಸಂಪಾದಿಸಿ ಪ್ರಕಟಿಸಿರುವ ಕೆಂಪೇಗೌಡ ಜಯಪ್ರಶಸ್ತಿ ಎಂಬ ಗ್ರಂಥದ ಮುನ್ನುಡಿಯಲ್ಲಿ ಮೊರಸುನಾಡಿನ ಬಗ್ಗೆ ಬರೆಯುತ್ತ, "........ಕನ್ನಡನಾಡಿನಲ್ಲಿ ಮೊರಸುನಾಡೆಂಬ ವಿಭಾಗದಲ್ಲಿ ಹೇರಳವಾಗಿ ವಾಸಿಸುತ್ತಿದ್ದ ಇವರನ್ನು ಮೊರಸು ಒಕ್ಕಲಿಗರೆಂದು

---

1 ಇಗ್ಗಲೂರು (ಕ್ರಿ.ಶ. ಸು. ೮೫೦ರ ಶಾಸನದಲ್ಲಿ ಉಲ್ಲೇಖ)

2 ಕೊಪಣ > ಕೊಪ್ಪಳ. ಬೆಂಪೂರು > ಬೇಹೂರು > ಬೇಗೂರು

3 ಕೃಷ್ಣರಾಜನಗರದ ಮೊದಲ ಹೆಸರು ಯಡತೊರೆ. ಪುಲಿಗೆಱೆ > ಲಕ್ಷ್ಮೇಶ್ವರ

4 ಹೆಸರುಘಟ್ಟಕ್ಕೆ ಶಿವಸಮುದ್ರವೆಂಬ ಪ್ರತಿನಾಮಧೇಯ ನೀಡಿರುತ್ತಾರೆ.

ಕರೆಯುವೇ ಅಲ್ಲದೆ ಗಂಗವಾಡಿಕಾರರಿಗೂ ಇವರಿಗೂ ಯಾವ ಅಂತರ್ಭೇದವೂ ಇರುವುದಿಲ್ಲ...... ಇಮ್ಮಡಿ ಕೆಂಪೇಗೌಡ ಆಳಿಕೊಂಡಿದ್ದ ಯಲಹಂಕನಾಡನ್ನು ಮೊದಮೊದಲಿನ ದಿನಗಳಲ್ಲಿ ಮೊರಸು ನಾಡೆಂದೇ ಕರೆಯಿದೆ. ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ದೇವನಹಳ್ಳಿ, ಬೆಂಗಳೂರು, ಹೊಸಕೋಟೆಗಳನ್ನು ಕೂಡಿಕೊಂಡಿದ್ದ ಈ ನಾಡನ್ನು ಕುರಿತು ಗಂಗರಾಜ ಮಾಧವವರ್ಮನ ನಂದಿ ದಾನ ಶಾಸನದಲ್ಲಿ ಮೊರಸುನಾಡೆಂದೇ ಕರೆದಿದೆ[5]. ಗಂಗರಾಜ ಪೆರ್ಮಾನಡಿಯು ಬೆಂಗಳೂರು ತಾ|| ವರ್ತೂರಿನ ಕೆರೆಕಟ್ಟೆ ಮೇಲಿರುವ ಶಿಲಾಶಾಸನದಲ್ಲಿ[6] ಮೊರಸುನಾಡಿನ ಉಲ್ಲೇಖವಿದೆ........." ಇವರ ವಾದದಲ್ಲಿ ಮೊರಸು ಒಕ್ಕಲಿಗರಿಗೂ ಮೊರಸುನಾಡಿಗೂ ಇರುವ ಸಂಬಂಧವನ್ನು ತೆಗೆದುಹಾಕುವಂತಿಲ್ಲ. ಆದರೆ ಯಲಹಂಕನಾಡಿಗೆ ಮಾತ್ರ ಮೊರಸುನಾಡೆಂಬ ಹೆಸರಿತ್ತೆಂಬುದನ್ನು ಒಪ್ಪಲು ಸಾಧ್ಯವಿಲ್ಲ. ಮೊರಸುನಾಡಿನ ಉಲ್ಲೇಖವಿರುವ ಶಾಸನ ಮಾಧವವರ್ಮನ ನಂದಿಯ ಶಾಸನ. ಅನಂತರದ ಉಲ್ಲೇಖ ಗಂಗ ಪೆರ್ಮಾನಡಿಯ[7] ಕಾಲದ್ದು. ಕಾಲ ಸುಮಾರು ೮೩೦. ಇದೇ ಕಾಲಕ್ಕೆ ಈಗಿನ ಕನ್ನೆಲ್ಲಿಯ ಸುತ್ತಮುತ್ತಲ ಪ್ರದೇಶವನ್ನು ಕುಕ್ಕರ ವಾಡಿಕ್ಕಾರಿನಾಡು ಎಂದು ಕರೆಯುತ್ತಿದ್ದರು. ಜೊತೆಗೆ ಇದು ಗಂಗ ೬೦೦೦ ಎಂಬ ಹೆಸರನ್ನು ಪಡೆದಿತ್ತು. ಯಲಹಂಕವೂ ಈ ಗಂಗ ೬೦೦೦ಕ್ಕೆ ಸೇರಿತ್ತು. ಮುಂದೆ ಮೊರಸುನಾಡಿನ ಉಲ್ಲೇಖ ಬರುವುದು ೧೩೮೨ನೆಯ ವರ್ಷದ ದೇವನಹಳ್ಳಿ ಶಾಸನದಲ್ಲಿ[8]. ಅನಂತರದ್ದು ದೊಡ್ಡ ಬಳ್ಳಾಪುರದ ಅಚ್ಯುತರಾಯನ ಕಾಲದ ಶಾಸನ[9]. ಇದಾದ ಮೇಲೆ ೧೪೨೬ನೆಯ ಇಸವಿಯ ಬೇಗೂರಿನ ಜೈನ ಶಾಸನ[10]. ಇವುಗಳಲ್ಲಿ ನಂದಿ ಮತ್ತು ದೊಡ್ಡಬಳ್ಳಾಪುರದವು ಸಂಸ್ಕೃತ ಶಾಸನಗಳು. ಮೇಲಿನ ಶಾಸನಗಳ ಕಾಲದಲ್ಲಿ ಬರೆದ ಇತರ ಶಾಸನಗಳಲ್ಲಿ ಮೊರಸುನಾಡಿನ ಉಲ್ಲೇಖವಿಲ್ಲದಿರುವುದನ್ನು ಗಮನಿಸಬೇಕು. ಇನ್ನು ದೊಡ್ಡಬಳ್ಳಾಪುರ ದೇವನಹಳ್ಳಿ ಶಾಸನಗಳ ಕಾಲಕ್ಕೆ ಮೊರಸುನಾಡಾವುದೆಂಬ ಬಗ್ಗೆ ಶಿಲಾಶಾಸನ ಲೇಖಕರಿಗೇ ಸಂಶಯ ಬಂದಂತಿದೆ. ದೇವನಹಳ್ಳಿಯ ಈ ಶಾಸನವನ್ನು ನೋಡಿ:

೧ "ಸ್ವಸ್ತಿ ಶ್ರೀ ಶಕವರುಷ[11] ಸಾವಿರದ ಮುನ್ನೂರ ನಾಲ್ಕನೆಯ ದುಂದುಭಿ ಸಂವತ್ಸರ ವಯಿಶಾಖ ಸುದ್ಧ ೮ ಸೋಮವಾರ ಸ್ವಸ್ತಿ ಶ್ರೀಮತು ಜಾಲದ ಕೇಶವನಾಥ ದೇವರಿಗೆ ಮೊರಸುನಾಡ ಸುಂಕದ ಅಧಿಕಾರಿ ರಾಮರಸರ ಮಕ್ಕಳು ದೇವಪ್ಪರು ಕೊಟ್ಟ ಧರ್ಮಶಾಸನವೆಂತೆಂದೊಡೆ..........."

೨ "ಸ್ವಸ್ತಿ ಶ್ರೀ ಶಕವರುಷ[12] ೧೩೦೪ನೇ ದುಂದುಭಿ ವೈ.ಸು. ೮ ಸೋಮವಾರ ಸ್ವಸ್ತಿ ಶ್ರೀಮತು ಜಾಲದ ಕೇಶವನಾಥ ದೇವರಿಗೆ ಎಲಹಂಕನಾಡ ಸುಂಕದ ಅಧಿಕಾರಿ ರಾಮರ್ಸರ ಮಕ್ಕಳು ದೇವರ್ಸರು ಕೊಟ್ಟ ಧರ್ಮಶಾಸನ......"

ಇಲ್ಲಿ ಯಾವ ಶಾಸನವನ್ನು ನಾವು ನಂಬಬೇಕು? ಯಲಹಂಕ ಪ್ರಭುಗಳ ಕಾಲದ ಶಾಸನವಿದು. ಕಾಲ, ಸ್ಥಳ, ಹೆಸರುಗೊಂಡ ಅಧಿಕಾರಿ ಇವರೆಲ್ಲ ಒಬ್ಬರೇ ಆದರೆ ಅಧಿಕಾರ ನಡೆಸುತ್ತಿದ್ದ ನಾಡುಗಳ ಹೆಸರುಗಳು ಬದಲಾಗಿವೆ. ಮೊರಸುನಾಡಿನ ಉಲ್ಲೇಖವಾಗಿರುವ ಶಾಸನದ ಸ್ಥಳದಲ್ಲೇ ಯಲಹಂಕ ನಾಡೆಂದು ಹೆಸರು ಇದೆ. ಮೊದಲ ನೋಟಕ್ಕೆ ಯಲಹಂಕನಾಡೆ ಮೊರಸುನಾಡೆಂದು ತೀರ್ಮಾನಿಸಿ ಬಿಡುತ್ತಿದ್ದರು. ಮೊರಸುನಾಡೆಂಬ ಹೆಸರನ್ನು ಉಲ್ಲೇಖಿಸಿರುವ ಶಾಸನಗಳೂ ಕೆಲವೇ ಕೆಲವು. ಅದೂ ದೇವನಹಳ್ಳಿ ಶಾಸನಗಳಂತೆ ಅಸ್ಪಷ್ಟವಾಗಿ.

---

5 ಕೆಂಪೇಗೌಡ ಪ್ರಶಸ್ತಿ (M.A.R. 1914)
6 Ec ix Bn 40. 830 A.D.
7 Ec ix Bn 40. 830 A.D.
8 Ec ix Dv 57. 1382 A.D.
9 Ec ixDb 30
10 Ec ix Bn. 82.
11 Ec ix Dv 57
12 Ec ix Dv 58

ಕನ್ನಡ ಶಾಸನಗಳ ಜೊತೆಗೆ ಇತರ ಭಾಷೆಗಳ ಶಾಸನಗಳನ್ನು ನಾವು ಪರಿಶೀಲಿಸುವುದು ಒಳ್ಳೆಯದು. ಅವುಗಳಲ್ಲಿ ತಮಿಳುಶಾಸನಗಳು ಮೊರಸುನಾಡಿನ ಮೇಲೆ ಸ್ವಲ್ಪ ಬೆಳಕು ಚೆಲ್ಲುತ್ತವೆ. ಮೊರಸುನಾಡಿನ ಪ್ರಾಚೀನ ಉಲ್ಲೇಖವಿರುವ ಮೊದಲ ಶಾಸನ ೧೧೧೦ರ ಕಾಲದ್ದು[13]. ಇದರಲ್ಲಿ ಮೊರಸುನಾಡೆಂದು ಕರೆದಿದೆ. An46a ಸ್ಪಷ್ಟವಾಗಿ ಮೊರಸುನಾಡನ್ನು ಉಲ್ಲೇಖಿಸುತ್ತದೆ. ಅನಂತರ ವೀರಬಲ್ಲಾಳನ ಕಾಲದ ಅನೇಕ ಶಾಸನಗಳಲ್ಲಿ[14] ಮೊರಸುನಾಡಿನ ಉಲ್ಲೇಖ ಬರುತ್ತವೆ. ೧೩೦೧ರ ಶಾಸನದಲ್ಲಿ ಮೊರಸುನಾಡಿಗೆ ಬದಲಾಗಿ 'ಮುರಸೂರು' ಎಂಬ ಉಲ್ಲೇಖವಿದೆ. ಈ ಮೊರಸುನಾಡು ಹಳೇಹಳ್ಳಿ ಶಾಸನದ ಪ್ರಕಾರ[15] ಮುಡಿಗೊಂಡ ಚೋಳಮಂಡಲಕ್ಕೆ ಸೇರಿದ್ದ ರಾಜೇಂದ್ರ ಚೋಳನ ವಳನಾಡಿಗೆ ಸೇರಿತ್ತು. ಈ ಕಾಲಕ್ಕೆ ಇದು ಹೊಯ್ಸಳರ ಅಧೀನದಲ್ಲಿದ್ದರೂ ಮೊದಲು ಚೋಳರ ವಶದಲ್ಲಿದ್ದುದರಿಂದ ಚೋಳಮಂಡಲ ವೆಂಬ ಹೆಸರನ್ನೇ ಹೊಂದಿದ್ದಂತೆ ಕಾಣುತ್ತದೆ.

ಎಂ. ವಿ. ಕೃಷ್ಣರಾಯರ ಪ್ರಕಾರ ಮೊರಸುನಾಡು ಬೇರೆಯ ಕಡೆಯದೆಂಬ ಸಂದೇಹ ಬರುತ್ತದೆ. ಅವರು ಕರ್ಣಾಟಕ ಇತಿಹಾಸ ದರ್ಶನದಲ್ಲಿ ಪುಟ ೪೬೦ರಲ್ಲಿ ಆವುತಿಯ ಪ್ರಭುಗಳ ಬಗ್ಗೆ ಬರೆಯುತ್ತ, "೧೪ನೆಯ ಶತಮಾನದಲ್ಲಿ ಮದ್ರಾಸು ಪ್ರಾಂತದ ಕಂಚಿಯ ಸಮೀಪದ ಯಣಮಂಜಿ ಪುತ್ತೂರು ಎಂಬ ಊರಿನಿಂದ ಏಳು ಜನ ರೈತರು ಕುಟುಂಬಸಮೇತರಾಗಿ ನಂದಿದುರ್ಗದ ರಾಮಸ್ವಾಮಿ ಬೆಟ್ಟದ ಬಳಿ ತಂಗಿದರು. ಅವರು ಮೂಲತಃ ತೆಲುಗರು. ಅವರಿದ್ದ ಯಣಮಂಜಿಗೆ ಮೊರಸುನಾಡೆಂದು ಹೆಸರು. ಮೊರಸುನಾಡಿನಿಂದ ಬಂದವರಾದ ಕಾರಣ ಮೈಸೂರು ಪ್ರಾಂತದ ಪೂರ್ವಪ್ರಾಂತಕ್ಕೆ ಬಂದ ಈ ನೆಲಸಿಗರಿಗೆ ಮೊರಸು ಒಕ್ಕಲಿಗರೆಂದು ಹೆಸರು", ಎನ್ನುತಾರೆ. ಇವರ ಪ್ರಕಾರ ಮೊರಸುನಾಡೆಂಬುದು ಕಂಚಿಯ ಬಳಿಯಿದ್ದ ಪ್ರದೇಶ. ಅದೂ ಅಲ್ಲದೆ ಯಣಮಂಜಿ ಪುತ್ತೂರಿಗೂ ಕಂಚಿಗೂ ಸಂಬಂಧವಿಲ್ಲ. ಯಣಮಂಜಿ ಎಂಬುದು ಇಳವಂಜಿ ಎಂಬ ಹೆಸರಿನ ರೂಪ. ಈ ಯಣವಂಜಿನಾಡು[16] ಮುಳಬಾಗಿಲು, ಬೌರಿಂಗ್‌ಪೇಟೆ, ಚಿತ್ತೂರು ಜಿಲ್ಲೆಯ ಸ್ವಲ್ಪಭಾಗಕ್ಕೆ ಸೇರಿದ್ದ ಪ್ರದೇಶ. ಈ ಯಣಮಂಜಿಯನ್ನು ಮೊರಸುನಾಡೆಂದು ಅಪ್ಪಿತಪ್ಪಿಯೂ ಕರೆದಿರುವ ಉಲ್ಲೇಖಗಳಿಲ್ಲ. ಜೊತೆಗೆ ಮೊರಸುನಾಡು ಎಂಬ ಪದ ಆವುತಿ ಪ್ರಭುಗಳಿಗಿಂತ ಮುಂಚೆಯೇ ಬೆಂಗಳೂರು ಜಿಲ್ಲೆಯಲ್ಲಿ ಕಂಡುಬರುತ್ತದೆ. ಇನ್ನು ಆವುತಿ ಪ್ರಭುಗಳ ಪೂರ್ವಿಕರು ತೆಲುಗರಲ್ಲ ಎಂಬುದಕ್ಕೆ ಅವರ ಹೆಸರುಗಳೇ ಹೇಳುತ್ತವೆ. ಹೀಗಾಗಿ ಅವರು ಯಣಮಂಜಿ ಪುತ್ತೂರಿನಿಂದ ಬಂದವರೆಂಬುದರ ಸತ್ಯಾಸತ್ಯಗಳನ್ನು ನೋಡಬೇಕು. ಈ ಬಗೆಯ ಆಧಾರ ಗಳನ್ನು ತೆಗೆದುಕೊಂಡರೆ ಕರ್ಣಾಟಕದ ಯಾವ ಜನಾಂಗವೂ ರಾಜ್ಯಸ್ಥಾಪನೆ ಮಾಡಲಿಲ್ಲ–ಚಾಳುಕ್ಯರು, ರಾಷ್ಟ್ರಕೂಟರು, ಕದಂಬರು ಇವರೆಲ್ಲ ಕರ್ಣಾಟಕದ ಹೊರಗಿನವರೆಂದು ವಾದಮಾಡಬಹುದು.

ಮೊರಸು ಎಂಬ ಶಬ್ದಕ್ಕೆ ಪದಶಃ ಅರ್ಥ ದೊರಕುವುದಿಲ್ಲ. ಮೊರಸು ಒಕ್ಕಲಿಗರ ಹೇಳಿಕೆಯ ಪ್ರಕಾರ ಗಂಗಡಿಕಾರರಿಗೂ ಇವರಿಗೂ ಇರುವ ಭೇದ ಅಲ್ಪ. ಇವರು ಗಂಗಡಿಕಾರರೇ ಆಗಿದ್ದು, ಕೂವಲು ಕೊಡದೆ ತಪ್ಪಿಸಿಕೊಂಡು ಬಂದವರಂತೆ. ಹೀಗೆ ತಪ್ಪಿಸಿಕೊಂಡು ಬಂದವರಿಗೆ ಮೊರಸು ಒಕ್ಕಲಿಗರೆಂದು ಹೆಸರಾಯಿತೆಂದು ಹೇಳುತ್ತಾರೆ. ಸ್ಯಾಂಡರ್‌ಸನ್‌ರ ಕೆನರೀಸ್ ಅಂಡ್ ಇಂಗ್ಲಿಷ್ ಡಿಕ್ಷನರಿಯಲ್ಲಿ ಮೊರಸು ಎಂಬ ಶಬ್ದಕ್ಕೆ to make roar, clamour, Complain ಇತ್ಯಾದಿ ಅರ್ಥಗಳನ್ನು ಕೊಡು ತ್ತಾರೆ. ಕಿಟ್ಟೆಲ್ ಕೋಶದಲ್ಲಿ ಮುರಸು ಎಂಬ ಶಬ್ದಕ್ಕೆ to become furious, to begin to rage. ಮುರು = turning ಇತ್ಯಾದಿ ಅರ್ಥಗಳನ್ನು ಕೊಡುತ್ತಾರೆ.

ಮೇಲಿನ ವಿಷಯಗಳನ್ನೆಲ್ಲ ಅವಲೋಕಿಸಿದಾಗ ನಾವು ಒಂದು ತೀರ್ಮಾನಕ್ಕೆ ಬರಬಹುದು. ಮೊರಸುನಾಡೆಂಬುದು ಸಾರ್ವತ್ರಿಕ ಹೆಸರಲ್ಲ. ಎಲ್ಲೋ ಆಗಾಗ್ಗೆ ಉಪಯೋಗಿಸಿರುವ ಹೆಸರಿನಂತೆ

---

13 Ec ix Bn 85c. 1110 A.D.

14 ಕೋಲಾರ ಜಿಲ್ಲೆ—ಮಾಲೂರು ತಾಲ್ಲೂಕು. ೭೧, ೧೦೦, CB ೨೦ (ಕ್ರಿ.ಶ. ೧೩೦೧)

15 "ಮುಡಿಕೊಂಡ ಚೋಳಮಂಡಳತ್ತು ರಾಜೇಂದ್ರ ಚೋಳ ವಳನಾಟ್ಟು ಮುರಸುನಾಡು......"

16 ಕೋಲಾರ ಜಿಲ್ಲೆ—Mb. 192, 18, Bg 37 a

ಕಾಣುತ್ತದೆ. ಗಂಗರ ಪ್ರಾಂತಗಳನ್ನು ನೋಡಿದಾಗ ಮೊರಸುನಾಡೆಂದು ಹೆಸರುಗೊಂಡಿದ್ದ ಪ್ರದೇಶ ಗಂಗ ೬೦೦೦. ಇದು ಗಂಗರ ನೇರವಶದಲ್ಲಿದ್ದಂತೆ ಕಾಣಬರುವುದಿಲ್ಲ. ಬಾಣರು, ಅವರ ಅನಂತರ ನೊಳಂಬರು ಇದರಾಳೂ ಇಲ್ಲದಾಗ ಗಂಗ ಯುವರಾಜರು ಇದನ್ನು ಆಳುತ್ತಿದ್ದುದನ್ನು ನಾವು ಕಾಣಬಹುದು. ಒಬ್ಬರಿಂದ ಇನ್ನೊಬ್ಬರ ಕೈಗೆ ಬರುವಾಗ ಯುದ್ಧ ಅನಿವಾರ್ಯವಾಗುತ್ತಿತ್ತು. ಹೀಗೆ ಪದೇಪದೇ ತಮ್ಮ ವಶ ತಪ್ಪಿ ಬೇರೆಯವರ ವಶವಾಗುತ್ತಿದ್ದ ಈ ಭಾಗವನ್ನು ಗಂಗರು ಮೊರಸು ನಾಡೆಂದು ಕರೆದಿರಬಹುದು. ಮುಂದೆ ಈ ಅನ್ವಹೆಸರು ಇದಕ್ಕೆ ಬಂದು, ಅಪರೂಪವಾಗಿ ಇದನ್ನು ಶಾಸನಗಳಲ್ಲಿ ಬಳಸುತ್ತಿದ್ದರು. ಈ ಭಾಗದಲ್ಲಿ ವಾಸಿಸುತ್ತಿದ್ದ ಜನರಿಗೆ ಮೊರಸು ಒಕ್ಕಲಿಗರೆಂಬ ಹೆಸರು ಬಂತು. ಗಂಗವಾಡಿ ಒಕ್ಕಲಿಗರಿಗೂ ಮೊರಸು ಒಕ್ಕಲಿಗರಿಗೂ ಅಲ್ಪಸ್ವಲ್ಪ ಭೇದಗಳು ತೋರಿ, ಇದೇ ಬೇರೆ ಜಾತಿಯೆನಿಸಿಕೊಂಡಿತು. ಮೊರಸುನಾಡಿನ ಮೇರೆಗಳೂ ಗಂಗ ೬೦೦೦ಕ್ಕಿಂತ ಹೆಚ್ಚಾಗಿಲ್ಲ. ಅದರ ಮೇರೆಗಳೇ ಇದರ ಮೇರೆಗಳು. ಗಂಗರ ಅನಂತರ ಬಂದ ಹೊಯ್ಸಳರು, ಚೋಳರು ಇದನ್ನು ಮೊರಸುನಾಡೆಂದೇ ಕರೆದಿರುತ್ತಾರೆ. ಮುಂದೆ ಗಂಗ ೬೦೦೦ ಹೋಗಿ ಅದರಲ್ಲಿ ಅನೇಕ ನಾಡುಗಳು ಕಾಣಿಸಿಕೊಂಡರೂ ಗಂಗ ೬೦೦೦ ಇದ್ದ ಭಾಗವನ್ನು ಮೊರಸುನಾಡೆಂದು ಕರೆದಿರುವುದನ್ನು ಕಾಣಬಹುದು. ಬೇಗೂರಿನ ಶಾಸನ, ಹೊಸಕೋಟೆಯ ಶಾಸನ ಇಲ್ಲೆಲ್ಲ ಕಾಣುವುದು ಇದೇ ಅರ್ಥದಲ್ಲಿ. ಈ ಶಾಸನಗಳ ಕಾಲಕ್ಕೆ ಇದು ಮೊರಸು ಒಕ್ಕಲಿಗರಿದ್ದ ಪ್ರದೇಶ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ತಮಿಳು ಶಾಸನಗಳ ಕಾಲಕ್ಕೆ ಈ ನಾಡು ಬೆಂಗಳೂರಿನ ದಕ್ಷಿಣಭಾಗಕ್ಕೆ ಮಾತ್ರ ಸೀಮಿತವಾದಂತೆ ಕಂಡುಬರುತ್ತದೆ. ಏಕೆಂದರೆ ತಮಿಳು ಶಾಸನಗಳಲ್ಲಿ ಮೊರಸುನಾಡಿನ ಸ್ಪಷ್ಟ ಉಲ್ಲೇಖವಿರುವ ಶಾಸನಗಳು ಬೆಂಗಳೂರಿನ ದಕ್ಷಿಣ ಭಾಗದವು. ಈ ಶಾಸನಗಳ ಕಾಲಕ್ಕೆ ಇತರ ಭಾಗಗಳಿಗೆ ಬೇರೆಬೇರೆ ಹೆಸರುಗಳು ಬಂದಿರುತ್ತವೆ.

ಇಂದಿಗೂ ಈ ಒಕ್ಕಲಿಗರಿರುವುದು ಬೆಂಗಳೂರು ಜಿಲ್ಲೆಯ ಹೊಸಕೋಟೆ, ಆನೇಕಲ್, ದೊಡ್ಡಬಳ್ಳಾಪುರ, ಕೋಲಾರ ಜಿಲ್ಲೆಯ ಮಾಲೂರು, ಬೆಂಗಳೂರು ಉತ್ತರದಕ್ಷಿಣ ತಾಲೂಕುಗಳು, ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರು, ಡೆಂಕಣಿಕೋಟೆ ತಾಲೂಕುಗಳಲ್ಲಿ ಮಾತ್ರ. ಗಂಗ ೬೦೦೦ದ ಎಲ್ಲೆ ಹೆಚ್ಚುಕಡಿಮೆ ಇಷ್ಟೇ ಎಂಬುದನ್ನು ಗಮನಿಸುವುದೊಳ್ಳೆಯದು. ಈಗಿನ ಆನೇಕಲ್ ತಾಲೂಕಿನ ಮೊರಸೂರು ಎಂಬುದು ಚೋಳರ ಕಾಲದ ಮೊರಸುನಾಡಿನ ರಾಜಧಾನಿಯಾಗಿದ್ದಿರಬಹುದು. ನಾಮಸಾದೃಶ್ಯವೊಂದನ್ನು ಬಿಟ್ಟರೆ ಬೇರೆ ಆಧಾರಗಳಿಲ್ಲ. ಅದರೆ ಬರಿಯ ಊಹೆಯೆಂದು ತಳ್ಳಿಹಾಕುವುದೂ ಸರಿಯಲ್ಲ. ಯುಲಪಕ್ಕನಾಡಿಗೆ ಯುಲಹಂಕ. ಹೀಗೆ ಆಯಾ ನಾಡುಗಳಿಗೆ ಆಯಾ ಹೆಸರಿನ ಊರುಗಳಿರುವಾಗ ಮೊರಸುನಾಡಿಗೆ ಮೊರಸೂರು ರಾಜಧಾನಿಯಾಗಿದ್ದಿರಬಹುದು.

ಒಟ್ಟಾರೆ ಹೇಳುವುದಾದರೆ ಮೊರಸುನಾಡೆಂಬುದು ಎಷ್ಟೇ ವಿಸ್ತಾರವಾಗಿದ್ದರೂ ಕೊನೆಗೆ ಜಾತಿವಾಚಕವಾಗಿ ಕಡೆಕಡೆಗೆ ಬೆಂಗಳೂರಿನ ದಕ್ಷಿಣದ ಭಾಗಕ್ಕೆ ಮಾತ್ರ ಈ ಹೆಸರು ಅನ್ವಯಿಸುತ್ತಿದ್ದಂತೆ ಕಂಡುಬರುತ್ತದೆ.

ಮಾವಿನಕುಳಿ ಶ್ರೀನಿವಾಸ

ಅಂಗವಿಕಲತೆ

ಬಡವಬಲ್ಲಿದರೆಂಬ ವ್ಯತ್ಯಾಸವಿಲ್ಲದೆ ದೇಹದ ಕೆಲವು ಅಂಗಗಳನ್ನು ಕಳೆದುಕೊಂಡವರೆಲ್ಲ ಅಂಗವಿಕಲರು. ಸಮಾಜವಲ್ಲಿ ಅತ್ಯುತ್ತಮವಾಗಿ ಬದುಕಬಲ್ಲ ಮಾನವನ ಶರೀರದ ಯಾವುದಾದರೂ ಒಂದು ಅಂಗ ನಿಷ್ಕ್ರಿಯವಾದಾಗ ಆ ಅಂಗದಿಂದ ಯಾವ ಕೆಲಸವೂ ಸಾಧ್ಯವಾಗದೆ ಹೋಗಿ ಅದರಿಂದ ವಂಚಿತನಾಗುವುದೇ ಅಂಗವಿಕಲತೆ.

ಕಾರಣಗಳು

ಅನೇಕ ಕಾರಣಗಳಿಂದ ಅಂಗವಿಕಲತೆ ಬರುತ್ತದೆ. ಅದು ವಂಶಪಾರಂಪರ್ಯವಾಗಿ, ತಂದೆ, ತಾಯಿ, ಅಜ್ಜ ಇಂಥವರಿಂದ ಬಂದಿರಬಹುದು. ಆಕಸ್ಮಿಕಗಳಿಂದ, ಕಾಯಿಲೆಗಳಿಂದ ಅಥವಾ ವಯಸ್ಸಾದ ಮೇಲೆ ಅಂಗಗಳು ವಿಕಾರ ಹೊಂದುವುದರಿಂದ ಅಂಗವಿಕಲತೆಯಾಗಬಹುದು. ಮೂಳೆಕೀಲಿನ ವ್ಯಾಧಿ ಬಂದರೆ ಕಾಲು ನಿರುಪಯೋಗಿ ಆಗಬಹುದು. ಪೋಲಿಯೋ ವ್ಯಾಧಿಯಿಂದ ಅನೇಕ ಚಿಕ್ಕ ಮಕ್ಕಳು ಕಾಲಿನ ಶಕ್ತಿಯನ್ನು ಕಳೆದುಕೊಂಡು ಅಂಗವಿಕಲರಾಗುತ್ತಾರೆ. ಯುದ್ಧದಲ್ಲಿ ಬದುಕಿ ಉಳಿದ ಎಷ್ಟೋ ಸೈನಿಕರು ಅಂಗವಿಕಲರಾಗುತ್ತಾರೆ. ಅಂಗವಿಕಲತೆಗೆ ಮಾನಸಿಕ ನೋವೂ ಕಾರಣವಾಗುವುದೂ ಉಂಟು. ಕೆಲವು ಘಟನೆಗಳನ್ನು ನೋಡಲು ಒಬ್ಬ ವ್ಯಕ್ತಿ ಇಷ್ಟಪಡುವುದಿಲ್ಲ. ಆತನ ಮನಸ್ಸಿನ ಪ್ರಚೋದನೆಯಿಂದಾಗಿ ಕಣ್ಣುಗಳು ನೋಡುವ ಶಕ್ತಿಯನ್ನು ಕಳೆದುಕೊಳ್ಳಬಹುದು.

ಕುರುಡನ ಪಾಲಿಗೆ ಹಗಲೂ ಇರುಳೂ ಒಂದೇ ಆಗಿದೆ. ಕುರುಡು ಹುಟ್ಟಿನಿಂದಲೇ ಬರಬಹುದು ಅಥವಾ ಅನಂತರ ಆಗಬಹುದು. ಅಪಘಾತಗಳು ಅಂಧತೆಗೆ ಒಂದು ಕಾರಣವಾದರೆ ಕಣ್ಣಿಗೆ ಪರೆ ಬರುವುದು ಮತ್ತೊಂದು ಕಾರಣ. ಇದು ಆನುವಂಶಿಕವಾಗಿರಬಹುದು; ಅಥವಾ ಮುಪ್ಪಿನಿಂದಲೂ ಬರಬಹುದು. ಈಗಿರುವ ಕುರುಡರಲ್ಲಿ ಶೇಕಡ ೧೦ರಷ್ಟು ಜನರಿಗೆ ಅಂಧತೆ ಸಿಡುಬಿನಿಂದಾಗಿ ಉಂಟಾದದ್ದು. ಹಲವು ಮೇಹರೋಗಗಳು, ಕ್ಷಯ ಮತ್ತು ವಿಶೇಷ ಪರಿಜ್ಞಾನವಿಲ್ಲದೆ ಉಪಯೋಗಿಸುವ ಮದ್ದುಗಳೂ ಅಂಧತೆಗೆ ಕಾರಣವಾಗಿವೆ. ಹಳ್ಳಿಗಳಲ್ಲಿ ಸರಿಯಾದ ವೈದ್ಯಕೀಯ ಸೌಕರ್ಯವಿಲ್ಲದಿರುವುದರಿಂದ ಮತ್ತು A, B ಮತ್ತು B_2 ವಿಟಮಿನ್‌ಗಳ ಕೊರತೆಯಿಂದ ಭಾರತದಲ್ಲಿ ಕುರುಡರ ಸಂಖ್ಯೆ ಹೆಚ್ಚಾಗಿದೆ.

ಕಿವಿಯ ರೋಗಗಳು ಅನೇಕವಾಗಿದ್ದು ಬಾಯಿ ಮತ್ತು ಗಂಟಲಿನ ರೋಗಗಳು ಇದಕ್ಕೆ ಸುಲಭವಾಗಿ ತಗಲುತ್ತವೆ. ಹೊರಕಿವಿಯಲ್ಲಿ ಸೇರುವ ಕಸವನ್ನು ತೆಗೆಯುವಾಗ ಅಜಾಗರೂಕತೆಯಿಂದಾಗಿ ಅನೇಕರಿಗೆ ಕಿವುಡಾಗುತ್ತದೆ. ಒಳಕಿವಿಯ ಸೂಕ್ಷ್ಮ ರಕ್ತನಾಳಗಳು ಒಡೆದು ರಕ್ತ ಹರಿದರೆ, ಕಿವಿಗೆ ಪೋಷಕಾಂಶ ಸೇರುವುದಕ್ಕೆ ತಡೆಯಾಗುತ್ತದೆ. ಸರಿಯಾದ ಚಿಕಿತ್ಸೆ ನಡೆಯದಿದ್ದರೆ ಸಂಪೂರ್ಣ ಕಿವುಡರಾಗುತ್ತಾರೆ. ತಲೆಗೆ ಮತ್ತು ಕಪಾಲಕ್ಕೆ ಪೆಟ್ಟಾದರೆ ಕಿವಿಗೂ ಏಟು ಬೀಳುವುದರಿಂದ ಕಿವುಡತನಕ್ಕೆ ಇದೂ ಒಂದು ಕಾರಣ. ಶಾಶ್ವತ ಕಿವುಡು ಒಂದು ಸಾಮಾಜಿಕ ಸಮಸ್ಯೆ. ಇದು ಹುಟ್ಟಿನಿಂದ ಇರಬಹುದು; ಅಥವಾ ಕಿವಿಯಲ್ಲಿ ಯಾವುದಾದರೂ ವ್ಯತ್ಯಾಸ ಇಲ್ಲವೇ ಧಕ್ಕೆಯಿಂದ ಆಗಬಹುದು.

ಕುಷ್ಠರೋಗ ಭೀಕರವಾದದ್ದು. ಗುಣಮುಖನಾದ ವ್ಯಕ್ತಿಯ ಮೇಲೆ ಅದು ಅಳಿಯಲಾರದ ಗುರುತನ್ನು ಬಿಟ್ಟುಹೋಗುತ್ತದೆ. ಅಂಥವನ ಮೂಗು ಕರಗಿಹೋಗಿ ಎರಡು ದೊಡ್ಡ ರಂಧ್ರಗಳು ಮಾತ್ರ ಉಳಿಯುವುದು. ಒಂದು ನಿರ್ದಿಷ್ಟ ಬಗೆಯ ನರಕ್ಕೆ ಮಾತ್ರ ತೊಂದರೆ ಉಂಟಾದಾಗ ಅದಕ್ಕೆ ಸಂಬಂಧಪಟ್ಟ ಅಂಗ ನಿಷ್ಕ್ರಿಯವಾಗುತ್ತದೆ. ಈ ಬಗೆಯ ಪಾರ್ಶ್ವವಾಯುವಿನಲ್ಲಿ ನರ ಬಿದ್ದುಹೋಗಬಹುದು. ಎರಡು ಕೈ ಅಥವಾ ಎರಡು ಕಾಲುಗಳು ನಿಷ್ಪ್ರಯೋಜಕವಾಗಬಹುದು, ಮಾತನಾಡಿಸುವ ಶಕ್ತಿ ಪೂರ್ತಿ ನಷ್ಟವಾಗಬಹುದು. ಪೋಲಿಯೋ ರೋಗಿಗಳಲ್ಲಿ ಶೇಕಡ ೮೦ರಷ್ಟು ಜನರಿಗೆ ಬರುವುದು ಸೌಮ್ಯ ಸ್ವರೂಪದ ಕಾಯಿಲೆ. ಅವರು ಬೇಗ ಗುಣ ಹೊಂದುತ್ತಾರೆ. ಕೆಲವು ಜನರಿಗೆ ಮಾತ್ರ ಪಾರ್ಶ್ವವಾಯು ತಗುಲಿ ದೇಹದ ಯಾವುದಾದರೊಂದು ಅಂಗದಲ್ಲಿ ನ್ಯೂನತೆ ಉಳಿಯುತ್ತದೆ.

ಸಮಸ್ಯೆಗಳು

ಪ್ರಪಂಚದಲ್ಲಿರುವ ಪ್ರತಿ ಮೂರು ಜನ ಕುರುಡರಲ್ಲಿ ಒಬ್ಬ ಭಾರತೀಯ. ಇಂದು ಜಗತ್ತಿನಲ್ಲಿ, ಸುಮಾರು ಒಂದೂವರೆ ಕೋಟಿ ಕುರುಡರಿದ್ದು, ಅವರಲ್ಲಿ ಸುಮಾರು ೫೦ ಲಕ್ಷ ಮಂದಿ ಭಾರತೀಯರೆಂದು ಅಂದಾಜು ಮಾಡಲಾಗಿದೆ. ಇವರಲ್ಲಿ ೧೭ ಲಕ್ಷ ಮಂದಿ ಅಂದರೆ ಶೇಕಡ ೩೦ರಷ್ಟು ಮಂದಿ ಶಾಲೆಗೆ ಹೋಗುವ ವಯಸ್ಸಿನ ಹುಡುಗರಾಗಿದ್ದಾರೆ. ಈ ೧೭ ಲಕ್ಷ ಮಕ್ಕಳಲ್ಲಿ ೫,೦೦೦ ಮಂದಿ ಮಾತ್ರ ವಿದ್ಯಾಭ್ಯಾಸಕ್ಕೆ ಯೋಗ್ಯರಾಗಿದ್ದಾರೆ. ಪ್ರತಿ ವರ್ಷವೂ ೧೨,೦೦೦ಕ್ಕಿಂತ ಹೆಚ್ಚು ಮಕ್ಕಳು ಅಂಧತೆಗೆ ಬಲಿಯಾಗುತ್ತಿದ್ದಾರೆ. ಮುಂದಿನ ೨೦ ವರ್ಷಗಳಲ್ಲಿ ಕುರುಡರ ಸಂಖ್ಯೆ ಭಾರತದಲ್ಲಿ ಒಂದು ಕೋಟಿಯಷ್ಟು ಮತ್ತು ಪ್ರಪಂಚದಲ್ಲಿ ಒಟ್ಟು ಮೂರು ಕೋಟಿಯಷ್ಟು ಆಗುವುದೆಂದು ಅಂದಾಜು ಮಾಡಲಾಗಿದೆ. ಕುರುಡರ ನಿಜವಾದ ಸಮಸ್ಯೆಗಳನ್ನರಿತು ಅವುಗಳನ್ನು ಸುಲಭವಾಗಿ ಇತ್ಯರ್ಥಗೊಳಿಸಿ ಅವರಿಗೆ ಆಧುನಿಕ ಜೀವನದ ಎಲ್ಲ ಸೌಲಭ್ಯಗಳನ್ನೊದಗಿಸುವ ಕಾರ್ಯದಲ್ಲಿ ನಮ್ಮ ದೇಶ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ನಮ್ಮ ಬಾಲಕರು ಮತ್ತು ಬಾಲಕಿಯರು ಹಾಡು, ಕುಣಿತ, ಆಟಗಳು ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೂ, ಅವರ ಪ್ರತಿಭೆಯನ್ನು ಗುರುತಿಸಿ ಮಾನ್ಯ ಮಾಡುವ ಶಕ್ತಿಯನ್ನು ಮಾತ್ರ ನಮ್ಮ ಸಮಾಜ ಇನ್ನೂ ಪಡೆದುಕೊಂಡಿಲ್ಲ. ರಸ್ತೆ ದಾಟುವುದು ಕುರುಡರ ಸಮಸ್ಯೆಗಳಲ್ಲೊಂದು. ಕೆಲವೇ ಜನ ಸಹಾಯಕರಾಗುತ್ತಾರೆ. ಬಹಳ ಮಂದಿ ಕುರುಡನೆಂದು ಅವನನ್ನು ಕೀಳರಿಮೆಯಿಂದ ತಾತ್ಸಾರ ಮಾಡುತ್ತಾರೆ. ಅವನ ಕೈಹಿಡಿದು ಅವನನ್ನು ಸರಿಯಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಬಿಡಬೇಕೆಂಬ ಮನೋಭಾವ ಇವರಿಗಿಲ್ಲ. ಅಂಗವಿಕಲತೆಯಿಲ್ಲದ ಮನುಷ್ಯನಲ್ಲಿ ದಿನವಹಿ ಮಾಡುವ ಕೆಲಸಗಳು, ಉದಾಹರಣೆಗೆ ಓಡಾಡುವುದು, ಬಟ್ಟೆ ತೊಳೆಯುವುದು, ಬಟ್ಟೆ ಹಾಕಿಕೊಳ್ಳುವುದು, ಸ್ನಾನಮಾಡುವುದು ಮುಂತಾದವುಗಳು ತೊಂದರೆಯಿಲ್ಲದೆ ಸಹಜವಾಗಿ ನಿರ್ವಹಿಸಲ್ಪಡುತ್ತವೆ. ಆದರೆ ಅಂಗವಿಕಲರಿಗೆ, ಅದರಲ್ಲೂ ಕುರುಡರಿಗೆ ಈ ಸಹಜ ಕಾರ್ಯಗಳನ್ನು ನಿರ್ವಹಿಸಲು ಹೆಚ್ಚಿನ ವೇಳೆ, ಹೆಚ್ಚಿನ ದೈಹಿಕ ಮತ್ತು ಮಾನಸಿಕ ಶ್ರಮ ಬೇಕಾಗುತ್ತದೆ. ಕುರುಡರಿಗೆ ಓಡಾಡುವಾಗ ಮಾನಸಿಕ ಅಭದ್ರತೆ ಕಂಡುಬರುತ್ತದೆ. ಕಾರಣ, ಮುಂದೆ ಏನಿದೆಯೋ ಎಂಬ ಮಾನಸಿಕ ತಾಕಲಾಟಗಳಿರುತ್ತವೆ. ಉದಾಹರಣೆಗೆ ಈಗಿನ ದಿನಗಳ ಹೆಚ್ಚಿನ ವಾಹನಗಳ ಓಡಾಟ, ಹೊಂಡ, ಕುಳಿಗಳು, ಚರಂಡಿಗಳಿಂದಾಗುವ ತೊಂದರೆ, ಪ್ರಾಣಿಗಳು ಮತ್ತು ವಿಷಜಂತುಗಳನ್ನು ಕಾಣದೆ ಅವುಗಳಿಂದಾಗುವ ತೊಂದರೆ ಮುಂತಾದುವು. ಯಾವಾಗಲೂ ಓಡಾಡುವಂತಹ ಕೆಲವೇ ಸ್ಥಳಗಳಾದಲ್ಲಿ ಅಭ್ಯಾಸಬಲದಿಂದ ಅಷ್ಟು ತೊಂದರೆಯಾಗುವುದಿಲ್ಲ. ಆದರೆ ಕುರುಡರನ್ನು ಹೊಸ ಸ್ಥಳಗಳಲ್ಲಿ ಬಿಟ್ಟಾಗ ಅವರ ತೊಂದರೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಕೆಲವು ಕುರುಡರು ಇತ್ತೀಚೆಗೆ ಕಣ್ಣರುವ, ತರಬೇತು ಕೊಟ್ಟಿರುವ ನಾಯಿಗಳನ್ನು ತಮ್ಮ ಓಡಾಟದ ಅನುಕೂಲಕ್ಕೆ ಉಪಯೋಗಿಸುವುದು ಕಂಡುಬಂದರೂ ಹೆಚ್ಚಿನ ಕುರುಡರು ಅವನ್ನು ಇಚ್ಛಿಸುವುದಿಲ್ಲ. ಕಾರಣ, ಮನುಷ್ಯ ಮತ್ತು ನಾಯಿಯಲ್ಲಿ ಮಾನಸಿಕ ಹೊಂದಾಣಿಕೆ ಇಲ್ಲದಿರುವುದು ಮತ್ತು ನಾಯಿಗಳು ಬಹಳ ಜನರಿರುವ ಗುಂಪಿನಲ್ಲಿ ಮತ್ತು ವಾಹನಗಳ ಹೆಚ್ಚಿನ ಓಡಾಟ ಮತ್ತು ಶಬ್ದವಿರುವಲ್ಲಿ ಕುರುಡರಿಗೆ ಸರಿಯಾಗಿ ದಾರಿ ತೋರಿಸದೆ ಇರುವುದು. ಸಮಾಜದ ಕೀಳುವರ್ಗಗಳವರೆನಿಸಿ

ದವರು ವಾಸಮಾಡುತ್ತಿದ್ದ ಹೊಲಸು ಬೀದಿಗಳು, ಸೂರ್ಯರಶ್ಮಿಯನ್ನೇ ಕಾಣಲಾಗದ ವಠಾರಗಳು, ಅಲ್ಲಿ ಅರೆಬೆತ್ತಲೆಯಾಗಿ ಅರೆಹೊಟ್ಟೆ ತಿಂದು ಬೆಳೆಯುವ ಮಕ್ಕಳು, ಸಂಕಟದ ಸರಪಳಿಯಂತಿದ್ದ ಬಾಳಿಗಾಗಿ ನಿರರ್ಥಕ ಹೋರಾಟಕ್ಕೆ ಸಿಲುಕಿದ ಆ ಜೀವಿಗಳನ್ನು ನೋಡಿ ರೊಚ್ಚಿಗೆದ್ದವರು ನಮ್ಮ ಸಮಾಜದಲ್ಲಿ ಕಡಿಮೆ. ಆದಕಾರಣ, ಹೊಲಸು ಮತ್ತು ಬಡತನ ಇವು ಸಾಧಾರಣವಾಗಿ ಅಂಧತ್ವದಲ್ಲಿ ಮುಕ್ತಾಯವಾಗುವ ಸಮಾಜದ ಕಶ್ಮಲಗಳು. ಈ ಕಶ್ಮಲಗಳನ್ನು ತೆಗೆದುಹಾಕುವವರು ಇಲ್ಲದೆ ನಮ್ಮ ಸಮಾಜ ಇನ್ನಷ್ಟು ದುರ್ಬಲವಾಗಿದೆ. ಹೃದಯಹೀನ, ಬರಡು, ಕುರುಡು ಜನ ಪ್ರಪಂಚದಲ್ಲಿ ತುಂಬಿದ್ದಾರೆ. ಎಂದೇ ನಿಜವಾದ ಕುರುಡರಿಗೆ ಆಸರೆಯಿಲ್ಲದಂತಾಗಿದೆ, ಎಂಬುದಾಗಿ ಮಾರ್ಕ್ ಟ್ವೇನ್ ಅಭಿಪ್ರಾಯ ಪಡುತ್ತಾನೆ. ಗುಹ್ಯರೋಗಕ್ಕೆ ಸಿಲುಕಿದವರಿಗೆ ಹುಟ್ಟುವ ಮಕ್ಕಳು ಕುರುಡರಾಗದಂತೆ ತಡೆಯುವುದೇ ಒಂದು ಸಮಸ್ಯೆಯಾಗಿದೆ. ಕುರುಡು ಕಿವುಡು ಎರಡಕ್ಕೂ ಬಲಿಯಾದ ಏಕಾಂಗಿಗಳು ಕತ್ತಲೆಯಲ್ಲಿ ದೃಷ್ಟಿಸಿದಾಗ ಕತ್ತಲೆಯ ಕಪ್ಪು ಮಾತ್ರ ಹಿಂದಿರುಗಿ ನಿಟ್ಟಿಸುತ್ತದೆ. ಅವರೆಲ್ಲರಿಗೂ ಸಹಾಯ ಮಾಡಲು, ಎಲ್ಲ ಕಾಲದಲ್ಲಿಯೂ ಒಬ್ಬ ವ್ಯಕ್ತಿಗೆ ಅಥವಾ ಒಂದೇ ಒಂದು ಸಂಸ್ಥೆಗೆ ಸಾಧ್ಯವಾಗುವುದಿಲ್ಲ. ಇದು ನಮ್ಮ ಸಮಾಜದಲ್ಲಿ ಒಂದು ದೊಡ್ಡ ಕೊರತೆ. ಕುರುಡರಾಗಿದ್ದ ಆರ್ಥಿಕತಜ್ಞರ, ಇತಿಹಾಸಕಾರರ, ರಾಜಕಾರಣಿಗಳ, ಗಣಿತಶಾಸ್ತ್ರಜ್ಞರ, ಪತ್ರಿಕಾಕರ್ತರ, ಉಪಾಧ್ಯಾಯರ ಉದಾಹರಣೆಗಳೇನೋ ಇವೆ, ನಿಜ. ಆದರೆ ಇಂಥ ಕಷ್ಟಸಾಧ್ಯವಾದ ವಿದ್ಯೆಯನ್ನು ಪಡೆಯಲು ಎದೆಗಾರಿಕೆಯೂ ಪ್ರಭಾವಯುತ ವ್ಯಕ್ತಿತ್ವವೂ ಆವಶ್ಯಕವಾಗಿವೆ. ಅವರು ಅನುಸರಿಸಲು ಅನೇಕ ಮಾರ್ಗಗಳಿದ್ದರೂ ಅವನ್ನೆಲ್ಲ ಜೀವಂತಗೊಳಿಸಿ ಅವರ ಜೀವನದಲ್ಲಿ ಮಾನವೀಯತೆಯನ್ನು ತುಂಬುವುದಾಗಲಿ, ಅವರ ಅಂಗವಿಕಲತೆಯ ಅಂಧಕಾರದಲ್ಲಿ ರಚನಾತ್ಮಕ ಬೆಳಕನ್ನು ಬೆಳಗಿಸುವುದಾಗಲಿ ಇಂದು ಸುಲಭವಾದ ಕಾರ್ಯವಾಗಿ ಉಳಿದಿಲ್ಲ. ನಮ್ಮ ದೇಶದ ಪರಿಸ್ಥಿತಿ ಇವರಿಗೆ ವಿರುದ್ಧವಾಗಿರುವುದು ಒಂದು ಕಾರಣ.

ಯಾವ ಆಸೆ ಆಕಾಂಕ್ಷೆಗಳೂ ಇಲ್ಲದ, ಯಾವ ಸುಖಸಂತೋಷಗಳೂ ಇಲ್ಲದ, ಯಾವುದರಲ್ಲೂ ನಂಬಿಕೆಗೆ ಅವಕಾಶವಿಲ್ಲದ ಶೂನ್ಯ ಜಗತ್ತಿನಲ್ಲಿ ಕಿವುಡ ಮೂಕರು ಸುತ್ತಲಿನ ಸ್ಪರ್ಶ ಸಂವೇದನೆಗಳು, ಸ್ಪಂದನಗಳು ಮತ್ತು ಗಂಧಗಳ ಪರಿಚಯ ಮಾತ್ರದಿಂದ ಬಾಳಬೇಕಾಗಿ ಬಂದದ್ದು ನಮ್ಮ ದುರ್ಬಲ ಸಮಾಜದಲ್ಲಿ ಒಂದು ದುರದೃಷ್ಟಕರ ಸಂಗತಿಯಾಗಿದೆ. ಪ್ರಪಂಚದಲ್ಲಿ ತಡವರಿಸುತ್ತ ನಡೆಯುವ ಪ್ರೇತಗಳಂತಾಗಿರುವ ಕಿವುಡರ ಜೀವನದ ನೀರವತೆಯನ್ನು ಸಂತಸದ ಒಂದು ನುಡಿಯೇ ಆಗಲಿ, ಹಕ್ಕಿಯ ಒಂದು ಹಾಡೇ ಆಗಲಿ, ಗಾಳಿಯ ಒಂದು ಬಿಸುಸುಯ್ಯುವಿಕೆಯೇ ಆಗಲಿ ಒಡೆಯುವುದು ಸಾಧ್ಯವಿಲ್ಲ. ಹೀಗಾಗಿ ಅವರು ಇತರರಿಂದ ಬೇರೆಯಾಗಬೇಕಾಗುತ್ತದೆ. ತನ್ನ ಅಂಗವಿಕಲತೆಯಿಂದ ತಾನು ಸಮಾಜದಲ್ಲಿ ಇತರರೊಂದಿಗೆ ಬಾಳಲು ಎಲ್ಲಿ ಅನರ್ಹನಾಗಿಬಿಡುತ್ತೇನೋ ಎಂಬ ಹೆದರಿಕೆಯೇ ಆ ವ್ಯಕ್ತಿಯನ್ನು ಇತರರ ಮುಂದೆ ಇನ್ನಷ್ಟು ಕುಗ್ಗುವಂತೆ ಮಾಡಿದೆ. ತಮಗೆ ತಕ್ಕ ಕೆಲಸಗಳನ್ನು ಕಂಡುಕೊಂಡರೆ ಅಂಗವಿಕಲರು ತಮ್ಮನ್ನು ಹಿಂಸಿಸುವ ಭಾವನೆಗಳಿಂದ, ನುಚ್ಚುನೂರಾದ ಆಶಯಗಳಿಂದ ಪಾರಾಗಬಲ್ಲರು. ಆದರೆ ಪ್ರತಿಯೊಬ್ಬರಿಗೂ ಅವರವರಿಗೆ ತಕ್ಕ ಕೆಲಸವನ್ನು ಹುಡುಕುವುದು, ಈಗಾಗಲೇ ನಿರುದ್ಯೋಗದಿಂದ ಸಾಕಷ್ಟು ನರಳುತ್ತಿರುವ ನಮ್ಮ ಸಮಾಜದಲ್ಲಿ, ಇನ್ನೊಂದು ಜಟಿಲ ಸಮಸ್ಯೆ. ತಮ್ಮ ಮಗುವಿಗೆ ಕಿವಿ ಕಿವುಡಾಗಿದೆ ಎಂದು ತಿಳಿದ ಮೇಲೆ ಆ ಮಗುವಿನ ಮೇಲೆ ತಂದೆತಾಯಿಗಳ ಪ್ರೀತಿ ವಾತ್ಸಲ್ಯಗಳು ಕಡಿಮೆಯಾಗಬಹುದು. ಕಿವಿ ಸರಿಯಾಗಿ ಕೇಳಿಸದ ಮಗುವಿಗೆ ಹೆಚ್ಚುಹೆಚ್ಚು ಸಹಾಯಮಾಡುವಲ್ಲಿ ತಂದೆತಾಯಿಗಳು ಉದಾಸೀನರಾಗಬಹುದು. ಹೀಗಾಗಿ ಹುಟ್ಟುಕಿವುಡರಾದ ಮಕ್ಕಳು ಮೂಕರಾಗಿ ಉಳಿಯುವ ಸಂಭವವೇ ಹೆಚ್ಚು. ಈ ಸಂದರ್ಭದಲ್ಲಿ ಮೊದಲ ಗುರುಗಳಾಗಿ ತಂದೆತಾಯಿಗಳು ತಮ್ಮ ಮಕ್ಕಳ ಬಗ್ಗೆ ಯಾವುದೇ ಕಾರಣದಿಂದ ಸಾಕಷ್ಟು ಆಸಕ್ತಿ ವಹಿಸದೆ ಕರ್ತವ್ಯವಿಮುಖರಾಗುವುದರಿಂದ ಆ ಮಕ್ಕಳ ಮಾನಸಿಕ ಬೆಳವಣಿಗೆಗೆ ದೊಡ್ಡ ಆಘಾತವುಂಟಾಗಿ ಅವರ ಭವಿಷ್ಯ ಕತ್ತಲೆಯಲ್ಲಿ ಮುಳುಗುತ್ತದೆ. ಕಿವುಡರು ಮಾತನ್ನು ಕೇಳಲಾರರು. ಆದರೆ ತುಟಿಗಳ ಚಲನೆಯಿಂದ ಮಾತನ್ನು ಕಾಣಬಲ್ಲರು. ಕಿವಿ ಚೆನ್ನಾಗಿ ಕೇಳಿಸದ ವ್ಯಕ್ತಿಗೆ ತಾನು ಆಡುವ ಮಾತೂ ಅಷ್ಟೇ ಚೆನ್ನಾಗಿ ಕೇಳಿಸುವುದಿಲ್ಲ ಎಂಬುದು ಗಮನಿಸಬೇಕಾದ ಅಂಶ. ಅದರಿಂದಾಗಿ ತನ್ನ ಧ್ವನಿ ಮಧುರವಾಗಿದೆ ಅಥವಾ ಒರಟಾಗಿದೆಯೆಂದಾಗಲಿ, ತುಟಿಗಳ ಚಲನೆಯಿಂದ ತಾನು ಕಲಿತ ಭಾಷೆಯಲ್ಲಿ ಸರಿಯಾಗಿ ಮಾತನಾಡುತ್ತಿದ್ದೇನೋ ಇಲ್ಲವೋ

ಎಂಬುದಾಗಲಿ ಗೊತ್ತಾಗುವುದಿಲ್ಲ. ಅವನಲ್ಲಿರುವ ಈ ಕೊರತೆಯನ್ನು ಸಮಾಜದ ಇತರ ವ್ಯಕ್ತಿಗಳು ಹೋಗಲಾಡಿಸಲು ಪ್ರಯತ್ನಿಸುವ ವರೆಗೂ ಈ ನ್ಯೂನತೆ ಅವನಲ್ಲಿ ಹಾಗೆಯೇ ಉಳಿದುಕೊಳ್ಳುತ್ತದೆ. ಇದು ಅವನ ತಪ್ಪಲ್ಲ. ಇದೇ ಕಾರಣಕ್ಕಾಗಿ, ಎಲ್ಲಿ ಶಿಕ್ಷಣ ಕ್ಷೇತ್ರದ ನಿಜವಾದ ಮೌಲ್ಯಗಳನ್ನು ತಿಳಿಯಲಾರದ ವ್ಯಕ್ತಿಗಳು ಹೆಚ್ಚಾಗಿದ್ದಾರೋ, ಅಲ್ಲಿ ಶಾಲೆಕಾಲೇಜುಗಳ ವಿವಿಧ ಹಂತಗಳಲ್ಲಿ ಕುರುಡರು ಮತ್ತು ಕಿವುಡರನ್ನು 'ಅಸ್ಪೃಶ್ಯ'ರಂತೆ ಕಾಣಲಾಗುತ್ತಿದೆ. ಇದರಿಂದ ನಮ್ಮ ಸಮಾಜ ಇನ್ನೂ ಪ್ರಜ್ಞಾಹೀನ ಸ್ಥಿತಿಯಿಂದ ಎಚ್ಚರಗೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಅಂಗವಿಕಲರು ಸಮಾಜದಲ್ಲಿ ತಮ್ಮ ಅಂತಸ್ತನ್ನು ಕಳೆದುಕೊಳ್ಳುವ ಪರಿಸ್ಥಿತಿಯಿಂದಾಗಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದು ಹೆಚ್ಚಾಗಿ ಅವರ ವಿಫಲತೆಗೆ ಮತ್ತು ಕೆಲವು ಸಲ ಆಕ್ರಮಣ ಪ್ರವೃತ್ತಿಗೆ ದಾರಿ ಮಾಡುತ್ತದೆ. ಇದರಿಂದಾಗಿ ಅಂಗವಿಕಲರು ಕೀಳುತನದ ಭಾವನೆಗಳನ್ನು ಬೆಳೆಸಿಕೊಳ್ಳಬಹುದು. ಮತ್ತು ಯಾರು ಅಂಗವಿಕಲರಲ್ಲವೋ ಅಂಥವರ ಬಳಗದಿಂದ ದೂರ ಸರಿಯಲು ಪ್ರಯತ್ನಿಸಬಹುದು. ಒಬ್ಬ ಅಂಗವಿಕಲ ವ್ಯಕ್ತಿ ಯಾವುದೇ ಸಾಮಾಜಿಕ ಅಂತಸ್ತುಗಳನ್ನುಳ್ಳ ಗುಂಪಿನಲ್ಲಿ ಪ್ರವೇಶ ಪಡೆಯಲು ವಿಫಲನಾದರೆ, ಅಂಥ ದುರ್ಭಾಗ್ಯನ ಸಲುವಾಗಿ ತಂದೆತಾಯಿಗಳು ಮತ್ತು ಸ್ನೇಹಿತರು ದುಃಖಿತರಾಗಬಹುದು. ಅಂದರೆ ತಮ್ಮ ಘನತೆ ಗೌರವಗಳು ಇದರಿಂದ ಮಣ್ಣುಪಾಲಾದುವು ಎಂದು ಭಾವಿಸಬಹುದು. ಹೀಗಾಗಿ ಅವನು ಗುಂಪಿನಿಂದ ತಿಳಿಯದೆ ಕಡೆಗಣಿಸಲ್ಪಡುತ್ತಾನೆ. ತಿರಸ್ಕಾರ ಮಾಡಲ್ಪಡುತ್ತಾನೆ. ಇದರಿಂದಾಗಿ ಈ ಅಂಗವಿಕಲ ಮಗುವನ್ನು ಬಿಟ್ಟು ಬಿಡಲೂ ಅವನ ತಂದೆತಾಯಿಗಳು ಹಿಂದೆಮುಂದೆ ನೋಡುವುದಿಲ್ಲ. ಇಲ್ಲದಿದ್ದರೆ ತಮ್ಮ ಘನತೆ ಗೌರವಗಳಿಗೆ ಧಕ್ಕೆ ಬರುತ್ತದೆ ಎಂಬ ಉದ್ದೇಶದಿಂದ ಅವರು ಅವನನ್ನು ಹೊರಗಿನ ಪ್ರಪಂಚದಿಂದ ದೂರ ತಳ್ಳಲು, ಮರೆಮಾಡಲು ಪ್ರಯತ್ನಿಸಬಹುದು. ಹೀಗೆ ನಿರಾಶೆ ಮತ್ತು ವಿಫಲತೆಗಳ ತುತ್ತತುದಿಯನ್ನು ಮುಟ್ಟಿದ ಅಂಗವಿಕಲ ವ್ಯಕ್ತಿಗಳು ಕೊನೆಗೊಮ್ಮೆ ಸಮಾಜಕಂಟಕವಾದ ನಡೆವಳಿಕೆಗಳಿಗೆ ಉದಾಹರಣೆಗಳಾಗುವರು. ಒಂದು ವೇಳೆ ಅಂಗವಿಕಲ ವ್ಯಕ್ತಿ ಕಾನೂನಿಗೊಳಪಡುವ ಅಥವಾ ನ್ಯಾಯವಾದ ಸಾಧನಗಳ ಬಗ್ಗೆ ಆಸಕ್ತಿ ವಹಿಸುವ ಮತ್ತು ಅವುಗಳನ್ನು ಗುರುತಿಸುವ ಕಾರ್ಯದಲ್ಲಿ ವಿಫಲನಾದರೆ, ಆಗ ನ್ಯಾಯಕ್ಕೆ ವಿರುದ್ಧವಾದ ವಿಧಾನಗಳ ಬಗ್ಗೆ ಅವನ ಆಸಕ್ತಿ ಕೇಂದ್ರೀಕೃತವಾಗುತ್ತ ಹೋಗುವುದರಿಂದ, ಕ್ರಮೇಣ ಅವನು ಪದೇಪದೇ ದುಷ್ಕೃತ್ಯಗಳಲ್ಲಿ ತೊಡಗುವುದಕ್ಕೆ ಸಮಾಜವೇ ಆಶ್ರಯಕೊಟ್ಟಂತಾಗುತ್ತದೆ.

ಒಬ್ಬ ಅಂಗವಿಕಲ ವ್ಯಕ್ತಿ ಆರ್ಥಿಕವಾಗಿ ಚೆನ್ನಾಗಿಲ್ಲದೆ ಇರಬಹುದು. ಅವನ ಅಂಗವಿಕಲತೆನ ಅವನಿಗೆ ಒಳ್ಳೆಯ ಉದ್ಯೋಗವನ್ನು ದೊರಕಿಸುವ ದಾರಿಯಲ್ಲಿ ಅಡ್ಡಿಯನ್ನು ತರಬಹುದು. ಇಂದಿನ ಪರಿಸ್ಥಿತಿಯಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ವ್ಯಕ್ತಿಗಳೇ ಉದ್ಯೋಗಗಳನ್ನು ದೊರಕಿಸಿಕೊಳ್ಳುವುದು ಕಷ್ಟವಾಗಿದೆ. ಈ ಸಂದರ್ಭದಲ್ಲಿ ಅಂದರೆ ಇಂತಹ ಪರಿಸ್ಥಿತಿ ಬರಬೇಕಾದರೆ, ಅಂಗವಿಕಲರಾದ ವ್ಯಕ್ತಿಗಳಿಗೆ ವಿಶೇಷವಾಗಿ ಯಾವ ಸಹಾಯ ಸಹಕಾರಗಳೂ ಸಿಗದೆ ಇರುವುದರಿಂದ ಅವರಿಗೆ ಉದ್ಯೋಗಗಳು ದೊರಕುವುದು ಕನಸಿನ ಮಾತೇ ಸರಿ. ಆದಕಾರಣ, ತಮ್ಮ ಅಂಗವಿಕಲತೆಯಿಂದ ಇವರು ಸಮಾಜದಲ್ಲಿ ಇತರರ ಮೇಲೆ ಅವಲಂಬಿಸುವುದು ಅನಿವಾರ್ಯವಾಗುತ್ತದೆ. ಅದೇ ರೀತಿಯಾಗಿ ಈ ವ್ಯಕ್ತಿಗಳು ಜೀವನದ ನಾನಾ ಹಂತಗಳಲ್ಲಿ ಎಲ್ಲ ಸಂದರ್ಭಗಳಲ್ಲೂ ಇತರರನ್ನೇ ಅವಲಂಬಿಸುವುದು ತಪ್ಪುವುದಿಲ್ಲ. ಇದು ಅವರನ್ನು ಇನ್ನಷ್ಟು ಸಂಕಷ್ಟಕ್ಕೆ ಗುರಿಮಾಡುತ್ತದೆ. ಅವರಲ್ಲೂ ಒಂದುವೇಳೆ, ಇದರೊಂದಿಗೆ ಆರ್ಥಿಕ ಅವಲಂಬನೆಯೂ ಸೇರಿಕೊಂಡರೆ, ಆಗ ಯಾವ ಕಾಲದಲ್ಲಿಯೂ ಬದುಕು ಇವರಿಗೆ ಸಾರ್ಥಕ ಎನಿಸಿಕೊಳ್ಳುವುದಿಲ್ಲ.

ಶಿಕ್ಷಣಸಂಸ್ಥೆಗಳಲ್ಲಿಯೂ ಅಂಗವಿಕಲರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಇಂದಿನ ಶಿಕ್ಷಣದ ಕೆಲವು ವಿಧಾನಗಳು ಅವರಿಗೆ ಎಲ್ಲ ರೀತಿಯಲ್ಲಿಯೂ ತರಬೇತು ಕೊಡುವುದರಲ್ಲಿ ಅನುಕೂಲಕರವಾಗಿಲ್ಲ. ಅಂಗವಿಕಲ ವ್ಯಕ್ತಿಯನ್ನು ಸಹಪಾಠಿಗಳು ಗೇಲಿ ಮಾಡುವುದಲ್ಲದೆ ತಮ್ಮ ಗುಂಪಿಗೆ ಅವನನ್ನು

ಸೇರಿಸಿಕೊಳ್ಳುವುದಿಲ್ಲ. ಇದರಿಂದ ಅವನು ಶಾಲೆಯ ಎಲ್ಲ ಚಟುವಟಿಕೆಗಳಲ್ಲೂ ಭಾಗವಹಿಸುವುದರಿಂದ ವಂಚಿತನಾಗುತ್ತಾನೆ. ಶಾಲೆಯ ಉಪಾಧ್ಯಾಯರೂ ಸರಿಯಾಗಿರುವ ಇತರ ಮಕ್ಕಳ ಬಗ್ಗೆ ಹೆಚ್ಚು ಒಲವನ್ನು ತೋರಿಸುವುದರ ಜೊತೆಗೆ, ಈ ಮಗುವಿನ ಮೇಲೆ ಯಾವ ಆಸಕ್ತಿಯನ್ನೂ ಸಹಾನುಭೂತಿಯನ್ನೂ ತೋರಿಸುವುದಿಲ್ಲ. ಹೀಗಾಗಿ ಮಗುವಿನ ಅಂಗವಿಕಲತೆ ಮುಂದೆ ಶಾಲೆಯ ಆಟಪಾಟಗಳಲ್ಲಿ ಅವನು ತನ್ನ ಪಾತ್ರವನ್ನು ವಹಿಸದಂತೆ ಅಡ್ಡಿಯನ್ನುಂಟುಮಾಡುತ್ತದೆ. ಇದರಿಂದಾಗಿ, ಇಂಥ ಸಂತೋಷ ಕೂಟಗಳಲ್ಲಿ ತನ್ನನ್ನು ಪೂರ್ತಿಯಾಗಿ ನಿರ್ಲಕ್ಷ್ಯಮಾಡುತ್ತಾರೆಂಬ ಹೆದರಿಕೆಯಿಂದಲೇ ಶಾಲೆಯ ಸಮಾರಂಭಗಳು ಮತ್ತು ಕಾರ್ಯಕ್ರಮಗಳಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲು ಪ್ರವೇಶ ಮಾಡುವುದಕ್ಕೆ ಹಿಂಜರಿಯುತ್ತಾನೆ. ಹೀಗೆ ಶಾಲೆಯಲ್ಲಿ ಮುಂದುವರಿಯಲು ಸಾಧ್ಯವಾಗದೆ, ಸಾಮಾಜಿಕ ಪಂಗಡಗಳು ಮತ್ತು ಅಂತಸ್ತುಗಳ ವೈವಿಧ್ಯಗಳಿಂದಾಗಿ ಅವನು ಕೇವಲ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಮಾತ್ರ ವಿಕಲನಾಗಿ ಉಳಿಯದೆ, ಸಾಮಾಜಿಕವಾಗಿಯೂ ವಿಚ್ಛಿದ್ರ ವ್ಯಕ್ತಿಯಾಗಿ ಉಳಿಯುತ್ತಾನೆ.

ಸುಧಾರಣೆಗಳು

ಅಂಗವಿಕಲರಿಗೂ ಮಾನವಸಹಜವಾದ ಆಸೆಆಕಾಂಕ್ಷೆಗಳಿರುವುದರಿಂದ ಸಾಧ್ಯವಾದ ಮಟ್ಟಿಗೆ ಅವರ ನೋವು ಕಡಿಮೆಯಾಗುವಂತೆ ಸಮಾಜ ನೋಡಿಕೊಳ್ಳಬೇಕು. ವಿಜ್ಞಾನದ ಮುನ್ನಡೆ ಅಂಗವಿಕಲರಿಗೆ ಆಶಾದೀಪವಾಗಿ ಬೆಳಗುತ್ತಿದೆ. ಹೆಲನ್ ಕೆಲರಳ ಸಾರ್ಥಕ ಜೀವನ ಒಂದು ಉದಾಹರಣೆ. ಕಣ್ಣು ಕಿವಿಗಳ ಕೆಲಸಗಳನ್ನು ಕೈಗಳು ಮಾಡುತ್ತವೆ. ಸ್ನೇಹಿತರನ್ನು ಗುರುತಿಸಲು ಸಹಾಯ ಮಾಡುವುದಲ್ಲದೆ ಅವರು ಸಂತೋಷದಿಂದಿರುವರೋ, ದುಃಖದಲ್ಲಿರುವರೋ ಎಂಬುದನ್ನು ತಿಳಿಸುತ್ತವೆ. ಹೆಲನ್ ಕೆಲರ್ ಪ್ರಕಾರ 'ಕೈ'ಗಳ ಚರಿತ್ರೆ ಹೀಗಿದೆ: ಜನರ ಮುಖಗಳಂತೆ ಅವರ ಕೈಗಳೂ ಅವರ ಸ್ವಭಾವದ ಅಂತರ್ಯವನ್ನೆಲ್ಲ ತಿಳಿಸಲು ಸಹಕಾರಿಯಾಗಿವೆ. ಗೆಲುವಾದ ಕೈಯುಳ್ಳ ಪಾದ್ರಿಯೊಬ್ಬನನ್ನೂ ಸೀಸದಂತಹ ಕೈಯುಳ್ಳ ಬಡಾಯಿಕೋರನನ್ನೂ ಕಬ್ಬಿಣದಂತಹ ಕೈಯುಳ್ಳ ನಯವಾದ ಮನುಷ್ಯನನ್ನೂ ಸಂಧಿಸಬಹುದು. ಹಲವರ ಕೈಗಳು ಅವರಿಗಿಷ್ಟ ಇಲಿಯಂತಹ ಪೌರುಷವನ್ನು ಸೂಚಿಸುತ್ತವೆ. ಕೆಂಪು ಕೈಗಳನ್ನು ಕುಲುಕಿದಾಗ ಕೂಡಲೆ ಮರಣದ ನೆನಪಾಗುತ್ತದೆ. ಹಲವು ಕೈಗಳು ಕೆಟ್ಟ ಭವಿಷ್ಯವನ್ನು ಸೂಚಿಸುತ್ತವೆ. ಕೆಲಸ ಮಾಡೇ ಅರಿಯದ ಶ್ರೀಮಂತರ ನುಣುಪಾದ ಗುಂಡನೆಯ ಕೈಗಳು ಬೆಳವಣಿಗೆಯಿಲ್ಲದ ಅವ್ಯವಸ್ಥೆಯ ಪ್ರತೀಕವಾಗಿರುತ್ತವೆ. ಇಷ್ಟೇ ಅಲ್ಲದೆ, ನೂಲುವ ಕೈ, ನೇಯುವ ಕೈ, ಉಳುವ ಕೈ, ಕೊಯ್ಲು ಮಾಡುವ ಕೈ, ಮಣ್ಣನ್ನು ಕಟ್ಟಡಗಳನ್ನಾಗಿಸುವ ಕೈ, ಮರದ ದಿಮ್ಮಿಗಳನ್ನು ಕಡಿದು ಛಾವಣಿಗಳನ್ನು ಹೊದಿಸುವ ಕೈ ಇವುಗಳಲ್ಲಿ ಕೈಯ ಚರಿತ್ರೆಯನ್ನು ತಿಳಿಯಬಹುದು. ಇದಕ್ಕೆ ತಕ್ಕ ಶಿಕ್ಷಣ ಅಗತ್ಯ. ಬಿಳಿ ಹೂವಿನ ದಳಗಳು ಬಣ್ಣದ ಹೂಗಳ ದಳಗಳಿಗಿಂತ ತೆಳ್ಳಗಿರುವುದರಿಂದ ಬಿಳಿಗುಲಾಬಿಯನ್ನು ಕೆಂಪು ಗುಲಾಬಿಯಿಂದ ಗುರುತಿಸಬಹುದು. ವಾದ್ಯವೃಂದ ಗೀತೆಯೊಂದನ್ನು ಬಾರಿಸಿದಾಗ ನೆಲವನ್ನು ಮುಟ್ಟಿನೋಡಿ ಗಾನ ತರಂಗಗಳನ್ನು ತಿಳಿದುಕೊಳ್ಳಬಹುದು. ಕುರುಡರು ಮತ್ತು ಕಿವುಡರ ದೇಹದ ಒಂದೊಂದು ಕಣಕ್ಕೂ ಶಬ್ದ ಸಂವೇದನೆಗಳನ್ನು ತಿಳಿಯುವ ಶಕ್ತಿ ಬಂದಾಗ ಮಾತ್ರ ಇವು ಚೆನ್ನಾಗಿ ಮನವರಿಕೆಯಾಗುತ್ತವೆ. ಇದರಿಂದ ನೀರಿನ ಮರ್ಮರ ಶಬ್ದವನ್ನೂ ಹಕ್ಕಿಯ ರೆಕ್ಕೆಯ ಬಡಿತವನ್ನೂ ಎಲೆಗಳ ಚಲನವನ್ನೂ ದುಂಬಿಗಳ ಝೇಂಕಾರವನ್ನೂ ಗುರುತಿಸಬಹುದು. ಕುದುರೆ ಕೆನೆದರೆ, ನಾಯಿ ಬಗುಳಿದರೆ ತಿಳಿಯುತ್ತದೆ. ಜನರ ಕಾಲು ಸಪ್ಪಳದಿಂದ ಅವರ ಸ್ವಭಾವವನ್ನು ತಿಳಿಯಬಹುದು. ಮೇಲಿಂದ ಮೇಲೆ ಬೀಳುತ್ತಿರುವ ಹೊಡೆತದ ಸ್ಪಂದನಗಳಿಂದ ಮರಗೆಲಸದವನು ಸುತ್ತಿಗೆ ಕೆಲಸ ಮಾಡುತ್ತಿರುವನೆಂದು ತಿಳಿಯುತ್ತದೆ. ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಉಂಟಾಗುತ್ತಿದ್ದ ಸ್ಪಂದನಗಳನ್ನು ಗಮನಿಸಿದಾಗ ಅವನು ಗರಗಸವನ್ನು ಉಪಯೋಗಿಸುತ್ತಿದ್ದಾನೆಂದು ತಿಳಿಯಬಹುದು. ಈ ಬಗೆಯ ಶಿಕ್ಷಣದ ಮೂಲಕ ಕುರುಡರ ಬುದ್ಧಿಶಕ್ತಿಯನ್ನು ವೃದ್ಧಿಪಡಿಸುವುದು ಸಾಧ್ಯವೆಂದೂ ಅವರ ಕೈಗಳಿಗೆ ತರಬೇತು ಕೊಟ್ಟು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಬಹುದೆಂದೂ ಜನತೆಗೆ ತಿಳಿಯಹೇಳಬೇಕಾಗಿದೆ. ಕುರುಡು ಮಗು ಕತ್ತಲೆಯಲ್ಲೂ ಕರುಣೆಯನ್ನೇ ಕಾಣುತ್ತದೆ. ಅದರಲ್ಲಿ ಅತಿಶಯವನ್ನೇ ಆಗಲಿ ರೌದ್ರವನ್ನೇ ಆಗಲಿ

ಅದು ಕಾಣುವುದಿಲ್ಲ. ಅದು ಮಗುವಿಗೆ ಚಿರಪರಿಚಿತವಾದ ಪ್ರಪಂಚ. ಹಗಲಿಗೂ ಇರುಳಿಗೂ ವ್ಯತ್ಯಾಸ ಹೇಗೆ ಗೊತ್ತಾಗುತ್ತದೆ? ಹಗಲಿನಲ್ಲಿ ಗಾಳಿ ಹಗುರವಾಗಿರುತ್ತದೆ. ವಾಸನೆಗಳು ತಿಳಿಯಾಗಿರುತ್ತವೆ. ವಾತಾವರಣದಲ್ಲಿ ಹೆಚ್ಚಿನ ಚಲನೆಯೂ ಸ್ಪಂದನವೂ ಇರುತ್ತದೆ. ಸಂಜೆಯಲ್ಲಿ ಸ್ಪಂದನಗಳು ಕಡಿಮೆ. ಗಾಳಿ ಭಾರವಾಗಿರುತ್ತದೆ. ಚಲನೆಯೂ ಮಿತವಾಗಿರುತ್ತದೆ. ತೊಗಲುಕೆಲಸ, ಕುಂಬಾರಗೆಲಸ, ಚಾಪೆ ಹೆಣೆಯುವುದು, ಬುಟ್ಟಿ ಮಾಡುವುದು, ನೇಯುವುದು ಇವೇ ಮೊದಲಾದ ಗ್ರಾಮಕೈಗಾರಿಕೆಗಳು ಕುರುಡರಿಗೆ ತಕ್ಕ ಕೆಲಸಗಳಾಗಿದ್ದು, ಇವುಗಳಿಗೆ ಯಾವ ವಿಶೇಷ ಉಪಾಧ್ಯಾಯರೂ ಬೇಕಾಗಿಲ್ಲ. ಕುರುಡರಿಗೆ ಸ್ವಲ್ಪಮಟ್ಟಿಗೆ ತರಬೇತಿ ನೀಡುವುದರಿಂದ ಅವರು ಇದನ್ನು ಸುಲಭವಾಗಿ ಕಲಿಯಬಲ್ಲರು. ಕೃಷಿ, ಹೊಲಿಗೆ, ಅವೆಮಣ್ಣಿನಿಂದ ಆಕೃತಿಗಳನ್ನು ತಯಾರಿಸುವುದು, ಶೀಘ್ರಲಿಪಿ, ಟೈಪ್‌ರೈಟಿಂಗ್ ಮೊದಲಾದವುಗಳಲ್ಲಿ ಕೂಡ ಇವರು ಕಣ್ಣಿದ್ದವರಷ್ಟೇ ಪರಿಣತಿಯನ್ನು ಪಡೆಯಬಲ್ಲವರಾಗಿದ್ದಾರೆ. ಈಗ ಕುರುಡರು ಓದು ಕಲಿಯಲೂ ಸಾಧ್ಯವಾಗಿದೆ. ಲೂಯಿ ಬ್ರೈಲ್ ಎಂಬ ಫ್ರೆಂಚ್ ಕುರುಡನೊಬ್ಬ ಕಂಡುಹಿಡಿದ ಪದ್ಧತಿಯಂತೆ ಅಕ್ಷರದ ಆಕೃತಿಗಳನ್ನು ದಪ್ಪವಾದ ಕಾಗದದಲ್ಲಿ ಉಬ್ಬುತಗ್ಗುಗಳ ಮೂಲಕ ಮೂಡಿಸುತ್ತಾರೆ. ಆಧುನಿಕ ಉಪಕರಣಗಳಿಂದ ಕುರುಡ ಹುಡುಗರು ಇತರ ಹುಡುಗರಂತೆಯೇ ವಿದ್ಯಾಭ್ಯಾಸ ಪಡೆಯುವುದು ಸಾಧ್ಯವಾಗಿದೆ. ಈಗ ಕುರುಡರ ವಿದ್ಯಾಭ್ಯಾಸದಲ್ಲಿ ಹೊಸ ಪ್ರಗತಿಯನ್ನು ಸಾಧಿಸಲಾಗಿದೆ. ಸ್ಯಾನ್ ಫ್ರ್ಯಾನ್ಸಿಸ್ಕೋದ ವೈದ್ಯರೊಬ್ಬರು 'ಎಲೆಕ್ಟ್ರಾನಿಕ್ ಕಣ್ಣು' ಸೃಷ್ಟಿಸಿದ್ದಾರೆ. 'ಟೆಲಿವಿಷನ್ ಮಾನಿಟರ್' ಎಂಬ ಭಾಗ 'ಟೆಲಿವಿಷನ್ ಕ್ಯಾಮೆರಾ'ದಲ್ಲಿರುವ ಚಿತ್ರವನ್ನು ಕುರುಡರ ಬೆನ್ನಿನ ಮೇಲೆ ಚುಕ್ಕೆಗಳ ರೂಪದಲ್ಲಿ ಮೂಡಿಸಿ ಸ್ಪಂದನವನ್ನು ಉಂಟುಮಾಡುತ್ತದೆ. ಮೊದಲು ಚೌಕ, ತ್ರಿಕೋನ ಇಂಥ ಆಕಾರಗಳನ್ನು, ಅನಂತರ ಆಟದ ಸಾಮಾನುಗಳನ್ನು ಇದರ ಸಹಾಯದಿಂದ ಕುರುಡರು ನೋಡಲು ಕಲಿಯುತ್ತಾರೆ. ಕ್ರಮೇಣ ಈ ಶಕ್ತಿ ಬೆಳೆಯುತ್ತದೆ. ಅಂಧರಿಗಾಗಿಯೇ ಮೀಸಲಾದ NAB (ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್) ಸುಮಾರು ೧೦,೦೦೦ ಮಂದಿ ಕುರುಡರಿಗೆ ಉದ್ಯೋಗಗಳನ್ನು ಒದಗಿಸಲು ಸಹಾಯ ಮಾಡಿದ್ದು, ಅದಕ್ಕಾಗಿ ಕೈಗಾರಿಕೆಗಳನ್ನು ಮಹಾರಾಷ್ಟ್ರ, ದೆಹಲಿ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಗುಜರಾತ್ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಸ್ಥಾಪಿಸಲಾಗಿದೆ. ಅಲ್ಲದೆ NAB ಒಂದು ಬ್ರೈಲ್ ಮುದ್ರಣಾಲಯವನ್ನು ನಡೆಸುತ್ತಿದೆ. ತನ್ಮೂಲಕ ಅನೇಕ ಬ್ರೈಲ್ ಲಿಪಿಯ ಪುಸ್ತಕಗಳನ್ನು ಬೆಳಕಿಗೆ ತಂದು ಕುರುಡರಿಗೆ ಉಪಕಾರ ಮಾಡಿದೆ.

ಕಿವುಡರಿಗೆ ಅನುಕೂಲಕರವಾದ ಮಾತು ಹೇಗಿರಬೇಕು ಎಂಬುದರ ಬಗೆಗೆ ಸತತ ಪ್ರಯತ್ನ ನಡೆಸಿದ ವಾಷಿಂಗ್‌ಟನ್ನಿನ ಅಲೆಗ್ಸಾಂಡರ್ ಗ್ರಹಾಂ ಬೆಲ್ 'ಫೋನಾಟೋಗ್ರಾಫ್' ಎಂಬ ಉಪಕರಣದ ಬಗ್ಗೆ ಕೆಲಸಮಾಡಿದ. ಇದು ಕಿವುಡರಿಗೆ ಪದೋಚ್ಚಾರಣೆ ಕಲಿಸಲು ಸಹಾಯಕವಾಯಿತು. ತನ್ನ ಜೀವಮಾನವನ್ನೆಲ್ಲ ಕಿವುಡರಿಗಾಗಿ ಮೀಸಲಾಗಿಟ್ಟಿದ್ದ ಗ್ರಹಾಂ ಬೆಲ್ ತಯಾರಿಸಿದ ಟೆಲಿಫೋನ್ ಯಂತ್ರ ತನ್ನ ಕಿವುಡು ವಿದ್ಯಾರ್ಥಿಗಳು ಯಾವ ಶಬ್ದಗಳನ್ನು ಕೇಳಲಾರರೋ ಅಂತಹ ಶಬ್ದಗಳನ್ನು ನೋಡಲು ಮಾಡಿದ ಪ್ರಯತ್ನದ ಫಲವಾಗಿತ್ತು. ಬೆಲ್, ಈ ಸಂದರ್ಭದಲ್ಲಿ ಕಿವುಡರಿಗಾಗಿ ಏನಾದರೂ ಅನುಕೂಲತೆಯನ್ನು ಕಂಡುಹಿಡಿಯಬೇಕೆಂದು ಪ್ರಯತ್ನಪಟ್ಟಿದ್ದರಲ್ಲಿ ಮೊದಲು ಬೆಳಕಿಗೆ ಬಂದದ್ದು ಟೆಲಿಫೋನ್. ಬೆಲ್‌ನ ವಿಧಾನಗಳು ಇಂದಿಗೂ ಕಿವುಡರ ಶಿಕ್ಷಣ ಪದ್ಧತಿಗೆ ಆಧಾರಭೂತಗಳಾಗಿವೆ. ಮೈಸೂರಿನಲ್ಲಿ ಕಿವುಡರು ಮತ್ತು ಮೂಕರಿಗಾಗಿ ಪಾಠಶಾಲೆಯಿದೆ. ಇಲ್ಲಿ ವಿದ್ಯೆ ಕಲಿಸುವುದಲ್ಲದೆ ಸಂಗೀತವನ್ನೂ ಹೇಳಿಕೊಡುತ್ತಾರೆ. ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಚಿಕಿತ್ಸಾಲಯದಲ್ಲಿ ಕಿವಿಯ ದೋಷಕ್ಕೆ ತಕ್ಕಂತೆ ಶ್ರವಣ ಉಪಕರಣವನ್ನು ಕೊಡುತ್ತಾರೆ. ಇದರಿಂದ ಇವರು ಎಲ್ಲರಂತೆ ಕೇಳಲು ಪ್ರಯತ್ನಿಸುವುದರಿಂದ ಸ್ವಲ್ಪಮಟ್ಟಿಗೆ ತಮ್ಮ ಕಿವುಡತನವನ್ನು ಮರೆಯುವಂತಾಗಿದೆ. ಮಾತನಾಡಲು ಬಾರದವರಿಗೆ ಮಾತನಾಡಲು ಕಲಿಸುತ್ತಾರೆ. ಮಾನಸಿಕ ತೊಂದರೆಯಿಂದ ವಿಕಲತೆಯುಂಟಾಗಿದ್ದರೆ ಮನಶ್ಶಾಸ್ತ್ರಜ್ಞರು ಪರೀಕ್ಷೆಮಾಡಿ ಚಿಕಿತ್ಸೆ ನೀಡುತ್ತಾರೆ. ಕಿವಿ ಚೆನ್ನಾಗಿ ಕೇಳಿಸುವಂತಾಗಿ, ಮಾತನಾಡಲು ಬಂದ ಮೇಲೆ ಆ ವ್ಯಕ್ತಿ ಶಾಲೆಗೆ ಹೋಗಿ ಓದು ಮುಂದುವರಿಸಬಹುದು.

ಪೋಲಿಯೋ ರೋಗಿಗಳು ಆರು ತಿಂಗಳಾದರೂ ಚೇತರಿಸಿಕೊಳ್ಳದಿದ್ದರೆ ಯಾಂತ್ರಿಕ ಆಧಾರವನ್ನು ಒದಗಿಸಬೇಕಾಗುತ್ತದೆ. ನಿಶ್ಶಕ್ತವಾಗಿರುವ ಮುಂಡಕ್ಕೆ ಕಾರ್ಸೆಟ್, ಕಾಲು ತೊಡೆಗಳಿಗೆ ಕ್ಯಾಲಿಫರ್,

ಪಾದಕ್ಕೆ ತಿದ್ದುಬೂಟು ಇವುಗಳ ಉಪಯೋಗದಿಂದ ರೋಗಿ ಗುಣಹೊಂದಲು ಸಾಧ್ಯವಿದೆ. ಕುಷ್ಠರೋಗದಿಂದ ಗುಣಮುಖನಾದ ವ್ಯಕ್ತಿ ಪೂರ್ಣ ಆರೋಗ್ಯವಂತನಾದರೂ ಸಮಾಜದಲ್ಲಿ ಉಳಿದವರಿಗಿಂತ ತಾನು ಕೀಳು ಎಂಬ ಭಾವನೆ ಬೆಳೆಯುತ್ತದೆ. ಇಂಥವರಿಗೆ ಪ್ಲಾಸ್ಟಿಕ್ ಸರ್ಜರಿ ಒಂದು ವರ. ರೋಗ, ಅಪಘಾತಗಳಿಂದಲೋ, ಸುಟ್ಟಗಾಯಗಳಿಂದಲೋ ಉಂಟಾದ ಕುರೂಪಗಳನ್ನೂ ಹುಟ್ಟಿನಿಂದಲೇ ಬಂದ ವಿಕೃತಿಗಳನ್ನೂ ಹೋಗಲಾಡಿಸುವುದು ಪ್ಲಾಸ್ಟಿಕ್ ಸರ್ಜರಿಯಿಂದ ಸಾಧ್ಯ. ಕೃತಕಾಂಗಗಳನ್ನು ಜೋಡಿಸಬಹುದು. ಚಲಿಸಲು ಸಾಧ್ಯವಿಲ್ಲದಿದ್ದರೂ ತಾನು ವಿಕಾರವಾಗಿ ಕಾಣುವುದಿಲ್ಲ ಎಂದು ವ್ಯಕ್ತಿಯ ಮನಸ್ಸಿಗೆ ತೃಪ್ತಿ ದೊರೆಯುತ್ತದೆ. ಅಂಗವಿಕಲರಿಗೆ ಕೃತಕ ಅಂಗಾಂಗಗಳು ಒಂದು ವರ, ವಿವಿಧ ವಿಕಲತೆಗಳಿಗೆ ತುತ್ತಾಗಿರುವ ಜನ ಆತ್ಮಾವಲಂಬಿಗಳಾಗಬೇಕಾಗಿದೆ, ಉಲ್ಲಾಸವನ್ನು ಪಡೆಯಲು ಸಂಕಲ್ಪಿಸಬೇಕಾಗಿದೆ. ಇವರಿಂದ ನಮ್ಮ ಸಮಾಜ, ಅಂಗವಿಕಲರು ಅನುಭವಿಸಿದ ಉದ್ವೇಗವನ್ನೂ, ಕಣ್ಣೀರು ಸುರಿಸಲಾಗದ ದುಗುಡವನ್ನೂ, ಯಾವ ಗಳಿಗೆಯಲ್ಲೂ ಉತ್ಸಾಹದಿಂದ ಸಿದ್ಧವಾಗಿರಬೇಕಾದದ್ದನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಾಗಬಹುದು. ಅತ್ಯುತ್ತಮ ರೀತಿಯ ಶಸ್ತ್ರಪಾಂಡಿತ್ಯ, ಔಷಧಿಗಳು ಮತ್ತು ಇತರ ವೈಜ್ಞಾನಿಕ ಸಾಧನಗಳೆಲ್ಲ ಒಂದಕ್ಕೊಂದು ಹೊಂದಿಕೊಂಡು ಲಕ್ಷಾಂತರ ಅಂಗವಿಕಲರು ತಮ್ಮ ಮಾನವೀಯತೆಯನ್ನು ಮತ್ತೆ ಪಡೆಯಲು ಸಹಾಯಮಾಡಿವೆ. ಈ ರೀತಿಯಲ್ಲಿ ಹೊಸ ಭಾವನೆಗಳ ಪ್ರಸರಣವೂ ಒಳಗೆ ಹುದುಗಿರುವ ಶಕ್ತಿಯ ಪ್ರಕಟಣೆಯೂ ವಿಕಲರಾದ ಜನ ಮತ್ತೆ ನಾಗರಿಕರಾಗಿ ಬಾಳುವಂತೆ ಸಾಧ್ಯಮಾಡುತ್ತವೆ.

ಅಂಗವಿಕಲರ ಸಮಸ್ಯೆಗಳನ್ನು ನಿರ್ಮೂಲ ಮಾಡುವುದರಲ್ಲಿ ಕುಟುಂಬ ಹಾಗೂ ಸಮಾಜದ ಪಾತ್ರ ಬಹುಮುಖ್ಯ. ತಂದೆತಾಯಿಗಳು ತಮ್ಮ ಮಕ್ಕಳ ಸ್ವಾಭಾವಿಕ ಬೆಳವಣಿಗೆಗೆ ಪೋಷಕರಾಗಬೇಕು. ಸರಿಯಾಗಿರುವ ಮಕ್ಕಳಿಗೂ ಇವರಿಗೂ ಭೇದಭಾವ ಇರಬಾರದು. ಅಂಗವಿಕಲರೂ ತಮ್ಮಂತೆ ಮನುಷ್ಯರು ಎಂದು ತಿಳಿಯಬೇಕು. ಆದಷ್ಟು ಮಟ್ಟಿಗೆ ಅವರ ನ್ಯೂನತೆಯನ್ನು ಮರೆಯಲು ಸಹಾಯಕರಾಗಬೇಕು. ಕುರುಡರಿಗೂ ಕಿವುಡಮೂಕರಿಗೂ ಈಗ ಪ್ರತ್ಯೇಕ ಶಾಲೆಗಳನ್ನು ತೆರೆದು ಅವರ ವಿದ್ಯಾಭ್ಯಾಸಕ್ಕೆ ಅಲ್ಲಿ ಸಕಲ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಅವರಿಗಾಗಿಯೇ ಅನೇಕ ರೀತಿಯ ಆಟಗಳನ್ನು ಕಂಡುಹಿಡಿದು ಆಟದ ಸಾಮಾನುಗಳನ್ನು ಒದಗಿಸಲಾಗುತ್ತಿದೆ. ಸಮಾಜ ಅಂಗವಿಕಲರನ್ನು ತನ್ನ ಒಂದು ಅವಿಭಾಜ್ಯ ಅಂಗವೆಂದು ತಿಳಿಯಬೇಕು. ಯಾವ ಚಟುವಟಿಕೆಗಳಿಂದಲೂ ಅವರನ್ನು ಹೊರಗಿಡಲು ಪ್ರಯತ್ನಿಸಬಾರದು. ಅವರ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲದಿದ್ದರೆ ಉಚಿತವಾದ ವೈದ್ಯಕೀಯ ನೆರವು ನೀಡಬೇಕು. ಅವರ ಕೊರತೆಯನ್ನು ನೀಗಿಸಲು ಸರ್ಕಾರ ಅವರಿಗೆ ಎಲ್ಲ ರೀತಿಯ ಸಹಾಯಗಳನ್ನೂ ನೀಡಬೇಕು. ಈಗ ಅಂಗವಿಕಲರಾಗಲಿ, ಅವರ ಪೋಷಕರಾಗಲಿ ಚಿಂತಿಸಬೇಕಾಗಿಲ್ಲ. ಅಂಗವಿಕಲರ ಸಾಮರ್ಥ್ಯ ಮತ್ತು ಮನೋಧರ್ಮಗಳಿಗೆ ಅನುಗುಣವಾಗಿ ವೃತ್ತಿಶಿಕ್ಷಣವನ್ನು ಕೊಡಲಾಗುತ್ತದೆ. ವಿಶ್ವಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ, ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಘಗಳು ಅಂಗವಿಕಲರಿಗಾಗಿ ಯೋಜನೆಗಳನ್ನು ರೂಪಿಸಿವೆ. ಅಂಗವಿಕಲರ ಏಳಿಗೆಗಾಗಿ ದುಡಿಯಬಯಸುವ ವೈದ್ಯರು, ಮನಶ್ಶಾಸ್ತ್ರಜ್ಞರು ಮತ್ತು ದಾದಿಯರಿಗೆ ತರಬೇತು ಕೊಡಲು ಸಂಸ್ಥೆಗಳನ್ನು ತೆರೆಯಲಾಗಿದೆ. ಅಂತರರಾಷ್ಟ್ರೀಯ ಅಂಗವಿಕಲ ಕ್ಷೇಮಾಭ್ಯುದಯ ಸಮ್ಮೇಳನ ಮೂವತ್ತು ಸದಸ್ಯ ಸಂಸ್ಥೆಗಳನ್ನು ಹೊಂದಿದೆ.

ಅಂಗವಿಕಲರಿಗೆ ತಾವು ಇತರರಿಗಿಂತ ಕೀಳು, ಇತರರಿಗೆ ಹೊರೆ ಎಂಬ ಭಾವನೆ ಬಾರದಂತೆ ನೋಡಿಕೊಳ್ಳುವುದು ಅತಿಮುಖ್ಯ. ಸರಿಯಾದ ಮಾರ್ಗದರ್ಶನ, ನೆರವು ದೊರೆತರೆ ಅಂಗವಿಕಲರೂ ಇತರರಂತೆ ಬಾಳಬಲ್ಲರು.

ಹೆಲಿನ್ ಕೆಲರ್ ಹೇಳುವ ಹಾಗೆ. "ಯಾವ ಒಬ್ಬ ಅಂಗವಿಕಲನೇ ಆಗಲಿ, ಅವನು ಇತರ ಎಲ್ಲರಂತೆ ಬೆಳೆದ ಹೊರತು ತನ್ನಲ್ಲಿರುವ ದಿವ್ಯಶಕ್ತಿಗಳನ್ನು ಕಂಡುಕೊಂಡು ತನ್ನ ಬಾಳನ್ನು ರೂಪಿಸಿಕೊಳ್ಳಲಾರ."

"ಅಂಗವಿಕಲ ಮಕ್ಕಳಿಗೆ ಉಪದೇಶಕ್ಕಿಂತ ಮುಖ್ಯವಾಗಿ ನಿರ್ದೇಶನವೂ ಅನುಕಂಪವೂ ಬೇಕು. ಸರಿಯಾದ ವಾತಾವರಣವಿದ್ದರೆ ಅವು ತಮ್ಮನ್ನು ತಾವೇ ರೂಪಿಸಿಕೊಳ್ಳುತ್ತವೆ."

ಒಟ್ಟಿನಲ್ಲಿ ಅಂಗವಿಕಲರ ಮೇಲೆ ಆರೋಪಿತವಾಗುವ ದೋಷಗಳು ಪರಿಹಾರವಾಗಬೇಕಾದರೆ ವಿಚಾರವಂತ ಜನತೆಯಿಂದ ಕೂಡಿದ ಕ್ರಿಯಾಶೀಲ, ಪ್ರಜ್ಞಾವಂತ ಸಮಾಜದಿಂದ ಮಾತ್ರ ಸಾಧ್ಯ. ಆದಕಾರಣ. ಇಂದಿನ ಜನತೆ "ಅಂಧಶ್ರದ್ಧೆಗಳ ಹಳೆಯ ವಿಶ್ವದ ಎದುರು ಹೋರಾಡುತ್ತಿರುವ ಹೊಸ ವಿಶ್ವದ ಪ್ರತೀಕ"ಗಳಾಗಬೇಕಾಗಿದೆ.

ಡಿ. ಎಸ್. ಜಯಪ್ಪಗೌಡ

ತಿಪ್ಪೂರು ಶಾಸನ*

ತಿಪ್ಪೂರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿದೆ. ಈ ಊರು ಮದ್ದೂರಿಗೆ ಕೆಲವೇ ಮೈಲಿಗಳ ದೂರದಲ್ಲಿದೆ. ಒಂದು ಕಾಲಕ್ಕೆ ಇದು ಜೈನರ ಮುಖ್ಯ ಸ್ಥಳವಾಗಿತ್ತು. ಇಲ್ಲಿ ಹಿಂದೆ ಜಿನಾಲಯಗಳಿದ್ದುವು. ಈಗ ಅವು ಅವಶೇಷ ರೂಪದಲ್ಲಿವೆ. ಇಲ್ಲಿ ಎರಡು ಸಣ್ಣ ಗುಡ್ಡಗಳಿವೆ. ಅವುಗಳಲ್ಲಿ ಒಂದರ ಮೇಲೆ ಸುಮಾರು ಆರೇಳು ಅಡಿಗಳಷ್ಟು ಎತ್ತರದ ಬಾಹುಬಲಿ ವಿಗ್ರಹವಿದೆ. ಈ ಗುಡ್ಡದ ಮೇಲಿರುವ ಒಂದರ ಶಾಸನ ಗಮನಾರ್ಹವಾದ್ದು.

ಈ ಶಾಸನವನ್ನು ಬರೆದ ಕಾಲ ಶಕವರ್ಷ ೧೦೩೯ ಅಥವಾ ಕ್ರಿ.ಶ. ೧೧೧೭. ಕ್ರಿ.ಶ. ೧೧೧೬ರಲ್ಲಿ ನಡೆದ ತಲಕಾಡು ಯುದ್ಧದಲ್ಲಿ ಹೊಯ್ಸಳ ವಿಷ್ಣುವರ್ಧನ[1] ಚೋಳರನ್ನು ಸೋಲಿಸಿ ಹಿಮ್ಮೆಟ್ಟಿಸಿದ. ಆ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ ಪ್ರಧಾನ ದಂಡನಾಯಕ ಗಂಗರಾಜನಿಗೆ ವಿಷ್ಣುವರ್ಧನ ತಿಪ್ಪೂರು ಗ್ರಾಮವನ್ನು ಉಂಬಳಿಯಾಗಿ ನೀಡಿದ. ಹೀಗೆ ಬಂದ ಉಂಬಳಿಯನ್ನು ಗಂಗರಾಜ ಧರ್ಮ ಕಾರ್ಯಕ್ಕಾಗಿ ತಮ್ಮ ಗುರುವಾದ ತಿಂತ್ರಿಣಿಕ ಗಚ್ಛದ ಮೇಘಚಂದ್ರ ಸಿದ್ಧಾಂತ ದೇವರಿಗೆ ದತ್ತಿಯಾಗಿ ಬಿಟ್ಟ. ಈ ಶಾಸನ ಆ ಸಂದರ್ಭದಲ್ಲಿ ಬರೆದದ್ದು. ಐತಿಹಾಸಿಕ ದೃಷ್ಟಿಯಿಂದ ಈ ಶಾಸನದಲ್ಲಿ ಬರುವ ತಲಕಾಡು ಯುದ್ಧದ ವರ್ಣನೆ ಮಹತ್ವಪೂರ್ಣವಾಗಿದೆ.

ತಲಕಾಡು ಯುದ್ಧ ನಡೆದ ಕಾಲ ಮತ್ತು ಅದರ ಪರಿಣಾಮಗಳ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಪ್ರಸ್ತುತ ಈ ಶಾಸನದಲ್ಲಿ ಕಂಡುಬರುವ ಯುದ್ಧದ ವಿವರಗಳನ್ನು ಪರಿಶೀಲಿಸುವುದಷ್ಟೆ ಉದ್ದೇಶ. ತಿಪ್ಪೂರು ಶಾಸನ ತಲಕಾಡು ಯುದ್ಧದ ಬಗ್ಗೆ ಒಂದು ಜೀವಂತ ವಿವರಣೆ ನೀಡುತ್ತದೆ ಎಂದು ಸಿ. ಹಯವದನರಾಯರು ಅಭಿಪ್ರಾಯಪಟ್ಟಿದ್ದಾರೆ.[2]

ಈ ಶಾಸನದ ಮೊದಲ ಭಾಗದಲ್ಲಿ ಜಿನನ ಪ್ರಾರ್ಥನೆ ಇದೆ. ಅನಂತರ ಹೊಯ್ಸಳ ವಂಶವನ್ನು ವರ್ಣಿಸಲಾಗಿದೆ. ಹೊಯ್ಸಳರ ಮೂಲಪುರುಷ ಸಳನ ವಂಶದಲ್ಲಿ ವಿನಯಾದಿತ್ಯ ಹುಟ್ಟಿದನೆಂದೂ ಆತನ ಮಗ ಎರೆಯಂಗನೆಂದೂ ಅವನಿಗೆ ಏಚಲದೇವಿ ಎಂಬ ಪತ್ನಿಯಿಂದ ಮೂವರು ಪುತ್ರರು ಜನಿಸಿದರೆಂದೂ ಅವರಲ್ಲಿ ಮೊದಲನೆಯವನು ಬಲ್ಲಾಳ. ಮಧ್ಯದವನು ವಿಷ್ಣುವರ್ಧನ ಹಾಗೂ ಮೂರನೆಯವನು ಉದಯಾದಿತ್ಯನೆಂದೂ ತಿಳಿದುಬರುತ್ತದೆ.

---

* E. C., Vol. III. Ml-31

1 ಹೊಯ್ಸಳರು ಮೂಲತಃ ಮೂಡಿಗೆರೆ ತಾಲ್ಲೂಕಿನಲ್ಲಿರುವ ಈಗಿನ ಅಂಗಡಿ ಗ್ರಾಮದಲ್ಲಿ ರಾಜ್ಯ ಸ್ಥಾಪಿಸಿ, ತರುವಾಯ ದ್ವಾರಾವತಿ ಅಥವಾ ಈಗಿನ ಹಳೇಬೀಡಿನಲ್ಲಿ ನೆಲಸಿದರೆಂದು ತಿಳಿದು ಬರುತ್ತದೆ (E. C., Vol. VI. Introduction: Rice, B. Lewis)

2 *Mysore Gazetter*, Vol. 2, Part 2

ಈ ಶಾಸನದಲ್ಲಿ ವಿಷ್ಣುವರ್ಧನನನ್ನು—

ಯಾದವಾಬ್ಧ ದಿನಪಂ ಶ್ರೀ ವಿಷ್ಣು ಭೂಪಾಲಕಂ
ಎಳಿಗೆಸೆವ ಕೋಯತೂ(ತ್ತೂ)ತ್ತಳವನ ಪುರಮಂತೆ
ರಾಮರಾಯಪುರಂ ಬಳ್ಪಳ ಬಳಿದ ವಿಷ್ಣುತೇಜೋಜ್ವಳನದೆ
ಸವೆಂದವು ಬಳಿಪ್ಪರಿಪುದುರ್ಗಂಗಳ್............

ಎಂದು ವರ್ಣಿಸಿದೆ. ರಾಮರಾಯಪುರವನ್ನು ಅಥವಾ ತಲಕಾಡನ್ನು ವಿಷ್ಣುವರ್ಧನ ಗೆದ್ದ. ಕೊಯತ್ತೂರು ಅಥವಾ ಕೊಯಮತ್ತೂರಿನ ವರೆಗೂ ಚೋಳಸೈನ್ಯವನ್ನು ಬೆನ್ನಟ್ಟಿದನೆಂದು ಇದರಿಂದ ತಿಳಿದುಬರುತ್ತದೆ.

ತಲಕಾಡು ಯುದ್ಧದಲ್ಲಿ ಪ್ರಮುಖಪಾತ್ರ ವಹಿಸಿದವನು ಮಹಾ ಪ್ರಧಾನ ದಂಡನಾಯಕ ಗಂಗರಾಜನೆಂದು ಈ ಶಾಸನದಲ್ಲಿ ಉಕ್ತವಾಗಿದೆ. ಅವನು ಏಚರಾಜ ಮತ್ತು ಪೋಚಿಕಬ್ಬೆಯರ ಪುತ್ರ. ಅವನಿಗೆ ನಾಗಲದೇವಿ ಮತ್ತು ಲಕ್ಷ್ಮಿಯರೆಂಬ ಇಬ್ಬರು ಪತ್ನಿಯರಿದ್ದರು[3]. ಬೊಪ್ಪನೆಂಬ ಮಗನಿದ್ದ. ಗಂಗರಾಜ ಸ್ವತಃ ತಲಕಾಡು ಗಂಗರ ಸಂತತಿಯವನೆಂದು ತಿಳಿದುಬರುತ್ತದೆ[4]. ತನ್ನ ಪೂರ್ವಜರ ರಾಜ್ಯವನ್ನು ಪರಕೀಯರ ಕೈಯಿಂದ ಬಿಡಿಸುವ ಛಲವೂ ಅವನಿಗೆ ಈ ಸಾಹಸಕಾರ್ಯದಲ್ಲಿ ಹೆಚ್ಚಿನ ಕೆಚ್ಚನ್ನು ನೀಡಿರಬೇಕು.

ತಲಕಾಡಿನ ವಿಮೋಚನೆಗಾಗಿ ಹೊಯ್ಸಳ ಸೈನ್ಯ ಊರಿನ ಹೊರವಲಯದಲ್ಲಿ ಠಾಣೆ ಹೂಡಿತು. ಆಗ ದಂಡನಾಯಕ ಗಂಗರಾಜ ಈ ನಾಡನ್ನು ಒಪ್ಪಿಸಬೇಕೆಂದು ಚೋಳ ಪ್ರತಿನಿಧಿಗೆ ಕರೆಕೊಟ್ಟ. ಆದರೆ ಚೋಳ ಪ್ರತಿನಿಧಿ ಇಡಿಯಮ ಅಥವಾ ಅದಿಯಮ ಈ ಕರೆಯನ್ನು ಅಲಕ್ಷಿಸಿದ. ಆಗ ಯುದ್ಧ ಪ್ರಾರಂಭವಾಯಿತು. ಆ ಸಂದರ್ಭವನ್ನು ಈ ರೀತಿ ವರ್ಣಿಸಲಾಗಿದೆ:

ತಳಕಾಡ ಬೀಡಿನೊಳ್ಪಡಿಯಿಪ್ಪಂತಿರ್ದು ಚೋಳಂ
ಕೊಟ್ಟ ನಾಡಂ ಕೊಡದೆ ಕಾದಿ ಕೊಳಿಮೆನೆ
ವಿಜಿಗೀಷು ವೃತ್ತಿಯಿಂದೆತ್ತಿ ಬಳ್ಳಮೆರಡಂ
ಸಾರ್ಚಿದಲ್ಲಿ

ಅದಿಗೈಮನ್ ಎಂಬ ಹೆಸರೇ ಅದಿಯಮ ಅಥವಾ ಆದಿಯಮ ಎಂದಾಗಿರಬೇಕೆಂಬ ಅಭಿಪ್ರಾಯವೂ ಇದೆ[5].

ಹೊಯ್ಸಳರಿಗೂ ಚೋಳರಿಗೂ ಘೋರ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಗಂಗರಾಜ ತೋರಿಸಿದ ಪರಾಕ್ರಮವನ್ನು ಈ ಶಾಸನದಲ್ಲಿ—

ಗಂಗ ಚಮೂಪಂಜಿಗೀಷು ವೃತ್ತಿಯಿಂದೆತ್ತಿದ ನಿನ್ನ
ಕೈಯ ನಿಸಿತಾಸಿಯ ತಾ ಮೊನೆ ಬೆನ್ನ ಬಾರನೆತ್ತುತಿರೆ
ಪೋಗಿ ಕಂಚಿಗುಯೆಪ್ಪಿನ ಮೋಡಿದದಾಮನೆಯ್ದನೆ

ಎಂದು ವರ್ಣಿಸಲಾಗಿದೆ. ಗಂಗರಾಜ ಚೋಳ ದಂಡನಾಯಕ ದಾಮನ್ ಅಥವಾ ದಾಮೋದರನ ಬೆನ್ನಿನ ಚರ್ಮ ಸುಲಿಯುವಂತೆ ಕತ್ತಿಯಿಂದ ಹೊಡೆಯುತ್ತಿದ್ದಾಗ ಅವನು ಅವನ್ನು ತಾಳಲಾರದೆ ಚೋಳ ರಾಜಧಾನಿ ಕಂಚಿಯ ಕಡೆಗೆ ಓಡಿದನೆಂದು ಹೇಳಲಾಗಿದೆ.

---

[3] E.C.. Vol. 2 (New Ed. 1973)—Introduction

[4] C. Hayavadana Rao : *Mysore Gazetteer*, Vol. 2, p. 2

[5] C. Hayavadana Rao : *Mysore Gazetteer*, Vol. 2, p. 2

ಇಷ್ಟೇ ಅಲ್ಲದೆ ಈ ಯುದ್ಧದ ಬಗ್ಗೆ ತಿಳಿಸುತ್ತ ಶ್ರವಣಬೆಳಗೊಳದ ಒಂದು ಶಾಸನದಲ್ಲಿ 'ಕದನದೊಳಂದು ನಿನ್ನ ತರವಾರಿಯ ಬಾಯಿಗೆ ಮೆಯ್ಯನೊಡ್ಡಲಾರದೆ' ಎಂದು ಬರೆಯಲಾಗಿದೆ. ಇದನ್ನು ನೋಡಿದರೆ ಗಂಗರಾಜನ ಶೌರ್ಯ ಅಪ್ರತಿಮವಾಗಿತ್ತೆಂದು ಹೇಳಬಹುದು.

ಈ ಯುದ್ಧದಲ್ಲಿ ಸೋತು ಕಂಗೆಟ್ಟ ಚೋಳ ಸೈನ್ಯದಲ್ಲಿದ್ದ—

ವೊಂದೆ ಮೆಯ್ಯಾಳೆಯ್ದಿ ನರಸಿಂಗವರ್ಮ್ಮ
ಮೊದಲಾದ ಚೋಳಸಾಮನ್ತರೆಲ್ಲರಂ ಬೆಂಕೊಂಡು ...
ನಾಡಾದುಮೆಲ್ಲಮನೇಕಚ್ಛತ್ರಂ

ನರಸಿಂಗವರ್ಮ ಮೊದಲಾದ ಸಾಮಂತರೆಲ್ಲರೂ ದಿಕ್ಕೆಟ್ಟು ಓಡಿದರು ಎಂದು ತಿಳಿದುಬರುತ್ತದೆ ಈ ನರಸಿಂಗವರ್ಮನನ್ನು ಪಲ್ಲವ ಸಾಮಂತನೆಂದು ಲೂಯಿ ರೈಸ್ ಗುರುತಿಸಿದ್ದಾರೆ.[6] ಸಿ. ಹಯವದನ ರಾಯರು ಅವನು ತಿರುಕೊಯಿಲೂರು ಶಾಸನದಲ್ಲಿ ಉಲ್ಲೇಖಿತನಾಗಿರುವ ಹಾಗೂ ರಾಜೇಂದ್ರದೇವನ ಸಮಕಾಲೀನನಾದ ಮೈಲಾಡು ನಾಯಕನೆಂದು ಅಭಿಪ್ರಾಯಪಡುತ್ತಾರೆ. ಹೀಗೆ ಒಂದು ಕಾಲಕ್ಕೆ ಗಂಗರ ವೈಭವದ ರಾಜಧಾನಿಯಾಗಿದ್ದ ತಲಕಾಡು ಅಥವಾ ರಾಯರಾಯಪುರವನ್ನು ಚೋಳರಿಂದ ಗಂಗರಾಜ ವಿಮೋಚನೆಗೊಳಿಸಿ ಏಕಛತ್ರದ ಅಡಿಯಲ್ಲಿ ತಂದ.

ಈ ಯುದ್ಧದಲ್ಲಿ ಭಾರಿ ಸಾವುನೋವುಗಳಾದುವೆಂದೂ ತಿಳಿದುಬರುತ್ತದೆ[7]. ಆದರೆ ಅದು ಪ್ರಸ್ತುತ ವಿವೇಚನೆಗೆ ಸಂಬಂಧಿಸಿಲ್ಲ. ಈ ಶಾಸನದಲ್ಲಿ ತಲಕಾಡು ಯುದ್ಧದಲ್ಲಿ ಗಂಗರಾಜ ವಹಿಸಿದ ಪಾತ್ರವನ್ನೇ ಒತ್ತಿ ಹೇಳಲಾಗಿದೆ. ಆದರೆ ಈ ಯುದ್ಧದ ನೇತೃತ್ವವನ್ನು ಸ್ವತಃ ವಿಷ್ಣುವರ್ಧನನೇ ವಹಿಸಿದ್ದನೆಂದು ಇತರ ಶಾಸನಗಳು ತಿಳಿಸುತ್ತವೆ[8]. ಸೋತು ಓಡಿದ ಚೋಳರ ಸೈನ್ಯವನ್ನು ವಿಷ್ಣುವರ್ಧನ ಕಂಚಿಯ ವರೆಗೂ ಅಟ್ಟಿಸಿಕೊಂಡು ಹೋಗಿದ್ದನೆಂದು ಇನ್ನು ಕೆಲವು ಶಾಸನಗಳಲ್ಲಿ ಉಲ್ಲೇಖವಿದೆ[9].

ಅಂತೂ ಈ ಯುದ್ಧದ 'ವಿಜಯದಿಂದ' ಇದರ ತರುವಾಯವೇ ನಡೆದ ಇನ್ನು ಕೆಲವು ಯುದ್ಧಗಳಲ್ಲಿ ಜಯಿಸಲು ಹೊಯ್ಸಳರಿಗೆ ಆತ್ಮಪ್ರತ್ಯಯ ದೊರೆಯಿತು. ಇಂದಿನ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು ಹಾಗೂ ಕೋಲಾರ ಜಿಲ್ಲೆಗಳ ಕೆಲವು ಪ್ರದೇಶಗಳು ಕನ್ನಡನಾಡಿಗೆ ಮರಳಿ ಬಂದುವು.

ಗಂಗರಾಜನ ಈ ಸಾಹಸಕಾರ್ಯಕ್ಕಾಗಿ ಸುಪ್ರೀತನಾದ ವಿಷ್ಣುವರ್ಧನ, ನಿನಗೇನು ಬೇಕೋ ಕೇಳಿ ತೆಗೆದುಕೋ ಎಂದು ಹೇಳಿದ. ಆಗ ಗಂಗರಾಜ ಇನ್ನಾವುದಕ್ಕೂ ಆಸೆಪಡದೆ ಗಾಜಲೂರು ನಾಡಿನಲ್ಲಿರುವ ತಿಪ್ಪೂರು ಗ್ರಾಮವನ್ನು ಉಂಬಳಿಯಾಗಿ ಕೇಳಿ ಪಡೆದ. ಹೀಗೆ ಪಡೆದ ಗ್ರಾಮವನ್ನು ಅವನು ತನ್ನ ಸ್ವಂತಕ್ಕೆ ಬಳಸಿಕೊಳ್ಳದೆ ಕಣ್ಣೂರು ಗಣದ, ತಿಂತ್ರಿಣಿಕ ಗಚ್ಛದ ಮೇಘಚಂದ್ರ ಸಿದ್ಧಾಂತ ದೇವರು ಎಂಬ ಓರ್ವ ಜೈನಯತಿಗೆ ಧಾರ್ಮಿಕ ಕಾರ್ಯಕ್ಕಾಗಿ ದತ್ತಿಯಾಗಿ ಬಿಟ್ಟ[10].

ದಂಡನಾಯಕ ಗಂಗರಾಜನ ಈ ಮನೋಭಾವವನ್ನು ಗಮನಿಸಿದರೆ ಅವನ ತ್ಯಾಗ, ಸ್ವಾಮಿನಿಷ್ಠೆ ಹಾಗೂ ಧರ್ಮನಿಷ್ಠೆಗಳು ಎದ್ದು ಕಾಣುತ್ತವೆ. ಪ್ರಾಚೀನ ಭಾರತದಲ್ಲಿ ರಾಜನೀತಿಯೂ ರಾಜ್ಯಾಡಳಿತವೂ

---

6 E. C., Vol III, Introduction

7 E. C., Vol V, Bl–58

8 *Ibid.*, Ch—209, Bl—170

9 E.C., Vol. V, Bl–58

10 ಶ್ರವಣಬೆಳಗೊಳದ ಬಳಿಯ ಗೋವಿಂದವಾಡಿಯನ್ನು ಅವನು ಇದೇ ಸಾಹಸಕ್ಕಾಗಿ ಉಂಬಳಿಯಾಗಿ ಪಡೆದು ಜಿನಸೇವಾಕಾರ್ಯಕ್ಕಾಗಿ ದತ್ತಿಯಾಗಿ ಬಿಟ್ಟ' ಉಲ್ಲೇಖವಿದೆ. (E. C.. Vol. 2, SB-342, 1973)

ಕೇವಲ ರಾಜಕೀಯ ಬಲದ ಮೇಲೆ ನಿಲ್ಲದೆ ಧರ್ಮದ—ಅದರ ವ್ಯಾಪಕ ಅರ್ಥದಲ್ಲಿ—ಮೇಲೆ ನಿಂತಿತ್ತೆಂದು ಈ ನಿದರ್ಶನ ಸೂಚಿಸುತ್ತದೆ.

ಈ ಶಾಸನದ ಕೊನೆಯಲ್ಲಿ ಶಾಸನರಕ್ಷಣೆ ಮಾಡುವುದು ಪವಿತ್ರ ಕಾರ್ಯವೆಂದು ಒತ್ತಿಹೇಳಲಾಗಿದೆ.

ಕರ್ನಾಟಕ ಇತಿಹಾಸದಲ್ಲಿ ನಡೆದ ಒಂದು ಮಹಾಘಟನೆಯನ್ನು ಈ ಶಾಸನ ವಿವರಿಸುತ್ತದೆ. ಈ ಯುದ್ಧದ ಬಗ್ಗೆ ತಿಳಿಸುವ ಇನ್ನೂ ಹಲವಾರು ಕನ್ನಡ ಶಾಸನಗಳು ದೊರೆತಿವೆ. ತಲಕಾಡು ಯುದ್ಧದಿಂದ ಆಗತಾನೇ ಬಲಗೊಳ್ಳುತ್ತಿದ್ದ ಹೊಯ್ಸಳರ ಶಕ್ತಿಪ್ರದರ್ಶನಕ್ಕೆ ಉತ್ತಮ ಅವಕಾಶ ದೊರೆಯಿತು. ಪ್ರಬಲರಾಗಿದ್ದ ಚೋಳರ ಪ್ರತಿಷ್ಠೆಗೆ ಕುಂದು ಒದಗಿತು. ಆದರೆ ಇಲ್ಲಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಚೋಳರು ಇನ್ನೂ ಸ್ವಲ್ಪಕಾಲ ತಮ್ಮ ಅಧಿಪತ್ಯವನ್ನು ಸ್ಥಾಪಿಸಿಕೊಂಡಿದ್ದಂತೆ ಕಂಡುಬರುತ್ತದೆ. ಮುಂದೆ ವಿಷ್ಣುವರ್ಧನನ ವಂಶಸ್ಥರು ಈ ಪ್ರದೇಶಗಳನ್ನು ಸಂಪೂರ್ಣವಾಗಿ ತಮ್ಮ ವಶಕ್ಕೆ ತೆಗೆದುಕೊಂಡರು.

ಹೀಗೆ ತಲಕಾಡು ಯುದ್ಧ ಚೋಳರ ಪ್ರಾಬಲ್ಯಕ್ಕೆ ವಜ್ರಾಘಾತವಾಗಿ ಪರಿಣಮಿಸಿತು. ಈ ಯುದ್ಧದ ಪರಿಣಾಮಗಳು ತಾತ್ಕಾಲಿಕವಾದವು; ಪುನಃ ಚೋಳರು ಈ ಪ್ರದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು, ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಆದರೂ ಈ ಯುದ್ಧದ ವಿಜಯ ಅದ್ಭುತವಾದುದು. ಮುಂದೆ ಇಮ್ಮಡಿ ವೀರಬಲ್ಲಾಳನ ಕಾಲಕ್ಕೆ (೧೧೭೩–೧೨೨೦) ಹೊಯ್ಸಳರು ದಕ್ಷಿಣ ಕರ್ನಾಟಕದ ಭಾಗಗಳನ್ನು ಚೋಳರಿಂದ ವಿಮೋಚನೆಗೊಳಿಸಿದ್ದಂತೂ ಸರ್ವಸಿದ್ಧವಾಗಿದೆ. ಈ ವಿಜಯ ವಿಷ್ಣುವರ್ಧನನ ಪರಾಕ್ರಮ, ಸಾಮರ್ಥ್ಯ ಹಾಗೂ ಸಾಧನೆಗಳ ಸಂಕೇತವಾಗಿದೆ. ಹೀಗೆ ಹೊಯ್ಸಳರು ಮೊದಲ ಬಾರಿಗೆ ವಿಶಾಲ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಐಕ್ಯವನ್ನು ಸಾಧಿಸಲು ಅಮೂಲ್ಯ ಸೇವೆ ಸಲ್ಲಿಸಿದರು.

ಎಸ್. ಎ. ಹನುಮಂತರಾವ್

ಉದ್ಯೋಗ ಮತ್ತು ಪ್ರತಿಷ್ಠೆ : ಒಂದು ಅಧ್ಯಯನ

ಮನುಷ್ಯನ ಜೀವನದಲ್ಲಿ ಉದ್ಯೋಗಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಎಷ್ಟೋ ವೇಳೆ ವ್ಯಕ್ತಿಯ ಜಯಾಪಜಯಗಳು ಅವನು ಕೈಗೊಂಡ ಉದ್ಯೋಗವನ್ನೇ ಅವಲಂಬಿಸಿಕೊಂಡಿರುತ್ತವೆ. ಅವನ ಸಾಮಾಜಿಕಜೀವನದ ವ್ಯಾಪ್ತಿಯನ್ನೂ ಅವನು ನಿರತನಾಗಿರುವ ಉದ್ಯೋಗವೇ ನಿರ್ಧರಿಸುತ್ತದೆ. ಉದ್ಯೋಗ ಮಾಡುವುದು ಕೇವಲ ಹಣ ಗಳಿಸುವುದಕ್ಕಲ್ಲ. ಯಾವುದಾದರೊಂದು ಉದ್ಯೋಗ ಮಾಡಿದರೆ ಮನುಷ್ಯನಿಗೆ ಅದರಿಂದ ತೃಪ್ತಿಯಾಗಬೇಕು. ಉದ್ಯೋಗವನ್ನು ಆಯ್ದುಕೊಳ್ಳುವುದಕ್ಕೆ ಮುನ್ನ ತನ್ನ ಬುದ್ಧಿಶಕ್ತಿ, ಒಲವು ಮತ್ತು ವ್ಯಕ್ತಿತ್ವದ ಸ್ವರೂಪವನ್ನು ಪರೀಕ್ಷಿಸಿ ಅನಂತರ ಉದ್ಯೋಗವನ್ನು ಆಯ್ದುಕೊಳ್ಳಬೇಕು. ಹೀಗೆ ಮಾಡದಿದ್ದರೆ ವೃತ್ತಿಯಲ್ಲಿ ಜಿಗುಪ್ಸೆಯುಂಟಾಗುವ ಸಂಭವ ಹೆಚ್ಚು. ಈ ವಿಷಯದಲ್ಲಿ ವೃತ್ತಿನಿರ್ದೇಶಕರ ಸಲಹೆಯನ್ನು ಕೇಳಿ ಉದ್ಯೋಗವನ್ನು ಆಯ್ಕೆಮಾಡುವುದು ಒಳಿತು. ಅನೇಕ ವೇಳೆ ವ್ಯಕ್ತಿ ವೃತ್ತಿನಿರ್ದೇಶಕನ ಸಲಹೆಯ ಪ್ರಕಾರ ನಡೆದುಕೊಳ್ಳದೆ ಸಮಾಜದ ಪ್ರಭಾವಕ್ಕೆ ಒಳಗಾಗುವುದೇ ಹೆಚ್ಚು. ಉದ್ಯೋಗಗಳಿಗೆ ಅಂಟಿಕೊಂಡಿರುವ ಉಚ್ಚನೀಚ ಭಾವನೆಗಳು ಸಮಾಜದಿಂದಲೇ ಸೃಷ್ಟಿಯಾಗುವ ಮೌಲ್ಯಗಳು. ಉದ್ಯೋಗದ ಉಚ್ಚನೀಚತನವನ್ನು ಸಮಾಜ ಯಾವ ರೀತಿ ಪರಿಗಣಿಸುತ್ತದೆಯೋ ಅದೇ ರೀತಿ ವ್ಯಕ್ತಿಯೂ ಸಮಾಜದಲ್ಲಿರುವ ಉದ್ಯೋಗಗಳ ಯೋಗ್ಯತೆಯನ್ನು ಅದರ ಮಾನದಂಡದಿಂದ ಅಳೆದು ಅದಕ್ಕೆ ತಕ್ಕಂತೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾನೆ. ಈ ರೀತಿ ಸಮಾಜದ ಮೌಲ್ಯಗಳಿಂದ ವ್ಯಕ್ತಿ ವಿಶೇಷವಾಗಿ ಪ್ರಭಾವಿತನಾಗುವುದು ಪ್ರೌಢಾವಸ್ಥೆಯಲ್ಲಿ. ಬಾಲ್ಯದಲ್ಲಿ ವ್ಯಕ್ತಿ ಉದ್ಯೋಗದ ಬೆಲೆಯನ್ನು ಅದರ ಅಂತಃಶಕ್ತಿಗೆ ಅನುಗುಣವಾಗಿಯೇ ಅರ್ಥಮಾಡಿಕೊಳ್ಳುತ್ತಾನೆ. ಉದ್ಯೋಗಕ್ಕೆ ಅಂಟಿಕೊಂಡಿರುವ ಉಚ್ಚನೀಚ ಭಾವನೆ ಮಕ್ಕಳಿಗೆ ಮುಖ್ಯವಲ್ಲ. ತಮಗೆ ಯಾವುದಾದರೊಂದು ಉದ್ಯೋಗದಲ್ಲಿ ಒಲವು ಇದ್ದರೆ ಅದಕ್ಕೆ ಅಂಟಿಕೊಂಡಿರುವ ಉಚ್ಚನೀಚ ಭಾವನೆಯನ್ನು ಗಮನಿಸದೆ ಅದಕ್ಕೆ ಮಹತ್ವ ಕೊಟ್ಟು, ಆ ಕೆಲಸದಲ್ಲಿ ನಿರತರಾಗುತ್ತಾರೆ. ಎಂಬುದಾಗಿ ಸೂಪರ್ ಅಭಿಪ್ರಾಯಪಡುತ್ತಾನೆ. ಮಕ್ಕಳು ಬೆಳೆದಂತೆಲ್ಲ ಸಮಾಜದ ಪ್ರಭಾವಕ್ಕೆ ಬಲಿಯಾಗಿ ಉದ್ಯೋಗಗಳ ಬಗ್ಗೆ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿ, ಸಮಾಜ ಯಾವಯಾವ ಉದ್ಯೋಗಕ್ಕೆ ಯಾವಯಾವ ಸ್ಥಾನವನ್ನು ಕೊಡುತ್ತದೆಯೋ ಅದೇ ಪ್ರಕಾರವಾಗಿ ಅವರೂ ಅದಕ್ಕೆ ಸ್ಥಾನ ಕೊಡುತ್ತಾರೆ. ಈ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ಸಮರ್ಥಿಸಲು ಒಂದು ಸಂಶೋಧನೆಯನ್ನು ಕೈಗೊಳ್ಳಲಾಯಿತು. ಈ ಸಂಶೋಧನೆಯ ವಿವರಣೆ ಮತ್ತು ಅದರಿಂದ ಬಂದ ಫಲಿತಾಂಶವನ್ನು ಈ ಲೇಖನದಲ್ಲಿ ವಿಚಾರಮಾಡಲಾಗಿದೆ.

ತಾಂತ್ರಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳು ಉದ್ಯೋಗಗಳ ಬಗ್ಗೆ ತಮ್ಮ ಒಲವನ್ನು ವ್ಯಕ್ತಪಡಿಸುವಾಗ ಆಯಾ ಉದ್ಯೋಗಕ್ಕೆ ಅಂಟಿಕೊಂಡಿರುವ ಪ್ರತಿಷ್ಠೆಯ ಪ್ರಭಾವವನ್ನು ಕಂಡು ಹಿಡಿಯುವುದೇ ಪ್ರಸ್ತುತ ಸಂಶೋಧನೆಯ ಗುರಿ. ಅನುಕ್ರಮ ಸ್ಥಾನ ವಿಧಾನವನ್ನು ಈ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ. ಈ ವಿಧಾನದ ಪ್ರಕಾರ, ವಿದ್ಯಾರ್ಥಿ ಕೊಟ್ಟಿರುವ ಉದ್ಯೋಗಗಳ ಪ್ರಾಮುಖ್ಯ

ವನ್ನು ಅವುಗಳಿಗೆ ಅಂಟಿಕೊಂಡಿರುವ ಪ್ರತಿಷ್ಠೆಯನ್ನು ಮುಖ್ಯವಾಗಿ ಇಟ್ಟುಕೊಂಡು. ಕ್ರಮವಾಗಿ ಪ್ರಥಮ ಸ್ಥಾನದಿಂದ ಉದ್ಯೋಗಗಳು ಎಷ್ಟು ಇವೆಯೋ ಅಷ್ಟು ಸ್ಥಾನಗಳನ್ನು ಕೊಡಬೇಕು.

ಹತ್ತೊಂಬತ್ತು ಉದ್ಯೋಗಗಳ ಹೆಸರುಗಳುಳ್ಳ ಒಂದು ಪ್ರಶ್ನಾವಳಿಯನ್ನು ತಯಾರುಮಾಡಿ ಪ್ರೌಢಶಾಲೆಯ ಮತ್ತು ತಾಂತ್ರಿಕ ಶಾಲೆಯ ಉಚ್ಚ ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಲು ಕೊಡಲಾಯಿತು. ಉದ್ಯೋಗಗಳನ್ನು ಈ ಪ್ರಶ್ನಾವಳಿಯಲ್ಲಿ ಸೇರಿಸುವಾಗ ವಿದ್ಯಾರ್ಥಿಗಳಿಗೆ ಪರಿಚಿತವಾದವುಗಳನ್ನೇ ಸೇರಿಸಲಾಗಿದೆ. ಈ ಪ್ರಶ್ನಾವಳಿಯನ್ನು ಉತ್ತರಿಸುವುದಕ್ಕಿಂತ ಮುಂಚೆ ಅದರಲ್ಲಿ ಕೊಟ್ಟಿರುವ ಉದ್ಯೋಗಗಳ ಪಟ್ಟಿಯನ್ನು ಗಮನವಿಟ್ಟು ಓದಿಕೊಳ್ಳಬೇಕೆಂದು ಹೇಳಲಾಯಿತು. ಅನಂತರ ಪ್ರತಿಯೊಂದು ಉದ್ಯೋಗಕ್ಕೂ ಅಂಟಿಕೊಂಡಿರುವ ಪ್ರತಿಷ್ಠೆಯನ್ನು ಮುಖ್ಯವಾಗಿ ಇಟ್ಟುಕೊಂಡು ಆಯಾ ಉದ್ಯೋಗಕ್ಕೆ ಸ್ಥಾನವನ್ನು ಅನುಕ್ರಮವಾಗಿ ಕೊಡಬೇಕೆಂದು ಹೇಳಲಾಯಿತು. ಯಾವುದಾದರೂ ಒಂದು ಉದ್ಯೋಗಕ್ಕೆ ಪ್ರಥಮ ಸ್ಥಾನವನ್ನು ಕೊಡಬೇಕಾದರೆ ಅದರ ಪ್ರತಿಷ್ಠೆ ಆ ವಿದ್ಯಾರ್ಥಿಯ ದೃಷ್ಟಿಯಿಂದ ಅತಿ ಉಚ್ಚವಾಗಿರಬೇಕು. ಅದಕ್ಕೂ ಕಡಿಮೆ ಪ್ರತಿಷ್ಠೆ ಉಳ್ಳ ಉದ್ಯೋಗಕ್ಕೆ ಎರಡನೆಯ ಸ್ಥಾನವನ್ನೂ ಅದಕ್ಕೂ ಕಡಿಮೆ ಪ್ರತಿಷ್ಠೆ ಉಳ್ಳ ಉದ್ಯೋಗಕ್ಕೆ ಮೂರನೆಯ ಸ್ಥಾನವನ್ನೂ ಹೀಗೆ ಹತ್ತೊಂಬತ್ತು ಸ್ಥಾನಗಳನ್ನು ಕೊಡಬೇಕಾಗುವುದಾಗಿ ತಿಳಿಸಿಕೊಡಲಾಯಿತು. ಈ ಪ್ರಶ್ನಾವಳಿಯಲ್ಲಿ ಕೊಟ್ಟಿರುವ ಪ್ರತಿಯೊಂದು ಉದ್ಯೋಗಕ್ಕೂ ಒಂದಲ್ಲೊಂದು ಸ್ಥಾನವನ್ನು ಕೊಡಲೇಬೇಕೆಂಬುದು ಅವರಿಗೆ ನೀಡಲಾಗಿದ್ದ ಸೂಚನೆ. ಯಾವ ಉದ್ಯೋಗಕ್ಕೂ ಸ್ಥಾನ ಕೊಡದೆ ಹಾಗೇ ಬಿಡಬಾರದು. ವಿದ್ಯಾರ್ಥಿ ಉದ್ಯೋಗಗಳಿಗೆ ಸ್ಥಾನಗಳನ್ನು ಕೊಡುವಾಗ ಮತ್ತೊಬ್ಬ ವಿದ್ಯಾರ್ಥಿ ಬರೆಯುವುದನ್ನು ನೋಡಬಾರದು ಮತ್ತು ಅವನನ್ನು ಈ ವಿಷಯದ ಬಗ್ಗೆ ಏನನ್ನೂ ಕೇಳಬಾರದು ಎಂಬುದಾಗಿ ಹೇಳಲಾಯಿತು. ವಿದ್ಯಾರ್ಥಿಗಳು ಕೊಡುವ ಸ್ಥಾನಗಳು ಯಾರಿಗೂ ತಿಳಿಯಲು ಅವಕಾಶವಿಲ್ಲದಿರುವುದರಿಂದ (ಅಂದರೆ ಈ ಸಂಶೋಧನೆ ಅನಾಮಧೇಯವಾಗಿರುವುದರಿಂದ) ಅವರು ತಮ್ಮ ನಿರ್ಭಯ ಮತ್ತು ನಿಸ್ಸಂಕೋಚ ಅಭಿಪ್ರಾಯವನ್ನು ತಿಳಿಸಬೇಕೆಂದು ಹೇಳಲಾಯಿತು. ಪ್ರಶ್ನಾವಳಿಯನ್ನು ಉತ್ತರಿಸುವುದರ ಜೊತೆಗೆ ತಮ್ಮ ವಯಸ್ಸು. ಲಿಂಗ. ಜಾತಿ. ತಮ್ಮ ಮಾತಾಪಿತೃಗಳ ಅಥವಾ ಪಾಲಕರ ವಾರ್ಷಿಕ ವರಮಾನವನ್ನೂ ಬರೆಯಬೇಕೆಂದು ಕೋರಲಾಯಿತು.

ಈ ಸಂಶೋಧನೆಯಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳನ್ನು ಕುರಿತ ವಿವರ ಈ ರೀತಿ ಇದೆ:

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ	೧೭೯
ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ	೨೫
ಪ್ರೌಢಶಾಲೆಯ ವಿದ್ಯಾರ್ಥಿಗಳ ಸಂಖ್ಯೆ	೧೫೪
ಸಂಶೋಧಕ ಕೊಟ್ಟ ಸೂಚನೆಗಳನ್ನು ಅರ್ಥಮಾಡಿಕೊಳ್ಳದೆ ಉತ್ತರಿಸಿದ ವಿದ್ಯಾರ್ಥಿಗಳ ಸಂಖ್ಯೆ	೬
ಹುಡುಗಿಯರು	೩೭
ಹುಡುಗರು	೧೩೧
ತಮ್ಮ ಲಿಂಗವನ್ನು ಬರೆಯದ ವಿದ್ಯಾರ್ಥಿಗಳು	೧೧
ಬ್ರಾಹ್ಮಣರು	೧೦೧
ಬ್ರಾಹ್ಮಣೇತರರು	೫೩
ತಮ್ಮ ಜಾತಿಯನ್ನು ವ್ಯಕ್ತಮಾಡದೆ ಇದ್ದ ವಿದ್ಯಾರ್ಥಿಗಳು	೨೫

ಕೆಳಗಿನ ಕೋಷ್ಟಕದಲ್ಲಿ ತಾಂತ್ರಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಹತ್ತೊಂಬತ್ತು ಉದ್ಯೋಗಗಳಿಗೆ ಕೊಟ್ಟ ಸ್ಥಾನಗಳನ್ನು ತೋರಿಸಲಾಗಿದೆ:

ಕೋಷ್ಟಕ ೧

ಉದ್ಯೋಗಗಳು		ಸ್ಥಾನಗಳು
ಎಂಜಿನಿಯರ್	...	೧
ವೈದ್ಯ	...	೨
ಪ್ರಾಧ್ಯಾಪಕ	...	೩
ಮಾಸ್ತರ	...	೪
ಜಿಲ್ಲಾಧಿಕಾರಿ	...	೫
ತಹಸೀಲ್ದಾರ್	...	೬
ವ್ಯಾಪಾರಿ	...	೭
ಬೆರಳಚ್ಚುಗಾರ	...	೮
ಮಠಾಧಿಕಾರಿ	...	೯
ಕಾರಕೂನ	...	೧೦
ಡ್ರೈವರ್	...	೧೧
ಕಮ್ಮಾರ	...	೧೨
ಬಡಗಿ	...	೧೩
ಅಗಸ	...	೧೪
ಕೂಲಿಕಾರ	...	೧೫
ಮೋಚಿ	...	೧೬
ನಾಯಿಂದ	...	೧೭
ದಾದಿ	...	೧೮
ರಕ್ಷಣಾಧಿಕಾರಿ	...	೧೯

ಮೇಲೆ ಕೊಟ್ಟಿರುವ ಉದ್ಯೋಗಗಳ ಪಟ್ಟಿ ಹಾಗೂ ಅವುಗಳ ಸ್ಥಾನಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಾಗ ನಮಗೆ ಎದ್ದು ಕಾಣುವ ವಿಷಯವೆಂದರೆ. ಮೊದಲನೆಯ ನಾಲ್ಕು ಸ್ಥಾನಗಳನ್ನು ಅನುಕ್ರಮವಾಗಿ ಎಂಜಿನಿಯರ್. ವೈದ್ಯ, ಪ್ರಾಧ್ಯಾಪಕ ಮತ್ತು ಮಾಸ್ತರುಗಳಿಗೆ ಕೊಡಲಾಗಿದೆ. ಅಂದರೆ ಸಮಾಜದಲ್ಲಿ ಇವುಗಳಿಗೆ ಇತರ ಉದ್ಯೋಗಗಳಿಗಿಂತ ಪ್ರತಿಷ್ಠೆಯ ದೃಷ್ಟಿಯಿಂದ ಹೆಚ್ಚಿನ ಸ್ಥಾನವಿದೆ ಎಂದು ವ್ಯಕ್ತವಾಗುತ್ತದೆ. ಎಂಜಿನಿಯರಿಗೆ ಪ್ರತಿಷ್ಠೆಯ ದೃಷ್ಟಿಯಿಂದ ಅತ್ಯುತ್ತಮ ಸ್ಥಾನವೂ ವೈದ್ಯನಿಗೆ ಎರಡನೆಯ ಸ್ಥಾನವೂ ಪ್ರಾಧ್ಯಾಪಕ ಮತ್ತು ಮಾಸ್ತರರಿಗೆ ಮೂರನೆಯ ಮತ್ತು ನಾಲ್ಕನೆಯ ಸ್ಥಾನಗಳೂ ದೊರಕಿವೆ. ಕೊನೆಯ ನಾಲ್ಕು ಸ್ಥಾನಗಳನ್ನು ಅನುಕ್ರಮವಾಗಿ ಮೋಚಿ. ನಾಯಿಂದ. ದಾದಿ ಮತ್ತು ರಕ್ಷಣಾಧಿಕಾರಿಗೆ ಕೊಡಲಾಗಿದೆ. ಇಲ್ಲಿ ಆಶ್ಚರ್ಯವನ್ನು ಉಂಟು ಮಾಡುವ ಸಂಗತಿ ಎಂದರೆ. ರಕ್ಷಣಾಧಿಕಾರಿಗೆ ಕನಿಷ್ಠ ಸ್ಥಾನವನ್ನು ಕೊಟ್ಟಿರುವುದು. ಆದರೆ ಪ್ರತಿ ವಿದ್ಯಾರ್ಥಿಯೂ ಪ್ರಶ್ನಾವಳಿಯನ್ನು ಉತ್ತರಿಸಿರುವುದನ್ನು ನೋಡಿದಾಗ ಒಟ್ಟು ಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ರಕ್ಷಣಾಧಿಕಾರಿಗೆ ಈ ಸ್ಥಾನವನ್ನು ಕೊಟ್ಟಿದ್ದಾರೆ. ಇಲ್ಲಿ ರಕ್ಷಣಾಧಿಕಾರಿಗೆ ಕನಿಷ್ಠ ಸ್ಥಾನ ಕೊಟ್ಟಿರುವುದಕ್ಕೆ ಅವನು ಜೀವನದಲ್ಲಿ ಎದುರಿಸಬೇಕಾದ ಬಿಕ್ಕಟ್ಟಿನ ಪರಿಸ್ಥಿತಿಯೇ ಕಾರಣವಿರಬಹುದು. ಇದೇ ರೀತಿ ದಾದಿಯ ಸ್ಥಾನವನ್ನು ವಿದ್ಯಾರ್ಥಿಗಳು ಯೋಗ್ಯರೀತಿಯಿಂದ ಪರಿಗಣಿಸಿದ್ದಂತೆ ಕಾಣುವುದಿಲ್ಲ. ಸಮಾಜದಲ್ಲಿ ದಾದಿಯ ಸೇವೆ ಅತ್ಯಂತ ಮುಖ್ಯವಾದರೂ ಅದಕ್ಕೆ ಸಮಾಜ ಯೋಗ್ಯಸ್ಥಾನವನ್ನು ಕೊಡದಿರುವುದೇ ಇಲ್ಲಿ ವಿದ್ಯಾರ್ಥಿಗಳು ಈ ಉದ್ಯೋಗವನ್ನು ಕಡೆಗಣಿಸಿರುವುದಕ್ಕೆ ಕಾರಣವಿರಬಹುದು.

ಕೆಳಗೆ ಕೊಟ್ಟಿರುವ ಕೋಷ್ಟಕದಲ್ಲಿ ತಾಂತ್ರಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಉದ್ಯೋಗಗಳಿಗೆ ಕೊಟ್ಟಿರುವ ಸ್ಥಾನಗಳನ್ನು ಸೂಚಿಸಲಾಗಿದೆ.

ಕೋಷ್ಟಕ ೨

ಉದ್ಯೋಗಗಳು		ಪ್ರೌಢಶಾಲೆ ಸ್ಥಾನಗಳು	ತಾಂತ್ರಿಕ ಸ್ಥಾನಗಳು
ಎಂಜಿನಿಯರ್	...	೧	೧
ವೈದ್ಯ	...	೨	೨
ಪ್ರಾಧ್ಯಾಪಕ	...	೩	೩
ಜಿಲ್ಲಾಧಿಕಾರಿ	...	೪.೫	೫.೫
ಮಾಸ್ತರ	...	೪.೫	೪.೦
ತಹಸೀಲ್ದಾರ	...	೬.೫	೭.೦
ವ್ಯಾಪಾರಿ	...	೬.೫	೧೯
ಬೆರಳಚ್ಚುಗಾರ	...	೮.೦	೧೩
ಕಾರಕೂನ	...	೯.೦	೧೧
ಡ್ರೈವರ್	...	೧೦	೧೦
ದಾದಿ	...	೧೧	೧೪
ಕಮ್ಮಾರ	...	೧೨	೯
ಬಡಗಿ	...	೧೩	೮
ಅಗಸ	...	೧೪	೧೫
ಕೂಲಿ	...	೧೫	೧೬
ಮೋಚಿ	...	೧೬	೧೮
ನಾಯಿಂದ	...	೧೭	೧೭
ಮಠಾಧಿಕಾರಿ	...	೧೮	೧೨
ರಕ್ಷಣಾಧಿಕಾರಿ	...	೧೯	೫.೫

ಮೇಲೆ ಕೊಟ್ಟಿರುವ ಪಟ್ಟಿ ತಾಂತ್ರಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳು ಹತ್ತೊಂಬತ್ತು ಉದ್ಯೋಗಗಳಿಗೆ ಕೊಟ್ಟ ಸ್ಥಾನಗಳನ್ನು ಸೂಚಿಸುತ್ತದೆ. ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳು, ರಕ್ಷಣಾಧಿಕಾರಿ, ಬಡಗಿ ಮತ್ತು ಕಮ್ಮಾರನಿಗೆ ಪ್ರೌಢಶಾಲೆಯ ವಿದ್ಯಾರ್ಥಿಗಳಿಗಿಂತ ಯೋಗ್ಯ ಸ್ಥಾನಗಳನ್ನು ಕೊಟ್ಟಿದ್ದಾರೆ. ಪ್ರೌಢಶಾಲೆಯ ವಿದ್ಯಾರ್ಥಿಗಳು ದಾದಿಗೆ ಹನ್ನೊಂದನೆಯ ಸ್ಥಾನವನ್ನು ಕೊಟ್ಟರೆ, ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳು ಅದೇ ಉದ್ಯೋಗಕ್ಕೆ ಹದಿನಾಲ್ಕನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಅಂದರೆ ಪ್ರೌಢಶಾಲೆಯ ವಿದ್ಯಾರ್ಥಿಗಳು ದಾದಿಯ ಉದ್ಯೋಗವನ್ನು ತಾಂತ್ರಿಕ ವಿದ್ಯಾರ್ಥಿಗಳಿಗಿಂತ ಪ್ರತಿಷ್ಠೆಯ ದೃಷ್ಟಿಯಿಂದ ಹೆಚ್ಚೆಂದು ಪರಿಗಣಿಸಿದ್ದಾರೆ. ಉಳಿದ ಉದ್ಯೋಗಗಳಿಗೆ ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳೂ ಪ್ರೌಢಶಾಲೆಯ ವಿದ್ಯಾರ್ಥಿಗಳೂ ಮೌಲ್ಯದ ದೃಷ್ಟಿಯಿಂದ ಸಮಾನವಾದ ಸ್ಥಾನಗಳನ್ನು ಕೊಟ್ಟಿದ್ದಾರೆ. ಈ ವಿಷಯವನ್ನು ವಿಶ್ಲೇಷಣೆ ಮಾಡುವಾಗ ಒಂದು ಎಚ್ಚರಿಕೆಯನ್ನು ವಹಿಸಬೇಕು. ಅದು ಏನೆಂದರೆ, ತಾಂತ್ರಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಸಮಾನ ಸಂಖ್ಯೆಯಲ್ಲಿ ಇಲ್ಲದಿರುವುದರಿಂದ ಅವರವರು ಕೊಟ್ಟ ಸ್ಥಾನಗಳನ್ನು ತೌಲನಿಕ ದೃಷ್ಟಿಯಿಂದ ವಿಚಾರ ಮಾಡುವುದು ಕಷ್ಟ. ಆದರೆ ಅವರವರು ಕೊಟ್ಟ ಸ್ಥಾನಗಳಲ್ಲಿ ಆಶ್ಚರ್ಯವಾದ ಸಂಗತಿ ಏನೂ ಕಾಣುವುದಿಲ್ಲ. ವೈದ್ಯ, ಎಂಜಿನಿಯರ್ ಮತ್ತು ಪ್ರಾಧ್ಯಾಪಕನಿಗೆ ತಾಂತ್ರಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳು ಒಂದೇ ಸ್ಥಾನವನ್ನು ಕೊಟ್ಟಿದ್ದಾರೆ. ಜಿಲ್ಲಾಧಿಕಾರಿ ಮತ್ತು ಮಾಸ್ತರ ಸ್ಥಾನಗಳು ಅದಲುಬದಲಾಗಿವೆ. ಪ್ರೌಢಶಾಲೆಯ ವಿದ್ಯಾರ್ಥಿಗಳ

ದೃಷ್ಟಿಯಿಂದ ಜಿಲ್ಲಾಧಿಕಾರಿಗೆ ಮಾಸ್ತರಿಗಿಂತಲೂ ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಾಗಿದೆ. ಆದರೆ ತಾಂತ್ರಿಕ ವಿದ್ಯಾರ್ಥಿಗಳ ದೃಷ್ಟಿಯಿಂದ ಸಮಾಜದಲ್ಲಿ ಮಾಸ್ತರರಿಗೆ ಜಿಲ್ಲಾಧಿಕಾರಿಗಿಂತಲೂ ಪ್ರತಿಷ್ಠೆ ಹೆಚ್ಚಾಗಿದೆ. ಅವರವರು ಕೊಟ್ಟಿರುವ ಸ್ಥಾನಗಳ ನಡುವೆ ಸಂಖ್ಯಾಕಲನೀಯ ದೃಷ್ಟಿಯಿಂದ ಇರುವ ಸಂಬಂಧ–.೨೬೧. ಅಂದರೆ ನ್ಯಪೇಧಿಕ ಸಂಬಂಧ. ಅಂದರೆ ಪ್ರತಿಷ್ಠೆಯ ದೃಷ್ಟಿಯಿಂದ ಪ್ರೌಢಶಾಲೆಯ ವಿದ್ಯಾರ್ಥಿಗಳೂ ತಾಂತ್ರಿಕಶಾಲೆಯ ವಿದ್ಯಾರ್ಥಿಗಳೂ ಹತ್ತೊಂಬತ್ತು ಉದ್ಯೋಗಗಳಿಗೆ ಕೊಟ್ಟಿರುವ ಸ್ಥಾನಗಳಲ್ಲಿ ಯಾವ ವಿಧವಾದ ಸಂಬಂಧವೂ ಇಲ್ಲವೆಂಬುದು ವ್ಯಕ್ತವಾಗುತ್ತದೆ.

ಕೆಳಗೆ ಕೊಟ್ಟಿರುವ ಕೋಷ್ಟಕ. ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಹತ್ತೊಂಬತ್ತು ಉದ್ಯೋಗಗಳಿಗೆ ಕೊಟ್ಟಿರುವ ಸ್ಥಾನಗಳನ್ನು ಸೂಚಿಸುತ್ತದೆ:

ಕೋಷ್ಟಕ ೩

ಉದ್ಯೋಗಗಳು		ವಿದ್ಯಾರ್ಥಿಗಳು ಸ್ಥಾನಗಳು	ವಿದ್ಯಾರ್ಥಿನಿಯರು ಸ್ಥಾನಗಳು
ಎಂಜಿನಿಯರ್	...	೧	೪
ವೈದ್ಯ	...	೨	೧
ಪ್ರಾಧ್ಯಾಪಕ	...	೩	೨.೫
ಮಾಸ್ತರ	...	೪	೨.೫
ಜಿಲ್ಲಾಧಿಕಾರಿ	...	೫	೬.೦
ತಹಸೀಲ್ದಾರ	...	೬	೭.೫
ವ್ಯಾಪಾರಿ	...	೭	೧೧
ಬೆರಳಚ್ಚುಗಾರ	...	೮	೯
ಮಠಾಧಿಕಾರಿ	...	೯	೧೨
ಕಾರಕೂನ	...	೧೦	೭.೫
ಡ್ರೈವರ್	...	೧೧	೧೦
ಕಮ್ಮಾರ	...	೧೨	೧೪
ಬಡಗಿ	...	೧೩	೧೩
ಅಗಸ	...	೧೪	೧೫
ಕೂಲಿ	...	೧೫	೧೬
ನಾಯಿಂದ	...	೧೬	೧೭
ಮೋಚಿ	...	೧೭	೧೮
ದಾದಿ	...	೧೮	೫
ರಕ್ಷಣಾಧಿಕಾರಿ	...	೧೯	೧೯

ಮೇಲೆ ಕೊಟ್ಟಿರುವ ಪಟ್ಟಿಯನ್ನು ಸೂಕ್ಷ್ಮವಾಗಿ ನೋಡಿದಾಗ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಕೊಟ್ಟಿರುವ ಸ್ಥಾನಗಳಲ್ಲಿ ನಿರ್ದಿಷ್ಟವಾದ ವ್ಯತ್ಯಾಸವಿರುವುದು ಕಾಣುತ್ತದೆ. ಆದರೆ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಸಮಾನ ಸಂಖ್ಯೆಯಲ್ಲಿಲ್ಲದಿರುವುದರಿಂದ ಅವರು ಕೊಟ್ಟಿರುವ ಸ್ಥಾನಮಾನಗಳನ್ನು ತೌಲನಿಕ ದೃಷ್ಟಿಯಿಂದ ವಿವೇಚಿಸುವುದು ಕಷ್ಟಸಾಧ್ಯ. ಆದರೂ ಈ ಸಂಶೋಧನೆಯು ಅವರವರು ಕೊಟ್ಟಿರುವ ಸ್ಥಾನಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ಸ್ಥೂಲವಾಗಿ ತಿಳಿಸಬಲ್ಲದು. ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಎಂಜಿನಿಯರಿಗೆ ಸಮಾಜದಲ್ಲಿ ಅತ್ಯಂತ ಹೆಚ್ಚಿನ ಪ್ರತಿಷ್ಠೆ ಇದೆ. ಆದರೆ ವಿದ್ಯಾರ್ಥಿನಿಯರ ದೃಷ್ಟಿಯಲ್ಲಿ ವೈದ್ಯನಿಗೆ ಸಮಾಜದಲ್ಲಿ ಅತ್ಯಂತ ಹೆಚ್ಚಿನ ಪ್ರತಿಷ್ಠೆ ಇದೆ. ವಿದ್ಯಾರ್ಥಿನಿ

ಯರ ದೃಷ್ಟಿಯಲ್ಲಿ ಎಂಜಿನಿಯರಿಗೆ ಪ್ರಾಧ್ಯಾಪಕ ಮತ್ತು ಮಾಸ್ತರರಿಗಿಂತಲೂ ಸಮಾಜದಲ್ಲಿ ಕಡಿಮೆ ಪ್ರತಿಷ್ಠೆ. ವಿದ್ಯಾರ್ಥಿನಿಯರು ವಾದಿಗೆ ಐದನೆಯ ಸ್ಥಾನವನ್ನು ಕೊಟ್ಟರೆ ಅದೇ ಉದ್ಯೋಗಕ್ಕೆ ವಿದ್ಯಾರ್ಥಿಗಳು ಹದಿನೆಂಟನೆಯ ಸ್ಥಾನವನ್ನು ಕೊಟ್ಟಿದ್ದಾರೆ.ಅಂದರೆ ಸಮಾಜದಲ್ಲಿ ವಾದಿಯ ಪ್ರತಿಷ್ಠೆ ಹಿರಿದೆಂದು ವಿದ್ಯಾರ್ಥಿನಿಯರೂ ಅದೇ ಉದ್ಯೋಗಕ್ಕೆ ಸಮಾಜದಲ್ಲಿ ಕಡಿಮೆಸ್ಥಾನವಿದೆ ಎಂದು ವಿದ್ಯಾರ್ಥಿಗಳೂ ಅಭಿಪ್ರಾಯಪಡುತ್ತಾರೆ. ವಿದ್ಯಾರ್ಥಿನಿಯರ ದೃಷ್ಟಿಯಲ್ಲಿ ವ್ಯಾಪಾರಿ ನಾಲ್ಕು ಸ್ಥಾನಗಳನ್ನು ಕಳೆದು ಕೊಳ್ಳುತ್ತಾನೆ. ಆದರೆ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಅವರಿಗಿಂತಲೂ ನಾಲ್ಕು ಸ್ಥಾನಗಳನ್ನು ಹೆಚ್ಚಾಗಿ ಪಡೆದುಕೊಂಡಿದ್ದಾನೆ. ರಕ್ಷಣಾಧಿಕಾರಿ ವಿದ್ಯಾರ್ಥಿವಿದ್ಯಾರ್ಥಿನಿಯರ ಕೈಯಲ್ಲಿ ಹತನಾಗಿದ್ದಾನೆ. ಇಬ್ಬರೂ ರಕ್ಷಣಾಧಿಕಾರಿಗೆ ಹತ್ತೊಂಬತ್ತನೆ ಸ್ಥಾನವನ್ನು ಕೊಟ್ಟಿರುವುದು ಆಶ್ಚರ್ಯವನ್ನು ಉಂಟು ಮಾಡುವ ಸಂಗತಿ. ಇವರಿವರು ಕೊಟ್ಟಿರುವ ಸಂಬಂಧ ಸಂಖ್ಯಾಕಲನೀಯದೃಷ್ಟಿಯಿಂದ. ಅತಿ ನಿಕಟವಾದ ಸಂಬಂಧವಿಲ್ಲ.

ಕೆಳಗೆ ಕೊಟ್ಟಿರುವ ಕೋಷ್ಟಕ, ಬ್ರಾಹ್ಮಣ-ಬ್ರಾಹ್ಮಣೇತರರು ಹತ್ತೊಂಬತ್ತು ಉದ್ಯೋಗಗಳಿಗೆ ಕೊಟ್ಟಿರುವ ಸ್ಥಾನಗಳನ್ನು ಸೂಚಿಸುತ್ತದೆ.

ಕೋಷ್ಟಕ ೪

ಉದ್ಯೋಗಗಳು		ಬ್ರಾಹ್ಮಣರು ಸ್ಥಾನಗಳು	ಬ್ರಾಹಣೇತರರು ಸ್ಥಾನಗಳು
ಎಂಜಿನಿಯರ್	...	೧	೧
ವೈದ್ಯ	...	೨	೨
ಮಾಸ್ತರ	...	೩	೪
ಪ್ರಾಧ್ಯಾಪಕ	...	೪	೩
ಜಿಲ್ಲಾಧಿಕಾರಿ	...	೫	೫
ವ್ಯಾಪಾರಿ	...	೬	೮
ತಹಸೀಲ್ದಾರ	...	೭	೬
ಬೆರಳಚ್ಚುಗಾರ	...	೮	೭
ಕಾರಕೂನ	...	೯.೫	೧೦.೫
ಮಠಾಧಿಕಾರಿ	...	೯.೫	೧೫
ಡ್ರೈವರ್	...	೧೧	೯
ಕಮ್ಮಾರ	...	೧೨	೧೨
ಬಡಗಿ	...	೧೩	೧೦.೫
ಅಗಸ	...	೧೪	೧೪
ಮೋಚಿ	...	೧೫	೧೩
ಕೂಲಿ	...	೧೬.೫	೧೭
ವಾದಿ	...	೧೬.೫	೧೮
ನಾಯಿಂದ	...	೧೮	೧೬
ರಕ್ಷಣಾಧಿಕಾರಿ	...	೧೯	೧೯

ಮೇಲೆ ಕೊಟ್ಟಿರುವ ಪಟ್ಟಿಯನ್ನು ಪರೀಕ್ಷಿಸಿದಾಗ ಕೆಳಗಿನ ಅಂಶಗಳು ಎದ್ದು ಕಾಣುತ್ತವೆ. ಮೊದಲನೆಯ ಎರಡು ಸ್ಥಾನಗಳನ್ನು ಕ್ರಮವಾಗಿ ಎಂಜಿನಿಯರ್ ಮತ್ತು ವೈದ್ಯನಿಗೆ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಕೊಟ್ಟಿರುವುದರಿಂದ ಇವೆರಡರ ಸ್ಥಾನಗಳ ಬಗ್ಗೆ ಅವರಲ್ಲಿ

ವ್ಯತ್ಯಾಸವಿಲ್ಲ ಎಂಬುದು ವ್ಯಕ್ತವಾಗುತ್ತದೆ. ಬ್ರಾಹ್ಮಣ ವಿದ್ಯಾರ್ಥಿಗಳು ಮಾಸ್ತರರಿಗೆ ಮೂರನೆಯ ಸ್ಥಾನವನ್ನು ಕೊಟ್ಟರೆ ಬ್ರಾಹ್ಮಣೇತರರು ಅದೇ ಉದ್ಯೋಗಕ್ಕೆ ನಾಲ್ಕನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಪುನಃ ಬ್ರಾಹ್ಮಣ ವಿದ್ಯಾರ್ಥಿಗಳು ಪ್ರಾಧ್ಯಾಪಕನಿಗೆ ನಾಲ್ಕನೆಯ ಸ್ಥಾನವನ್ನು ಕೊಟ್ಟರೆ, ಬ್ರಾಹ್ಮಣೇತರ ವಿದ್ಯಾರ್ಥಿಗಳು ಅದೇ ಉದ್ಯೋಗಕ್ಕೆ ಮೂರನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಅಂದರೆ ಉದ್ಯೋಗಗಳ ಸಮೀಕ್ಷೆಯಲ್ಲಿ ಬ್ರಾಹ್ಮಣ–ಬ್ರಾಹ್ಮಣೇತರ ವಿದ್ಯಾರ್ಥಿಗಳಲ್ಲಿ ಸ್ಥಾನದ ಬಗ್ಗೆ ಅದಲುಬದಲಾಗಿದೆ. ಎರಡು ಜಾತಿಯವರೂ ಜಿಲ್ಲಾಧಿಕಾರಿ. ಕಮ್ಮಾರ. ಅಗಸ ಮತ್ತು ರಕ್ಷಣಾಧಿಕಾರಿಗೆ ಏಕಸ್ಥಾನವನ್ನು ಕೊಟ್ಟಿದ್ದಾರೆ. ಅಂದರೆ ಜಿಲ್ಲಾಧಿಕಾರಿಗೆ ಐದನೆಯ ಸ್ಥಾನವನ್ನೂ ಕಮ್ಮಾರನಿಗೆ ಹನ್ನೆರಡನೆಯ ಸ್ಥಾನವನ್ನೂ ಅಗಸನಿಗೆ ಹದಿಮೂರನೆಯ ಸ್ಥಾನವನ್ನೂ ಎರಡು ಜಾತಿಯವರೂ ಕೊಟ್ಟಿದ್ದಾರೆ. ಆದರೆ ರಕ್ಷಣಾಧಿಕಾರಿಗೆ ಕಡೆಯ ಸ್ಥಾನವನ್ನು. ಅಂದರೆ ಹತ್ತೊಂಬತ್ತನೆಯ ಸ್ಥಾನವನ್ನು, ಕೊಟ್ಟಿರುವುದು ನೋಡಿದರೆ ಇವರಿಗೆ ಅವನ ಘನತೆಯನ್ನು ಯೋಗ್ಯ ರೀತಿಯಿಂದ ಅಳೆಯಲು ಆಗಿಲ್ಲವೆಂದು ವ್ಯಕ್ತವಾಗುತ್ತದೆ. ವ್ಯಾಪಾರಿ, ದಾದಿ ಮತ್ತು ನಾಯಿಂದರ ವಿಷಯದಲ್ಲಿ ಮಾತ್ರ ಎರಡೆರಡು ಸ್ಥಾನಗಳಿಂದ ಇವರಲ್ಲಿ ವ್ಯತ್ಯಾಸವಿದೆ. ಅಂದರೆ ವ್ಯಾಪಾರಿಗೆ ಬ್ರಾಹ್ಮಣರು ಆರನೆಯ ಸ್ಥಾನವನ್ನು ಕೊಟ್ಟರೆ, ಬ್ರಾಹ್ಮಣೇತರರು ಅದೇ ಉದ್ಯೋಗಕ್ಕೆ ಎಂಟನೆಯ ಸ್ಥಾನವನ್ನು ಕೊಟ್ಟಿದ್ದಾರೆ. ನಾಯಿಂದನಿಗೆ ಬ್ರಾಹ್ಮಣ ವಿದ್ಯಾರ್ಥಿಗಳು ಹದಿನೆಂಟನೆಯ ಸ್ಥಾನವನ್ನು ಕೊಟ್ಟರೆ ಬ್ರಾಹ್ಮಣೇತರ ವಿದ್ಯಾರ್ಥಿಗಳು ಅದೇ ಉದ್ಯೋಗಕ್ಕೆ ಹದಿನಾರನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಇನ್ನು ಬ್ರಾಹ್ಮಣ ವಿದ್ಯಾರ್ಥಿಗಳು ದಾದಿಗೆ ಹದಿನಾರನೆಯ ಸ್ಥಾನವನ್ನೂ ಬ್ರಾಹ್ಮಣೇತರ ವಿದ್ಯಾರ್ಥಿಗಳು ಅದೇ ಉದ್ಯೋಗಕ್ಕೆ ಹದಿನೆಂಟನೆಯ ಸ್ಥಾನವನ್ನೂ ಕೊಟ್ಟಿದ್ದಾರೆ. ಮಠಾಧಿಕಾರಿಯ ಸ್ಥಾನದ ಬಗ್ಗೆ ಎರಡೂ ಜಾತಿಗಳಲ್ಲಿ ಬಹಳ ವ್ಯತ್ಯಾಸವಿದೆ. ಬ್ರಾಹ್ಮಣ ವಿದ್ಯಾರ್ಥಿಗಳು ಮಠಾಧಿಕಾರಿಗೆ ಒಂಬತ್ತನೆಯ ಸ್ಥಾನವನ್ನು ಕೊಟ್ಟರೆ ಬ್ರಾಹ್ಮಣೇತರರು ಅದೇ ಉದ್ಯೋಗಕ್ಕೆ ಹದಿನೈದನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಇನ್ನು ಉಳಿದ ಉದ್ಯೋಗಗಳ ಸ್ಥಾನಮಾನದಲ್ಲೂ ಈ ಎರಡೂ ಜಾತಿಯವರ ಸಮೀಕ್ಷೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದೆ. ಸಂಖ್ಯಾಕಲನೀಯ ದೃಷ್ಟಿಯಿಂದ ಈ ಎರಡು ಜಾತಿಯವರಿಗೆ ಉದ್ಯೋಗಗಳ ಸ್ಥಾನಾನುಕ್ರಮದ ವ್ಯವಸ್ಥೆಯಲ್ಲಿ ಇರುವ ಸಂಬಂಧ .೩೭. ಅಂದರೆ ಅಷ್ಟು ಎದ್ದು ಕಾಣುವ ಸಂಬಂಧವಿಲ್ಲ.

ಆದಾಯದ ದೃಷ್ಟಿಯಿಂದ ವಿದ್ಯಾರ್ಥಿಗಳನ್ನು ಕಡಿಮೆ ಹಾಗು ಹೆಚ್ಚು ಆದಾಯ ಉಳ್ಳ ಕುಟುಂಬದಿಂದ ಬರುವವರೆಂದು ವಿಂಗಡಿಸಬಹುದು. ಯಾರಿಗೆ ಒಂದು ಸಾವಿರ ರೂ.ಗಳಿಗಿಂತ ಕಡಿಮೆ ವಾರ್ಷಿಕ ವರಮಾನವಿದೆಯೋ ಅವರನ್ನು ಕಡಿಮೆ ಆದಾಯ ಉಳ್ಳ ವರ್ಗಕ್ಕೂ ಮತ್ತು ಯಾರಿಗೆ ಸಾವಿರ ರೂ.ಗಳಿಗಿಂತಲೂ ಮೇಲ್ಪಟ್ಟ ವರಮಾನವಿದೆಯೋ ಅವರನ್ನು ಹೆಚ್ಚು ಆದಾಯ ಉಳ್ಳ ವರ್ಗಕ್ಕೂ ಸೇರಿಸಲಾಗಿದೆ.

ಕೆಳಗೆ ಕೊಟ್ಟಿರುವ ಪಟ್ಟಿ ಕಡಿಮೆ ಮತ್ತು ಹೆಚ್ಚು ವರಮಾನಗಳ ಕುಟುಂಬಗಳಿಂದ ಬರುವ ವಿದ್ಯಾರ್ಥಿಗಳು ಹತ್ತೊಂಬತ್ತು ಉದ್ಯೋಗಗಳಿಗೆ ಕೊಟ್ಟ ಸ್ಥಾನಗಳನ್ನು ಸೂಚಿಸುತ್ತದೆ.

ಕೋಷ್ಟಕ ೫

ಉದ್ಯೋಗಗಳು		ಹೆಚ್ಚು ವರಮಾನ ಸ್ಥಾನಗಳು	ಕಡಿಮೆ ವರಮಾನ ಸ್ಥಾನಗಳು
ಎಂಜಿನಿಯರ್	...	೧	೧
ವೈದ್ಯ	...	೨	೨
ಪ್ರಾಧ್ಯಾಪಕ	...	೩	೩
ಮಾಸ್ತರ	...	೪	೫
ಜಿಲ್ಲಾಧಿಕಾರಿ	...	೫	೫

ತಹಸೀಲ್ದಾರ	...	೬	೫
ವ್ಯಾಪಾರಿ	...	೭	೭
ಬೆರಳಚ್ಚುಗಾರ	...	೮	೯.೫
ಕಾರಕೂನ	...	೯.೫	೮
ಮಠಾಧಿಕಾರಿ	...	೯.೫	೧೧.೫
ಡ್ರೈವರ್	...	೧೧	೯.೫
ಕಮ್ಮಾರ	...	೧೨	೧೪
ಬಡಗಿ	...	೧೩	೧೩
ಅಗಸ	...	೧೪	೧೫
ಕೂಲಿ	...	೧೫	೧೭
ಮೋಚಿ	...	೧೬	೧೬
ನಾಯಿಂದ	...	೧೭	೧೮
ದಾದಿ	...	೧೮	೧೧.೫
ರಕ್ಷಣಾಧಿಕಾರಿ	...	೧೯	೧೯

ಮೇಲೆ ಕೊಟ್ಟಿರುವ ಪಟ್ಟಿಯನ್ನು ಪರೀಕ್ಷಿಸಿದಾಗ ಕಡಿಮೆ ಹಾಗೂ ಹೆಚ್ಚು ವರಮಾನವಿರುವ ವಿದ್ಯಾರ್ಥಿಗಳು ಎಂಜಿನಿಯರ್, ವೈದ್ಯ, ಪ್ರಾಧ್ಯಾಪಕ, ಮಾಸ್ತರು, ಜಿಲ್ಲಾಧಿಕಾರಿ, ಮೋಚಿ ಮತ್ತು ರಕ್ಷಣಾಧಿಕಾರಿಗೆ ಒಂದೇ ಸ್ಥಾನವನ್ನು ಕೊಟ್ಟಿದ್ದಾರೆ. ಹೆಚ್ಚು ವರಮಾನವುಳ್ಳ ವಿದ್ಯಾರ್ಥಿಗಳು ಮಾಸ್ತರಿಗೆ ನಾಲ್ಕನೆಯ ಸ್ಥಾನ ಕೊಟ್ಟರೆ, ಕಡಿಮೆ ವರಮಾನ ಉಳ್ಳ ವಿದ್ಯಾರ್ಥಿಗಳು ಅದೇ ಉದ್ಯೋಗಕ್ಕೆ ಐದನೆಯ ಸ್ಥಾನ ಕೊಟ್ಟಿದ್ದಾರೆ. ಅಂದರೆ ಹೆಚ್ಚು ವರಮಾನ ಉಳ್ಳ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಮಾಸ್ತರನ ಘನತೆ ಪ್ರಾಧ್ಯಾಪಕನ ಘನತೆಗಿಂತಲೂ ಹೆಚ್ಚು ಬಂದ ಹಾಗೆ ಆಯಿತು. ಕಡಿಮೆ ವರಮಾನ ಉಳ್ಳವರು ದಾದಿಗೆ ಹನ್ನೊಂದನೆಯ ಸ್ಥಾನವನ್ನು ಕೊಟ್ಟರೆ, ಹೆಚ್ಚು ವರಮಾನ ಉಳ್ಳವರು ಅದೇ ಉದ್ಯೋಗಕ್ಕೆ ಹದಿನೆಂಟನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಅಂದರೆ ಹೆಚ್ಚು ವರಮಾನ ಉಳ್ಳ ವಿದ್ಯಾರ್ಥಿಗಳಿಗೆ ದಾದಿಯ ಕೆಲಸ ಕೀಳು ಎಂಬ ಅರ್ಥ ಬರುವಂತಿದೆ. ಪುನಃ ಹೆಚ್ಚು ವರಮಾನ ಉಳ್ಳವರು ಮಠಾಧಿಕಾರಿಗೆ ಒಂಬತ್ತನೆಯ ಸ್ಥಾನವನ್ನು ಕೊಟ್ಟರೆ ಅದೇ ಉದ್ಯೋಗಸ್ಥನಿಗೆ ಕಡಿಮೆ ವರಮಾನ ಉಳ್ಳವರು ಹನ್ನೊಂದನೆಯ ಸ್ಥಾನವನ್ನು ಕೊಟ್ಟಿದ್ದಾರೆ. ಹೀಗೆ ಎರಡು ವರಮಾನಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರುವುದನ್ನು ನಾವು ಕಾಣುತ್ತೇವೆ. ಈ ಎರಡು ವರ್ಗಗಳವರೂ ರಕ್ಷಣಾಧಿಕಾರಿಯನ್ನು ಹತಮಾಡಿದ್ದಾರೆ. ಮೇಲೆ ಕೊಟ್ಟಿರುವ ಉದ್ಯೋಗಗಳನ್ನು ಆರಿಸುವಾಗ ಘನತೆಯನ್ನು ಮೂಲವಾಗಿಟ್ಟುಕೊಂಡಿದ್ದರೂ ಆಯಾ ವರ್ಗದವರು ತಮ್ಮ ವರ್ಗಕ್ಕೆ ಅನುಗುಣವಾಗಿಯೇ ಈ ಉದ್ಯೋಗಗಳನ್ನು ಕಾಣುತ್ತಾರೆ ಎಂಬುದು ಮೇಲಿನ ವಿಶ್ಲೇಷಣೆಯಿಂದ ವ್ಯಕ್ತವಾಗುತ್ತದೆ. ಆದರೆ ಸಂಖ್ಯಾಕಲನೀಯ ದೃಷ್ಟಿಯಿಂದ ಕಡಿಮೆ ಮತ್ತು ಹೆಚ್ಚು ವರಮಾನದವರು ಈ ಉದ್ಯೋಗಳಿಗೆ ಸ್ಥಾನಮಾನವನ್ನು ಕಲ್ಪಿಸುವಾಗ ಅವರಲ್ಲಿ ಗಮನಾರ್ಹವಾದ ವ್ಯತ್ಯಾಸವಿಲ್ಲ ಎಂಬುದು ಕಂಡುಬರುತ್ತವೆ. ಅಂದರೆ ಅವರವರು ಕೊಟ್ಟಿರುವ ಸ್ಥಾನಗಳಿಂದ ಸಂಬಂಧವಿದೆ ಎಂಬುದು ವ್ಯಕ್ತವಾಗುತ್ತದೆ. ಸಂಖ್ಯಾಕಲನೀಯ ದೃಷ್ಟಿಯಿಂದ .[illegible]ರಷ್ಟು ಗಮನಾರ್ಹ ಸಂಬಂಧ.

೧ ಇಲ್ಲಿ ವಿದ್ಯಾರ್ಥಿಗಳು (ಅಂದರೆ ತಾಂತ್ರಿಕ ಹಾಗೂ ಪ್ರೌಢಶಾಲೆಯ) ಎಂಜಿನಿಯರ್, ವೈದ್ಯ, ಪ್ರಾಧ್ಯಾಪಕ ಮತ್ತು ಮಾಸ್ತರು ಸಮಾಜದಲ್ಲಿ ಪ್ರತಿಷ್ಠಿತರು ಎಂಬುದಾಗಿ ಪರಿಗಣಿಸಿದ್ದಾರೆ. ಕಡೆಯ ನಾಲ್ಕು ಸ್ಥಾನಗಳನ್ನು, ಮೋಚಿ, ನಾಯಿಂದ ದಾದಿ ಮತ್ತು ರಕ್ಷಣಾಧಿಕಾರಿಗೆ ಕೊಡಲಾಗಿದೆ.

೨ ತಾಂತ್ರಿಕ ಹಾಗೂ ವೈದ್ಯಕಾಲೇಜು ವಿದ್ಯಾರ್ಥಿಗಳು ಉದ್ಯೋಗಗಳಿಗೆ ಸ್ಥಾನವನ್ನು ಕಲ್ಪಿಸುವಾಗ ಅವರವರಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರುವುದು ಕಂಡುಬರುತ್ತದೆ.

೩ ಉದ್ಯೋಗಗಳಿಗೆ ಸ್ಥಾನವನ್ನು ಕೊಡುವಾಗ ಲಿಂಗ. ಜಾತಿ ಹಾಗೂ ವರಮಾನದ ಪ್ರಭಾವ ಸಾಕಷ್ಟು ವಿದ್ಯಾರ್ಥಿಗಳ ಮೇಲೆ ಆಗಿದೆ ಎಂಬುದು ಕಂಡುಬರುತ್ತದೆ.

ಅಭಿವೃದ್ಧಿ ಹೊಂದುತ್ತಿರುವ ಪ್ರತಿಯೊಂದು ದೇಶವೂ ಕೈಗಾರಿಕಾ ಪ್ರಗತಿ ಮತ್ತು ಕಾರ್ಮಿಕ ವರ್ಗದ ಕ್ಷೇಮಾಭ್ಯುದಯದ ದೃಷ್ಟಿಯಿಂದ ಪ್ರೋತ್ಸಾಹದಾಯಕವಾದ ಒಂದು ಕಾರ್ಮಿಕ ನೀತಿಯನ್ನು ರೂಪಿಸುವುದು ಅಗತ್ಯ. ಕಾರ್ಮಿಕ ನೀತಿಯು ಮುಖ್ಯವಾಗಿ ದೇಶದ ಆರ್ಥಿಕ ಭದ್ರತೆಯನ್ನು ಕಾಪಾಡುವಂತಹದಾಗಿರಬೇಕು. ವೇತನಗಳ ಏರಿಕೆಯು ಸಾಮಾನ್ಯವಾಗಿ ಹಣದುಬ್ಬರಕ್ಕೆ ದಾರಿ ಮಾಡಿಕೊಡುತ್ತದೆ. ಇದು ಇಡೀ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸುತ್ತದೆ. ಆದುದರಿಂದ ವೇತನ ಏರಿಕೆಯು ಉತ್ಪಾದನ ಶಕ್ತಿಯ ಅಗತ್ಯಕ್ಕೆ ಅನುಗುಣವಾಗಿರಬೇಕಾದುದು ಅತ್ಯಗತ್ಯ. ಇಂತಹ ಜಾಣ್ಮೆಯ ನೀತಿಯು ಬೆಲೆ ಏರಿಕೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದರ ಮೂಲಕ ಆರ್ಥಿಕ ಸಮತೋಲನವನ್ನು ಕಾಪಾಡುತ್ತದೆ. ಇದನ್ನು ಜಾರಿಗೆ ತರುವ ಕಾರ್ಯದಲ್ಲಿ ಕೆಲವು ತೊಂದರೆಗಳು ಬಂದರೂ ಅವು ಕ್ರಮೇಣ ಮಾಯವಾಗಿ ದೇಶವು ಆರ್ಥಿಕವಾಗಿ ಸ್ವಾವಲಂಬನೆಯನ್ನು ಪಡೆಯಬಲ್ಲುದು. ಇಂದು ಭಾರತ ಮತ್ತು ಇತರ ಮುಂದುವರಿಯುತ್ತಿರುವ ದೇಶಗಳ ವ್ಯವಸ್ಥಿತ ಆರ್ಥಿಕ ಬೆಳವಣಿಗೆಯು ಬಹಳಮಟ್ಟಿಗೆ ತೃಪ್ತಿಕರ ಜೀವನ ನಡೆಸುವ ಹಾಗೂ ದಕ್ಷತೆಯಿಂದ ಕೂಡಿದ ಕಾರ್ಮಿಕ ವರ್ಗವನ್ನು ಅವಲಂಬಿಸಿದೆ ಎಂದು ಧಾರಾಳವಾಗಿ ಹೇಳಬಹುದು. ಭಾರತ ಸರ್ಕಾರವು ಬಹುಶಃ ಈ ಅಂಶವನ್ನು ಗಮನಿಸಿ ಪಂಚವಾರ್ಷಿಕ ಯೋಜನಾವಧಿಯಲ್ಲಿ ದೇಶದ ಪ್ರಗತಿ ಹಾಗೂ ಕಾರ್ಮಿಕ ಹಿತಚಿಂತನೆಯನ್ನೊಳಗೊಂಡ ಸಮರ್ಪಕವಾದ ಒಂದು ಕಾರ್ಮಿಕ ನೀತಿಯನ್ನು ಜಾರಿಗೆ ತಂದಿದೆ. ಈ ನೀತಿ ಹಾಗೂ ಕಾರ್ಮಿಕ ಶಾಸನಗಳ ಮುಖ್ಯೋದ್ದೇಶ ಸಾಮೂಹಿಕ ಗಳಿಕೆಯ ಪದ್ಧತಿ, ಸಮನ್ವಯ ಪದ್ಧತಿ ಅಥವಾ ಪಂಚಾಯತಿ ವಿಧಾನಗಳ ಮೂಲಕ ಕೈಗಾರಿಕಾ ಶಾಂತಿಯನ್ನು ಸ್ಥಾಪಿಸುವುದು. ಇದು ಸಾಧಿತವಾದ ಹೊರತು ಸ್ವಾವಲಂಬನೆಯ ಮಾತು ಕನಸಾದೀತು ಎಂಬುದನ್ನು ಎಲ್ಲರೂ ಒಪ್ಪಬೇಕಾಗಿದೆ.

–ಕೃಷ್ಣ ನಾಯಕ್[1]

---

1 ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು. ಭಾಗ–೧. ಬೆಂಗಳೂರು ವಿಶ್ವವಿದ್ಯಾನಿಲಯ. ಬೆಂಗಳೂರು, ೧೯೭೧, ಪು. ೪೨೬–೭

ಎನ್. ಪ್ರಭುಸ್ವಾಮಿ

ಅಮೆರಿಕದಲ್ಲಿ ಭಾರತೀಯರು

೧೯ನೆಯ ಶತಮಾನದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ವಲಸೆಗಾರರಾಗಿ ಭಾರತೀಯರು ಹೋಗುವುದು ಬಹಳ ಅಪರೂಪವಾಗಿತ್ತು. ಆಗ ಅಮೆರಿಕದಲ್ಲಿ ನೆಲಸಿದ್ದ ಭಾರತೀಯರ ಸಂಖ್ಯೆ ಒಂದು ಸಾವಿರಕ್ಕಿಂತಲೂ ಕಡಿಮೆ ಇತ್ತು ಎನ್ನಬಹುದು. ಆದರೆ ೨೦ನೆಯ ಶತಮಾನದಲ್ಲಿ ಅಮೆರಿಕಕ್ಕೆ ವಲಸೆಗಾರರಾಗಿ ಹೋಗುತ್ತಿರುವ ಭಾರತೀಯರ ಸಂಖ್ಯೆ ಏರುತ್ತಿದೆ ಎನ್ನಬಹುದು. ೨೦ನೆಯ ಶತಮಾನದ ಮೊದಲ ದಶಕದಲ್ಲಿ ಅಮೆರಿಕದಲ್ಲಿ ವಲಸೆಗಾರರಾಗಿ ನೆಲಸಿದ ಭಾರತೀಯರ ಸಂಖ್ಯೆ ೫,೦೦೦ದಷ್ಟಾಯಿತು ಎಂದು ತಿಳಿದು ಬರುತ್ತದೆ. ಪಂಜಾಬಿನಲ್ಲಿ ಉಂಟಾದ ಅಭಾವ ಪರಿಸ್ಥಿತಿಯ ಪರಿಣಾಮವಾಗಿ ಅನೇಕ ಸಿಖ್ ರೈತರು ಅಮೆರಿಕದ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ರೈತರಾಗಿ ನೆಲಸಲು ಆರಂಭಿಸಿದರು. ಹೀಗೆ ಅಮೆರಿಕಕ್ಕೆ ಭಾರತೀಯರು ವಲಸೆಗಾರರಾಗಿ ಹೋಗುವ ಪದ್ಧತಿ ೨೦ನೆಯ ಶತಮಾನದ ಆದಿಭಾಗದಿಂದ ಆರಂಭವಾಯಿತು ಎನ್ನಬಹುದು. ಅಮೆರಿಕದ ಸರ್ವೋಚ್ಚ ನ್ಯಾಯಾಲಯ ೧೯೨೩ರಲ್ಲಿ ಒಂದು ತೀರ್ಪನ್ನು ನೀಡಿ, ಭಾರತೀಯರು ವಲಸೆ ಬರುವುದಕ್ಕೆ ನಿರ್ಬಂಧ ವಿಧಿಸಿತ್ತು. ಆದ್ದರಿಂದ ೧೯೪೬ರ ತನಕ ಭಾರತೀಯ ವಲಸೆಗಾರರಿಗೆ ಅಮೆರಿಕಕ್ಕೆ ಹೋಗಿ ನೆಲಸಲು ಅವಕಾಶವಾಗಲಿಲ್ಲ. ಆದರೆ ೧೯೪೦ರ ಅನಂತರ ಅಮೆರಿಕದ ಆಡಳಿತ ವರ್ಗದವರು ಭಾರತೀಯರ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಲಾರಂಭಿಸಿದರು. ಭಾರತೀಯರ ಸ್ವಾತಂತ್ರ್ಯಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಸ್ವಾತಂತ್ರ್ಯ ದೊರೆತ ಮೇಲೆ ಅನೇಕ ಭಾರತೀಯ ವಿದ್ಯಾರ್ಥಿಗಳಿಗೆ ಅಮೆರಿಕದ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಟ್ಟರು. ಹೀಗೆ ಅಮೆರಿಕ ಮತ್ತು ಭಾರತಗಳ ನಡುವೆ ಹೆಚ್ಚಿನ ಸಂಪರ್ಕ ಬೆಳೆಯಲು ಅವಕಾಶವಾಯಿತು. ೧೯೬೫ರಲ್ಲಿ ಅಮೆರಿಕ ಸರ್ಕಾರ ಒಂದು ಹೊಸ ಕಾನೂನನ್ನು ಜಾರಿಗೆ ತಂದು ವಲಸೆಗಾರರ ಮೇಲೆ ಹಿಂದೆ ವಿಧಿಸಿದ್ದ ನಿರ್ಬಂಧವನ್ನು ಸಡಿಲಗೊಳಿಸಿತು. ಪೌರಸ್ತ್ಯ ದೇಶಗಳಿಂದ ವರ್ಷಕ್ಕೆ ೨೦ ಸಾವಿರಕ್ಕೆ ಮೀರದಂತೆ ವಲಸೆಗಾರರು ಅಮೆರಿಕಕ್ಕೆ ಬರಬಹುದೆಂದು ನಿರ್ಧರಿಸಲಾಯಿತು. ಈ ಕಾನೂನು ಜಾರಿಗೆ ಬಂದ ಮೇಲೆ ಭಾರತೀಯ ವಲಸೆಗಾರರ ಸಂಖ್ಯೆ ಅಧಿಕಗೊಳ್ಳಲಾರಂಭವಾಯಿತು. ೧೯೬೫-೧೯೭೫ರ ಅವಧಿಯಲ್ಲಿ ಕೆಲವು ಮುಖ್ಯ ದೇಶಗಳಿಂದ ಅಮೆರಿಕಕ್ಕೆ ಬರಲಾರಂಭಿಸಿದ ವಲಸೆಗಾರರ ಸಂಖ್ಯೆಯನ್ನು ಮುಂದಿನ ಪುಟದ ಕೋಷ್ಟಕದಲ್ಲಿ ಕೊಡಲಾಗಿದೆ.

ಈಗ ಸುಮಾರು ೧.೮೦.೦೦೦ ಭಾರತೀಯರು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಇದ್ದಾರೆ ಎಂದು ಅಂದಾಜು ಮಾಡಲಾಗಿದೆ. ೧೯೭೦ರ ಜನಗಣತಿಯ ಪ್ರಕಾರ ೧,೪೭,೦೦೦ ಭಾರತೀಯರು ಅಮೆರಿಕದ ಪೌರತ್ವವನ್ನು ಕಾಯಂ ಆಗಿ ಪಡೆದಿದ್ದಾರೆಂದು ತಿಳಿದು ಬರುತ್ತದೆ. ೧೧ ಸಾವಿರ ಜನ ವಿದ್ಯಾರ್ಥಿಗಳಾಗಿ ವಾಸಿಸುತ್ತಿದ್ದಾರೆ. ಉಳಿದವರು ಪ್ರವಾಸಿಗಳಾಗಿ ಅಥವಾ ವಾಣಿಜ್ಯ ವ್ಯವಹಾರಗಳಲ್ಲಿ ನಿರತರಾಗಿ ವಾಸಿಸುತ್ತಿದ್ದಾರೆ ಎಂದು ತಿಳಿದುಬರುತ್ತದೆ. ೧೯೬೫-೧೯೭೩ರ ಅವಧಿಯಲ್ಲಿ ೭೩,೦೦೦ ಭಾರತೀಯ ವಲಸೆಗಾರರು ಅಮೆರಿಕದಲ್ಲಿ ನೆಲಸಿದರು. ಅಂದರೆ ಈ ೯ ವರ್ಷಗಳಲ್ಲಿ ಬಂದ ವಲಸೆಗಾರರ ಸಂಖ್ಯೆ ಕಳೆದ ೧೫೦ ವರ್ಷಗಳಲ್ಲಿ ಬಂದ ಒಟ್ಟು ವಲಸೆಗಾರರ ಸಂಖ್ಯೆಗಿಂತ ಅಧಿಕವಾಗಿತ್ತು.

ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಬಂದ ವಲಸೆಗಾರರ ಸಂಖ್ಯೆ[1]

(೧೫ ಪ್ರಮುಖ ದೇಶಗಳಿಂದ)

೧೯೬೫		೧೯೭೩	
೧ ಕೆನಡ	೩೮.೩೨೭	೧ ಮೆಕ್ಸಿಕೋ	೭೦.೧೪೧
೨ ಮೆಕ್ಸಿಕೋ	೩೭.೯೬೯	೨ ಫಿಲಿಫೀನ್ಸ್	೩೦,೭೯೯
೩ ಬ್ರಿಟನ್	೨೭,೩೫೮	೩ ಕ್ಯೂಬ	೨೪,೧೪೭
೪ ಜರ್ಮನಿ	೨೪.೦೪೫	೪ ಕೊರಿಯ	೨೨,೯೩೦
೫ ಕ್ಯೂಬ	೧೯,೭೬೦	೫ ಇಟಲಿ	೨೨.೧೫೧
೬ ಕೊಲಂಬಿಯ	೧೦.೮೮೫	೬ ಚೀನ	೧೭,೨೯೭
೭ ಇಟಲಿ	೧೦,೮೨೧	೭ ಡಾಮಿನಿಕನ್ ಗಣರಾಜ್ಯ	೧೪,೯೨೧
೮ ಡಾಮಿನಿಕನ್ ಗಣರಾಜ್ಯ	೯.೫೦೪	೮ ಭಾರತ	೧೩,೧೨೪
೯ ಪೋಲೆಂಡ್	೮.೪೬೫	೯ ಗ್ರೀಸ್	೧೦,೭೫೧
೧೦ ಅರ್ಜೆಂಟೀನ	೬.೧೨೪	೧೦ ಪೋರ್ಚುಗಲ್	೧೦.೭೫೧
೧೧ ಐರ್ಲೆಂಡ್	೫.೪೬೩	೧೧ ಬ್ರಿಟನ್	೧೦,೬೩೮
೧೨ ಈಕ್ವಡಾರ್	೪.೩೯೨	೧೨ ಜಮೇಕ	೯,೯೬೩
೧೩ ಫ್ರಾನ್ಸ್	೪.೦೩೯	೧೩ ಕೆನಡ	೮,೯೫೧
೧೪ ಚೀನ	೪,೦೫೭	೧೪ ಯೂಗೊಸ್ಲಾವಿಯ	೭,೫೮೨
೧೫ ಹೈಟಿ	೩.೬೦೯	೧೫ ಟ್ರಿನಿಡಾಡ್ ಮತ್ತು ಟೊಬಾಗೊ	೭.೦೩೫

ಅಮೆರಿಕದ ರಾಯಭಾರಿ ಕಚೇರಿ ನಡೆಸಿದ ಮಾದರಿ ಸಮೀಕ್ಷೆಯ ಪ್ರಕಾರ ಬಹುಪಾಲು ಭಾರತೀಯ ವಲಸೆಗಾರರು ಗುಜರಾತ್, ಪಂಜಾಬ್, ಕೇರಳ, ಪಶ್ಚಿಮ ಬಂಗಾಳ ಮತ್ತು ದೆಹಲಿ ರಾಜ್ಯಗಳಿಂದ ಬಂದವರಾಗಿದ್ದಾರೆ. ಸಮೀಕ್ಷೆಯಿಂದ ಈ ವಿವರಗಳು ದೊರೆತಿವೆ: ೧ ಬಹುಪಾಲು ವಲಸೆಗಾರರು ವಿವಾಹಿತರು. ೨ ಹೆಂಗಸರು ಮತ್ತು ಮಕ್ಕಳು ಒಟ್ಟು ವಲಸೆಗಾರರ ಸಂಖ್ಯೆಯ ಅರ್ಧದಷ್ಟಿದ್ದಾರೆ. ೩ ಕೇರಳದಿಂದ ಬಂದ ವಲಸೆಗಾರರ ಪೈಕಿ ಬಹುಮಂದಿ ನರ್ಸ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ೪ ಜನಸಂಖ್ಯೆ ಹೆಚ್ಚಾಗಿರುವ ಅಮೆರಿಕನ್ ನಗರಗಳಲ್ಲೇ ಭಾರತೀಯರು ನೆಲಸಲು ಇಚ್ಛಿಸುತ್ತಾರೆ. ಭಾರತೀಯರು ಏಕಾಂತವಾಸ ಮಾಡಲು ಇಷ್ಟಪಡುವುದಿಲ್ಲ. ಹಾಯಿಂ ಆಗಿ ಅಮೆರಿಕನ್ ಪೌರತ್ವವನ್ನು ಪಡೆಯದೆ ಇರುವ ಭಾರತೀಯರ ಬಗ್ಗೆ ೧೯೭೩ರಲ್ಲಿ ಒಂದು ಸಮೀಕ್ಷೆ ನಡೆಸಲಾಯಿತು. ಅದರ ಪ್ರಕಾರ ಸೇಕಡ ೨೧ರಷ್ಟು ಜನರು ನ್ಯೂ ಯಾರ್ಕ್‌ನಲ್ಲೂ ಸೇಕಡ ೧೩ರಷ್ಟು ಕ್ಯಾಲಿಫೋರ್ನಿಯದಲ್ಲೂ ಸೇಕಡ ೧೧ರಷ್ಟು ಇಲಿನಾಯ್ಸ್‌ನಲ್ಲೂ ಸೇಕಡ ೮ರಷ್ಟು ನ್ಯೂ ಜರ್ಸಿಯಲ್ಲೂ ತಲಾ ಸೇಕಡ ೩ರಷ್ಟು ಮಿಚಿಗನ್, ಒಹೈಯೋ ಮತ್ತು ಪೆನ್‌ಸಿಲ್‌ವೇನಿಯ ರಾಜ್ಯಗಳಲ್ಲೂ ಉಳಿದವರು ಇತರ ಎಲ್ಲ ರಾಜ್ಯಗಳಲ್ಲೂ ವಾಸಿಸುತ್ತಾರೆ.

ಹಾಯಿಂ ಆಗಿ ಅಮೆರಿಕನ್ ಪೌರತ್ವವನ್ನು ಪಡೆದ ಭಾರತೀಯರ ಪೈಕಿ ಯಾವಯಾವ ರಾಜ್ಯದಲ್ಲಿ ಎಷ್ಟೆಷ್ಟು ಜನರು ವಾಸಿಸುತ್ತಿದ್ದಾರೆ ಎಂಬ ಬಗ್ಗೆ ಅಂಕಿಅಂಶಗಳು ದೊರೆತಿಲ್ಲ. ಆದರೆ ಅವರ ಪೈಕಿ ಬಹು ಪಾಲು ಸಿಖ್ ಮತಸ್ಥರು. ಅವರು ರೈತರಾಗಿ ಕ್ಯಾಲಿಫೋರ್ನಿಯ ರಾಜ್ಯದಲ್ಲಿ ವಾಸಿಸುತ್ತಿದ್ದಾರೆ.

---

[1] ಅಮೆರಿಕದ ಸ್ಟೇಟ್ ಇಲಾಖೆಯ ಒಂದು ಪ್ರಕಟಣೆ (Span ನಿಯತಕಾಲಿಕೆ: ಸೆಪ್ಟೆಂಬರ್, ೧೯೭೪; ಪು. ೧೫)

೧೯೬೫ರಿಂದ ಈಚೆಗೆ ಅಮೆರಿಕಕ್ಕೆ ಬಂದಿರುವ ಭಾರತೀಯರ ಪೈಕಿ ಬಹು ಪಾಲು ಜನರು ವಿವಿಧ ವೃತ್ತಿಗಳಲ್ಲಿ ನಿಪುಣರಾಗಿರುವವರಾಗಿದ್ದಾರೆ. ಎಂಜಿನಿಯರಿಂಗ್, ವೈದ್ಯ, ನರ್ಸಿಂಗ್ ಮತ್ತು ವಿಜ್ಞಾನ ಭಾಗಗಳಲ್ಲಿ ಒಳ್ಳೆಯ ಪದವಿ ಪಡೆದವರಾಗಿದ್ದಾರೆ. ಕೆಲವರು ವ್ಯಾಪಾರದಲ್ಲಿ ನಿರತರಾಗಿದ್ದಾರೆ. ಇನ್ನು ಕೆಲವರು ಕೈಗಾರಿಕೆಗಳಲ್ಲಿ, ಸರ್ಕಾರಿ ಇಲಾಖೆಗಳಲ್ಲಿ, ಆಸ್ಪತ್ರೆಗಳಲ್ಲಿ ಮತ್ತು ಸಂಶೋಧನ ಕೇಂದ್ರಗಳಲ್ಲಿ ಉದ್ಯೋಗಿಗಳಾಗಿದ್ದಾರೆ. ೧೯೬೫-೧೯೭೫ರ ಅವಧಿಯಲ್ಲಿ ಅಮೆರಿಕಕ್ಕೆ ಬಂದ ಭಾರತೀಯರ ಪೈಕಿ ಅರ್ಧದಷ್ಟು ಜನರು ಎಂಜಿನಿಯರಿಂಗ್ ಅಥವಾ ವಿಜ್ಞಾನ ವಿಭಾಗಗಳಲ್ಲಿ ಪದವಿ ಪಡೆದವರಾಗಿದ್ದರು. ೧೯೭೫ರಿಂದ ಈಚೆಗೆ ಬರುತ್ತಿರುವವರ ಪೈಕಿ ಎಂಜಿನಿಯರಿಂಗ್ ಪದವೀಧರರ ಸಂಖ್ಯೆ ಕಡಿಮೆಯಾಗಿ, ವೈದ್ಯ ಪದವೀಧರರ ಸಂಖ್ಯೆ ಹೆಚ್ಚಾಗುತ್ತಿದೆ. ೧೯೭೪ರಲ್ಲಿ ಭಾರತದಿಂದ ೧೯೦೦ ಜನ ವೈದ್ಯ ಪದವೀಧರರು ಅಮೆರಿಕಕ್ಕೆ ಬಂದರು. ಅಮೆರಿಕಕ್ಕೆ ವಿವಿಧ ದೇಶಗಳಿಂದ ಬಂದ ವೈದ್ಯ ಪದವೀಧರರ ಪೈಕಿ ಭಾರತೀಯರ ಸಂಖ್ಯೆ ಅತ್ಯಧಿಕವಾಗಿತ್ತು. ಇವರ ಪೈಕಿ ಬಹುಮಂದಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಅಮೆರಿಕದಲ್ಲಿ ವಾಸಿಸುತ್ತಿರುವ ಭಾರತೀಯರ ಪೈಕಿ (ವಿದ್ಯಾರ್ಥಿಗಳನ್ನು ಬಿಟ್ಟು) ಅನೇಕರು ಒಳ್ಳೆಯ ಜೀವನ ನಡೆಸುತ್ತಿದ್ದಾರೆ. ಭಾರತೀಯರ ವರಮಾನ ಮತ್ತು ಜೀವನ ಪರಿಸ್ಥಿತಿಯ ವಿಷಯವಾಗಿ ಅಮೆರಿಕದ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ ೧೯೭೦ರಲ್ಲಿ ಒಂದು ಅಧ್ಯಯನ ನಡೆಸಿತು. ಆ ಅಧ್ಯಯನದಿಂದ ಈ ಅಂಶಗಳು ತಿಳಿದುಬಂದುವು: ೧೯೬೪ ಮತ್ತು ೧೯೬೯ರ ಅವಧಿಯಲ್ಲಿ ಭಾರತದಿಂದ ಬಂದ ವಿಜ್ಞಾನಿಗಳು ಮತ್ತು ಎಂಜಿನಿಯರುಗಳ ಪೈಕಿ ಸೇಕಡ ೪೫ರಷ್ಟು ಮಂದಿ ವಾರ್ಷಿಕವಾಗಿ ೧೦ ಸಾವಿರದಿಂದ ೧೫ ಸಾವಿರ ಡಾಲರುಗಳ ವರೆಗೆ ಸಂಪಾದಿಸುತ್ತಿದ್ದರು. ಸೇಕಡ ೩೫ರಷ್ಟು ಮಂದಿ ವಾರ್ಷಿಕವಾಗಿ ೧೫.೦೦೦–೨೦.೦೦೦ ಡಾಲರುಗಳಷ್ಟು ಸಂಪಾದಿಸುತ್ತಿದ್ದರು. ಸೇಕಡ ೧೧.೫ ಮಂದಿ ವಾರ್ಷಿಕವಾಗಿ ೨೦.೦೦೦ ಡಾಲರುಗಳಿಗಿಂತ ಅಧಿಕ ಸಂಪಾದನೆ ಮಾಡುತ್ತಿದ್ದರು.

೧೯೭೪ರಲ್ಲಿ ನಡೆಸಿದ ಒಂದು ಮಾದರಿ ಸಮೀಕ್ಷೆಯಿಂದ ಭಾರತೀಯರು ವಾರ್ಷಿಕವಾಗಿ ಸರಾಸರಿ ೧೪,೩೫೦ ಡಾಲರುಗಳ ವರಮಾನ ಪಡೆಯುತ್ತಿದ್ದಾರೆ ಎಂದು ತಿಳಿದುಬಂದಿದೆ.

ಅಮೆರಿಕಕ್ಕೆ ವಲಸೆಗಾರರಾಗಿ ಬಂದಿರುವ ಭಾರತೀಯರು ಸಾಮಾನ್ಯ ಅಮೆರಿಕನ್ ಪ್ರಜೆ ಪಡೆಯುವ ವರಮಾನಕ್ಕಿಂತ ಅಧಿಕ ವರಮಾನ ಪಡೆಯುತ್ತಿದ್ದಾರೆ. (೧೯೭೦ರಲ್ಲಿ ಒಬ್ಬ ಸಾಮಾನ್ಯ ಅಮೆರಿಕನ್ ಪ್ರಜೆಯ ಸರಾಸರಿ ವಾರ್ಷಿಕ ವರಮಾನ ೧೦,೧೧೬ ಡಾಲರುಗಳಷ್ಟಿತ್ತು.) ಏಕೆಂದರೆ ವಲಸೆಗಾರರಾಗಿ ಬಂದಿರುವ ಭಾರತೀಯರ ವಿದ್ಯಾಮಟ್ಟ ಸಾಮಾನ್ಯ ಅಮೆರಿಕನನ ವಿದ್ಯಾಮಟ್ಟಕ್ಕಿಂತ ಉತ್ತಮವಾಗಿರುತ್ತದೆ. ೧೯೭೦ರ ಜನಗಣತಿಯ ಪ್ರಕಾರ ೨೫ ವರ್ಷ ವಯಸ್ಸಿಗೆ ಮೇಲ್ಪಟ್ಟಿರುವ ಅಮೆರಿಕನ್ ಪ್ರಜೆಗಳ ಪೈಕಿ ಸೇಕಡ ೧೧ರಷ್ಟು ಜನ ಮಾತ್ರ ಕಾಲೇಜು ವಿದ್ಯಾಭ್ಯಾಸ ಮಾಡಿದ್ದರೆಂದು ತಿಳಿದುಬರುತ್ತದೆ. ಆದರೆ ೧೯೭೪ರಲ್ಲಿ ಭಾರತದಿಂದ ವಲಸೆಗಾರರಾಗಿ ಬಂದ ಭಾರತೀಯರ ಪೈಕಿ ಸೇಕಡ ೬೮ರಷ್ಟು ಜನರು ಸ್ನಾತಕೋತ್ತರ ವಿದ್ಯಾಭ್ಯಾಸ ಅಥವಾ ತಾಂತ್ರಿಕ ವಿದ್ಯಾಭ್ಯಾಸ ಪಡೆದವರಾಗಿದ್ದರು. ಅನೇಕ ವರ್ಷಗಳಿಂದ ನೆಲಸಿರುವ ಭಾರತೀಯರು ಅಮೆರಿಕದಲ್ಲಿ ಹಣ ಸಂಪಾದನೆ ಮಾಡಿ ಭಾರತದಲ್ಲಿ ಇರುವ ತಮ್ಮ ಬಂಧುಗಳಿಗೆ ಹಣ ಕಳುಹಿಸಿ ಅವರು ಸಣ್ಣ ಕೈಗಾರಿಕೋದ್ಯಮಗಳನ್ನು ನಡೆಸಲು ಸಹಾಯ ಮಾಡಿದ್ದಾರೆ.

ಅಮೆರಿಕದ ಪೌರತ್ವವನ್ನು ಪಡೆದ ಭಾರತೀಯರ ಸಂಖ್ಯೆ ೩ ಲಕ್ಷಕ್ಕೂ ಮೀರಿದ ಮೇಲೆ ಅವರ ಆರ್ಥಿಕ ಪರಿಸ್ಥಿತಿಯನ್ನು ಕುರಿತ ಹೆಚ್ಚಿನ ವಿವರಗಳು ತಿಳಿದುಬರುತ್ತವೆ. ಅಮೆರಿಕದ ಜನಗಣತಿ ಅಧಿಕಾರಿಗಳು ಆಗ ಭಾರತೀಯರ ಬಗ್ಗೆ ಪ್ರತ್ಯೇಕ ಅಂಕಿ-ಅಂಶಗಳನ್ನು ಸಂಗ್ರಹಿಸಲು ಆರಂಭಿಸುತ್ತಾರೆ. ಈಗ ಚೀನ ಮತ್ತು ಜಪಾನ್‌ನಿಂದ ಬಂದು ಅಮೆರಿಕದಲ್ಲಿ ನೆಲಸಿರುವ ವಲಸೆಗಾರರ ಬಗ್ಗೆ ಮೇಲ್ಕಂಡ ಮಾಹಿತಿಯನ್ನು ಸಂಗ್ರಹಿಸಿ ಇಡಲಾಗಿದೆ. ಜಪಾನಿನಿಂದ ಬಂದು ನೆಲಸಿರುವ ಒಂದು ಕುಟುಂಬದ ವಾರ್ಷಿಕ ಸರಾಸರಿ ವರಮಾನ ೧೯೭೫ರಲ್ಲಿ ೧೨,೫೧೫ ಡಾಲರುಗಳಷ್ಟಿತ್ತು. ಚೀನದಿಂದ ಬಂದು ನೆಲಸಿರುವ ಒಂದು ಕುಟುಂಬದ ವರಮಾನ ೧೦,೬೧೦ ಡಾಲರುಗಳಷ್ಟು ಇತ್ತು. ಅಮೆರಿಕನ್ ಕುಟುಂಬದ ಸರಾಸರಿ ವಾರ್ಷಿಕ ವರಮಾನ ೯,೫೯೦ ಡಾಲರುಗಳಾಗಿತ್ತು. ಇದೇ ರೀತಿ ಇನ್ನು ಮುಂದೆ ಭಾರತೀಯ

ಕುಟುಂಬದವರ ಸರಾಸರಿ ವಾರ್ಷಿಕ ವರಮಾನ ಚೀನ ಮತ್ತು ಜಪಾನೀ ಕುಟುಂಬಗಳ ವಾರ್ಷಿಕ ವರಮಾನದಂತೆ ಉನ್ನತ ಮಟ್ಟದಲ್ಲಿರುವುದನ್ನು ನಾವು ಕಾಣಬಹುದು.

ಅನೇಕ ಭಾರತೀಯ ಕುಟುಂಬಗಳು ಉತ್ತಮ ಜೀವನ (ಅಮೆರಿಕದ ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬಗಳು ಜೀವನ ನಡೆಸುವಂತೆ) ನಡೆಸುತ್ತಿವೆ. ಭಾರತೀಯರು ವಿವಿಧ ರೀತಿಯ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ. ವಿಶ್ವಸಂಸ್ಥೆಯ ಪ್ರಮುಖ ಸ್ಥಾನಗಳನ್ನು ಹೊಂದಿದವರಾಗಿದ್ದಾರೆ. ಪಂಜಾಬಿನ ರೈತರು ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಹಣ್ಣು ತೋಟಗಳನ್ನು ಪಡೆದು ಒಳ್ಳೆಯ ವರಮಾನ ಪಡೆಯುತ್ತಿದ್ದಾರೆ. ಗುಜರಾತಿನ ವಿದ್ಯಾರ್ಥಿಗಳು ಅಮೆರಿಕದಲ್ಲಿ ಹಣ ಸಂಪಾದಿಸಿ ವಾಪಸ್ಸು ಗುಜರಾತಿಗೆ ಬಂದು ಒಳ್ಳೆ ಉದ್ಯಮಗಳನ್ನು ಸ್ಥಾಪಿಸಿದ್ದಾರೆ. ಕೇರಳದ ಯುವತಿಯರು ಅಮೆರಿಕದ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸಮಾಡಿ ಒಳ್ಳೆಯ ಹೆಸರು ಪಡೆದಿದ್ದಾರೆ. ಹಲವರು ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕರಾಗಿ ಒಳ್ಳೆಯ ಕೀರ್ತಿ ಗಳಿಸಿಕೊಂಡಿದ್ದಾರೆ. ಡಾಕ್ಟರ್ ಎಸ್. ಚಂದ್ರಶೇಖರ್‌ರವರು ಚಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಖ್ಯಾತ ವಿಜ್ಞಾನಿಯಾಗಿ ವಿಶ್ವದಲ್ಲೇ ಹೆಸರಾಂತ ವಿಜ್ಞಾನಿ ಎಂಬ ಮನ್ನಣೆ ಪಡೆದಿದ್ದಾರೆ. ಡಾ. ಶ್ರೀರಾಮ್‌ರವರು ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್‌ನಲ್ಲಿ ಜೀವ ರಸಾಯನ ವಿಜ್ಞಾನಿಯಾಗಿದ್ದಾರೆ. ಡಾ. ಹರಗೋಬಿಂದ ಖೊರಾನಾರವರು ನೊಬೆಲ್ ಪಾರಿತೋಷಕ ವಿಜೇತರಾಗಿ ಅಮೆರಿಕದ ವಿಸ್‌ಕಾನ್‌ಸಿನ್ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೇ ರೀತಿ ಹಲವು ಭಾರತೀಯರು ಅಮೆರಿಕನ್ ವಿಶ್ವವಿದ್ಯಾನಿಲಯಗಳ ಮನ್ನಣೆ ಪಡೆದವರಾಗಿದ್ದಾರೆ.

ಭಾರತೀಯ ವಿದ್ಯಾರ್ಥಿಗಳು ತಮ್ಮ ದೇಶದ ವಿಷಯವಾಗಿ ಅಭಿಮಾನ ಹೊಂದಿದವರಾಗಿದ್ದಾರೆ. ತಾವು ನೆಲೆಸಿರುವ ಕಡೆ ಭಾರತೀಯರ ಸಂಘಗಳನ್ನು ಸ್ಥಾಪಿಸಿಕೊಂಡು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಾರೆ. ಹೋಳಿ ಮತ್ತು ದೀಪಾವಳಿಯಂತಹ ಹಬ್ಬಗಳನ್ನು ಆಚರಿಸುತ್ತಾರೆ. ಭಾರತೀಯ ಚಲನಚಿತ್ರ ಪ್ರದರ್ಶನ ಏರ್ಪಡಿಸುತ್ತಾರೆ. ಸಂಗೀತ ಕಚೇರಿಗಳನ್ನು ಮತ್ತು ಕಲಾ ಪ್ರದರ್ಶನಗಳನ್ನು ಆಗಿಂದಾಗ್ಗೆ ನಡೆಸುತ್ತಾರೆ. ಭಾರತೀಯ ತಿಂಡಿ ತಿನಸುಗಳನ್ನು ಮಾಡಿ ಅಮೆರಿಕದ ಸ್ನೇಹಿತರನ್ನು ಆಹ್ವಾನಿಸಿ ಸತ್ಕಾರಕೂಟ ಏರ್ಪಡಿಸುತ್ತಾರೆ. ಬೇರೆ ದೇಶಗಳಿಂದ ಅಮೆರಿಕಕ್ಕೆ ವಲಸೆ ಬಂದಿರುವವರೊಡನೆ ಭಾರತೀಯರನ್ನು ಹೋಲಿಸಿದರೆ ಒಂದು ವ್ಯತ್ಯಾಸ ಕಂಡುಬರುತ್ತದೆ. ಬಹುಪಾಲು ಭಾರತೀಯರು ಭಾರತಕ್ಕೆ ಬಂದು ಲಗ್ನ ಮಾಡಿಕೊಂಡು ಸಂಸಾರ ಸಮೇತರಾಗಿ ತೆರಳಿ ಅಮೆರಿಕದಲ್ಲಿ ವಾಸಿಸಲು ಇಚ್ಛಿಸುತ್ತಾರೆ. ಬೇರೆ ದೇಶಗಳಿಂದ ಬಂದವರು ಅಮೆರಿಕದ ಯುವತಿಯರನ್ನು ವಿವಾಹವಾಗಲು ಇಚ್ಛಿಸುತ್ತಾರೆ.

ಅಮೆರಿಕದಲ್ಲಿ ಓದುತ್ತಿರುವ ವಿದೇಶಿ ವಿದ್ಯಾರ್ಥಿಗಳ ಪೈಕಿ ಭಾರತೀಯರ ಸಂಖ್ಯೆ ಅತ್ಯಧಿಕ ಮೊದಲ ಬಾರಿಗೆ ೧೯೭೧-೭೨ರಲ್ಲಿ ಇವರು ಕೆನಡದಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಮೀರಿಸಿ ಮೊದಲ ಸ್ಥಾನ ಗಳಿಸಿದರು. ೧೯೭೨-೭೩ರಲ್ಲಿ ಒಟ್ಟು ೧೧ ಸಾವಿರ ಭಾರತೀಯ ವಿದ್ಯಾರ್ಥಿಗಳಿದ್ದು ಮೊದಲನೆಯ ಸ್ಥಾನ ಪಡೆದಿದ್ದರು. ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ದೊರೆಯುವ ಉನ್ನತ ಮಟ್ಟದ ವಿದ್ಯಾಭ್ಯಾಸ ಮತ್ತು ವಿವಿಧ ರೀತಿಯ ಬೋಧನ ವಿಷಯಗಳು ಭಾರತೀಯ ವಿದ್ಯಾರ್ಥಿಗಳನ್ನು ಇಷ್ಟೊಂದು ಸಂಖ್ಯೆಯಲ್ಲಿ ಆಕರ್ಷಿಸಿವೆ ಎನ್ನಬಹುದು. ಜೊತೆಗೆ ನಾನಾ ರೀತಿಯ ವಿದ್ಯಾರ್ಥಿ ವೇತನಗಳನ್ನು ಅಮೆರಿಕದ ವಿಶ್ವವಿದ್ಯಾನಿಲಯಗಳು ಭಾರತೀಯರಿಗೆ ನೀಡುವುದರಿಂದ ಭಾರತೀಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಟ್ಟಂತಾಗಿದೆ. ಕೆಲವರು ಅಮೆರಿಕದಲ್ಲಿ ನೆಲಸಿರುವ ತಮ್ಮ ಬಂಧುಗಳು ಮತ್ತು ಸ್ನೇಹಿತರು ಒದಗಿಸುವ ಹಣದ ಸಹಾಯದಿಂದ ವಿದ್ಯಾಭ್ಯಾಸ ಮಾಡಲು ಬಂದಿದ್ದಾರೆ. ಅಮೆರಿಕಕ್ಕೆ ಬರುವ ಭಾರತೀಯ ವಿದ್ಯಾರ್ಥಿಗೆ ಸಾಮಾನ್ಯವಾಗಿ ೨೫ ವರ್ಷ ವಯಸ್ಸಾಗಿರುತ್ತದೆ. ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಂದ ಬಹುಸಂಖ್ಯೆಯ ವಿದ್ಯಾರ್ಥಿಗಳು ಅಮೆರಿಕಕ್ಕೆ ಬರುತ್ತಾರೆ. ಆನಂತರ ದೆಹಲಿ, ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಉಳಿದ ರಾಜ್ಯಗಳಿಂದ ಬರುವವರ ಸಂಖ್ಯೆ ಕಡಿಮೆ.

ಭಾರತೀಯ ವಿದ್ಯಾರ್ಥಿಗಳು ಪ್ರಮುಖವಾಗಿ ನ್ಯೂ ಯಾರ್ಕ್, ಕನೆಕ್ಟಿಕಟ್, ಪೆನ್‌ಸಿಲ್ವೇನಿಯ, ಇಲಿನಾಯ್, ಇಂಡಿಯಾನ, ಮಿಷಿಗನ್, ಒಹೈಯೋ, ವಿಸ್‌ಕಾನ್‌ಸಿನ್ ಮತ್ತು ಕ್ಯಾಲಿಫೋರ್ನಿಯ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಾಗಿರುವುದು ಕಂಡುಬರುತ್ತದೆ. ಭಾರತೀಯ ವಿದ್ಯಾರ್ಥಿಗಳ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು. ಆರನೆಯ ಒಂದು ಭಾಗ ವಿದ್ಯಾರ್ಥಿಗಳು ಭೌತವಿಜ್ಞಾನ ಮತ್ತು ಜೀವವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾಗಿರುತ್ತಾರೆ. ಹತ್ತನೆಯ ಒಂದು ಭಾಗ ವಿದ್ಯಾರ್ಥಿಗಳು ವಾಣಿಜ್ಯಶಾಸ್ತ್ರ ವಿಭಾಗದವರು. ಉಳಿದವರು ಸಮಾಜವಿಜ್ಞಾನಗಳ ಮತ್ತು ಭಾಷೆಗಳ ಅಧ್ಯಯನವಿಭಾಗಗಳಲ್ಲಿ ಇರುತ್ತಾರೆ. ಇವರ ಸಂಖ್ಯೆ ಅತ್ಯಲ್ಪ. ಭಾರತೀಯ ವಿದ್ಯಾರ್ಥಿಗಳ ಪೈಕಿ ಮುಕ್ಕಾಲು ಭಾಗ ವಿದ್ಯಾರ್ಥಿಗಳು ಸ್ನಾತಕೋತ್ತರ ತರಗತಿಗಳಲ್ಲಿ ಓದುವವರು.

ಭಾರತೀಯ ವಿದ್ಯಾರ್ಥಿಗಳು ಹಣಕಾಸಿನ ವಿಷಯದಲ್ಲಿ ಎಚ್ಚರಿಕೆಯಿಂದ ಇರುತ್ತಾರೆ. ಬಹಳ ವಿದ್ಯಾರ್ಥಿಗಳು ತಮ್ಮ ವೆಚ್ಚಕ್ಕಾಗಿ ವಿದ್ಯಾರ್ಥಿವೇತನಗಳನ್ನೇ ನಂಬಿಕೊಂಡಿರುವುದರಿಂದ ಮಿತವ್ಯಯದಿಂದ ಜೀವನ ನಡೆಸುವುದು ಅನಿವಾರ್ಯ. ಕೆಲವರು ಒಪ್ಪೊತ್ತಿನ ಕೆಲಸಗಳನ್ನು ಒಪ್ಪಿಕೊಂಡು ತಮ್ಮ ವರಮಾನ ಹೆಚ್ಚಿಸಿಕೊಳ್ಳಲು ಯತ್ನಿಸುವುದುಂಟು. ವಿದ್ಯಾರ್ಥಿವೇತನದಿಂದ ಅಥವಾ ಕೆಲಸದಿಂದ ಹಣ ದೊರಕಿಸಿಕೊಳ್ಳಲು ಆಗದಿದ್ದವರು ಅಮೆರಿಕದಲ್ಲಿರುವ ಸ್ನೇಹಿತರಿಂದ ಅಥವಾ ಬಂಧುಗಳಿಂದ ಸಾಲದ ಪಡೆಯುತ್ತಾರೆ. ಅವರಿಗೆ ತಮ್ಮ ಬಂಧುಗಳ ಮೂಲಕ ಭಾರತದಲ್ಲಿ ರೂಪಾಯಿ ಮೌಲ್ಯದಲ್ಲಿ ಹಣ ಕೊಡುಮಂತೆ ಏರ್ಪಾಡು ಮಾಡುತ್ತಾರೆ.

ಎಂಜಿನಿಯರಿಂಗ್ ವಿಭಾಗದಲ್ಲಿ ಓದುವ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಒಳ್ಳೆಯ ಫಲಿತಾಂಶ ಪಡೆಯುತ್ತಾರೆ. ಅವರ ಪೈಕಿ ಸೇಕಡ ೮೦ರಷ್ಟು ಮಂದಿ ತೇರ್ಗಡೆ ಹೊಂದಲು ಬೇಕಾದ ಅಂಕಗಳನ್ನು ಪರೀಕ್ಷೆಗಳಲ್ಲಿ ಪಡೆಯುತ್ತಾರೆ. ಉಳಿದ ಭಾಗಗಳಲ್ಲಿ ಓದುವ ವಿದ್ಯಾರ್ಥಿಗಳು ಈ ಪ್ರಮಾಣದಲ್ಲಿ ಪರೀಕ್ಷೆಗಳಲ್ಲಿ ಮೊದಲ ಬಾರಿಗೆ ಯಶಸ್ಸು ಪಡೆಯುವುದಿಲ್ಲ. ಕ್ರಮೇಣ ಅಮೆರಿಕನ್ ವಿಶ್ವವಿದ್ಯಾನಿಲಯಗಳ ಬೋಧನ ಕ್ರಮಗಳನ್ನು ತಿಳಿದುಕೊಂಡ ಮೇಲೆ ಕಷ್ಟಪಟ್ಟು ತಮ್ಮ ವಿದ್ಯಾ ಅರ್ಹತೆಯನ್ನು ಉತ್ತಮಪಡಿಸಿಕೊಳ್ಳುವುದು ಕಂಡುಬಂದಿದೆ.

ಭಾರತೀಯ ವಿದ್ಯಾರ್ಥಿಗಳ ಪೈಕಿ ಬಹುಮಂದಿ ಭಾರತಕ್ಕೆ ವಾಪಸ್ಸು ಬಂದು ಜೀವಿಸಲು ಇಚ್ಛಿಸುತ್ತಾರೆ. ಕೆಲವರು ಅಮೆರಿಕದಲ್ಲೇ ಇರಲು ಇಚ್ಛಿಸುವುದುಂಟು. ಆದರೆ ಭಾರತದಲ್ಲಿ ತಮ್ಮ ವಿದ್ಯಾ ಅರ್ಹತೆಗೆ ತಕ್ಕಂತೆ ಅವಕಾಶಗಳು ದೊರೆತರೆ ಭಾರತಕ್ಕೆ ಮರಳಿ ಬಂದು ಉದ್ಯೋಗನಿರತರಾಗುವುದು ಬಹಳ ಮಂದಿಯ ಇಚ್ಛೆ. ಆದ್ದರಿಂದ ಭಾರತೀಯ ವಿದ್ಯಾರ್ಥಿಗಳ ಸೇವೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದು ರಾಷ್ಟ್ರದ ಕರ್ತವ್ಯ. ಬ್ರಿಟಿಷರ ಕಾಲದಲ್ಲಿ ಭಾರತೀಯರು ಶ್ರೀ ಲಂಕಾ, ಮಲೇಷಿಯ, ಬರ್ಮ ಮತ್ತು ಫಿಜಿ ದೇಶಗಳಲ್ಲಿ ನೆಲಸಿದರು. ಆಗ ಅಮೆರಿಕಕ್ಕೆ ಹೋಗುತ್ತಿರಲಿಲ್ಲ. ೧೯ನೆಯ ಶತಮಾನದಲ್ಲೂ ೨೦ನೆಯ ಶತಮಾನದ ಆದಿಭಾಗದಲ್ಲೂ ಈ ದೇಶಗಳಲ್ಲಿ ಕೂಲಿಯಾಳುಗಳಾಗಿ ಕೆಲಸ ಮಾಡಲು ಭಾರತೀಯರನ್ನು ಬ್ರಿಟಿಷ್ ಸರ್ಕಾರ ಕಳುಹಿಸಿಕೊಡುತ್ತಿತ್ತು. ಅವರು ರಬ್ಬರ್ ಮತ್ತು ಚಹ ತೋಟಗಳಲ್ಲಿ ಅಥವಾ ರೈಲು ರಸ್ತೆ ನಿರ್ಮಾಣ ಕಾರ್ಯಗಳಲ್ಲಿ ಕೂಲಿಯಾಳುಗಳಾಗಿದ್ದರು. ಆದರೆ ಈಗ ಭಾರತದಿಂದ ಹೋಗುವವರು ಒಳ್ಳೆಯ ವಿದ್ಯಾಭ್ಯಾಸ ಪಡೆದವರು. ವಿದ್ಯಾವಂತರಾದವರು ಬ್ರಿಟನ್, ಕೆನಡ ಮತ್ತು ಅಮೆರಿಕ ದೇಶಗಳಿಗೆ ಹೋಗುತ್ತಿದ್ದಾರೆ. ವಿದ್ಯಾವಂತರ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಅಮೆರಿಕಕ್ಕೆ ಹೋಗುವವರು. ಹೀಗೆ ಅಮೆರಿಕಕ್ಕೆ ಅಧಿಕ ಸಂಖ್ಯೆಯಲ್ಲಿ ಹೋಗಲು ಭಾರತೀಯ ವಿದ್ಯಾವಂತರು ಏಕೆ ಇಷ್ಟಪಡುತ್ತಾರೆ ಎಂಬುದನ್ನು ಕಂಡುಹಿಡಿಯಲು ಅಮೆರಿಕದ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನ ಒಂದು ಸಮೀಕ್ಷೆ ನಡೆಸಿತು. ಅದರಿಂದ ತಿಳಿದುಬಂದ ಅಂಶಗಳು ಇವು: ೧ ಅಮೆರಿಕದಲ್ಲಿರುವ ಉನ್ನತ ಜೀವನಮಟ್ಟವನ್ನು ಕಂಡು ವಿದ್ಯಾವಂತರಾದ ಭಾರತೀಯರು ಅಲ್ಲಿ ಹೋಗಿ ನೆಲಸಲು ಇಚ್ಛಿಸುತ್ತಾರೆ. ೨ ಅಮೆರಿಕದಲ್ಲಿ ನೆಲಸಿದರೆ ತಮ್ಮ ಮಕ್ಕಳಿಗೆ ಜೀವನದಲ್ಲಿ ಮುಂದುವರಿಯಲು ಒಳ್ಳೆಯ ಅವಕಾಶಗಳು ದೊರೆಯುತ್ತವೆ ಎಂದು ಅವರ ನಂಬಿಕೆ. ೩ ಅಮೆರಿಕನ್

ಸಮಾಜದಲ್ಲಿ ಕಂಡುಬರುವ ಆಕರ್ಷಣೆಗಳಿಗೆ ಮಾರುಹೋದವರು ಕೆಲವರು. ೪ ತಮ್ಮ ವೃತ್ತಿಯಲ್ಲಿ ಅಷ್ಟು ಮಟ್ಟಿಗೆ ಪರಿಶ್ರಮ ಪಡದೆ ಖ್ಯಾತಿ ಗಳಿಸಬೇಕೆಂಬ ಅಭಿಲಾಷೆ ಹೊಂದಿದವರು ಕೆಲವರು.

ಯಾವ ಕಾರಣದಿಂದಲೇ ಭಾರತೀಯರು ಅಮೆರಿಕದಲ್ಲಿ ನೆಲೆಸಿದ್ದರೂ ಒಳ್ಳೆಯ ಹೆಸರು ಗಳಿಸಿದ್ದಾರೆ. ಅಮೆರಿಕದ ಉದ್ಯಮಗಳಲ್ಲಿ ಕಷ್ಟಪಟ್ಟು ದುಡಿದು ಮಾಲೀಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಒಳ್ಳೆಯ ವಿದ್ಯಾರ್ಥಿಗಳಾಗಿ ವಿಶ್ವವಿದ್ಯಾನಿಲಯಗಳಲ್ಲಿರುವ ಅಧ್ಯಾಪಕರುಗಳ ಪ್ರೀತಿ ಗಳಿಸಿದ್ದಾರೆ. ಸಮಾಜಜೀವನದಲ್ಲಿ ಸಭ್ಯತೆಯಿಂದ ನಡೆದುಕೊಂಡು ಅಮೆರಿಕದ ಜನರ ಪ್ರೀತಿಯನ್ನು ಗಳಿಸಿದ್ದಾರೆ. ಎಂತಹ ಸಂದರ್ಭ ಬಂದರೂ ಅಲ್ಲಿಯ ಸಮಾಜಕ್ಕೆ ಹೊಂದಿಕೊಂಡು ಜೀವನ ನಡೆಸುವ ಸಾಮರ್ಥ್ಯ ಪಡೆದಿರುವವರು. ಅಮೆರಿಕನ್ ಪ್ರಜೆಗಳ ಮತ್ತು ಭಾರತೀಯರ ನಡುವೆ ಮಧುರ ಬಾಂಧವ್ಯ ಬೆಳೆದಿದೆ.

ವಿ. ಎನ್. ಶೇಷಗಿರಿರಾವ್

ಪ್ಲೇಟೋ ಮತ್ತು ಶಾಂಕರ ವೇದಾಂತ

೧

ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಪ್ಲೇಟೋ ಅಸಾಮಾನ್ಯ ವ್ಯಕ್ತಿ. ಅಂದಿನ ಅಥೆನ್ಸಿನ ನವಯುವಕರಲ್ಲಿ ಹಲವು ತಲೆಮಾರುಗಳಿಂದ ಸಾಗಿಬಂದಿದ್ದ ಮೌಢ್ಯವನ್ನು ಕಿತ್ತೊಗೆಯಲು ತನ್ನ ಜೀವನವನ್ನು ಮುಡಿಪಾಗಿಟ್ಟ ಸಾಕ್ರಟೀಸನ ಪಟ್ಟ ಶಿಷ್ಯ ಪ್ಲೇಟೋ. ಪ್ಲೇಟೋ ಇಲ್ಲದಿದ್ದರೆ ಬಹುಶಃ ಸಾಕ್ರಟೀಸನ ತತ್ತ್ವ ಅಷ್ಟಾಗಿ ಬೆಳಗುತ್ತಿರಲಿಲ್ಲವೆನ್ನಬಹುದು.

ಪ್ಲೇಟೋ ಪ್ರತಿಪಾದಿಸಿದ ಸಾಮಾನ್ಯವಾದಕ್ಕೂ ಶಂಕರಾಚಾರ್ಯರ ಅದ್ವೈತವಾದಕ್ಕೂ ಬಹಳ ಅಂಶಗಳಲ್ಲಿ ಹೋಲಿಕೆ ಇದೆ. ಆ ಹೋಲಿಕೆಯನ್ನು ಚರ್ಚಿಸುವುದೇ ಪ್ರಕೃತ ಲೇಖನದ ಉದ್ದೇಶ.

ಕಾಲದ ದೃಷ್ಟಿಯಿಂದ ಪ್ಲೇಟೋ ಶಂಕರಾಚಾರ್ಯರಿಗಿಂತ ಬಹಳ ಹಿಂದೆ ಇದ್ದವನು. ಕ್ರಿ.ಪೂ. ೪೨೭ರಲ್ಲಿ ಘನವಂತ ತಂದೆತಾಯಿಗಳ ಮಗನಾಗಿ ಪ್ಲೇಟೋ ಜನಿಸಿದ. ಈತ ಸಂಗೀತ ಸಾಹಿತ್ಯ ಚಿತ್ರಕಲೆಗಳಲ್ಲಿ ಪಾರಂಗತನಾಗಿದ್ದ. ಚಿಕ್ಕವನಿದ್ದಾಗಲೇ ಬಹಳ ಕಡೆ ಸಂಚರಿಸಿ ಕೊನೆಗೆ ಅಥೆನ್ಸ್ ನಗರದಲ್ಲಿ ನಿಂತು "ದಿ ಅಕಾಡೆಮಿ" ಎಂಬ ಪಾಠಶಾಲೆಯನ್ನು ಸ್ಥಾಪಿಸಿ. ಗಣಿತಶಾಸ್ತ್ರ. ತತ್ತ್ವಶಾಸ್ತ್ರ ಮುಂತಾದವನ್ನು ಬೋಧಿಸುತ್ತಿದ್ದ. ಸುಮಾರು ೮೦ ವರ್ಷಗಳ ತುಂಬುಜೀವನವನ್ನು ನಡೆಸಿ ಕ್ರಿ.ಪೂ. ೩೪೭ರಲ್ಲಿ ಮರಣ ಹೊಂದಿದ.

ಶಂಕರಾಚಾರ್ಯರು ಕ್ರಿ.ಶ. ೮ನೆಯ ಶತಮಾನದವರು. ಕೇರಳದ ಕಾಲಟಿಯಲ್ಲಿ ಜನಿಸಿದವರು. ೮ ವರ್ಷದ ವಯಸ್ಸಾಗಿದ್ದಾಗಲೇ ವೇದಗಳನ್ನು ಅರಗಿಸಿಕೊಂಡಿದ್ದರು. ಪ್ಲೇಟೋನಷ್ಟು ದೀರ್ಘಕಾಲ ಬಾಳದೆ ಕೇವಲ ೩೨ನೆಯ ವಯಸ್ಸಿನಲ್ಲಿ ಪರಂಧಾಮವನ್ನೈದಿದರು.

ಅದ್ವೈತದರ್ಶನಕ್ಕೆ 'ಪ್ರಸ್ಥಾನತ್ರಯ'ವಾದ ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ ಇವು ಮೂಲಾಧಾರ. ಪ್ಲೇಟೋನ ಸಾಮಾನ್ಯವಾದಕ್ಕೆ ಆತನ 'ಸಂವಾದಗಳು' ಎಂಬ ಗ್ರಂಥವೇ ಮೂಲವಾಗಿದೆ. ಪ್ಲೇಟೋನ ಅದ್ಭುತವಾದ ತತ್ತ್ವನಿರ್ಣಯಗಳನ್ನು ನಾವು ಈ ಗ್ರಂಥದಲ್ಲಿ ಕಾಣಬಹುದು. ಸಾಕ್ರಟೀಸ್ ತನ್ನ ಪಟ್ಟ ಶಿಷ್ಯನ ಮೇಲೆ ಬೀರಿದ್ದ ಅಸಾಧಾರಣ ಸಂಸ್ಕಾರಬಲವನ್ನು ಈ ಗ್ರಂಥ ಪ್ರತಿನಿಧಿಸುತ್ತದೆ. ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಕ್ಯಾಂಟನ 'ಶುದ್ಧ ತರ್ಕ ವಿಮಾಂಸೆ', ಹೆಗೆಲನ 'ತರ್ಕಶಾಸ್ತ್ರ' ಇವುಗಳಷ್ಟೇ ಪ್ರಸಿದ್ಧಿಯನ್ನೂ ಜನಾದರಣೆಯನ್ನೂ ಪ್ಲೇಟೋನ 'ಸಂವಾದಗಳು' ಪಡೆದಿದೆ. 'ಸಂವಾದಗಳು' ಪಾಶ್ಚಾತ್ಯರ ಉಪನಿಷತ್ತು ಎನ್ನುವ ಮಟ್ಟಿಗೆ ಅವರ ಅಗ್ಗಳಿಕೆ. ಜೊವೆಟ್ ಎಂಬುವನು ಈ 'ಸಂವಾದಗಳ'ನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದಾನೆ. ಕೆಲವು ಉಪನಿಷತ್ತುಗಳಲ್ಲಿರುವಂತೆ 'ಸಂವಾದಗಳು' ಗ್ರಂಥ ಕಥಾರೂಪದಲ್ಲಿದೆ. ಹೆಸರೇ ಸೂಚಿಸುವಂತೆ, ಅದು ಸಂವಾದಗಳನ್ನೊಳಗೊಂಡಿದೆ. ಸಂವಾದಗಳ ಶೈಲಿ ಸುಲಲಿತವೂ ಮನೋಹರವೂ ಆದುದಾಗಿದೆ. ಅವುಗಳಲ್ಲಿ ಚರ್ಚಿಸಲ್ಪಡದ ವಿಷಯವೇ ಇಲ್ಲವೆನ್ನಬಹುದು.

೨

ಶಂಕರಾಚಾರ್ಯರ ದರ್ಶನವನ್ನು ಒಂದೇ ಮಂತ್ರದಲ್ಲಿ ಹಿಡಿದಿಡಬಹುದು. ಅದು: "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" ಅದ್ವೈತ ದರ್ಶನದ ಪ್ರಕಾರ ಆತ್ಯಂತಿಕ ಸತ್ಯ ಬ್ರಹ್ಮ ಒಂದೇ. ಬ್ರಹ್ಮ ನಿರ್ಗುಣವಾದುದು. ಅದು ಮಾಂಡೂಕ್ಯ ಉಪನಿಷತ್ತಿನಲ್ಲಿ ಹೇಳಿದಂತೆ. "ಅಗ್ರಾಹ್ಯಂ ಅಲಕ್ಷಣಂ ಅಚಿಂತ್ಯಂ ಅವ್ಯಪದೇಶಂ ಏಕಾತ್ಮ ಪ್ರತ್ಯಯ ಸಾರಂ ಪ್ರಪಂಚೋಪಶಮಂ ಶಾಂತಂ ಶಿವಂ ಅದ್ವೈತಂ."[1] ನಾವು ಅದನ್ನು ಯಾವುದಕ್ಕೂ ಹೋಲಿಸಲಾಗುವುದಿಲ್ಲ; ಏಕೆಂದರೆ ಅದನ್ನು ಬಿಟ್ಟು ಬೇರೆ ಏನೂ ಇಲ್ಲ. ಅದು ಸಂಬಂಧವಿಲ್ಲದ್ದಾಗಿದೆ; ಏಕೆಂದರೆ ಸಂಬಂಧ ಬೆಳೆಸುವುದಕ್ಕೆ ಇನ್ನೊಂದು ವಸ್ತುವಿರಬೇಕಲ್ಲ? ಇರುವುದು ಬ್ರಹ್ಮ ಒಂದೇ ಆದಮೇಲೆ ಅದು ಯಾವುದರ ಸಂಗ ಬೆಳಸೀತು? ಆದುದರಿಂದ ಅದು ಸಂಬಂಧರಹಿತವಾದದ್ದು. ಹಾಗೆಯೇ ಬ್ರಹ್ಮ ಅಚಿಂತ್ಯ. ಅದನ್ನು ನೋಡಲು ಸಾಧ್ಯವಿಲ್ಲ. ಅದು ಅನುಭವಾತೀತವಾದುದು, ನಿತ್ಯವಾದುದು. ಬುದ್ಧವಾದುದು, ಸತ್ಯವಾದುದು. ಅದು ತ್ರಿಕಾಲಾಬಾಧಿತವಾದುದು. ಶಾಶ್ವತ ವಾದುದು. ಅನಂತವಾದುದು. "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ." "ಸತ್ಯಂ ಜ್ಞಾನಂ ಆನಂದಂ ಬ್ರಹ್ಮ." ಅದು ಶುದ್ಧ ಚೈತನ್ಯ. ಅಖಂಡ ಹಾಗೂ ಆನಂದಮಯವಾದುದು.

ಪ್ಲೇಟೋನ ಪ್ರಕಾರ ಆತ್ಯಂತಿಕ ಸತ್ಯಗಳು 'ಸಾಮಾನ್ಯ'ಗಳಾಗಿವೆ. ಶಂಕರರಂತೆ ಪ್ಲೇಟೋ ಸಹ ಸಾಮಾನ್ಯಗಳು ಅನುಭವದಲ್ಲಿ ದೊರಕುವ ವಸ್ತುವಿಶೇಷಗಳಲ್ಲವೆಂದು ಹೇಳುತ್ತಾನೆ. ಅವು ಅನುಭವಕ್ಕೆ ಪೂರ್ವವಾದವು. ಈ ಸಾಮಾನ್ಯಗಳೇ ಸಮಸ್ತ ಜ್ಞಾನಕ್ಕೂ ಮೂಲಾಧಾರಗಳು. ಸಾಮಾನ್ಯಗಳನ್ನಲ್ಲದೆ ಪ್ಲೇಟೋ 'ಪ್ರತ್ಯೇಕ'ಗಳನ್ನೂ ಹೆಸರಿಸುತ್ತಾನೆ. ಅವನ ಪ್ರಕಾರ ಸಾಮಾನ್ಯಗಳು ಪ್ರತ್ಯೇಕಗಳಿಗೆ ಮೂಲ. ಪ್ರತ್ಯೇಕಗಳು ಕ್ಷಣಿಕವಾದವು; ಅವು ಶಾಶ್ವತವಲ್ಲ. ಅವುಗಳ ಜ್ಞಾನವನ್ನು ಕೇವಲ 'ಅಭಿಮತ' ಎಂದು ಕರೆಯಬಹುದು. ಆದರೆ ನಿಜವಾದ ಜ್ಞಾನ, ಸಾಮಾನ್ಯಗಳಿಗೆ ಸೇರಿದ್ದು. ಪ್ರತ್ಯೇಕ ವಸ್ತುಗಳು ಸಾಮಾನ್ಯಗಳ ನಕಲು ಅಥವಾ ಪ್ರತಿಬಿಂಬಗಳು. ಎಂದು ಪ್ಲೇಟೋ ಭಾವಿಸುತ್ತಾನೆ. ಆದುದರಿಂದ ಆತ್ಯಂತಿಕ ಸತ್ಯಗಳು ಸಾಮಾನ್ಯಗಳೇ ಹೊರತು ಪ್ರತ್ಯೇಕಗಳಲ್ಲ. ಏಕೆಂದರೆ ಸಾಮಾನ್ಯಗಳು ನಿತ್ಯವಾದವು. ಶಾಶ್ವತವಾದವು. ಸರ್ವಕ್ಕೂ ಮೂಲಾಧಾರವಾದವು. ಅವುಗಳನ್ನು ಹೋಲುವ ವಸ್ತು ವಿಷಯಗಳು ಯಾವುವೂ ಇಲ್ಲ. ಸಾಮಾನ್ಯಗಳು ನಿರ್ವಿಶೇಷವಾದವು, ಸುಂದರವಾದವು, ಸಂಪತ್ಕರವಾದವು, ಅರೂಪಗಳು; ಬಟ್ಟೆನಲ್ಲಿ ಅಚಿಂತ್ಯವಾದವು, ಅಪರಿಣಾಮಿಗಳು, ಸ್ವತಃ ಸಿದ್ಧವಾದವು, ಶುದ್ಧ ಸತ್ಯಗಳು

ಇಲ್ಲಿ ನಾವು ಒಂದು ಅಂಶವನ್ನು ಗಮನಿಸಬೇಕು. ಪ್ಲೇಟೋ ಮೊದಮೊದಲು ಅನೇಕವಾದಿಯಂತೆ ಕಂಡುಬರುತ್ತಾನೆ. ಏಕೆಂದರೆ ಆತನ ಪ್ರಕಾರ ಆತ್ಯಂತಿಕ ಸತ್ಯಗಳು ಅನೇಕ. ಒಂದಲ್ಲ. ಆದರೂ ಅವು ಒಂದು ಕ್ರಮವಾದ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ. ಅವನು ಶ್ರೇಯ, ಸೌಂದರ್ಯ ಮತ್ತು ಸತ್ಯಗಳನ್ನು ಪರಮ ಸಾಮಾನ್ಯಗಳು ಎಂದು ಕರೆಯುತ್ತಾನೆ. ಇವುಗಳ ಕೆಳಗೆ ವರ್ಗಸಾಮಾನ್ಯಗಳು. ಅವುಗಳ ಕೆಳಗೆ ಜಾತಿ ಸಾಮಾನ್ಯಗಳು. ಹೀಗೆ ಸುಂದರತಮವಾಗಿ ಸ್ವತಂತ್ರರಾಜ್ಯವಾಗಿ ಇವು ಸ್ಥಾಪಿಸಲ್ಪಟ್ಟಿವೆ. ಆದುದರಿಂದ ಪ್ಲೇಟೋ ಪ್ರಕಾರ ಆತ್ಯಂತಿಕ ಸತ್ಯವಾದ ಸಾಮಾನ್ಯಗಳು ಅನೇಕವಾಗಿವೆ. ಆದರೆ ಶಂಕರಾಚಾರ್ಯರ ಪ್ರಕಾರ ಆತ್ಯಂತಿಕ ಸತ್ಯವೆಂಬುದು ಒಂದೇ ಆಗಿದೆ. ಅದೇ ಬ್ರಹ್ಮ. ಅದು ಏಕಮೇವ ಅದ್ವಿತೀಯವಾದದ್ದಾಗಿದೆ.

ಹೀಗೆ ಈ ಹಂತದಲ್ಲಿ ಶಂಕರರಿಗೂ ಪ್ಲೇಟೋಗೂ ಸತ್ಯದ ಕಲ್ಪನೆಯಲ್ಲಿ ವ್ಯತ್ಯಾಸಗಳಿವೆ. ಆದರೆ ಪ್ಲೇಟೋ ಮುಂದುವರಿದು ಹೀಗೆ ಹೇಳುತ್ತಾನೆ: ಆತ್ಯಂತಿಕ ಸತ್ಯವಾದ ಸಾಮಾನ್ಯಗಳು ಅನೇಕವಾದರೂ ಅವುಗಳಿಗೆ ಆಧಾರವಾದುದು ಒಂದೇ ಸಾಮಾನ್ಯ. ಅದೇ ಶ್ರೇಯಸಾಮಾನ್ಯ. ಅದು ಎಲ್ಲ ಸಾಮಾನ್ಯಗಳಿಗೂ ಮೂಲರೂಪವಾದುದು. ಇದಕ್ಕಿಂತಲೂ ಉತ್ಕೃಷ್ಟವಾದ, ವಿಸ್ತಾರವಾದ ಸಾಮಾನ್ಯ ಬೇರೆ ಯಾವುದೂ ಇಲ್ಲವೆಂದೂ ಪ್ಲೇಟೋ ವಿವರಿಸುತ್ತಾನೆ. ಶ್ರೇಯಸಾಮಾನ್ಯವನ್ನು ಅವನು ಸಮಸ್ತ ಪದಾರ್ಥಗಳ ಉತ್ಪತ್ತಿ ಮತ್ತು ಬೆಳವಣಿಗೆಗೆ ಕಾರಣವಾದ ಸೂರ್ಯನಿಗೆ ಹೋಲಿಸು

1 ಮಾಂಡೂಕ್ಯ ಉಪನಿಷತ್ತಿನ ಏಳನೆಯ ಮಂತ್ರ

ತ್ತಾನೆ. ಹೀಗೆ ಪ್ರಾರಂಭದಲ್ಲಿ ಸಾಮಾನ್ಯಗಳು ಅನೇಕ ಎಂದು ಪ್ಲೇಟೋ ಹೇಳಿದರೂ ಕೊನೆಯಲ್ಲಿ ಏಕ ಸಾಮಾನ್ಯಕ್ಕೆ ಬಂದು ನೆಲೆನಿಲ್ಲುತ್ತಾನೆ. ಪ್ಲೇಟೋನ ಈ ಶ್ರೇಯ, ಉಪನಿಷತ್ತಿನಲ್ಲಿ ತಜ್ಜಲಾನ್ ಎಂದು ವಿವರಿಸಿರುವ ಆತ್ಮನನ್ನು ಬಹುವಾಗಿ ಹೋಲುತ್ತದೆ. ಆದುದರಿಂದ ಪ್ಲೇಟೋಗೆ ಬಹುತ್ವವೆ ಮುಖ್ಯವಲ್ಲ. ಬಹುತ್ವಕ್ಕೆಲ್ಲ ಆಧಾರವಾದ ಏಕತೆ ಮುಖ್ಯವಾದುದು. ಬಹುತ್ವದಲ್ಲಿ ಏಕತ್ವ, ವೈವಿಧ್ಯದಲ್ಲಿ ಸಮಾನತ್ವ–ಇದೇ ಪ್ಲೇಟೋನ ಸೌಂದರ್ಯ ಪ್ರಪಂಚದ ಗುಟ್ಟೆಂದು ನಾವು ತಿಳಿಯಬಹುದು. ಅದ್ವೈತ ಈ ಅಂಶದಲ್ಲಿ ಪ್ಲೇಟೋದರ್ಶನದಿಂದ ಭಿನ್ನವಾಗಿದೆ. ಏಕೆಂದರೆ. ಅದ್ವೈತ ಬಹುತ್ವದಲ್ಲಿ ಏಕತ್ವವನ್ನು ಹುಡುಕುವುದಿಲ್ಲ. ಅದರ ಪ್ರಕಾರ ಇರುವ ಏಕೈಕ ಸತ್ಯವೆಂದರೆ ಏಕಮೇವ ಅದ್ವಿತೀಯವಾದ ಬ್ರಹ್ಮವೇ ಆಗಿದೆ.

೩

ಜ್ಞಾನ ಮೀಮಾಂಸೆಯಲ್ಲೂ ಪ್ಲೇಟೋ ಮತ್ತು ಶಂಕರರ ನಡುವೆ ಹೋಲಿಕೆಗಳನ್ನು ತಿಳಿಯಬಹುದು. ಶಂಕರರ ಪ್ರಕಾರ ಜ್ಞಾನ ಎರಡು ವಿಧವಾಗಿದೆ. ೧ ಸ್ವರೂಪಜ್ಞಾನ. ೨ ವೃತ್ತಿಜ್ಞಾನ. ಸ್ವರೂಪಜ್ಞಾನಕ್ಕೆ ಇನ್ನೊಂದು ಹೆಸರೇ ಬ್ರಹ್ಮ. ಈ ಜ್ಞಾನ, ವಿಷಯವಿಷಯೀ ಭಾವದಿಂದ ಬಹುದೂರವಿದೆ. ಇದು ನಿತ್ಯವಾದದ್ದು. ಅಚಲ ಹಾಗೂ ಅನಂತವಾದದ್ದು. ಆದರೆ ವೃತ್ತಿಜ್ಞಾನ ಅಂತಃಕರಣದ ಮಿತಿಗೆ ಸಂಬಂಧಿಸಿದ್ದಾಗಿದೆ. ವೃತ್ತಿಜ್ಞಾನದಿಂದಲೇ ನಾವು ಇಂದ್ರಿಯಸಹಜ ವ್ಯಾಪಾರಗಳನ್ನು ಮಾಡಲು ಸಾಧ್ಯವಾಗುತ್ತದೆ. ಆದರೆ ಈ ಜ್ಞಾನ ತಾರ್ಕಿಕವೂ ವೈಜ್ಞಾನಿಕವೂ ಆಗಿದ್ದರೂ ಬ್ರಹ್ಮನನ್ನು ಇದು ಮುಟ್ಟಲಾರದು. "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ". ವೃತ್ತಿಜ್ಞಾನದ ಬೆಳವಣಿಗೆಗೆ ವಿಷಯ–ವಿಷಯಿಗಳ ಅಂತರ ಅತ್ಯಾವಶ್ಯಕ. ವೃತ್ತಿಜ್ಞಾನದ ವಿಶಿಷ್ಟತೆ ಎಂದರೆ, ಅದು ಎಲ್ಲೆಲ್ಲೂ ದ್ವೈತವನ್ನೇ ಕಾಣುತ್ತಿದೆ. ವ್ಯಾವಹಾರಿಕ ಜೀವನಕ್ಕೆ ಅದು ಅತ್ಯಾವಶ್ಯಕ.

ಶಂಕರರಂತೆ ಪ್ಲೇಟೋ ಸಹ ಜ್ಞಾನವನ್ನು 'ಜ್ಞಾನ' ಮತ್ತು 'ಅಭಿಮತ' ಎಂದು ಇಬ್ಭಾಗ ಮಾಡುತ್ತಾನೆ.ಆತನ ಪ್ರಕಾರ ನಿಜವಾದ ಜ್ಞಾನ, ಸಾಮಾನ್ಯಗಳಿಗೆ ಸಂಬಂಧಿಸಿದ್ದಾಗಿದೆ. ಅದೇ ಶ್ರೇಷ್ಠವಾದ ಜ್ಞಾನ. ಏಕೆಂದರೆ ಅದು ಅಚಲವೂ ನಿತ್ಯವೂ ಅನಂತವೂ ಅನುಭವಾತೀತವೂ ಆದ ಸಾಮಾನ್ಯಗಳಿಗೆ ಸಂಬಂಧಿಸಿದೆ. ಅಭಿಮತವು ಶ್ರೇಷ್ಠವಾದ ಜ್ಞಾನವಲ್ಲ. ಏಕೆಂದರೆ ಅದು ಚಂಚಲವಾದ, ಸದಾ ಪರಿಣಾಮ ಹೊಂದುತ್ತಿರುವ. ಅಶಾಶ್ವತವಾದ ಪ್ರತ್ಯೇಕ ವಸ್ತುಗಳಿಗೆ ಸಂಬಂಧಿಸಿದ್ದಾಗಿದೆ. ಆದುದರಿಂದ ಅಭಿಮತಕ್ಕೆ ಒಂದು ಮಿತಿಯುಂಟು. ಅದು ಅನಂತಜ್ಞಾನವಲ್ಲ. ಅದು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಬದಲಾಯಿಸುತ್ತಿರುತ್ತದೆ. ಪ್ಲೇಟೋನ ಈ ಅಭಿಮತ ಶಂಕರರ ವೃತ್ತಿಜ್ಞಾನವನ್ನು ಸುಮಾರಾಗಿ ಹೋಲುತ್ತದೆ ಎಂದು ನಾವು ಹೇಳಬಹುದು.

ಆದರೆ ಒಂದು ವ್ಯತ್ಯಾಸವಿದೆ. ಶಂಕರರು ಸ್ವರೂಪಜ್ಞಾನವನ್ನು ಬ್ರಹ್ಮವೆಂದೇ ತಿಳಿದರೆ, ಪ್ಲೇಟೋ ಜ್ಞಾನವನ್ನು ಸಾಮಾನ್ಯಗಳೇ ಎಂದು ಹೇಳಿದಂತೆ ಕಂಡುಬರುವುದಿಲ್ಲ. ಪರಮಶ್ರೇಯವನ್ನು ಈಶ್ವರತತ್ತ್ವವೆಂದೇ ಭಾವಿಸಿದನೇ ಇಲ್ಲವೇ ಎಂಬ ವಿಷಯದಲ್ಲಿ ಚರ್ಚೆ ಇದೆ. ಕೆಲವು ವಿದ್ವಾಂಸರು ಈಶ್ವರನೂ ಶ್ರೇಯವೂ ಸಮಾನವಾದ ಆದರೆ ಭಿನ್ನವಾದ ತತ್ತ್ವಗಳೆಂದು ಅಭಿಪ್ರಾಯಪಡುತ್ತಾರೆ[2]. ಆತ್ಯಂತಿಕ ಸತ್ಯ ಅಥವಾ ಪರಮಶ್ರೇಯ ಒಂದೇ ಎಂದು ಪ್ಲೇಟೋ ಹೇಳುತ್ತಾನೆ. ಆದುದರಿಂದ ಈ ತತ್ತ್ವವನ್ನು ನಾವು ಈಶ್ವರತತ್ತ್ವ ಎಂದೇ ಭಾವಿಸುವುದರಲ್ಲಿ ತಪ್ಪಿಲ್ಲ. ಎಂದೂ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

೪

ಪ್ಲೇಟೋ ನಿತ್ಯವಾದ, ಅನುಭವಾತೀತವಾದ, ಶುದ್ಧತತ್ತ್ವಗಳಾದ ಸಾಮಾನ್ಯವು ಪ್ರತ್ಯೇಕಗಳಿಗೂ

---

2 ಕೆ. ಆರ್. ಶ್ರೀನಿವಾಸ ಅಯ್ಯಂಗಾರ್; ಗ್ರೀಕರ ತತ್ತ್ವಶಾಸ್ತ್ರ ಸಂಗ್ರಹ, ಮೈಸೂರು ವಿಶ್ವವಿದ್ಯಾನಿಲಯ, ಪು. 193, 198

ಸಕಲವಸ್ತುಗಳಿಗೂ ಕಾರಣ ಹಾಗೂ ಆಧಾರವೆಂದು ಹೇಳುತ್ತಾನೆ. ಆದರೆ ಇಲ್ಲಿ ಒಂದು ದೋಷವಿದೆ. ಪ್ರತ್ಯೇಕಗಳು ಚಂಚಲವಾದವು. ಅಶಾಶ್ವತವಾದವು. ಹಾಗಾದರೆ ನಿಶ್ಚಲವಾದ, ನಿತ್ಯವಾದ ಸಾಮಾನ್ಯಗಳು ಅವುಗಳಿಗೆ ಹೇಗೆ ಕಾರಣಗಳಾಗಲು ಸಾಧ್ಯ? ಏಕೆಂದರೆ ಕಾರಣ ಹೇಗೆಹೇಗೆ ಇರುತ್ತದೋ ಹಾಗೇ ಕಾರ್ಯವೂ ಇರಬೇಕು. ಈ ಸಮಸ್ಯೆಯನ್ನು ಪರಿಹರಿಸಲು ಪ್ಲೇಟೋ ಪ್ರಕೃತಿತತ್ತ್ವ ಅಥವಾ ಪ್ರಧಾನವನ್ನು ಊಹಿಸುತ್ತಾನೆ. ಈ ಪ್ರಕೃತಿತತ್ತ್ವ ಅದ್ವೈತದರ್ಶನದ ಮಾಯೆಯನ್ನು ಹೋಲುತ್ತದೆ ಎಂದು ಹೇಳಬಹುದು. ಇದೇ ಭವಪ್ರಪಂಚಕ್ಕೆ ಮೂಲಾಧಾರವಾದುದು. ಈ ಪ್ರಧಾನ ಸತ್ಯವೂ ಅಲ್ಲ ಹಾಗೂ ಅಸತ್ಯ, ಒಟ್ಟಿನಲ್ಲಿ ಅನಿರ್ವಚನೀಯ. ಪ್ಲೇಟೋನ ಪ್ರಕೃತಿತತ್ತ್ವ, ಇಂದ್ರಿಯಲೋಕಕ್ಕಿರುವ ಒಂದು ಮಸುಕಾದ ಸತ್ತ್ವಸ್ಪರ್ಶವಾಗಿದೆ. ಶಾಂಕರ ವೇದಾಂತದಂತೆ, ಪ್ಲೇಟೋನ ಪ್ರಧಾನ ಸಂಪೂರ್ಣವಾಗಿ ಸತ್ಯ ಅಲ್ಲ. ನಿರ್ಣೀತವಾಗಿ ಅಸತ್ಯವೂ ಅಲ್ಲ. ಪಾರಮಾರ್ಥಿಕ ಸತ್ತ್ವವುಳ್ಳ ಸಾಮಾನ್ಯಗಳ ದೃಷ್ಟಿಯಿಂದ ಪ್ರಧಾನವನ್ನು ಅಸದ್ರೂಪವೆಂದು ಹೇಳಬಹುದೇ ವಿನಾ, 'ಬಂಜೆಪುತ್ರ' ಮುಂತಾದ ಸಂಪೂರ್ಣ ಅಭಾವಾರ್ಥದಲ್ಲಿ ಅಲ್ಲ. ಆದರೂ ಪ್ರಪಂಚದಲ್ಲಿರುವ ಪ್ರತ್ಯೇಕಗಳ ಸತ್ತ್ವಕ್ಕೆಲ್ಲಾ ಸಾಮಾನ್ಯಗಳೇ ಕಾರಣ ಎಂದು ಪ್ಲೇಟೋ ಹೇಳುತ್ತಾನೆ.

ಪ್ಲೇಟೋನ ಪ್ರಕೃತಿ ಕಪಿಲನ ಸಾಂಖ್ಯದರ್ಶನವನ್ನು ಹೋಲುತ್ತದೆ ಎಂದು ಹೇಳಬಹುದು. ಏಕೆಂದರೆ ಚೈತನ್ಯರೂಪಗಳಾದ ಸಾಮಾನ್ಯಗಳು, ಸಾಂಖ್ಯರ ಪುರುಷನಂತೆ, ಮುಖ್ಯಕಾರಣವು. ಪ್ರಕೃತಿ ಜಡರೂಪವಾಗಿ ಉಪಾದಾನಕಾರಣ ಮಾತ್ರವಾಗಿದೆ. ಸಾಮಾನ್ಯಗಳು ತಮ್ಮ ಸಂಪೂರ್ಣ ಪ್ರಭೆಯನ್ನು ತೋರದಿರಲು ಪ್ರಧಾನವೇ ಕಾರಣ. ಆದರೆ ಸಾಂಖ್ಯರ ಪ್ರಕೃತಿಗೆ ಸ್ವಂತ ಅಸ್ತಿತ್ವವಿದೆ; ಪ್ಲೇಟೋನ ಪ್ರಧಾನಕ್ಕೆ ಇಲ್ಲ. ಪ್ಲೇಟೋನ ಪ್ರಕಾರ ಸಾಮಾನ್ಯಗಳೆಲ್ಲವೂ ಶುಭದಾಯಕವಾದವು; ಆದರೆ ಉಳಿದೆಲ್ಲವೂ ಅಶುಭವಾದವು. ಈ ದೃಷ್ಟಿಯಲ್ಲಿ ಪ್ಲೇಟೋದರ್ಶನ ದ್ವೈತವೇ ಆಗಿದೆ.

ಶಂಕರಾಚಾರ್ಯರಂತೆ ಪ್ಲೇಟೋಗೂ ತತ್ತ್ವಶಾಸ್ತ್ರವೆಂಬುದು ಬರೀ ಸಿದ್ಧಾಂತ ಮಾತ್ರವಾಗಿರಲಿಲ್ಲ. ಅದು ಜ್ಞಾನನಿಷ್ಠರಿಗೂ ಜೀವನದ ಒಂದು ಹಾದಿಯಾಗಿತ್ತು. ಸಾಮಾನ್ಯಗಳ ಸಾನಿಧ್ಯವನ್ನು ಸೇರಲು ಮೂರು ಮಾರ್ಗಗಳನ್ನು ಪ್ಲೇಟೋ ಹೇಳುತ್ತಾನೆ: ೧ ಚಿಂತನೆ ಅಥವಾ ಪರಾಮರ್ಶೆ. ೨ ಪ್ರೇಮ ಮತ್ತು ೩ ಧರ್ಮಸೂಕ್ಷ್ಮದ ಅಂತರ್ದೃಷ್ಟಿ. ಪ್ರತಿಯೊಂದು ವಸ್ತುವಿಗೂ ಅದಕ್ಕನುಗುಣವಾದ ಉದ್ದೇಶ ಹಾಗೂ ಪ್ರಯೋಜನವಿದೆ. ಈ ಉದ್ದೇಶವನ್ನು ಸಫಲಗೊಳಿಸುವುದೇ ನಿಜವಾದ ಶ್ರೇಯ ಅಥವಾ ಪೂರ್ಣತೆಯನ್ನು ಪಡೆಯುವುದಾಗಿದೆ ಎಂದು ಪ್ಲೇಟೋ ಹೇಳುತ್ತಾನೆ. ಉಪನಿಷತ್ತುಗಳು ವಿದ್ಯೆಯನ್ನು ಪರಾವಿದ್ಯೆ ಅಪರಾವಿದ್ಯೆ ಎಂದು ವಿಭಾಗಿಸಿ, ಪರಾವಿದ್ಯೆಯೇ ಶ್ರೇಷ್ಠವೆಂದು ಸಾರಿದರೆ, ಪ್ಲೇಟೋ ಕೂಡ ಪರಮಶ್ರೇಯದ ಸ್ವರೂಪವನ್ನರಿಯುವುದೇ ಪ್ರಪಂಚದಲ್ಲಿ ಅತಿಶಯವಾದ ವಿದ್ಯೆ ಎಂದು ಹೇಳುತ್ತಾನೆ. ಜ್ಞಾನ ಉಳಿದ ತತ್ತ್ವಗಳ ಬಗ್ಗೆ ನಮಗೆ ತಿಳಿವಳಿಕೆ ಕೊಡಬಹುದು; ಆದರೆ ಯಾವ ಜ್ಞಾನ ಪರಮಶ್ರೇಯದ ಸ್ವರೂಪವನ್ನು ತಿಳಿಸಲು ಅಸಮರ್ಥವಾಗುತ್ತದೋ, ಅದು ಜ್ಞಾನವೇ ಅಲ್ಲ. ಪರಮಶ್ರೇಯವನ್ನು ಪಡೆಯಬೇಕಾದರೆ, ಶಂಕರರಂತೆ ಪ್ಲೇಟೋನೂ ವ್ಯಾವಹಾರಿಕ ಎಂಬ ಕಣ್ಣಿನ ಪರೆ ಬಿದ್ದುಹೋಗಿ ಸಮ್ಯಕ್‌ದೃಷ್ಟಿ ಮಾನವನಲ್ಲಿ ಉದಿಸಬೇಕೆಂದು ಹೇಳುತ್ತಾನೆ. ಸಂಕ್ಷೇಪವಾಗಿ ಹೇಳಬೇಕೆಂದರೆ, ಶಾಸ್ತ್ರೀಯವಾದ ಹಾಗೂ ತಾತ್ತ್ವಿಕರೂಪದ ಆಧ್ಯಾತ್ಮಿಕ ಯೋಗದೃಷ್ಟಿಯೇ ಪರಮಶ್ರೇಯದ ಮಾರ್ಗ. ಶಂಕರಾಚಾರ್ಯರಂತೆ ಪ್ಲೇಟೋ ಕೂಡ 'ಜ್ಞಾನ'ವೇ ಪರಮಶ್ರೇಯದ ಮಾರ್ಗ ಎಂದು ಹೇಳುತ್ತಾನೆಂಬುದನ್ನು ನಾವು ಇಲ್ಲಿ ಗಮನಿಸಬೇಕು.

ಇನ್ನೊಂದು ಮಾತನ್ನು ಹೇಳಿ ಈ ಚರ್ಚೆಯನ್ನು ಮುಗಿಸಬಹುದು. ಅದೇನೆಂದರೆ, ಜೀವಿಯ ಸ್ವರೂಪ, ತತ್ತ್ವಶಾಸ್ತ್ರದಲ್ಲಿ ಅದರ ಸ್ಥಾನ ಮುಂತಾದ ಜೀವಿಗೆ ಸಂಬಂಧಪಟ್ಟ ತಾತ್ತ್ವಿಕ ವಿಷಯಗಳ ಬಗ್ಗೆ ಹೆಚ್ಚಿನ ವಿಚಾರವನ್ನು ಪ್ಲೇಟೋ ನಮಗೆ ಕೊಟ್ಟಿಲ್ಲವೆಂದೇ ಹೇಳಬೇಕು. ಅವನ ಗಮನವೆಲ್ಲ ಸಾಮಾನ್ಯಗಳನ್ನು ವಿಶದಪಡಿಸುವುದರಲ್ಲೇ ಕೇಂದ್ರೀಕೃತವಾಗಿದೆ.

ಡಾ. ಎ. ಎಸ್. ಸೀತಾರಾಂ

ಶಿಕ್ಷಣದ ಅರ್ಥಗಳು

ಸರ್ವಸಮ್ಮತವಾದ ವ್ಯಾಖ್ಯೆ ಶಿಕ್ಷಣಕ್ಕಿಲ್ಲ. ಅದಕ್ಕೆ ಹಲವು ವ್ಯಾಖ್ಯಾನಗಳೂ ಈ ವ್ಯಾಖ್ಯಾನಗಳಿಂದ ಸ್ಪಷ್ಟವಾಗುವ ಅರ್ಥಗಳೂ ಇವೆ. ಈ ಅರ್ಥಗಳು ಶಿಕ್ಷಣದ ಬಹುಮುಖ ಕ್ರಿಯೆಗಳನ್ನು ಹೊಂದಿಕೊಂಡಿವೆ. ಶಿಕ್ಷಣದ ಕ್ರಮಬದ್ಧ ತಿಳಿವಳಿಕೆಗೆ ಈ ಅರ್ಥಗಳ ಅಧ್ಯಯನ ಉಪಯುಕ್ತವಾಗಿದೆ.

೧ ವ್ಯುತ್ಪತ್ತಿ

'ಎಜ್ಯುಕೇಷನ್'. ಎಂಬ ಇಂಗ್ಲಿಷ್ ಪದಕ್ಕೆ ಸಮಾನಪದವಾಗಿ ಕನ್ನಡದಲ್ಲಿ ಶಿಕ್ಷಣ ಎಂಬ ಪದವನ್ನು ಉಪಯೋಗಿಸಲಾಗಿದೆ. ಈ ಇಂಗ್ಲಿಷ್ ಪದದ ವ್ಯುತ್ಪತ್ತಿ ಲ್ಯಾಟಿನ್ ಭಾಷೆಯ 'ಎಜ್ಯುಕೇರ್' ಎಂಬ ಮೂಲಪದದಿಂದ ಆಗಿದೆ. ಎಜ್ಯುಕೇರ್ ಎಂದರೆ ಹೊರಕ್ಕೆ ತರು. ಹೊರಕ್ಕೆ ಸೆಳೆ ಎಂಬ ಅರ್ಥ; ಅಂದರೆ. ಸಂಯೋಜಿತ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಯಲ್ಲಿರುವ ಜ್ಞಾನವನ್ನು, ಶಕ್ತಿ ವಿಶೇಷಗಳನ್ನು ಹೊರಕ್ಕೆ ತರುವುದು. ಶಾಲೆಗೆ ಬರುವ ಮಕ್ಕಳಿಗೆ ಉಪಾಧ್ಯಾಯರು ಖಾಲಿ ಬಿಂದಿಗೆಗೆ ನೀರು ಸುರಿದಂತೆ ಜ್ಞಾನವನ್ನು ಸುರಿಯುವುದಲ್ಲ. ಗಾಂಧೀಜಿಯವರು ಹೇಳಿರುವಂತೆ. "ಶಿಕ್ಷಣವೆಂದರೆ ಮಗುವಿನಲ್ಲಿ ಹುದುಗಿರುವ ಸುಪ್ತವಾದ ಶಕ್ತಿಸರ್ವಸ್ವವನ್ನೂ ಹೊರಗೆಡಹುವ ಉಪಾಯ." ೧೯೩೭ರಲ್ಲಿ ಗಾಂಧೀಜಿಯವರು ಹೊರಡಿಸುತ್ತಿದ್ದ ಹರಿಜನ ಪತ್ರಿಕೆಯಲ್ಲಿ ಅವರು ಶಿಕ್ಷಣದ ಈ ವ್ಯಾಖ್ಯೆಯನ್ನು ಕೊಟ್ಟಿದ್ದರು. ಆ ಕಾಲದ ಇಂಗ್ಲಿಷ್ ಶಿಕ್ಷಣಪದ್ಧತಿ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಮಾತ್ರ ಬೆಲೆಕೊಟ್ಟು, ಶಿಕ್ಷಣವೆಂದರೆ ಜ್ಞಾನಾರ್ಜನೆ ಎನ್ನುವ ಹಾಗೆ ಮಾಡಿತ್ತು. ಆದ್ದರಿಂದ ಗಾಂಧೀಜಿಯವರು 'ಶಕ್ತಿಸರ್ವಸ್ವ' ಎಂಬ ಶಬ್ದವನ್ನುಪಯೋಗಿಸಿ ಶಿಕ್ಷಣವೆಂದರೆ ಏಕಕಾಲದಲ್ಲಿ ದೈಹಿಕ, ಬೌದ್ಧಿಕ ಹಾಗೂ ಆತ್ಮಿಕವಿಕಾಸಕ್ಕೆ ಅನುವು ಮಾಡಿಕೊಡುವುದು ಎಂದು ನುಡಿದಿದ್ದರು. ವಿವೇಕಾನಂದರೂ ಶಿಕ್ಷಣಕ್ಕೆ ಇದೇ ರೀತಿಯ ವ್ಯಾಖ್ಯೆಯನ್ನಿತ್ತಿದ್ದಾರೆ. ಅವರು ನುಡಿದಿರುವಂತೆ, "ಮಾನವನಲ್ಲಿ ಹುದುಗಿರುವ ಪರಿಪೂರ್ಣತೆಯನ್ನು ಪ್ರಕಾಶಕ್ಕೆ ತರುವ ಕಾರ್ಯವೇ ಶಿಕ್ಷಣ." ಅಂದರೆ ಪ್ರತಿಯೊಬ್ಬ ಮಾನವನಲ್ಲಿಯೂ ಸ್ವಯಂಪರಿಪೂರ್ಣವಾದ, ಪರಮಾತ್ಮನ ಅಂಶವಾದ ಆತ್ಮವೊಂದಿದೆ. ಈ ಆಂತರಿಕ ಶಕ್ತಿಯನ್ನು ಹೊರಕ್ಕೆ ತಂದು ಮಾನವನಿಗೆ ಜೀವಿಸುವಂತೆ ಮಾಡುವುದೇ ಶಿಕ್ಷಣ. ಅದರ ಅರಿವನ್ನು ಮಾಡಿಕೊಟ್ಟು ಅವನು ಪರಿಪೂರ್ಣವಾಗಿ

ವಿಮರ್ಶೆ: ಶಿಕ್ಷಣವೆಂದರೆ ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಶಕ್ತಿಸರ್ವಸ್ವವನ್ನೂ, ಸುತ್ತಮುತ್ತಲಿನ ಜಗತ್ತಿನ ಪರಿಜ್ಞಾನವನ್ನೂ ಹೊರತರುವ ಉಪಾಯ ಎಂದಾಗ, ನಮ್ಮ ಶಾಲೆಗಳಲ್ಲಿ ಕೊಡುತ್ತಿರುವ ವಿದ್ಯಾಭ್ಯಾಸವನ್ನು ಶಿಕ್ಷಣ ಎನ್ನಬಹುದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಶಾಲೆಗಳಲ್ಲಿ ಬೋಧಿಸುವ ಚರಿತ್ರೆ, ಭೂಗೋಳ, ಸಾಹಿತ್ಯ, ಗಣಿತ ಇತ್ಯಾದಿ ವಿಷಯಗಳಲ್ಲಿಯ ಜ್ಞಾನವನ್ನು ಮಕ್ಕಳಿಂದ ಹೊರ ತರುವುದು ಹೇಗೆ? ಮಕ್ಕಳಿಂದ ನಿಸರ್ಗದ ಅಥವಾ ಸಮಾಜದ ಪ್ರಕ್ರಿಯೆಗಳ ಪರಿಜ್ಞಾನವನ್ನು ಸ್ವಲ್ಪ ಮಟ್ಟಿಗೆ ಸೂಕ್ತವಾದ ಪ್ರಶ್ನೆಗಳ ಮೂಲಕ ಹೊರತರಿಸಬಹುದೇ ವಿನಾ ಅದು ಸಂಪೂರ್ಣವಾಗಿ ಆಗುವುದಿಲ್ಲ. ಅಂದರೆ ಶಿಕ್ಷಣದ ಈ ಅರ್ಥವನ್ನು. ಶಾಲಾ ವಿದ್ಯಾಭ್ಯಾಸ ಕ್ರಮವನ್ನು ದೃಷ್ಟಿಯಲ್ಲಿಟ್ಟುಕೊಂಡಾಗ ಸಂಪೂರ್ಣವಾಗಿ ಪ್ರಯೋಗಿಸುವುದಕ್ಕಾಗುವುದಿಲ್ಲ.

೧ ಶಿಕ್ಷಣ ಎಂದರೆ ಜ್ಞಾನಾರ್ಜನೆ

ತತ್ತ್ವಜ್ಞಾನಕ್ಕೆ ಜ್ಞಾನಪ್ರೇಮ ಎಂಬ ಒಂದು ಅರ್ಥಕ್ಕೆ ಸಂಬಂಧಿಸಿದಂತೆ ಶಿಕ್ಷಣ ಎಂದರೆ ಜ್ಞಾನಾರ್ಜನೆ ಎಂಬ ಅರ್ಥವಿದೆ. ಗ್ರೀಕರ ಶ್ರೇಷ್ಠ ತತ್ತ್ವಜ್ಞಾನಿಯಾದ ಸಾಕ್ರಟೀಸ್, "ಜ್ಞಾನದಿಂದಲೇ ಸದ್ಗುಣ", ಅಥವಾ ಜ್ಞಾನಿಯಾದವನು ಧರ್ಮಾತ್ಮನೂ ನೀತಿಪುರುಷನೂ ಆಗಿರುತ್ತಾನೆ ಎಂದಿದ್ದ. ಮಧ್ಯಯುಗದಲ್ಲಿ ಪ್ರಸಿದ್ಧನಾದ ಫ್ರಾನ್ಸಿಸ್ ಬೇಕನ್, "ಜ್ಞಾನವೇ ಶಕ್ತಿ." ಅಥವಾ ಸುತ್ತಮುತ್ತಲಿನ ಪ್ರಪಂಚದ ಜ್ಞಾನದ ಬಲದಿಂದ ಒಂದು ಸಮಾಜ ಅಭಿವೃದ್ಧಿಯಾಗಬಹುದು, ಎಂದಿದ್ದ. ಗೀತೆಯಲ್ಲಿ ಶ್ರೀಕೃಷ್ಣನೂ ಅರ್ಜುನನಿಗೆ ಸ್ಥಿತಪ್ರಜ್ಞ ಜ್ಞಾನಿಯಾದವನು ಎಂದು ಸಾರಿದ್ದಾನೆ. ಆದ್ದರಿಂದ ಶಿಕ್ಷಣವೆಂದರೆ ಜ್ಞಾನಸಂಪಾದನೆ ಎನ್ನುವ ಭಾವನೆ ಶಿಕ್ಷಣ ಚರಿತ್ರೆಯ ಆದಿಕಾಲದಿಂದ ಹಿಡಿದು ಈ ಶತಮಾನದ ಆರಂಭದ ವರೆಗೂ ಇತ್ತು. ಇಂದಿಗೂ ಜನಸಾಮಾನ್ಯರಲ್ಲಿ ಶಿಕ್ಷಣದ ಈ ಕಲ್ಪನೆ ಪ್ರಚಲಿತವಿದೆ. ಚಾರ್ಲ್ಸ್ ಡಿಕನ್ಸನ 'ಹಾರ್ಡ್ ಟೈಮ್ಸ್' ಎಂಬ ಕಾದಂಬರಿಯ ಪ್ರಾರಂಭದ ಪುಟಗಳಲ್ಲಿ ಈ ರೀತಿಯ ದೃಷ್ಟಿಕೋನ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದೆ. ಮಕ್ಕಳಿಗೆ ಎಷ್ಟು ಸಾಧ್ಯವೋ ಅಷ್ಟು ಜ್ಞಾನವನ್ನು ಕೊಡಬೇಕು. ಏಕೆಂದರೆ ಯಾವ ವ್ಯಕ್ತಿಗೆ ಅತಿ ಹೆಚ್ಚು ಜ್ಞಾನವಿರುತ್ತದೋ ಅವನೇ ಗುಣಿಯೂ ಸುಶಿಕ್ಷಿತನೂ ಆಗಿರುತ್ತಾನೆ ಎಂಬ ಭಾವನೆ ಇದೆ. ಈಗಲೂ ಜ್ಞಾನದ ಮಾಪನ ನಡೆಯುತ್ತದೆ ಎಂಬುದು ಶಿಕ್ಷಣಕ್ಷೇತ್ರದಲ್ಲಿ ಒಂದು ಪ್ರಚಲಿತ ನಂಬಿಕೆ.

ವಿಮರ್ಶೆ: ಶಿಕ್ಷಣವೆಂದರೆ ಜ್ಞಾನಾರ್ಜನೆ; ಜ್ಞಾನಿಗಳೆಲ್ಲಾ ಗುಣಿಗಳು, ವಿವೇಕಿಗಳು ಎಂಬ ಭಾವನೆ ಸಂಪೂರ್ಣವಾಗಿ ಸರಿಯಲ್ಲ. ವಿಶ್ವದ ಎಷ್ಟೋ ಪ್ರಸಿದ್ಧರಾದ ಚರಿತ್ರಾರ್ಹ ವ್ಯಕ್ತಿಗಳ ಆತ್ಮಚರಿತ್ರೆಯನ್ನು ಓದಿದಾಗ ಈ ನಂಬಿಕೆಗೆ ಅಪವಾದಗಳಿವೆ ಎಂದು ತಿಳಿದುಬರುತ್ತದೆ. ಉದಾ: ಬೇಕನ್, ರೂಸೋ ಅಂತಹ ವ್ಯಕ್ತಿಗಳು ಮಹಾಜ್ಞಾನಿಗಳಾಗಿದ್ದರೂ ಅವರ ವೈಯಕ್ತಿಕ ಜೀವನ ವಿವೇಕಯುಕ್ತವಾಗಲೀ ಗುಣಭರಿತವಾದ್ದಾಗಲಿ ಆಗಿರಲಿಲ್ಲ. ಆದ್ದರಿಂದ ಎಷ್ಟೋ ಸಾರಿ ಜ್ಞಾನದ ನಿಧಿಯಾದ ಘಟಿಗರಿಗಿಂತ ಅನಕ್ಷರಸ್ಥ ಸುಸಂಸ್ಕೃತನು ಮೇಲಾಗಿ ಕಾಣುತ್ತಾನೆ. ನಮ್ಮ ಸಾಮಾಜಿಕ ಪರಿಸರದಲ್ಲಿ ಶಿಕ್ಷಣಸಂಸ್ಥೆಗಳ ಪ್ರಶಸ್ತಿಗಳ ಆಧಾರದ ಮೇಲೆ ಸುಶಿಕ್ಷಿತರೆಂದು ಪರಿಗಣಿಸಲ್ಪಟ್ಟ ಹಲವು ವ್ಯಕ್ತಿಗಳ ಅಸಭ್ಯ, ಅನಾಗರಿಕ, ಅಸಂಸ್ಕೃತ ವರ್ತನೆಯನ್ನೂ ಅಹಿತಕರವಾದ ಅಸಹ್ಯ ರೀತಿಯ ವೈಯಕ್ತಿಕ ಜೀವನವನ್ನೂ ಕಂಡಾಗ ಇವರನ್ನು ಸುಶಿಕ್ಷಿತರು ಎಂದು ಕರೆಯಬಹುದೇ? ಶಿಕ್ಷಣವೆಂದರೆ ಜ್ಞಾನಾರ್ಜನೆಯೇ? ಎಂಬ ಸಂದೇಹ ಮನಸ್ಸಿನಲ್ಲಿ ಮೂಡುತ್ತದೆ. ಮೇಲಾಗಿ ಹಳ್ಳಿಗಳಲ್ಲಿ ವಾಸಿಸುತ್ತ, ಶಾಲೆಯ ಮುಖವನ್ನೇ ನೋಡದ ಎಷ್ಟೋ ವ್ಯಕ್ತಿಗಳ ಧರ್ಮಪ್ರಜ್ಞೆಯನ್ನೂ ವಿವೇಕಯುಕ್ತ ಜೀವನವನ್ನೂ ಹತ್ತಾರು ಜನ ಮೆಚ್ಚುವಂಥ ಸ್ವಭಾವವನ್ನೂ, ಕಂಡಾಗ ಶಿಕ್ಷಣವೆಂದರೆ ಏನು ಎಂಬ ಸಮಸ್ಯೆ ಪರಿಹಾರವಾಗದೆಯೆ ಉಳಿಯುತ್ತದೆ.

೨ ಶಿಕ್ಷಣವೆಂದರೆ ಬುದ್ಧಿಯ ವಿವಿಧ ವಿಭಾಗಗಳ ತರಬೇತು

ಹದಿನಾರನೆಯ ಶತಮಾನದ ಅಂತ್ಯದಲ್ಲಿ ಇಂಗ್ಲಿಷ್ ತತ್ತ್ವಜ್ಞಾನಿಯಾದ ಜಾನ್ ಲಾಕ್ ಮಾನವನ ಬುದ್ಧಿ ಹಲವು ಭಾಗಗಳಿಂದ ಕೂಡಿದ್ದಾಗಿದೆ ಎಂದು ಭಾವಿಸಿದ್ದ. ಉದಾ: ವಿಚಾರಶಕ್ತಿ, ಸ್ಮರಣಶಕ್ತಿ, ಕಲ್ಪನಾಶಕ್ತಿ, ಇತ್ಯಾದಿ. ಈ ಬಗೆಯ ಬುದ್ಧಿಯ ಭಾವನಾಪಂಥವನ್ನು ಫ್ಯಾಕಲ್ಟಿ ಸೈಕಾಲಜಿ ಎಂದು ಕರೆದಿದ್ದಾರೆ. ಅವರ ಈ ಬುದ್ಧಿಯು ಶಿಶು ಹುಟ್ಟುವ ಸಮಯದಲ್ಲಿ ಸಂಪೂರ್ಣವಾಗಿ ಖಾಲಿಯಾದ ಕಪ್ಪು ಹಲಗೆಯಂತಿರುತ್ತದೆ. ಹಾಗೂ ಕಾಲಕ್ರಮದಲ್ಲಿ ಸುತ್ತಮುತ್ತಲಿನ ಜಗತ್ತಿನ ಪ್ರಚೋದಕಗಳು ಬಿದ್ದಂತೆಲ್ಲಾ ಬೆಳೆಯುತ್ತ ಹೋಗುತ್ತದೆ ಎಂದು ಭಾವಿಸಿದ್ದ. ಆದ್ದರಿಂದ ಬುದ್ಧಿಯ ವಿಕಾಸ ಎಂದರೆ ಈ ಹಲವು ಶಕ್ತಿಗಳ ಪ್ರತ್ಯೇಕ ಬೆಳವಣಿಗೆ. ಚಿಕ್ಕ ಮಕ್ಕಳ ಬುದ್ಧಿ ಪ್ಲಾಸ್ಟಿಕ್‌ನಂತಿದ್ದು ಅದನ್ನು ಹೇಗೆ ಬೇಕಾದರೂ ರೂಪಿಸಬಹುದು. ಅದೊಂದು ಸಣ್ಣ ಗಿಡವಿದ್ದ ಹಾಗೆ. ಅದಕ್ಕೆ ನಿರ್ದೇಶನ ಕೊಟ್ಟ ದಿಶೆಯಲ್ಲಿ ಅದು ಬೆಳೆಯುತ್ತ ಹೋಗುತ್ತದೆ. ಆದ್ದರಿಂದ ಶಿಕ್ಷಣವೆಂದರೆ ಬುದ್ಧಿಯ ವಿವಿಧ ಶಕ್ತಿಗಳ ಪ್ರತ್ಯೇಕ ತರಬೇತು ಎಂಬ ಅರ್ಥವನ್ನು ಕಲ್ಪಿಸಿದ್ದ. ಉದಾ: ವಿಚಾರಶಕ್ತಿಯನ್ನು ರೇಖಾಗಣಿತದ

ಬೋಧನೆಯಿಂದಲೂ ಸ್ಮರಣಶಕ್ತಿಯನ್ನು ಚರಿತ್ರೆಯ ಬೋಧನೆಯಿಂದಲೂ ಬೆಳೆಸಬಹುದು. ನಾವು ಉಪಯೋಗಿಸುವ ಶಿಕ್ಷಣ ಎನ್ನುವ ಪದವೂ ಸಂಸ್ಕೃತದ 'ಶಿಕ್ಷಾ' ಎನ್ನುವ ಮೂಲದಿಂದ ಆಗಿದ್ದು, ಶಿಕ್ಷಣವೆಂದರೆ ತರಬೇತು ಕೊಡುವುದು ಎನ್ನುವ ಅರ್ಥ ಕೊಡುತ್ತದೆ.

ವಿಮರ್ಶೆ: ಬುದ್ಧಿಯ ಈ ರೀತಿಯ ಕಲ್ಪನೆಗೆ ಇಂದಿನ ತತ್ತ್ವಶಾಸ್ತ್ರದಲ್ಲೇ ಆಗಲಿ, ಮನಶ್ಶಾಸ್ತ್ರದಲ್ಲೇ ಆಗಲಿ ಪುರಸ್ಕಾರವಿಲ್ಲ. ಮಗುವಿನ ಬುದ್ಧಿಯು ಉಪಾಧ್ಯಾಯರು ಏನು ಬೇಕಾದರೂ ಬರೆಯುವಂತಹ ಕಪ್ಪು ಹಲಗೆಯಾಗಿರುತ್ತದೆ. ಮಗು ಶಾಲೆಗೆ ಬರುವಾಗ ತನ್ನದೇ ಆದ ಪೈತ್ರಿಕ ಶಕ್ತಿಗಳನ್ನೂ, ಬಾಹ್ಯಪ್ರಪಂಚದ ಬಗೆಗಿನ ಅನುಭವಭಂಡಾರವನ್ನೂ ಹೊತ್ತುಕೊಂಡು ಬರುತ್ತದೆ. ಈ ಅನುಭವಗಳಿಗೇ ಆಗಲಿ ಮಗುವಿನ ಸ್ವಭಾವಕ್ಕೇ ಆಗಲಿ ಕಣ್ಣುಮುಚ್ಚಿ ಕುಳಿತುಕೊಳ್ಳುವ ಶಿಕ್ಷಣದಲ್ಲಿ ಮೌಲ್ಯವೇ ಇಲ್ಲ.

೪ ಶಿಕ್ಷಣವೆಂದರೆ ಜೀವನಕ್ಕೆ ಪೂರ್ವಸಿದ್ಧತೆ

ಪ್ರತಿಯೊಬ್ಬ ಮಾನವನಿಗೂ ಯಶಸ್ವಿಯಾದ ಜೀವನವನ್ನು ನಡೆಸಬೇಕೆಂಬ ಆಸೆ ಇರುತ್ತದೆ. ಜೀವನ ಯಶಸ್ವಿಯಾಗಬೇಕಾದರೆ ಜೀವನದ ಹಲವು ಸಮಸ್ಯೆಗಳನ್ನು ಸುಲಲಿತವಾಗಿ ಪರಿಹರಿಸುವ ಕೌಶಲವನ್ನೂ ಶಕ್ತಿಯನ್ನೂ ಹೊಂದಿರಬೇಕು. ಉದಾಹರಣೆಗೆ ಪ್ರತಿಯೊಬ್ಬ ವ್ಯಕ್ತಿಯೂ ಆರೋಗ್ಯವಂತನಾಗಿದ್ದು, ಒಂದು ಉದ್ಯೋಗವನ್ನು ಹಿಡಿದು ಸಂಸಾರಸ್ಥನಾಗಿ ಮಕ್ಕಳನ್ನು ಪಾಲಿಸಿ ಪೋಷಿಸಿ ಹಾಗೂ ಸಮಾಜದಲ್ಲಿಯ ಇತರ ವ್ಯಕ್ತಿಗಳೊಂದಿಗೆ ಶಾಂತಿ ಸೌಹಾರ್ದಯುತವಾದ ಸಹಬಾಳ್ವೆ ನಡೆಸಿ ಪ್ರಜಾಪ್ರಭುತ್ವದ ಸತ್ಪ್ರಜೆಯಾಗಿ ಬಾಳಿದಲ್ಲಿ ಅವನ ಜೀವನವನ್ನು ಯಶಸ್ವಿಯಾದ ಜೀವನವೆನ್ನಬಹುದು. ಈ ರೀತಿಯ ಯಶಸ್ವಿಯಾದ ಜೀವನ ಸಾಗಿಸಲು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಪ್ರೌಢಜೀವನದಲ್ಲಿ ಬರುವ ಸಮಸ್ಯೆಗಳ ಪರಿಚಯವನ್ನು ಮಕ್ಕಳಿಗೆ ವಿದ್ಯಾರ್ಥಿಜೀವನದಲ್ಲೆ ಮಾಡಿಕೊಟ್ಟು, ಅವುಗಳಿಗೆ ಪರಿಹಾರವನ್ನು ಶಾಲೆಗಳಲ್ಲೇ ಹೇಳಿಕೊಡಬೇಕು. ಈ ಒಂದು ಅರ್ಥದಲ್ಲಿ ಶಿಕ್ಷಣವನ್ನು ಜೀವನದ ಪೂರ್ವಸಿದ್ಧತೆ ಎನ್ನಬಹುದು. ಹತ್ತೊಂಬತ್ತನೆಯ ಶತಮಾನದ ಇಂಗ್ಲೆಂಡಿನ ಪ್ರಸಿದ್ಧ ಸಸ್ಯಶಾಸ್ತ್ರಜ್ಞನೂ ಶಿಕ್ಷಣತಜ್ಞನೂ ಆಗಿದ್ದ ಹರ್ಬರ್ಟ್ ಸ್ಪೆನ್ಸರ್ ಶಿಕ್ಷಣಕ್ಕೆ ಈ ಅರ್ಥವನ್ನೇ ಪರಿಕಲ್ಪಿಸಿದ್ದ. ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧ ಕಾಲದ ಇಂಗ್ಲಿಷ್ ಶಿಕ್ಷಣಕ್ರಮದ ಮೇಲೆ ಸ್ಪೆನ್ಸರನ ಶೈಕ್ಷಣಿಕ ಪ್ರಭಾವ ಮಹತ್ತ್ವಪೂರ್ಣವಾಗಿತ್ತು.

ವಿಮರ್ಶೆ: ಶಿಕ್ಷಣವು ಜೀವನಕ್ಕೆ ಒಂದು ಪೂರ್ವಸಿದ್ಧತೆ ಎಂದು ಪರಿಗಣಿಸಿದಲ್ಲಿ, ಸಿದ್ಧತೆಯ ಕಾಲದ ಜೀವನವೆಲ್ಲವೂ, ವಿದ್ಯಾರ್ಥಿಗಳ ಆ ಕಾಲದ ಅನುಭವಗಳೆಲ್ಲವೂ ಗೌಣ, ಅವಕ್ಕೆ ಮೌಲ್ಯವಿಲ್ಲ ಎಂಬಂತಾಗುತ್ತದೆ. ಈ ರೀತಿಯ ಶಿಕ್ಷಣ ಮಕ್ಕಳ ಮನಸ್ಸಿನ ವಿಕಾಸವನ್ನೂ ಅವರ ಜೀವನ ಕಕ್ಷೆಯನ್ನೂ ಕಡೆಗಣಿಸಿ ಅಸಂಬದ್ಧವೂ ಅವಾಸ್ತವಿಕವೂ ಆಗಿರುತ್ತದೆ. ಈ ರೀತಿಯ ದೃಷ್ಟಿಕೋನ ಶಿಶುಕೇಂದ್ರೀಕೃತವಾಗಿಲ್ಲವೆ ಪ್ರೌಢ ಕೇಂದ್ರೀಕೃತವಾಗಿದೆ. ಇಂದಿನ ಶೈಕ್ಷಣಿಕ ವಿಚಾರಧಾರೆಯಲ್ಲಿ ಇಡೀ ಜೀವನವೇ ಒಂದು ಶಿಕ್ಷಣ ಕ್ರಿಯೆ ಎಂದು ಭಾವಿಸಲಾಗಿದೆ. ಗರ್ಭದಿಂದ ಗೋರಿಯ ವರೆಗೆ, ಜನನದಿಂದ ಮರಣದ ವರೆಗೆ, ಶೈಶವಾವಸ್ಥೆಯಿಂದ ಶವಾವಸ್ಥೆಯ ವರೆಗೆ ನಾವು ಶಿಕ್ಷಣ ಪಡೆಯುತ್ತಿರುತ್ತೇವೆ ಎಂದು ಭಾವಿಸಲಾಗಿದೆ.

೫ ಶಿಕ್ಷಣವೆಂಧರೆ ಮಾರ್ಗದರ್ಶನ

ಮಾನವರ ಮಕ್ಕಳು ಕಲಿಯದೆ ಬಂದ ಅನೇಕ ವರ್ತನೆಗಳು, ಸಹಜ ಪ್ರವೃತ್ತಿಗಳು, ಪ್ರೇರಣೆಗಳು, ಪ್ರಚೋದನೆಗಳು, ಪ್ರಕೃತಿದತ್ತ ಆವೇಗಗಳು ಹಾಗೂ ಆಸೆಗಳ ಸಹಿತ ಹುಟ್ಟುತ್ತಾರೆ. ಈ ಸಹಜ ಪ್ರಚೋದನೆಗಳು, ಪ್ರವೃತ್ತಿಗಳನ್ನು (ಇಂದ್ರಿಯಾಭಿಲಾಷೆಗಳನ್ನು) ಮತ್ತು ನಡವಳಿಕೆಗಳನ್ನು ನಿರ್ಬಂಧವಿಲ್ಲದೆ, ಸ್ವೇಚ್ಛೆಯಾಗಿ ಬಿಟ್ಟಲ್ಲಿ ಅವು ಮಾನವನನ್ನು ಅನಾಗರಿಕ ಜೀವನದೆಡೆಗೆ ಒಯ್ಯುತ್ತವೆ. ಪ್ರಕೃತಿಯ ಸ್ವಯಂ ನಿರ್ದೇಶನಕ್ಕೆ ಒಳಪಟ್ಟ ಜೀವನ ನಿಯಮವಿಲ್ಲದ, ಕ್ರಮವಿಲ್ಲದ, ಸಂಕಲ್ಪರಹಿತವಾದ, ಗೊತ್ತುಗುರಿಯಿಲ್ಲದ ಜೀವನವಾಗಿರುತ್ತದೆ. ಆದರೆ ನಾಗರಿಕತೆಯ ನಿರ್ದೇಶನಕ್ಕೆ ಒಳಪಟ್ಟ ಸಮಾಜೀಕೃತ ಜೀವನ

ಕ್ರಮಬದ್ಧವಾದ, ಸಮಯಬದ್ಧವಾದ, ನಿರ್ದಿಷ್ಟ ಗುರಿಗಳಿಂದ ಕೂಡಿದ ಜೀವನವಾಗಿರುತ್ತದೆ. ಆದ್ದರಿಂದ ಪ್ರಕೃತಿದತ್ತ ಪ್ರವೃತ್ತಿಗಳಿಗೆ ಪರಿಶುದ್ಧತೆಯನ್ನು ಕೊಡುವ ಸಹಜಾಕಾಂಕ್ಷೆಗಳ ಸಂಸ್ಕರಣಕಾರ್ಯ ಅವಶ್ಯಕ. ಜಾತಿ, ಕುಲ, ಭಾಷೆ, ಧರ್ಮ, ದೇಶ ಇತ್ಯಾದಿ ವ್ಯತ್ಯಾಸಗಳೇನೇ ಇರಲಿ, ಈ ಸಹಜಾಕಾಂಕ್ಷೆಗಳನ್ನು ಪ್ರತಿಯೊಂದು ಜನಾಂಗದ ವ್ಯಕ್ತಿಗಳಲ್ಲೂ ಕಾಣಬಹುದು. ಆದರೆ ಈ ಪ್ರಕೃತಿದತ್ತ ಆಸೆಗಳನ್ನು ತೃಪ್ತಿಪಡಿಸುವ ಹಾಗೂ ನಿರ್ಬಂಧಪಡಿಸುವ ವಿಧಾನ ಜನಾಂಗದಿಂದ ಜನಾಂಗಕ್ಕೆ ಬೇರೆಯಾಗಿರುತ್ತದೆ. ಈ ಹಲವು ರೀತಿಯ ಸಂಸ್ಕರಣ ವಿಧಾನಗಳ ಪರಿಣಾಮವಾಗಿ ಇಂದು ಪ್ರಪಂಚದಲ್ಲಿ ಹಲವು ಸಂಸ್ಕೃತಿಗಳಿವೆ. ವ್ಯಕ್ತಿಗಳ ಅನೇಕ ಸಹಜಪ್ರವೃತ್ತಿಗಳು ಆಯಾ ಗುಂಪಿನ ಜೀವನ-ಸಂಪ್ರದಾಯಗಳಿಗೆ ವಿರುದ್ಧವಾಗಿರುತ್ತವೆಯೆಂಬುದು ಗ್ರೂಮಿಯು ಮತ್ತು ರಾಸ್ ಹೇಳಿರುವ ಪ್ರಕಾರ. ಸಹಜ ಬೆಳವಣಿಗೆಯ ಸಂಸ್ಕರಣವೇ ಶಿಕ್ಷಣ.

ಈ ರೀತಿಯ ಸಂಸ್ಕರಣಕಾರ್ಯಕ್ಕೆ ಮಾರ್ಗದರ್ಶನ ಅವಶ್ಯಕ. ಮಾರ್ಗದರ್ಶನಕ್ಕೆ ನಿಯಂತ್ರಣ ಮತ್ತು ಸಲಹೆ ಎಂಬ ಎರಡು ಮೆಟ್ಟಿಲುಗಳಿವೆ.

ನಿಯಂತ್ರಣ: ಸಾಮಾಜಿಕ ಉದ್ದೇಶಗಳಿಗೆ (ಮುಕ್ತಿ) ಕೆಲಸ ಮಾಡುವಂತೆ ಸಹಜಪ್ರವೃತ್ತಿಗಳನ್ನು ಪ್ರೇರೇಪಿಸುವ ಕ್ರಿಯೆ. ಈ ರೀತಿಯ ಹತೋಟಿ ಮಾನಸಿಕವಾಗಿರಬೇಕು. ಮನದಟ್ಟಾಗುವಂತೆ ತಿಳಿಯಹೇಳಿ ತಮ್ಮನ್ನು ತಾವೇ ನಿಯಂತ್ರಣಕ್ಕೊಳಪಡಿಸಿಕೊಳ್ಳುವಂತೆ ಮಾಡಿ ಸಂಯಮದ ಜೀವನವನ್ನು ಅನುಸರಿಸುವಂತೆ ಮಾಡುವ ಕ್ರಿಯೆ.

ಸಲಹೆ: ಮಕ್ಕಳ ಸಹಜಪ್ರವೃತ್ತಿಗಳನ್ನು ನಿಯಂತ್ರಿಸಿದ ಮೇಲೆ, ಪೂರ್ವಕಲ್ಪಿತ ಗುರಿಗಳತ್ತ ಮಕ್ಕಳ ನಡವಳಿಕೆಗಳನ್ನು ಕೊಂಡೊಯ್ಯುವುದು. ಯಾವ ರೀತಿಯ ಮಾರ್ಗದರ್ಶನ ಅವಶ್ಯಕ? ಈ ಪ್ರಶ್ನೆಗೆ ಉತ್ತರವನ್ನು ರಸ್ಕ್‌ರವರು ಈ ಮಾತುಗಳಲ್ಲಿ ಹೇಳಿದ್ದಾರೆ: "ವ್ಯಕ್ತಿಗಳು ವ್ಯಕ್ತಿಗಳ ಬೆಳವಣಿಗೆಗಾಗಿ ಉದ್ದೇಶಪೂರ್ವಕವಾಗಿ ಮಾರ್ಗದರ್ಶನ ಕೊಡುವ ಪ್ರತಿಕ್ರಿಯೆಯೇ ಶಿಕ್ಷಣ." ಶಿಕ್ಷಣದ ಈ ವ್ಯಾಖ್ಯೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ವಿಶ್ಲೇಷಿಸೋಣ.

ವ್ಯಕ್ತಿಗಳು ವ್ಯಕ್ತಿಗಳಿಗೆ ಮಾರ್ಗದರ್ಶನ ನೀಡುತ್ತಾರೆ. ವ್ಯಕ್ತಿ-ವ್ಯಕ್ತಿ ಸಂಬಂಧವಾದ ಪ್ರಕ್ರಿಯೆಯಾದ್ದರಿಂದ ಶಿಕ್ಷಣ ಒಂದು ಮಾನವೀಯ ಉದ್ಯಮ. ಸರ್ ಜಾನ್ ಆಡಮ್ಸ್‌ರವರು ಶಿಕ್ಷಣವನ್ನು ಎರಡು ಧ್ರುವಗಳುಳ್ಳ ಒಂದು ಪ್ರಕ್ರಿಯೆ ಎಂದು ಹೇಳಿದ್ದಾರೆ:

→ ಅಧ್ಯಾಪಕ (ಪ್ರಚೋದನೆ) ⇌ ವಿದ್ಯಾರ್ಥಿ (ಪ್ರತಿಕ್ರಿಯೆ)

ಅದು ಒಂದು ಪ್ರಕ್ರಿಯೆ. ಅಂದರೆ ಜೀವನದ ಯಾವುದೇ ಒಂದು ಕಾಲಾವಧಿಗೆ ಸೀಮಿತವಾಗಿಲ್ಲದೆ, ಜೀವನದುದ್ದಕ್ಕೂ ನಿರಂತರವಾಗಿ ನಡೆಯುವ ಕ್ರಿಯೆ.

ಈ ಪ್ರಕ್ರಿಯೆಯ ಫಲ ಬೆಳವಣಿಗೆ. ಉದಾ: ಸಾಮಾಜಿಕ ಪ್ರಜ್ಞೆಯ ಬೆಳವಣಿಗೆ.


ಈ ಪ್ರಕ್ರಿಯೆಯ ಇನ್ನೊಂದು ವಿಶೇಷವೆಂದರೆ, ಇದು ಉದ್ದೇಶಪೂರಿತವಾದದ್ದು, ಯಾಂತ್ರಿಕವಾದುದಲ್ಲ. ಉದಾ: ಪೋಲೀಸ್ ಪೇದೆಯು ವಾಹನಸಂಚಾರವಿರುವ ವೃತ್ತದ ಕೇಂದ್ರದಲ್ಲಿ ನಿಂತು ನೀಡುವ ಮಾರ್ಗದರ್ಶನ ಯಾಂತ್ರಿಕವಾದುದು. ಸಂಚಾರಿ ಎಲ್ಲಿಗೆ ಹೋಗುತ್ತಾನೆ ಅವನು ಎಲ್ಲಿಗೆ ಹೋಗಬೇಕು ಎಂಬ ವಿಷಯಗಳ ಬಗ್ಗೆ ಪೋಲೀಸ್ ಪೇದೆಗೆ ಆಸಕ್ತಿಯಿಲ್ಲ.

ಈ ಪ್ರಕ್ರಿಯೆಯ ವಿಶೇಷತೆ ಏನೆಂದರೆ, ಇಲ್ಲಿ ಎಲ್ಲ ಸಂಬಂಧಗಳಿಗಿಂತ ಮಾರ್ಗದರ್ಶನ ಪ್ರಧಾನ. ಉಳಿದ ಸಂಬಂಧಗಳು (ಅಧ್ಯಾಪಕ-ವಿದ್ಯಾರ್ಥಿ) ಗೌಣ.

ವಿಮರ್ಶೆ: ಶಿಕ್ಷಣದ ಈ ಅರ್ಥ ತೀರ ಸಾಮಾನ್ಯವಾಗಿದ್ದು, ನಿರ್ದಿಷ್ಟವಾಗಿ ಏನನ್ನೂ ಹೇಳು ವುದಿಲ್ಲ. ಮಾರ್ಗದರ್ಶನದ ಗುರಿ ಏನು. ಅದರ ಸ್ವರೂಪವೇನು ಎಂಬುದರ ಬಗ್ಗೆ ಬೇಕು ಹೇಳುವುದಿಲ್ಲ. ಪ್ರಾಯೋಗಿಕ (ಶಾಲಾವ್ಯವಸ್ಥೆ) ದೃಷ್ಟಿಯಿಂದ ಈ ಅರ್ಥ ಸಾಕಷ್ಟು ಉಪಯುಕ್ತವಾಗಿಲ್ಲ.

೬ ಶಿಕ್ಷಣವೆಂದರೆ ವ್ಯಕ್ತಿವಿಕಾಸ

ಶಿಕ್ಷಣದ ಈ ಅರ್ಥ ಸಂಪೂರ್ಣವಾಗಿ ಅಮೆರಿಕದ ಪ್ರಸಿದ್ಧ ದಾರ್ಶನಿಕ ಹಾಗೂ ಶಿಕ್ಷಣವೇತ್ತ ಆಗಿದ್ದ ಜಾನ್ ಡ್ಯೂಯಿಯವರ ಶೈಕ್ಷಣಿಕ ವಿಚಾರಧಾರೆಯ ಪ್ರತೀಕವಾಗಿದೆ. ಡ್ಯೂಯಿಯೇ ಹೇಳಿರುವ ಹಾಗೆ. "ವಿಕಾಸವು ಜೀವನದ ಲಕ್ಷಣವೇ ಆದುದರಿಂದ. ಶಿಕ್ಷಣವೂ ವಿಕಾಸಪ್ರಾಯವೇ ಆಗಿದೆ; ಅದಕ್ಕೆ ವಿಕಾಸಾತೀತವಾದ ಗುರಿಗಳಿಲ್ಲ[1]." ಈ ಹೇಳಿಕೆಯ ಅರ್ಥವಿವರಣೆಯನ್ನು ಡ್ಯೂಯಿ ಹೀಗೆ ನೀಡಿದ್ದಾರೆ:



ಈ ರೀತಿಯ ವ್ಯಕ್ತಿ–ಪರಿಸರಗಳ ಪರಸ್ಪರ ಪ್ರಭಾವಕ್ರಿಯೆಯಿಂದ ದೊರೆಯುವ ಅನುಭವಗಳ ಹಾಗೂ ಈ ಅನುಭವಗಳ ಮೂಲಕ ಉಂಟಾಗುವ ಕಲಿಕೆಯ ಮತ್ತು ಈ ಕಲಿಕೆಯ ಫಲವಾದ ಬೆಳವಣಿಗೆ ಹಾಗೂ ವಿಕಾಸಗಳ ಪ್ರಕ್ರಿಯೆಯೇ ಶಿಕ್ಷಣ. ಸಂಕ್ಷಿಪ್ತವಾಗಿ ಹೇಳುವುದಾದಲ್ಲಿ. ಮಗು ಶಾಲೆಗೆ ಬರುವಲ್ಲಿ ತನ್ನದೇ ಆದ ಅನುಭವಗಳನ್ನು ತರುತ್ತದೆ. ಈ ಮೂಲ ಅನುಭವಗಳ ಸಂಸ್ಕರಣವೇ ಶಿಕ್ಷಣ. ಡ್ಯೂಯಿಯವರು ಶಿಕ್ಷಣದ ತಾಂತ್ರಿಕ ವ್ಯಾಖ್ಯೆಯನ್ನು ಕೊಟ್ಟಿರುವ ಹಾಗೆ. "ಜೀವನದ ಅನೇಕ ಅನುಭವಗಳ ಸಂಸ್ಕರಣಕ್ಕೆ ಸಹಾಯಕವಾಗುವ ಮತ್ತು ಆ ಅನುಭವಗಳ ಗತಿಯನ್ನು ನಿರ್ದೇಶಿಸತಕ್ಕ (ಶಕ್ತಿಯನ್ನು ವೃದ್ಧಿಗೊಳಿಸುವ) ಮೂಲ ಅನುಭವಗಳ ಪುನರ್ವ್ಯವಸ್ಥೆ ಹಾಗೂ ಪುನರ್ನಿರ್ಮಾಣವೇ ಶಿಕ್ಷಣ.[2]

ವಿಶ್ಲೇಷಣೆ: ಮೂಲ ಕಲ್ಪನೆ: ಮಗುವಿನಲ್ಲಿ ತನ್ನವೇ ಆದ ಅನುಭವಗಳಿವೆ. ಶಿಕ್ಷಣ (a) ಈ ಅನುಭವಗಳನ್ನು ಸಂಸ್ಕರಿಸಿ, ಅವುಗಳನ್ನು ಪುನರ್ರಚಿಸಿ. ಪುನರ್ವ್ಯವಸ್ಥೆಗೊಳಿಸುತ್ತದೆ. (b) ಮೇಲಿನ ಪುನರ್ರಚನೆ [ಅಂದರೆ (a], ಮುಂದೆ ಬರುವ ಅನೇಕ ಅನುಭವಗಳ ಪರಿಷ್ಕರಣಕ್ಕೆ ಸಹಾಯಕವಾಗುತ್ತದೆ. (c) (a) ಮತ್ತು (b)ಗಳು ಕೂಡಿ ಮುಂದೆ ಬರುವ ಅನುಭವಗಳ ಗತಿಯನ್ನು ನಿರ್ದೇಶಿಸತಕ್ಕ ಶಕ್ತಿಯನ್ನು ವೃದ್ಧಿಗೊಳಿಸುತ್ತವೆ.

---

[1] Dewey. John : *Democracy and Education*, The Macmillan Co., N. Y., 1944, p. 53

[2] ಅದೇ, p. 76

ಉದಾಹರಣೆಗಳು

I ಮಕ್ಕಳು ಸೂರ್ಯ, ನಕ್ಷತ್ರಗಳು ಇತ್ಯಾದಿಯನ್ನು ನೋಡಿರುತ್ತವೆ;

(a) ಈ ಅನುಭವ ಗಳನ್ನು ಉಪಯೋಗಿಸಿಕೊಂಡು ಸೌರವ್ಯೂಹದ ಬಗ್ಗೆ ಪಾಠ ಹೇಳುವುದು.

(b) ಬ್ರಹ್ಮಾಂಡದ ಬಗ್ಗೆ ಪಾಠ ಕಲಿಯುವಾಗ (a) ಹಂತ ಉಪಕಾರಿಯಾಗಿದೆ.

(c) (a) ಮತ್ತು (b)ಗಳು ಗ್ರಹಣಗಳ, ಕ್ಯಾಲೆಂಡರ್‌ಗಳ ಸ್ವಅಧ್ಯಯನಕ್ಕೆ ಉಪಕಾರಿಯಾಗುತ್ತವೆ.

II ಹಳ್ಳಿಯಲ್ಲಿ (ಪಟ್ಟಣದಲ್ಲಿ) ವಾಸಿಸುವ ಮಕ್ಕಳಲ್ಲಿ ಸಾಮಾಜಿಕ ಅನುಭವಗಳಿರುತ್ತವೆ.

(a) ಈ ಅನುಭವಗಳನ್ನು ಉಪಯೋಗಿಸಿ ಹಳ್ಳಿಗಳ ಸಮಸ್ಯೆಗಳ ಬಗ್ಗೆ ಪಾಠ ಹೇಳುವುದು.

(b) (a) ಯು ರಾಷ್ಟ್ರದ ಸಮಸ್ಯೆಗಳ ಬಗ್ಗೆ ಕಲಿಯುವಾಗ ಉಪಯೋಗಿಯಾಗಿದೆ.

(c) (a) ಮತ್ತು (b)ಗಳು ಈ ಸಮಸ್ಯೆಗಳ (ಮಕ್ಕಳಿಂದ) ಪರಿಹಾರಕಾರ್ಯಕ್ಕೆ ಉಪಯೋಗಿಯಾಗಿವೆ.

ಈ ಎಲ್ಲ ಹಂತಗಳಿಂದ ಕೂಡಿದ ಪ್ರಕ್ರಿಯೆಯೇ ಮಗುವಿನ ವಿಕಾಸ: ಶಿಕ್ಷಣದ ಗುರಿಯೇ ವಿಕಾಸ. ಮನೋವಿಜ್ಞಾನಿಯವರ ದೃಷ್ಟಿಯಲ್ಲಿ ವಿಕಾಸದ ಅರ್ಥವನ್ನು ಪರಿಶೀಲಿಸೋಣ.

ವಿಕಾಸ ಎಂದರೇನು? ಮಾನವನ ಶಕ್ತಿಗಳ ಸರ್ವತೋಮುಖವಾದ—ಅಂದರೆ ಶಾರೀರಿಕ, ಬೌದ್ಧಿಕ, ಸಾಮಾಜಿಕ, ಭಾವಾತ್ಮಕ—ಬೆಳವಣಿಗೆಯೇ ವಿಕಾಸ. ಈ ರೀತಿಯ ಬೆಳವಣಿಗೆ ಸಹಸಂಬಂಧಯುಕ್ತವಾಗಿದ್ದು, ಪರಸ್ಪರಾವಲಂಬಿಯಾಗಿದ್ದು, ಸುಸಂಘಟಿತವಾಗಿದ್ದು, ಸಮತೋಲನವುಳ್ಳದ್ದಾಗಿರಬೇಕು. ಅದು ನಿರ್ದೇಶಿತ ಚಟುವಟಿಕೆಗಳ ಸಾಮೂಹಿಕ ಮುನ್ನಡೆಯಾಗಿರಬೇಕು.

ಯಾವಾಗ ವಿಕಾಸ ಸಾಧ್ಯ? ವಿಕಾಸದ ಪ್ರಥಮ ಉಪಾಧಿ ಎಳಮೆ ಅಥವಾ ಅಪಕ್ವತೆ. ಅಪಕ್ವತೆ ಎನ್ನುವುದು ಶಕ್ತಿಯ ಅಭಾವವನ್ನು ಸೂಚಿಸುವುದಿಲ್ಲ. ಬದಲಾಗಿ ಬೆಳೆಯುವುದಕ್ಕೆ ಇರುವ ಅವಕಾಶವನ್ನು ಸೂಚಿಸುತ್ತದೆ. ಶಕ್ತಿಯನ್ನು ಸೂಚಿಸುತ್ತದೆ. ಅಪಕ್ವತೆಗೆ ಎರಡು ಲಕ್ಷಣಗಳಿವೆ—ಪರಾಧೀನತೆ ಅಥವ ಪರಾವಲಂಬನೆ ಮತ್ತು ಹೊಂದಿಕೊಳ್ಳುವ ಸ್ವಭಾವ ಮತ್ತು ಶಕ್ತಿ (ಮೇಣದಂಥ ಮನಸ್ಸು).

ಪರಾವಲಂಬನೆ: ಪ್ರಾಣಿಗಳ ಮರಿಗಳಿಗೆ ಹೋಲಿಸಿದರೆ ಮಾನವರ ಮಗು ತನ್ನ ಭೌತಪ್ರಪಂಚಕ್ಕೆ ಹೊಂದಿಕೊಳ್ಳುವುದರಲ್ಲಿ ಬಹಳ ಅಶಕ್ತವಾಗಿರುತ್ತದೆ. ಪ್ರಾಣಿಗಳ ಮರಿಗಳಿಗೆ ಹುಟ್ಟುವಾಗಲೇ ಅನೇಕ ಶಾರೀರಿಕ ದತ್ತಿಗಳಿರುತ್ತವೆ (ಕಾಯಶಕ್ತಿಗಳು). ಈ ಅಂಶದಲ್ಲಿ ಮಾತ್ರ ಮಾನವಶಿಶು ಪರಾವಲಂಬಿಯಾಗಿರುತ್ತದೆ. ಮಗು ಬೆಳೆಯುತ್ತ ಹೋದಂತೆಲ್ಲ ಪರಾವಲಂಬನೆಯಿಂದ ಸ್ವಾವಲಂಬಿಯಾಗುತ್ತಿರುತ್ತದೆ. ಆರ್ನಾಲ್ಡ್ ಟಾಯ್ನ್‌ಬಿ ರಾಷ್ಟ್ರಜೀವನದ ಬಗ್ಗೆ ಹೇಳಿರುವ ಮೂರು ಮಾತುಗಳು ವ್ಯಕ್ತಿಜೀವನಕ್ಕೂ ಅನ್ವಯಿಸುತ್ತವೆ: "ಸ್ವಾವಲಂಬನೆಯ ಕಡೆಗೆ ಪ್ರಗತಿಯೇ ವಿಕಾಸದ ಒರೆಗಲ್ಲು"[3]. ಆದರೆ ಮಗುವಿನ ಪರಾವಲಂಬನೆ ಅದರ ನ್ಯೂನತೆ ಅಥವಾ ಅಶಕ್ತತೆ ಅಲ್ಲ. ಸಾಮಾಜಿಕ ದೃಷ್ಟಿಯಿಂದ ನೋಡಿದಲ್ಲಿ ಅದು ಒಂದು ಶಕ್ತಿ: ಮಗು ಮತ್ತು ಸಮಾಜ ಪರಾವಲಂಬಿಗಳು. ಮಾನವರ ಶಿಶುಗಳು ಕಾಯಶಕ್ತಿಗಳಿಲ್ಲದಿದ್ದರೂ ಸಾಮಾಜಿಕ ಬಲಗಳ ಶಕ್ತಿಯಿಂದ ಜೀವನವನ್ನು ನಿಭಾಯಿಸುತ್ತವೆ. ಪರಾವಲಂಬನೆಯ ಮೂಲಕವೇ ಪರಸ್ಪರಾವಲಂಬನೆಯ ಬಗೆಗೆ, ಅಂದರೆ ಸಮಾಜಜೀವನದ ಬಗೆಗೆ, ಸದ್ಭಾವನೆಗಳು ಮೂಡುತ್ತವೆ. ಆದ್ದರಿಂದ ವಿಕಾಸದ ಒಂದು ಪ್ರಮುಖ ಲಕ್ಷಣವೆಂದರೆ ಪರಾವಲಂಬನೆಯಿಂದ ಸ್ವಾವಲಂಬನೆಯ ಕಡೆಗೆ ಪ್ರಗತಿ ಹಾಗೂ ಪರಾಸ್ಪರಾವಲಂಬನೆಯ ಬಗೆಗೆ ಸದ್ಭಾವನೆ.

ಹೊಂದಾಣಿಕೆಯ ಶಕ್ತಿ: ಮುಂಬರುವ ಚಟುವಟಿಕೆಗಳ ನಿರ್ದೇಶನಕ್ಕೆ ಸಹಾಯವಾಗುವ ಹಾಗೆ ಜೀವನದ ಅನುಭವಗಳಿಂದ ಕಲಿಯುವ ಸಾಮರ್ಥ್ಯವೇ ಹೊಂದಾಣಿಕೆಯ ಶಕ್ತಿ. ಎಲ್ಲಿಯ ತನಕ ಹೊಂದಾಣಿಕೆಯ ಶಕ್ತಿ ಇರುವುದೋ ಅಲ್ಲಿಯ ತನಕ ಶಿಕ್ಷಣ ಸಾಧ್ಯ. ಶಿಕ್ಷಣದ ಮೂಲಕ ಜೀವನದ ಎಲ್ಲ ಸನ್ನಿವೇಶ

[3] Arnold Toynbee : *A Study of History*, OUP. 1947, p. 208

ಗಳಿಗೂ ಹೊಂದಿಕೊಳ್ಳುವಂಥ ಶಕ್ತಿಯನ್ನೂ ಮನಸ್ಸನ್ನೂ ಬೆಳೆಸಬೇಕು. ಹೊಂದಾಣಿಕೆಯ ಶಕ್ತಿಯ ಮೂಲಕ ತನ್ನ ಪರಿಸರದೊಂದಿಗೆ ವ್ಯಕ್ತಿಯ ಸಮಯೋಜನೆ ಸಾಧ್ಯ.

ಈ ರೀತಿಯ ಕಲಿಕೆಯಿಂದ ಉಂಟಾಗುವ ಸಮಯೋಜನೆಯ ಪರಿಣಾಮವೇ ವಿಕಾಸ. ಆದ್ದರಿಂದ ವಿಕಾಸ ಶಿಕ್ಷಣದ ಅಂತಿಮ ಫಲ. ಇಲ್ಲಿ ವಿಕಾಸವೇ ಶಿಕ್ಷಣ ಎಂದು ಹೇಳಿದಾಗ, ಈ ವಿಕಾಸ ಅಂಶಿಕವಾಗಿರದೆ. ವ್ಯಕ್ತಿಯ ಭೌತಿಕ. ಸಾಮಾಜಿಕ. ಬೌದ್ಧಿಕ. ಭಾವಾತ್ಮಕ ಇತ್ಯಾದಿಯಾದ ಸಕಲ ಭಾಗಗಳೂ ಸಮಗ್ರವಾದ ರೀತಿಯಲ್ಲಿ ವಿಕಾಸ ಹೊಂದಬೇಕು. ಈ ಅರ್ಥದಲ್ಲಿ ಶಿಕ್ಷಣವೆಂದರೆ (ಸರ್ವವಿಧವಾದ) ಸರ್ವತೋಮುಖವಾದ ಸಮಗ್ರ ವಿಕಾಸ; ಮತ್ತು ವಿಕಾಸವು ಜೀವನದ ಲಕ್ಷಣವೇ ಆಗಿದೆ. ಆದ್ದರಿಂದ ಶಿಕ್ಷಣ ವಿಕಾಸಪ್ರಾಯವಾಗಿರುವುದರಿಂದ. ಇದೀ ಜೀವನವೇ ಶಿಕ್ಷಣವಾಗಿದೆ.

ವಿಮರ್ಶೆ: ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ ಎನ್ನುವ ಡ್ಯೂಯಿಯ ಅನುಯಾಯಿಗಳಲ್ಲಿ ಪ್ರಮುಖರಾದ ಕಿಲ್ ಪ್ಯಾಟ್ರಿಕ್, ಚೈಲ್ಡ್ಸ್. ರ್ಯಾಟ್ನರ್ ಮುಂತಾದವರ ನೇತೃತ್ವದಲ್ಲಿ ಈ ಶತಮಾನದ ಆದಿಯಲ್ಲಿ ಅಮೆರಿಕದಲ್ಲಿ ಶಿಕ್ಷಣರಂಗದಲ್ಲಿ 'ಪ್ರಗತಿಶೀಲ ಶಿಕ್ಷಣ ಚಳವಳಿ' ಬಹಳ ಜನಪ್ರಿಯವಾಗಿತ್ತು. ಆದರೆ ಮಹಾಯುದ್ಧಗಳಾದ ಬಳಿಕ. ಈಚಿನ ವರ್ಷಗಳಲ್ಲಿ, ಶಿಕ್ಷಣದ ಈ ಅರ್ಥವೂ ಈ ಅರ್ಥವನ್ನು ಆಧರಿಸಿದ ಅಮೆರಿಕನ್ ಶಿಕ್ಷಣಕ್ರಮವೂ (ಹೆಚ್ಚಾಗಿ ಸೋವಿಯೆತ್ ದೇಶ ೧೯೫೭ರಲ್ಲಿ ಮೊದಲ ಬಾರಿಗೆ ಅಂತರಿಕ್ಷ ನೌಕೆಯನ್ನು ಹಾರಿಸಿದ ಮೇಲೆ) ಕಟು ವಿಮರ್ಶೆಗೆ ಗುರಿಯಾಯಿತು. ವಿಮರ್ಶೆಯ ಮುಖ್ಯ ಅಂಶಗಳಿವು: ಡ್ಯೂಯಿಯು ಹೇಳಿರುವ ಹಾಗೆ ಶಿಕ್ಷಣಕ್ಕೆ ವಿಕಾಸಾತೀತವಾದ ಗುರಿಗಳಿಲ್ಲದಿರುವುದು ಸಾಧ್ಯವಿಲ್ಲ. ವಿಕಾಸ ಒಂದು ಪ್ರಕ್ರಿಯೆ ಮಾತ್ರ; ಪ್ರತಿಯೊಂದು ಪ್ರಕ್ರಿಯೆಗೂ ಗುರಿ ಇರಲೇಬೇಕು. ಪ್ರಾಯೋಗಿಕತೆಯ ದೃಷ್ಟಿಯಿಂದ ಗುರಿ ಇಲ್ಲದ ಶಿಕ್ಷಣವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ವಿಕಾಸಕ್ಕೂ ಒಂದು ಗುರಿ ಇರಲೇಬೇಕು.

೨ ಶಿಕ್ಷಣವೆಂದರೆ ಸಂಸ್ಕೃತಿಪ್ರಸಾರ

ಇಲ್ಲಿಯವರೆಗೆ ಚರ್ಚಿಸಿದ ಶಿಕ್ಷಣದ ಅರ್ಥಗಳು ವ್ಯಕ್ತಿಯ ದೃಷ್ಟಿಯಿಂದ ನಿರೂಪಿಸಿದವುಗಳು. ಆದರೆ. ಸಮಾಜದ ಹಿತಾಸಕ್ತಿಗಳ ದೃಷ್ಟಿಯಿಂದ ನೋಡಿದಲ್ಲಿ ಶಿಕ್ಷಣವೆಂದರೆ ಸಂಸ್ಕೃತಿ ಪ್ರಸಾರ ಎಂಬ ಅರ್ಥ ಬರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಜೀವಶಾಸ್ತ್ರೀಯ ದತ್ತಿಗಳ ಸಹಿತ ಹುಟ್ಟಿ ಸಾಮಾಜಿಕ ದತ್ತಿಗಳಿಗೆ ಕೊಡಲ್ಪಡುತ್ತಾನೆ. ಎಂದು ಹೇಳುತ್ತಾರೆ. ಈ ಸಾಮಾಜಿಕ ದತ್ತಿಗಳಿಗೆ ಇನ್ನೊಂದು ಹೆಸರೇ ಸಂಸ್ಕೃತಿ. ಸ್ಥೂಲವಾಗಿ ಹೇಳುವುದಾದರೆ ಮಾನವನ ಸಕಲ ಸಾಧನೆಗಳ ಸಾರಸಂಗ್ರಹವೇ ಅದರ ಸಂಸ್ಕೃತಿ. ಇ.ಬಿ. ಟೇಲರರ ಮಾತಿನಲ್ಲಿ, "ಮಾನವ ಒಂದು ಸಮಾಜದ ಸದಸ್ಯನಾಗಿ ಗಳಿಸಿರುವ ಜ್ಞಾನ, ನಂಬಿಕೆಗಳು. ಕಲೆ. ನೀತಿ. ಕಾನೂನು, ಪದ್ಧತಿ ಮತ್ತು ಇತರ ಸಾಮರ್ಥ್ಯಗಳು ಹಾಗೂ ಅಭ್ಯಾಸಗಳನ್ನು ಒಳಗೊಂಡ ಒಂದು 'ಸಂಕೀರ್ಣವಾದ ಸಂಪೂರ್ಣತೆ'ಯೇ ಅದರ ಸಂಸ್ಕೃತಿ. ಈ ಸಂಸ್ಕೃತಿಯನ್ನು ಪ್ರತಿಯೊಂದು ಸಮಾಜವೂ ತನ್ನ ಉಳಿವಿಗೆ ಹಾಗೂ ನಿರಂತರತೆಗಾಗಿ ಮುಂಬರುವ ಪೀಳಿಗೆಗೆ ಪ್ರಸಾರಮಾಡುತ್ತದೆ. ಈ ಸಂಸ್ಕೃತಿಪ್ರಸಾರಪ್ರಕ್ರಿಯೆಯೇ ಶಿಕ್ಷಣ. ಜೆ.ಎಸ್. ಮಿಲ್ ಹೇಳಿರುವಂತೆ, "ಪ್ರತಿಯೊಂದು ಜನಾಂಗವೂ ತನ್ನ ಉಪಕ್ರಮಿಕ ಜನಾಂಗಕ್ಕೆ. ಅವರನ್ನು ತಾವು ಉಳಿಸಿಕೊಂಡಿರುವ ಪ್ರಗತಿಯ ಮಟ್ಟವನ್ನು ಉಳಿಸಿಕೊಳ್ಳುವಷ್ಟು ಯೋಗ್ಯರನ್ನಾಗಿ ಮಾಡುವುದಕ್ಕಾಗಿ ಮತ್ತು ಸಾಧ್ಯವಾದಲ್ಲಿ ಆ ಮಟ್ಟವನ್ನು ಸುಧಾರಿಸುವುದಕ್ಕಾಗಿ. ಉದ್ದೇಶಪೂರ್ವಕವಾಗಿ ಕೊಡುವ ಸಂಸ್ಕೃತಿಯೇ ಶಿಕ್ಷಣ." ಮೇಲಿನ ಶಿಕ್ಷಣದ ವ್ಯಾಖ್ಯೆಯಲ್ಲಿ ಎರಡು ಅಂಶಗಳನ್ನು ಗಮನಿಸಬೇಕು: ೧ ಶಿಕ್ಷಣದ ಮೂಲಕವೇ ಸಂಸ್ಕೃತಿಯ ಉಳಿವು ಸಾಧ್ಯ. ಸಂಸ್ಕೃತಿಯ ಉಳಿವೇ ಪ್ರತಿಯೊಂದು ಪೀಳಿಗೆಯ ಎಲ್ಲ ಚಟುವಟಿಕೆಗಳ ಮೂಲ ಉದ್ದೇಶ. ಉದಾಹರಣೆಗೆ. ಭಾರತೀಯ ಸಂಸ್ಕೃತಿಯ ಉಳಿವು ಅದರ ಯುವಜನಾಂಗದ ಕೈಯಲ್ಲಿದೆ. ಅವರು ತಮ್ಮ ಸಂಸ್ಕೃತಿಯ ಹಿರಿಮೆಯನ್ನು ಮರೆತು ಬೇರೊಂದು ಸಂಸ್ಕೃತಿಯನ್ನು ಅನುಕರಣೆ ಮಾಡಿದಲ್ಲಿ ಅದರಿಂದ ಭಾರತದ ಪ್ರಸ್ತುತ ಪ್ರಗತಿಗೆ ಹಾನಿಯೇ ಹೊರತು ಹಿತವಿಲ್ಲ. ೨ ಯಾವ ಸಂಸ್ಕೃತಿಯೇ ಆಗಿರಲಿ, ಅದು ಪರಿಪೂರ್ಣವಾಗಿರುವುದಿಲ್ಲ. ಅದನ್ನು ಸುಧಾರಿಸುವ ಆವಶ್ಯಕತೆ ಇದೆ. ಉದಾಹರಣೆಗೆ

ಭಾರತದ ಸಂಸ್ಕೃತಿ ಸನಾತನವಾಗಿಯೂ ವಿಶ್ವದ ಅತಿ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದಾಗಿಯೂ ಶ್ರೇಷ್ಠವಾಗಿಯೂ ಇದ್ದರೂ ಅದರಲ್ಲಿ ಕಾಲಕ್ರಮೇಣ ಬೆಳೆದುಬಂದ ಹಲವು ಅಹಿತಕಾರಕ ಪದ್ಧತಿಗಳಾದ ಜಾತಿಪದ್ಧತಿ, ಅಸ್ಪೃಶ್ಯತೆ, ಬಾಲ್ಯವಿವಾಹ ಮುಂತಾದವು ಸುಧಾರಣೆಗೆ ಯೋಗ್ಯವಾಗಿವೆ. ಹಾಗೂ ಭಾರತದ ಉತ್ಪಾದನಾವಿಧಾನಗಳಲ್ಲೂ ತಂತ್ರಜ್ಞಾನದಲ್ಲೂ ಸುಧಾರಣೆ ಅವಶ್ಯಕ. ಸಂಸ್ಕೃತಿಯಲ್ಲಿ ಈ ರೀತಿಯಾದ ಸುಧಾರಣೆಗಳನ್ನು ಶಿಕ್ಷಣದ ಮೂಲಕವೇ ತರಬೇಕು.

ಒಬ್ಬ ವ್ಯಕ್ತಿ ತಾನು ತಿಳಿಕೊಂಡರೂ ತನ್ನನ್ನು ಅಧ್ಯಯಿಸಿದವರು ತೊಂದರೆಗೊಳಗಾಗದೆ ಶಾಂತಿಯುತವಾಗಿ ಬಾಳಲು ಸಹಾಯ ಮಾಡುವ ಹಾಗೆ. ಒಂದು ಸಮಾಜದ ಒಂದು ಜನಾಂಗವೂ ತಮ್ಮ ಕಾಲವಾದ ಮೇಲೆ ಉಳಿಯುವ ಸಮಾಜದವರಲ್ಲಿ ತೊಂದರೆಗೊಳಗಾಗದಿರಲೆಂದು ಮಾಡುವ ಸಹಾಯವೇ ಶಿಕ್ಷಣ. ಆದರೆ ಸಂಸ್ಕೃತಿಪ್ರಸಾರವೇ ಶಿಕ್ಷಣ.

ಜೆ. ಎಸ್. ಮಿಲ್‌ನ ಶಿಕ್ಷಣದ ವ್ಯಾಖ್ಯೆಯ ವಿಮರ್ಶೆಯ ಎನ್ನುವಂತೆ ಡಿ.ಜೆ.ಓ. ಕಾನರ್ ಅವರು ಈ ರೀತಿ ಹೇಳುತ್ತಾರೆ: ಸಂಸ್ಕೃತಿ ಪ್ರಸಾರವು ಶಿಕ್ಷಣದ ಉದ್ದೇಶವೇ ಅಲ್ಲ. ಅದು ಶಿಕ್ಷಣದ ಕ್ರಿಯೆ ಮಾತ್ರ. "ಸಂಸ್ಕೃತಿಯ ಬೆಳವಣಿಗೆಯೇ ಶಿಕ್ಷಣದ ಉದ್ದೇಶ". ಶಿಕ್ಷಣದ ಈ ಅರ್ಥವನ್ನೇ ಪ್ರಧಾನವಾಗಿಟ್ಟುಕೊಂಡು 'ಪ್ರಯೋಜನಾ ಪಂಥ' ಎಂಬ ನೂತನವಾದ ಶೈಕ್ಷಣಿಕ ದರ್ಶನ ಪಂಥವೊಂದು ಅಮೆರಿಕದಲ್ಲಿ ಪ್ರಚಲಿತವಾಗಿದೆ. ಇದರ ಪ್ರಕಾರ ಇಡೀ ವಿಶ್ವದ ಸಂಸ್ಕೃತಿಯ ಪುನರುದ್ಧಾರವೇ ಶಿಕ್ಷಣದ ಉದ್ದೇಶ.

ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್

ಗುಲಾಮಗಿರಿಯ ವಿರುದ್ಧ ಹೋರಾಡಿದ ವಿಲಿಯಂ ಲಾಯ್ಡ್ ಗ್ಯಾರಿಸನ್

ಸಣ್ಣ ಕೊಠಡಿಯೊಂದರಲ್ಲಿ ಒಬ್ಬೊಂಟಿಗನಾಗಿ. ಜನಗಳ ಕಣ್ಣಿಗೆ ಸಹ ಬೀಳದೆ. ಒಬ್ಬ ಬಡ ಅವಿದ್ಯಾವಂತ ಯುವಕ ಅಚ್ಚಿನ ಮೊಳೆಗಳೊಡನೆ ಹೋರಾಡುತ್ತಿದ್ದಾನೆ. ಆ ಕೊಠಡಿ ಕತ್ತಲೆ; ಕುರ್ಚಿ ಮೇಜು ಇಲ್ಲ. ದಾರಿದ್ರ್ಯದ ವಾತಾವರಣ. ಆದರೆ ಅಲ್ಲಿ ಜನಾಂಗದ ಸ್ವಾತಂತ್ರ್ಯದ ಬೀಜ ಮೊಳಕೆಯಾಯಿತು.

—ಜಾನ್ ಹ್ವಿಟ್ಟಿಯರ್

ಅಮೆರಿಕ ಜಗತ್ತಿನಲ್ಲಿ ಇಂದು ಎಷ್ಟೇ ಪ್ರಖ್ಯಾತವಾದ ಹೆಸರನ್ನು ಸಂಪಾದಿಸಿದ್ದರೂ, ಗುಲಾಮಗಿರಿಯ ದುರ್ವ್ಯಾಪಾರ ಆ ರಾಷ್ಟ್ರದಿಂದ ತೊಲಗದೆ ಹೋಗಿದ್ದರೆ ಅದು ಒಂದು ಅಲ್ಪರಾಷ್ಟ್ರವಾಗಿರುತ್ತಿದ್ದಿತು. ಗುಲಾಮಗಿರಿಯ ವ್ಯಾಪಾರ ಮತ್ತು ಅಸ್ತಿತ್ವವನ್ನು ಹೋಗಲಾಡಿಸಲು, ವಿಲಿಯಂ ಲಾಯ್ಡ್ ಗ್ಯಾರಿಸನನಷ್ಟು ಹೋರಾಡಿದವರು, ಜಗತ್ತಿನಲ್ಲಿ ಮತ್ತಾರೂ ಇಲ್ಲ. ಸತ್ಯ ಮತ್ತು ನ್ಯಾಯಕ್ಕಾಗಿ ಅವನು ಧೈರ್ಯದಿಂದ ಹೋರಾಡಲು ಪ್ರಾರಂಭಿಸಿದಂದಿನಿಂದಲೇ ಹಿಂಸೆ. ಅನ್ಯಾಯ. ದ್ವೇಷ. ಬಂಡವಾಳಶಕ್ತಿ ಇವೆಲ್ಲ ಒಗ್ಗಟ್ಟಾಗಿ ಅವನಿಗೆ ವಿರೋಧವಾದುವು. ಗ್ಯಾರಿಸನನ ಕಥೆ—ಎಲ್ಲ ದುಷ್ಟಶಕ್ತಿಗಳಿಗೂ ಸಮಾಜಘಾತಕ ಪ್ರವೃತ್ತಿಗಳಿಗೂ ಎದುರಾಗಿ ಒಬ್ಬ ಕೆಚ್ಚೆದೆಯ ಬಡಪಾಯಿ ನ್ಯಾಯಕ್ಕಾಗಿ ಹೋರಾಡುವುದನ್ನೇ ಜೀವನದ ಗುರಿಯಾಗಿ ಇಟ್ಟುಕೊಂಡ ಸಾಹಸದ ಕಥೆ. ಧೈರ್ಯ. ಸತ್ಯಪ್ರಿಯತೆ. ನ್ಯಾಯಪರತೆ ಇದ್ದರೆ, ಹಣ. ಅಧಿಕಾರ ಇವೆಲ್ಲ ಕೊನೆಯಲ್ಲಿ ಸತ್ಯಕ್ಕೆ ತಲೆಬಾಗುವುವೆಂಬುದಕ್ಕೆ ಗ್ಯಾರಿಸನನ ಕಥೆ ಒಳ್ಳೆಯ ಉದಾಹರಣೆ.

ಅಮೆರಿಕ ಸುಮಾರು ನೂರಿಪ್ಪತ್ತು ವರುಷಗಳ ಕೆಳಗೆ ಗುಲಾಮಗಿರಿಯ ತವರುಮನೆಯಾಗಿತ್ತು. ಆ ವೇಳೆಗೆ ಸುಮಾರು ಮೂರು ಶತಮಾನಗಳಿಂದಲೇ ಅಮೆರಿಕದಲ್ಲಿ ಗುಲಾಮರಿದ್ದರು. ಮೊದಲು ಅಮೆರಿಕಕ್ಕೆ ೧೬ನೆಯ ಶತಮಾನದಲ್ಲಿ ಹೋದ ಸ್ಪಾನಿಷರೂ ಪೋರ್ಚುಗೀಸರೂ ರೆಡ್ ಇಂಡಿಯನರನ್ನು ಗಣಿಗಳಲ್ಲಿ ಕೆಲಸಮಾಡಲು ಬಲಾತ್ಕರಿಸಲಾಗಲಿಲ್ಲ. ರೆಡ್ ಇಂಡಿಯನರಿಗೆ ಯಜಮಾನರು ಕೊಟ್ಟ ಹಿಂಸೆಯಿಂದ ಅವರಲ್ಲಿ ಅನೇಕರು ಸತ್ತುಹೋದರು. ಇದರಿಂದ ಯಜಮಾನರಿಗೆ ತುಂಬ ನಷ್ಟವಾಯಿತು. ಯೂರೋಪಿನ ಆ ಜನಾಂಗಗಳವರು. ಆಫ್ರಿಕದ ಪುಷ್ಟರಾದ ಜನರನ್ನು ಅಮೆರಿಕಕ್ಕೆ ಹಿಡಿದುಕೊಂಡು ಬರತೊಡಗಿದರು. ಗುಲಾಮಗಿರಿಯ ವ್ಯಾಪಾರ ಪ್ರಾರಂಭವಾದುದು ಹೀಗೆ. ಅದು ಬಹು ನೀಚವಾದ ಪಾಶವೀ ವ್ಯಾಪಾರವಾಗಿತ್ತು. ಇಂಗ್ಲೆಂಡು ಸಹ ಈ ವ್ಯಾಪಾರದಲ್ಲಿ ತೊಡಗಿತ್ತು.

ಅಮೆರಿಕ ಯುದ್ಧಮಾಡಿ ಸ್ವಾತಂತ್ರ್ಯ ಹೊಂದಿ, ಪೂರ್ಣ ಉತ್ಸಾಹದಿಂದ ೧೭೭೬ರಲ್ಲಿ ತನ್ನ ಚರಿತ್ರೆಯ ಹೊಸ ಅಧ್ಯಾಯವನ್ನು ಪ್ರಾರಂಭಿಸಿದಾಗ ಗುಲಾಮಗಿರಿಯನ್ನು ತೊಡೆದುಹಾಕಬೇಕಾಗಿತ್ತು. ಏಕೆಂದರೆ ಅಮೆರಿಕದ ಸ್ವಾತಂತ್ರ್ಯ ಘೋಷಣೆಯಲ್ಲಿ "ಎಲ್ಲರೂ ಸ್ವತಂತ್ರರಾಗಿ ಜನಿಸಿದ್ದಾರೆ. ಎಲ್ಲರೂ

ಸಮಾನರು." ಎಂದಿದೆ: "ಎಲ್ಲರೂ ಜೀವನ ಸ್ವಾತಂತ್ರ್ಯ ಸುಖಕ್ಕೆ ಹಕ್ಕುದಾರರು, ಅರ್ಹರು," ಎಂದಿದೆ. ಆಗ ಗುಲಾಮರನ್ನು ವಿಮೋಚನೆ ಮಾಡುವುದು ಸುಲಭವಾಗಿಬಿಡುತ್ತಿತ್ತು. ಆಗ ಅಮೆರಿಕದ ಹದಿಮೂರು ರಾಜ್ಯಗಳಲ್ಲಿಯೂ ಗುಲಾಮಗಿರಿ ಇತ್ತು. ಅದಕ್ಕೆ ಕಾನೂನಿನ ಒಪ್ಪಿಗೆ ಸಹ ದೊರಕಿತ್ತು. ಆದರೆ ಅಮೆರಿಕದಲ್ಲಿ ಸಜ್ಜನರೆಲ್ಲ ಎಂದಿನಿಂದಲೂ ಗುಲಾಮಗಿರಿಗೆ ವಿರೋಧವಾಗಿದ್ದರು. ಅಮೆರಿಕದ ಸ್ವಾತಂತ್ರ್ಯವನ್ನು ಹೋರಾಡಿ ಸಂಪಾದಿಸಿದ ಅನೇಕ ಯೋಧರು "ಗುಲಾಮಗಿರಿ ಪಾಪ" ಎಂಬ ಅಭಿಪ್ರಾಯವುಳ್ಳವರಾಗಿದ್ದರು. ಜಾರ್ಜ್ ವಾಷಿಂಗ್ಟನ್ ತನ್ನ ಉಯಿಲಿನಲ್ಲಿ ಗುಲಾಮರನ್ನು ಬಿಡುಗಡೆ ಮಾಡಿಬಿಟ್ಟ. ಆದರೆ ಸಂವಿಧಾನವನ್ನು ರಚಿಸಿದ ಸಮಿತಿಯ ಮುಂದೆ ಅಮೆರಿಕದ ಎರಡು ರಾಜ್ಯಗಳು "ಗುಲಾಮಗಿರಿ ಇರಲೇಬೇಕೆಂದು" ಖಂಡಿತವಾಗಿ ವಾದಿಸಿ ಹಠ ಹಿಡಿದುದರಿಂದ, ಸಂವಿಧಾನ ನಿರ್ಮಾತೃಗಳು ಅದರ ವಿಷಯ ಕೈಬಿಟ್ಟರು. ೧೯ನೆಯ ಶತಮಾನದಲ್ಲಿ ಸಣ್ಣ ಗಿಡವಾಗಿದ್ದುದನ್ನು ನಾಶಮಾಡದೆ ಬಿಟ್ಟುದರಿಂದ ನೂರು ವರುಷಗಳೊಳಗೆ ಅದು ಪ್ರಬಲವಾಗಿ ಬೇರುಬಿಟ್ಟುಕೊಂಡು ದೊಡ್ಡ ವೃಕ್ಷವಾಯಿತು. ಅನಂತರ ಅದರ ನಾಶಕ್ಕಾಗಿ ಒಂದು ಯುದ್ಧವೇ ಸಂಭವಿಸಿ ಅನೇಕರ ಪ್ರಾಣಹಾನಿಯೂ ಅಪಾರ ನಷ್ಟವೂ ಆಗಬೇಕಾಯಿತು.

ಗ್ಯಾರಿಸನ್ ೧೮೦೫ರಲ್ಲಿ ಜನಿಸಿದ. ಅವನ ತಂದೆ ತಾಯಿಯರು ಅತ್ಯಂತ ಬಡವರಾಗಿದ್ದುದರಿಂದ ಅವನು ತನ್ನ ಹತ್ತನೆಯ ವಯಸ್ಸಿಗೇ ಪೆಪ್ಪರ್‌ಮಿಂಟ್‌ಗಳನ್ನು ನ್ಯೂಬರಿಪೋರ್ಟ್ ಎಂಬಲ್ಲಿ ಮನೆ ಮನೆಗೆ ಮಾರುತ್ತ ತಿರುಗುತ್ತಿದ್ದ. ಆ ಕಷ್ಟಭಾಗಿಯ ಸಾಧುಪ್ರಾಣಿಯ ಹೆಸರು "ಮಾನವ ಜನಾಂಗದ ಸ್ವಾತಂತ್ರ್ಯ ಮತ್ತು ನ್ಯಾಯದ ಹೋರಾಟಗಾರ"ನೆಂದು ಇತಿಹಾಸದಲ್ಲಿ ಶಾಶ್ವತವಾಗಿ ನಿಲ್ಲುವುದೆಂದು ಆಗ ಯಾರೂ ಭಾವಿಸಿರಲಿಲ್ಲ.

ಮಗು ಜನಿಸಿದ ಅನಂತರ ಗ್ಯಾರಿಸನನ ತಂದೆ ಮನೆಯನ್ನೇ ತ್ಯಜಿಸಿಬಿಟ್ಟ. ಗ್ಯಾರಿಸನನ ಪೋಷಣೆ ತಾಯಿಯ ಪಾಲಿಗೆ ಬಿತ್ತು. ಆಕೆ ಚೆಲುವೆ. ಧೀರಳಾದ ವಿವೇಕಿಯಾದ ದೈವಭಕ್ತ ಮಹಿಳೆ. ಮುಂದೆ ಗ್ಯಾರಿಸನ್ ಸತ್ಯನ್ಯಾಯಕ್ಕಾಗಿ ಹೋರಾಡಲು ಬೇಕಾದ ಸ್ಫೂರ್ತಿಯೆಲ್ಲ ಆ ತಾಯಿಯಿಂದಲೇ ಅವನಿಗೆ ಬಂತು. ಆಕೆಗೆ ಗ್ಯಾರಿಸನ್ ಅಲ್ಲದೆ. ಇನ್ನೂ ಮೂರು ಜನ ಮಕ್ಕಳು. ಎಲ್ಲರನ್ನೂ ಕಾಪಾಡಲು ಆ ತಾಯಿ ತುಂಬ ಕಷ್ಟಪಟ್ಟು ಕೆಲಸ ಮಾಡಬೇಕಾಗಿತ್ತು.

ಬಾಲ್ಯದಿಂದಲೇ ಗ್ಯಾರಿಸನ್ ಜೀವನದ ಹೋರಾಟದಲ್ಲಿ ಪ್ರವೇಶಿಸಬೇಕಾಯಿತು. ಅವನ ಹತ್ತನೆಯ ವಯಸ್ಸಿನಲ್ಲಿ ಅವನನ್ನು ಒಬ್ಬ ಚಮ್ಮಾರನ ಬಳಿ ಕೂಲಿಗೆ ಸೇರಿಸಿದರು. ಮೂರು ವರುಷಗಳ ಅನಂತರ ಅವನನ್ನು ಬೇರೊಬ್ಬ ಬಡಗಿಯ ಹತ್ತಿರ ಸೇರಿಸಿದರು. ಆದರೆ ಆ ಯಾವ ಕಾರ್ಯವೂ ಅವನಿಗೆ ಹಿತವಾಗಲಿಲ್ಲ. ತನಗೆ ಪ್ರಿಯವಾದ ಕಾರ್ಯವನ್ನು ಅವನು ಹುಡುಕುತ್ತಿದ್ದಾಗ. ಅವನ ಅದೃಷ್ಟದಿಂದಲೋ ಎಂಬಂತೆ ನ್ಯೂಬರಿಪೋರ್ಟ್ ಹೆರಾಲ್ಡ್ ಎಂಬ ಪತ್ರಿಕೆಯ ಕಛೇರಿಯಲ್ಲಿ ಅವನಿಗೆ ಅಕ್ಷರಗಳನ್ನು ಜೋಡಿಸುವ ಕೆಲಸ ಸಿಕ್ಕಿತು. ಅಕ್ಷರ ಜೋಡಿಸುವುದನ್ನು ಕಲಿತು ಅವನು ಬಹು ಬೇಗ ಒಳ್ಳೆಯ ಕಂಪಾಸಿಟರ್ ಆದ. ಅವನಿಗೆ ಜ್ಞಾನದಾಹ ಹುಟ್ಟಿದುದು ಆಗಲೇ. ಬೆಳಗಿನಿಂದ ರಾತ್ರಿಯ ವರೆಗೆ ಅಕ್ಷರಗಳನ್ನು ಜೋಡಿಸಿದ ಅನಂತರ ಅವನು ಕೈಗೆ ಸಿಕ್ಕಿದ ಗ್ರಂಥಗಳನ್ನೆಲ್ಲ ವ್ಯಾಸಂಗ ಮಾಡುತ್ತಿದ್ದ. ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರಗಳನ್ನು. ಯಾವ ಗ್ರಂಥ ಸಿಕ್ಕಿದರೆ ಅದನ್ನು, ಓದುತ್ತಿದ್ದ. ಅವನು ಬಹು ಜಾಗ್ರತೆಯಾಗಿ. ಒಬ್ಬ ಸಾರ್ವಜನಿಕ ಸೇವಕನಿಗೆ ಅವಶ್ಯಕವಾದಷ್ಟು ವಿದ್ಯೆಯನ್ನು ಸ್ವಂತ ವ್ಯಾಸಂಗದಿಂದಲೇ ಸಂಪಾದಿಸಿದ. ಜೊತೆಯಲ್ಲಿಯೇ ಅವನು ಬರೆಯುವ ಶಕ್ತಿಯನ್ನೂ ಬೆಳೆಸಿಕೊಂಡ. ತನ್ನ ಹೆಸರು ಹಾಕದೆ ಅವನು ಬರೆದಿದ್ದ ಲೇಖನವನ್ನು ಅವನ ಪತ್ರಿಕೆಯ ಸಂಪಾದಕರೇ ಅವನ ಕೈಗೆ ಕಂಪೋಸ್ ಮಾಡಲು ಕೊಟ್ಟಾಗ. ಅವನ ಆನಂದಕ್ಕೆ ಮೇರೆಯೇ ಇಲ್ಲವಾಯಿತು.ಅನಂತರ ಗ್ಯಾರಿಸನ್ ಅನೇಕ ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದ. ಕೊನೆಗೆ ಅವನು ತನಗೆ ಇಪ್ಪತ್ತು ವಯಸ್ಸಾಗಿದ್ದಾಗ ಫ್ರೀ ಪ್ರೆಸ್ ಎಂಬ ಪತ್ರಿಕೆಯ ಸಂಪಾದಕನೇ ಆದ.

ಪ್ರಾರಂಭದಿಂದಲೂ ಗ್ಯಾರಿಸನ್ ಪತ್ರಿಕೆಯನ್ನು ಸ್ವತಂತ್ರ ಮನೋಭಾವದಲ್ಲಿಯೇ ನಡೆಸತೊಡಗಿದ. ಅವನು ಯಾರಿಂದಲೂ ಯಾವ ರಕ್ಷಣೆಯನ್ನೂ ಸಹಾಯವನ್ನೂ ಬೇಡಲು ನಿರಾಕರಿಸಿದ. ಯಾವ

ಪಕ್ಷ, ಗುಂಪು, ಅಥವಾ ಚಂದಾದಾರರ ಪರವಾಗಿಯೂ ವಾದಿಸಲು ತಿರಸ್ಕರಿಸಿದ. ಪತ್ರಿಕೆ ಸ್ವತಂತ್ರವಾಗಿ ಉಚ್ಚಧ್ವನಿಯಲ್ಲಿ ಪಾನನಿರೋಧ, ಯುದ್ಧ ವಿರೋಧ, ಗುಲಾಮಗಿರಿಯ ವಿರೋಧ ಈ ಮೂರು ನಿಲುವುಗಳನ್ನೂ ಸ್ವೀಕರಿಸಿತು. ಜನರಿಗೆ ಅಪ್ರಿಯವಾಗಿದ್ದರೂ ಯೋಗ್ಯವಾದ ಕಾರ್ಯಕ್ರಮವನ್ನು ಹಿಡಿದು ಅದನ್ನು ಪ್ರಿಯವಾಗಿ ಮಾಡುವುದೇ ಅವನ ಗುರಿಯಾಗಿತ್ತು. "ನನ್ನ ಪತ್ರಿಕೆಯ ಗುರಿ ಮೂರು: ೧ ಕುಡಿತ ಮತ್ತು ಅದಕ್ಕೆ ಸಂಬಂಧಿಸಿದ ದುರ್ಗುಣಗಳನ್ನು ಎದುರಿಸುವುದು, ೨ ಅಮೆರಿಕದ ಪ್ರತಿಯೊಬ್ಬ ಗುಲಾಮನನ್ನೂ ಬಿಡುಗಡೆ ಮಾಡುವುದು. ೩ ದೇಶದಲ್ಲಿ ಎಂದೆಂದಿಗೂ ಶಾಂತಿ ಇರುವಂತೆ ಮಾಡುವುದು."– ಈ ಮೂರು ಗುರಿಗಳ ಪೈಕಿ ಗುಲಾಮಗಿರಿ ಅವನ ಜೀವಿತ ಕಾಲದಲ್ಲಿಯೇ ನಾಶವಾಯಿತು. ಅವನು ಸ್ವರ್ಗಸ್ಥನಾದ ೪೦ ವರುಷಗಳ ಅನಂತರ ಕುಡಿತವನ್ನು ಅಮೆರಿಕದಲ್ಲಿ ಕಾನೂನಿನಿಂದ ನಿಲ್ಲಿಸಿದ್ದರು. ಯುದ್ಧದಿಂದ ಮಾನವ ಪ್ರಪಂಚಕ್ಕೆ ಹಾನಿ. ಇದು ಎಂದೆಂದಿಗೂ ನಿಲ್ಲಬೇಕೆಂದು ಪ್ರಯತ್ನ ನಡೆಯುತ್ತಲೇ ಇದೆ. ಈ ಕಾಲದಲ್ಲೇ ಗ್ಯಾರಿಸನನಿಗೆ ಕವಿ ಜಾನ್ ವ್ಹಿಟ್ಟಿಯರನ(೧೮೦೭–೧೮೯೨) ಪರಿಚಯವಾಯಿತು. ಅತ ಶಾಂತಿವಾದಿ (ಕ್ವೇಕರ್). ವ್ಹಿಟ್ಟಿಯರ್ ಗ್ಯಾರಿಸನನ ಪತ್ರಿಕೆಗೆ ಒಂದು ಪದ್ಯವನ್ನು–ತನ್ನ ಹೆಸರು ಹಾಕದೆ–ಬರೆದು ಕಳುಹಿಸಿದ. ಪದ್ಯ ಉತ್ತಮವಾಗಿತ್ತು. ಗ್ಯಾರಿಸನ್ ಹೋಗಿ ವ್ಹಿಟ್ಟಿಯರನ ಪರಿಚಯ ಮಾಡಿಕೊಂಡ. ಅಲ್ಲಿಂದ ಮುಂದೆ ಅವನ ಜೀವಮಾನಕಾಲವೆಲ್ಲ ಅವರಿಬ್ಬರೂ ತುಂಬ ಮಿತ್ರರಾಗಿದ್ದರು.

ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಡುವವರಿಗೆ ಕಷ್ಟ ಪರಂಪರೆಗಳು ಅನಿವಾರ್ಯ. ಗ್ಯಾರಿಸನ್ ಆರು ತಿಂಗಳು ಮಾತ್ರ ಸ್ವತಂತ್ರ ಪತ್ರಿಕೆಯನ್ನು ನಡೆಸಿದ. ಅನಂತರ ಅವನ ಕೈಯಲ್ಲಿ ಒಂದು ಕಾಸೂ ಉಳಿಯಲಿಲ್ಲ. ಜೀವನ ಮಾಡುವುದಕ್ಕೇ ಸಾಧ್ಯವಿಲ್ಲದೆ ಬಾಸ್ಟನ್‌ಗೆ ಹೋಗಿ ಮುದ್ರಣಾಲಯದಲ್ಲಿ ಮೊಳೆ ಜೋಡಿಸುವ ಕೆಲಸಕ್ಕೆ ಸೇರಿದ. ಆದರೆ ಸಾರ್ವಜನಿಕ ಜೀವನ ಮತ್ತು ರಾಜಕೀಯದಲ್ಲಿ ಅವನ ಉತ್ಸಾಹ, ಆಸಕ್ತಿ ಕಡಿಮೆಯಾಗಲಿಲ್ಲ. ದೇಶದ ಎಲ್ಲ ಪ್ರಮುಖ ಪ್ರಶ್ನೆಗಳೂ, ಅದರಲ್ಲಿಯೂ ಅನ್ಯಾಯ ಅನೀತಿ ಭ್ರಷ್ಟಾಚಾರದ ಪ್ರಶ್ನೆಗಳು, ಅವನ ಮನಸ್ಸನ್ನು ಕೆರಳಿಸುತ್ತಿದ್ದುವು. ಅವನು ನ್ಯಾಯ ಮತ್ತು ಧರ್ಮಕ್ಕಾಗಿ ಹೋರಾಡುತ್ತಿದ್ದ. ಅವನು ಪಾನನಿರೋಧದ ದೊಡ್ಡ ಪ್ರಚಾರಕನೇ ಆಗಿದ್ದ. ಪಾನ ನಿರೋಧ ಸಂಸ್ಥೆಗಳವರು ನಡೆಸುತ್ತಿದ್ದ 'ನ್ಯಾಷನಲ್ ಫಿಲಾಂತ್ರಫಿಸ್ಟ್' ಎಂಬ ಪತ್ರಿಕೆಗೆ ೧೮೨೮ರಲ್ಲಿ ಗ್ಯಾರಿಸನನನ್ನು ಸಂಪಾದಕನನ್ನಾಗಿ ನೇಮಿಸಿದರು.

ಆದರೆ ತಾನು ಮುಂದೆ ನಿರ್ವಹಿಸಬೇಕಾದ ಅವನ ಜೀವಿತದ ಧ್ಯೇಯದ ಮುನ್‌ಸೂಚನೆ ಆಗ ಇನ್ನೂ ಅವನಿಗೆ ಉಂಟಾಗಿರಲಿಲ್ಲ. ಅದು ಸಂಭವಿಸಿದುದು ಅವನು ಬಾಲ್ಟಿಮೋರ್ ಎಂಬಲ್ಲಿ 'ಯೂನಿವರ್ಸಲ್ ಎಮಾನ್ಸಿಪೇಷನ್' ಎಂಬ ಪತ್ರಿಕೆಯ ಸಂಪಾದಕನಾಗಿದ್ದ ಕ್ವೇಕರ್ ಬೆಂಜಮಿನ್ ಲಂಡಿ (೧೭೮೯–೧೮೩೯) ಎಂಬವವನನ್ನು ಸಂಧಿಸಿದಾಗ. ಆ ಪತ್ರಿಕೆ ಗುಲಾಮಗಿರಿಯ ನಿರ್ನಾಮವನ್ನು ಪ್ರಚಾರ ಮಾಡುತ್ತಿತ್ತು. ಆ ಕಾಲದಲ್ಲಿ ಅಮೆರಿಕದಲ್ಲಿ ಅತ ಮತ್ತು ಅವನ ಸ್ನೇಹಿತರು ಕೆಲವರ ಹೊರತು, ಗುಲಾಮಗಿರಿಗೆ ವಿರೋಧವಾದ ಜನಾಭಿಪ್ರಾಯವೇ ಇರಲಿಲ್ಲ. ಸಂಕೋಲೆಯಲ್ಲಿದ್ದ ತಮ್ಮ ಅಣ್ಣತಮ್ಮಂದಿರು ಮಾನವ ಜನಾಂಗದ ಕಣ್ಣಿಗೆ ಕಾಣಲೇ ಇಲ್ಲ. ಅವರ ದುಃಖದ ಧ್ವನಿ ಅವರ ಕಿವಿಗಳಿಗೆ ಕೇಳಿಸಲೇ ಇಲ್ಲ. ಕ್ರೈಸ್ತ ಪಾದ್ರಿಗಳು ಧರ್ಮ ಮತ್ತು ದೇವರ ಹೆಸರನ್ನು ದಪ್ಪ ಧ್ವನಿಯಲ್ಲಿ ಕಿರಚುತ್ತಿದ್ದುದರಿಂದ ಗುಲಾಮಗಿರಿಯ ನಿರ್ನಾಮಕ್ಕಾಗಿ ಅವರ ಸಹಾಯವನ್ನು ಕೋರಲು ಲಂಡಿ ಬಾಸ್ಟನ್‌ಗೆ ಬಂದಿದ್ದ. ಅವನು ಅವರ ಒಂದು ಸಭೆಯನ್ನು ಕರೆದ. ಧರ್ಮದ ವೇಷ ಹಾಕಿದ್ದ ಅವರ ಕಲ್ಲುಹೃದಯ ಕರಗಲಿಲ್ಲ. ಆದರೆ ಗ್ಯಾರಿಸನ್ ಆ ಸಭೆಗೆ ಹೋಗಿದ್ದ. ಪಾದ್ರಿಗಳ ಹೇಡಿತನವನ್ನು ಕಂಡು ಅವನಿಗೆ ಅವರಲ್ಲಿ ತುಂಬ ತಿರಸ್ಕಾರ ಉಂಟಾಯಿತು. ಗುಲಾಮ ನೀಗ್ರೋಗಳಿಗೆ ಉಂಟಾಗುತ್ತಿದ್ದ ಕರುಣಾಜನಕ ಹಿಂಸೆಯ ಕಥೆಯನ್ನು ಕೇಳಿ ಅವನ ಮನಸ್ಸು ತುಂಬ ತಲ್ಲಣಗೊಂಡಿತು. ನೀಗ್ರೋಗಳ ಪರವಾಗಿ ತಾನೇ ಹೋರಾಡಬೇಕೆಂದು ಅವನು ನಿಶ್ಚಯಿಸಿದ. ಅಲ್ಲಿಂದಲೇ ಅವನು ಮದ್ಯ, ಗುಲಾಮಗಿರಿ, ಯುದ್ಧ ಈ ಮೂರಕ್ಕೂ ಎದುರಾಗಿ ತ್ರಿಮುಖ ಹೋರಾಟವನ್ನು ಪ್ರಾರಂಭಿಸಿದ.

೧೮೨೯ರಲ್ಲಿ ಲಂಡಿಯ ಇಚ್ಛೆಯಂತೆ ಗ್ಯಾರಿಸನ್ 'ಯೂನಿವರ್ಸಲ್ ಎಮಾನ್ಸಿಪೇಷನ್' ಪತ್ರಿಕೆಯ ಸಂಪಾದಕವರ್ಗದಲ್ಲಿ ಸೇರಿದ. ಬಾಲ್ಟಿಮೋರ್‌ನಲ್ಲಿ ಅವನು ನೋಡಿದ ನೀಗ್ರೋಗಳ ದುಃಸ್ಥಿತಿ ಅವನನ್ನು

ಮೊದಲಿಟ್ಟಿತು. ಹರಾಜಿನಲ್ಲಿ ಹೆಚ್ಚು ಹಣಕ್ಕೆ ಕೂಗಿದವರಿಗೆ ಮಾರಲು ನೀಗ್ರೋಗಳನ್ನು ಜೈಲುಗಳಲ್ಲಿ ತುಂಬಿದ್ದರು. ತಾಯಿ ತಂದೆ ಗಂಡ ಹೆಂಡತಿ ಮಕ್ಕಳನ್ನು ನಿರ್ದಯವಾಗಿ ಪ್ರತ್ಯೇಕಿಸಿದ್ದರು. ಚರ್ಮದ ಚಾವಟಿಯಿಂದ ಅವರನ್ನು ಬಡಿದಾಗ ಆ ಗುಲಾಮರು ಭಯಂಕರವಾಗಿ ಚೀರುತ್ತಿದ್ದುದು, ರಕ್ತ ಸುರಿಯುತ್ತಿದ್ದ ಅವರ ಬೆನ್ನು, ಇವನ್ನೆಲ್ಲ ಕಂಡು, ಈ ಪೈಶಾಚಿಕ ಕೃತ್ಯವನ್ನು ಪೂರ್ಣವಾಗಿ ನಾಶ ಮಾಡಬೇಕೆಂಬ ಅವನ ನಿರ್ಧಾರ ಇನ್ನೂ ಹೆಚ್ಚು ದೃಢವಾಯಿತು. ಗ್ಯಾರಿಸನ್ ಯಾರಿಗೂ ಹೆದರಲಿಲ್ಲ. ಅನ್ಯಾಯ ಮಾಡುತ್ತಿದ್ದವರನ್ನೂ ಕ್ರೂರಿಗಳನ್ನೂ ಸ್ವಾರ್ಥಿಗಳನ್ನೂ ನೀಚರನ್ನೂ, ತನ್ನ ಪತ್ರಿಕೆಯಲ್ಲಿ ಅವರ ಹೆಸರುಗಳನ್ನೇ ಬರೆದು, ನಿರ್ದಾಕ್ಷಿಣ್ಯವಾಗಿ ಖಂಡಿಸಿದ. ಬಾಲ್ಟಿಮೋರ್‌ಗೆ ಹೋಗುತ್ತಿದ್ದ ಹಡಗಿನಲ್ಲಿ ಗುಲಾಮರ ಯಜಮಾನ ಗುಲಾಮರನ್ನು ಹೊಡೆಯುತ್ತಿರುವನೆಂಬ ಸಂಗತಿ ತಿಳಿದ ಕೂಡಲೇ ಗ್ಯಾರಿಸನ್ ಅವನನ್ನು ತನ್ನ ಪತ್ರಿಕೆಯಲ್ಲಿ ನಿರ್ದಾಕ್ಷಿಣ್ಯವಾಗಿ ಖಂಡಿಸಿದ. ಆ ಕ್ರೂರಿಯ ಹೆಸರನ್ನು ದಪ್ಪ ಅಕ್ಷರದಲ್ಲಿ ಅಚ್ಚು ಮಾಡಿದ ಗ್ಯಾರಿಸನನ ಮೇಲೆ ಆತ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ. ಗುಲಾಮಗಿರಿಯನ್ನು ಒಪ್ಪಿದ್ದ ರಾಜ್ಯದಲ್ಲಿ, ಅದನ್ನು ಒಪ್ಪಿದ ನ್ಯಾಯಾಧಿಪತಿ ಕೊಡುವ ತೀರ್ಮಾನ ಗೊತ್ತೇ ಇತ್ತು. ಗ್ಯಾರಿಸನನಿಗೆ ಐವತ್ತು ಡಾಲರು ಜುಲ್ಮಾನೆ ವಿಧಿಸಲಾಯಿತು. ಕೊಡಲು ಹಣವಿಲ್ಲದೆ ಗ್ಯಾರಿಸನ್ ಏಳು ವಾರ ಸೆರೆಮನೆಯಲ್ಲಿದ್ದ. ಆ ಕಾಲವನ್ನೂ ಅವನು ವ್ಯರ್ಥವಾಗಿ ಕಳೆಯಲಿಲ್ಲ. ತನ್ನ ಧ್ಯೇಯ, ವಿಚಾರಣೆ, ಗುಲಾಮಗಿರಿಯ ಅನ್ಯಾಯ, ಅದರ ವಿರೋಧದ ಆವಶ್ಯಕತೆ—ಇವುಗಳನ್ನೆಲ್ಲ ನಿಷ್ಪಕ್ಷಪಾತವಾಗಿ ವಿವರಿಸಿ, ಒಂದು ಚಿಕ್ಕ ಪುಸ್ತಕವನ್ನು ಬರೆದ. ಅನಂತರ ಅದು ದೇಶದಲ್ಲೆಲ್ಲ ಪ್ರಚಾರವಾಗಿ, ಗ್ಯಾರಿಸನನ ಹೋರಾಟಕ್ಕೆ ಅನುಕೂಲ ವಾತಾವರಣವನ್ನು ನಿರ್ಮಿಸುವುದರಲ್ಲಿ ಸಹಾಯಕವಾಯಿತು.

ಸೆರೆಮನೆ ವಾಸ ಅವನ ಉತ್ಸಾಹವನ್ನು ಕುಗ್ಗಿಸಲೇ ಇಲ್ಲ. ತುರಂಗದಿಂದಲೂ ಅವನು ನ್ಯೂಬರಿ ಪೋರ್ಟ್‌ನ ಹೆರಾಲ್ಡ್ ಮುಂತಾದ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ. ಅಮೆರಿಕದ ಪ್ರಜೆಯಾದ ತನ್ನ ಅಭಿಪ್ರಾಯಸ್ವಾತಂತ್ರ್ಯವನ್ನೇ ಕಿತ್ತುಕೊಂಡಿದ್ದಾರೆಂದು ಘೋಷಿಸಿದ. "ನ್ಯಾಯಾಧಿಪತಿ ಬ್ರೈಸ್ (ಅವನಿಗೆ ಶಿಕ್ಷೆ ಕೊಟ್ಟ ಜಡ್ಜ್) ಮುಖ ಗಂಟು ಹಾಕಿಕೊಂಡರೆ ನಾನು ಹೆದರುವೆನೆಂದು ತಿಳಿದಿರುವನೆ? ಅಥವಾ, ಈ ಶಿಕ್ಷೆಯಿಂದ, ದಬ್ಬಾಳಿಕೆಗೆ ವಿರೋಧವಾಗಿ ಹೋರಾಡುತ್ತಿರುವ ನನ್ನ ಧ್ವನಿಯನ್ನು ಅವನು ಅಡಗಿಸಬಲ್ಲನೆ? ಹಾಗೇನಾದರೂ ಆತ ಭಾವಿಸಿದ್ದರೆ, ನಾನಾರೆಂಬುದು ಅವನಿಗೆ ತಿಳಿಯದು. ದೇವರು ಎಲ್ಲಿಯ ವರೆಗೆ ನನಗೆ ಬುದ್ಧಿಯನ್ನೂ ಶಕ್ತಿಯನ್ನೂ ಕೊಟ್ಟಿರುತ್ತಾನೆಯೋ, ಅಲ್ಲಿಯ ವರೆಗೆ 'ಗುಲಾಮಗಿರಿ ಈ ದೇಶದಲ್ಲಿರುವುದು ಅಮೆರಿಕದ ಒಳ್ಳೆಯ ಹೆಸರಿಗೆ ಕಳಂಕ' ಎಂದು ಘೋಷಿಸುವುದನ್ನು ನಾನು ಬಿಡುವುದಿಲ್ಲ. ಅಷ್ಟೇ ಅಲ್ಲ, ಮನುಷ್ಯ ಕಳ್ಳರು (ಮನುಷ್ಯರನ್ನು ಕದ್ದು ತಂದು ಗುಲಾಮರಾಗಿ ಮಾರುವವರು), ಗುಲಾಮಗಿರಿಯ ವ್ಯಾಪಾರಿಗಳು, ಅವರ ಸಹಾಯಕರು, ಗುಲಾಮರ ಒಡೆಯರು, ಅವರು ಎಲ್ಲರಲಿ, ಯಾರೇ ಆಗಲಿ, ಅವರನ್ನು ಖಂಡಿಸುತ್ತಲೇ ಇರುತ್ತೇನೆ. ಕಾಲ ಈ ಒಳ್ಳೆಯ ಕಾರ್ಯವನ್ನು ನಿರ್ದೋಷವಾಗಿ ಮಾಡುವುದು. ಬಣ್ಣದ ಜನಾಂಗಕ್ಕೆ ನಾವು ಇಷ್ಟು ಕಡಿಮೆ ಸೇವೆ ಮಾಡಿರುವುದಕ್ಕೆ ನನಗೆ ತುಂಬ ನಾಚಿಕೆಯಾಗಿದೆ. ಈ ದೇಶದ ಕಣ್ಣು ತೆರೆದು, ಈ ಕಾಯಿದೆಗಳ ಕ್ರೌರ್ಯ ಗೊತ್ತಾಗಬೇಕಾದರೆ, ಸ್ವತಂತ್ರನಾದ ಒಬ್ಬ ಬಿಳಿಯನ ಬಲಿಯಾಗಬೇಕು. ನನ್ನ ವರ್ಣಭ್ರಾತೃಗಳ ಸೇವೆಯಲ್ಲಿ ನಾನು ಸೆರೆ ಅನುಭವಿಸಲು, ಬಂದಿಯಾಗಲು, ಬಲಿಯಾಗಲು ಸಿದ್ಧನಾಗಿದ್ದೇನೆ. ಇದು ಅಪಾಯವೆಂದು ಹಿಂದೆಗೆದರೆ, ನಾನೇ ಗುಲಾಮನಾಗಿರಲು ಅರ್ಹನೆಂದಾಯಿತು."

ಸೆರೆಮನೆಯಲ್ಲಿದ್ದಾಗ ಗ್ಯಾರಿಸನ್ ಈ ಮಾತುಗಳನ್ನು ಬರೆದ. "ಭದ್ರವಾದ ಗೋಡೆ, ಕಬ್ಬಿಣದ ಬಾಗಿಲು ಇವು ಸೆರೆಯಾಳಿನ ದೃಷ್ಟಿಯನ್ನು ತಡೆಯಬಹುದು. ದೊಡ್ಡ ದೊಡ್ಡ ಅಗುಳಿಗಳು ಅವನನ್ನು ಬದ್ಧಪಡಿಸಬಹುದು. ಕಾವಲುಗಾರರು ಅವನನ್ನು ಸದಾ ಕಾಯುತ್ತಲೇ ಇರಬಹುದು. ಆದರೆ ಸ್ವತಂತ್ರವಾದ ಮನಸ್ಸು ಈ ಅಧೀನವನ್ನು ತಿರಸ್ಕರಿಸುತ್ತದೆ. ಧೀರವಾದ ಮನಸ್ಸನ್ನು ಸರಪಣಿ ಕಟ್ಟಲಾರದು; ಸೆರೆಮನೆ ಹಿಡಿಯಲಾರದು. ಅದು ಮಿಂಚಿಗಿಂತ ವೇಗವಾಗಿ ಸ್ಥಳದಿಂದ ಸ್ಥಳಕ್ಕೆ ಹಾರುತ್ತದೆ. ಒಂದೇ ಕ್ಷಣದಲ್ಲಿ ಭೂಮಿಯಿಂದ ಅಂತರಿಕ್ಷಕ್ಕೆ ಹಾರುತ್ತದೆ. ಬೆಟ್ಟದಿಂದ ಬೆಟ್ಟಕ್ಕೆ, ಕಣಿವೆಯಿಂದ ಕಣಿವೆಗೆ,

ಜೇನು ತುಂಬಿನ ಹೂವು ಹಣ್ಣುಗಳನ್ನು ಕಿತ್ತುಕೊಳ್ಳುತ್ತ, ಒಲೆಗಳ ಮುಂದೆ ಜನರು ಆನಂದದಿಂದ ಹೇಳಿಕೊಳ್ಳುತ್ತಿರುವ ಕತೆಗಳನ್ನು ಕೇಳುತ್ತ ಹೋಗುತ್ತದೆ. ಧೀರವಾದ ಮನಸ್ಸು ಎಲ್ಲರೂ ಏಳುವುದಕ್ಕಿಂತ ಮುಂಚೆ ಏಳುತ್ತದೆ. ಯಾವಾಗಲೂ ಎಚ್ಚರವಾಗಿಯೇ ಇರುತ್ತದೆ. ಸೆರೆಮನೆಯ ಕಬ್ಬಿಣ ಇದನ್ನು ಕಟ್ಟಲಾರದು; ತಡೆಯಲಾರದು."

ಗ್ಯಾರಿಸನ್ ಸೆರೆಮನೆಯಲ್ಲಿ ಏಳು ವಾರ ಮಾತ್ರ ಇದ್ದ. ಆ ವೇಳೆಗೆ ನ್ಯೂಯಾರ್ಕಿನ ಧನಿಕವರ್ತಕ ಆರ್ಥರ್ ಟಪ್ಪನ್ ಎಂಬವನು ಸರ್ಕಾರಕ್ಕೆ ಗ್ಯಾರಿಸನ್ ಪರವಾಗಿ ಜುಲ್ಮಾನೆ ಸಲ್ಲಿಸಿದುದರಿಂದ ಗ್ಯಾರಿಸನನ ಬಿಡುಗಡೆಯಾಯಿತು. ಆದರೆ ತಾನು ಎಂತಹ ಅಮಾನುಷ ಶಕ್ತಿಗಳಿಗೆ ಎದುರಾಗಿ ಹೋರಾಡಬೇಕಾಗಿದೆ ಎಂಬುದು ಅವನಿಗೆ ಗೊತ್ತಾಗಿತ್ತು. ಅಳ್ಳೆದೆಯವರು ಹೆದರಿ ಹಿಂದೆಗೆಯುತ್ತಿದ್ದ ಕಷ್ಟಗಳು ಅವನನ್ನು ಇನ್ನೂ ಧೀರನನ್ನಾಗಿಯೇ ಮಾಡಿದವು. ಬೈಬಲನ್ನು ಎದುರಿಗಿಟ್ಟುಕೊಂಡು ಅವನು ಮಾನವತ್ವಕ್ಕೆ ಕಳಂಕದಂತಿದ್ದ ಗುಲಾಮಗಿರಿಯಿಂದ ತನ್ನ ದೇಶವನ್ನು ಬಿಡುಗಡೆ ಮಾಡಬೇಕೆಂದು ಮತ್ತೆಮತ್ತೆ ಪ್ರತಿಜ್ಞೆ ಮಾಡಿಕೊಂಡ. ಪರಮಾತ್ಮನ ಮೇಲೆ ಭಾರಹಾಕಿ, ನಮ್ರತೆಯಿಂದ ತನ್ನ ಉಚ್ಚ ಧ್ಯೇಯವನ್ನೇ ಗುರಿಯಾಗಿಟ್ಟುಕೊಂಡ ಅವನಿಗೆ, ಒಬ್ಬ ಧರ್ಮಪ್ರಚಾರಕನ ತೇಜಸ್ಸೂ ಆತ್ಮಪ್ರತ್ಯಯವೂ ಕೊನೆಯಲ್ಲಿ ಜಯ ಲಭಿಸುವುದೆಂಬ ಆಶಾಭಾವನೆಯೂ ಇದ್ದುವು. ಆದರೆ ಅವನ ಮಿತ್ರನಾದ ಲಂಡಿ, 'ಯೂನಿವರ್ಸಲ್ ಎಮಾನ್ಸಿಪೇಷನ್' ಪತ್ರಿಕೆಯನ್ನು ಹಣದ ಅಭಾವದಿಂದ ನಿಲ್ಲಿಸಿಬಿಟ್ಟ. ಗ್ಯಾರಿಸನ್ ಬಾಸ್ಟನ್‌ಗೆ ಬಂದು ಲಿಬರೇಟರ್ ಎಂಬ ಹೆಸರಿನಿಂದ ಒಂದು ಹೊಸ ಪತ್ರಿಕೆಯನ್ನು ತಾನೇ ಸಂಪಾದಿಸಿ ಪ್ರಕಟಿಸತೊಡಗಿದ.

ಈ ಪತ್ರಿಕೆ ಪ್ರಾರಂಭವಾದುದು ೧೮೩೧ರಲ್ಲಿ. ಅದು ೧೪ ಅಂಗುಲ ಉದ್ದ, ೯ ಅಂಗುಲ ಅಗಲದ ನಾಲ್ಕು ಕಾಲಂಗಳ ಒಂದೇ ಒಂದು ಹಾಳೆ. ಆದರೆ ಅದೊಂದು ಸಿಡಿಲು! ಅದರ ಒಂದೊಂದು ಮಾತೂ ಒಂದೊಂದು ಬಾಂಬು. ಆ ವಜ್ರವಾಕ್ಯಗಳು ಒಂದೊಂದೂ ಸಾರ್ವಜನಿಕರ ಮನಸ್ಸನ್ನು ಹರಿದು ಚೂರು ಚೂರು ಮಾಡಿದುವು. ಪತ್ರಿಕೆಯ ಪ್ರಾರಂಭದ ವೆಚ್ಚಕ್ಕಾಗಿ ಗ್ಯಾರಿಸನ್ ಅಮೆರಿಕದಲ್ಲಿ ಸಂಚಾರಮಾಡಿ, ಉಪನ್ಯಾಸಗಳನ್ನು ಕೊಟ್ಟು ಸ್ವಲ್ಪ ಹಣವನ್ನು ಸಂಪಾದಿಸಿದ. ಪ್ರಾಯಶಃ, ವರ್ತಮಾನ ಪತ್ರಿಕೆಗಳ ಇತಿಹಾಸದಲ್ಲಿ ಗ್ಯಾರಿಸನನಿಗಿಂತ ಹೆಚ್ಚು ದರಿದ್ರಸ್ಥಿತಿಯಲ್ಲಿ ಪತ್ರಿಕೆಯನ್ನು ಹೊರಡಿಸಿದವರು ಯಾರೂ ಇರಲಾರರು. ಆದರೆ ಸಾರ್ವಜನಿಕ ಜೀವನದ ಮೇಲೆ ಅಂತಹ ಪ್ರಭಾವವನ್ನು ಬೀರಿದ ಇತರ ಪತ್ರಿಕೆಗಳು ಯಾವುವೂ ಇಲ್ಲ. ಗಾಬರಿಗೊಂಡ ಸರ್ಕಾರ ಪತ್ರಿಕೆಯ ಸಮಾಚಾರ ತಿಳಿದುಕೊಂಡು ಬರಲು ಪೋಲಿಸರನ್ನು ಕಳುಹಿಸಿತು. ಪೋಲೀಸರು ಬಂದು ನೋಡಿದರು. ಸರಿಯಾದ ಕಚೇರಿ ಇರಲಿಲ್ಲ, ಕುರ್ಚಿ ಮೇಜೂ ಇರಲಿಲ್ಲ. ಕೆಲಸಗಾರರಿರಲಿಲ್ಲ, ಕಾಗದ ಇರಲಿಲ್ಲ. ಇಂತಹ ಬಡಪತ್ರಿಕೆಯಿಂದ ಏನೂ ಭಯವಿಲ್ಲವೆಂದು ಅವರು ವರದಿಮಾಡಿದರು. ಗ್ಯಾರಿಸನ್ ಮತ್ತು ಅವನ ಏಕಮಾತ್ರ ಸಹಾಯಕ ಐಸಾಕ್ ನಪ್ ಒಂದೂವರೆ ವರುಷಗಳ ಕಾಲ, ವಾಸಕ್ಕೆ ಸಹ ಬೇರೆ ಮನೆ ಇಲ್ಲದೆ, ಪ್ರೆಸ್ ಕೊಠಡಿಯ ನೆಲದ ಮೇಲೆ ಮಲಗುತ್ತ ಕೆಲಸಮಾಡಿದರು. ಬಾಸ್ಟನಿನ ಮೇಯರು ಆ ಮನೆಯನ್ನು ಅನಾಮಧೇಯ ಗುಡಿಸಲು ಎಂದು ಕರೆದಿದ್ದ. ಅಲ್ಲಿ ಗ್ಯಾರಿಸನನೂ ಅವನ ಸಹಾಯಕನೂ ಮಗ್ಗುಲ ಅಂಗಡಿಯಲ್ಲಿ ರೊಟ್ಟಿ ಸಾಲ ತೆಗೆದು ತಿಂದು ಜೀವಿಸಿದರು. ಯಾವಾಗ ನೋಡಿದರೂ ಗ್ಯಾರಿಸನನೂ ಅವನ ಗೆಳೆಯನೂ ಮೊಳೆ ಜೋಡಿಸುವುದು, ಮುದ್ರಣಮಾಡುವುದು ಈ ಕಾರ್ಯದಲ್ಲಿಯೇ ತೊಡಗಿರುತ್ತಿದ್ದರು. ಅವರಿಗೆ ಒಬ್ಬ ನೀಗ್ರೋ ಸೇವಕನ ಹೊರತು ಮತ್ತಾರೂ ಸಹಾಯಕರು ಇರಲಿಲ್ಲ. ಆದರೂ ಅವರು ಎಂದೂ ಧೈರ್ಯಗೆಡಲಿಲ್ಲ.

ಪತ್ರಿಕೆಯ ಧ್ಯೇಯವನ್ನು ನೋಡಿದರೇನೇ ಅದು ಜಗತ್ತನ್ನು ದಬ್ಬಾಳಿಕೆ ದೌರ್ಜನ್ಯ ಶೋಷಣೆಗಳಿಂದ ವಿಮೋಚನೆ ಮಾಡುವುದೆಂದು ಗೊತ್ತಾಗುತ್ತಿದ್ದಿತು. ಪತ್ರಿಕೆಯ ಧ್ಯೇಯ ಹೀಗಿತ್ತು: "ನಮ್ಮ ದೇಶ, ಪ್ರಪಂಚ; ನಮ್ಮ ಜನ, ಪ್ರಪಂಚದಲ್ಲಿರುವವರೆಲ್ಲ." ಪತ್ರಿಕೆಯ ಲಾಂಛನ—ಗುಲಾಮರನ್ನೂ ಕುದುರೆಗಳನ್ನೂ ಒಟ್ಟಾಗಿ ಹರಾಜು ಹಾಕುವ ಒಂದು ಹರಾಜುಕಟ್ಟೆ. ಗ್ಯಾರಿಸನನ ಆ ದಿನಗಳನ್ನೂ ವಾತಾವರಣವನ್ನೂ ಒಬ್ಬ ಅಮೆರಿಕನ್ ಕವಿ ಹೀಗೆ ವರ್ಣಿಸಿದ್ದಾನೆ:

"ರಾತ್ರಿ ಹೊತ್ತಾಗಿದೆ. ಯಾವುದೋ ಅಜ್ಞಾತ ಮೂಲೆಯ ಗುಡಿಸಲು ಒಂದರಲ್ಲಿ ಧೀರನಾದ ಬಡ ಯುವಕನೊಬ್ಬ. ತನ್ನ ಮೊದಲನೆಯ ಪತ್ರಿಕೆಗಾಗಿ ತಾನೇ ಅಕ್ಷರಗಳನ್ನು ಜೋಡಿಸುತ್ತಿದ್ದಾನೆ. ಅಲ್ಲಿರುವುದು ಹಳೆಕಾಲದ ಮರದ ಒಂದು ಮುದ್ರಣಯಂತ್ರ. ನೆಲದಲ್ಲಿ ಅಲ್ಲಲ್ಲಿ ಶಾಯಿ ಚೆಲ್ಲಿದೆ. ಅಕ್ಷರಗಳು ಹಳೆಯವು. ಸವೆದಿವೆ. ಕಾಗದಕ್ಕೆ ಹಣ ಕೊಟ್ಟಿಲ್ಲ. ಬಾಡಿಗೆ ಬಾಕಿ ಇದೆ. ಯುವಕ ಸಂಪಾದಕನಲ್ಲಿ ಹಣವಿಲ್ಲ. ಪ್ರಭಾವವಿಲ್ಲ. ಅವನಿಗೆ ಸ್ನೇಹಿತರೂ ಇಲ್ಲ. ಇನ್ನೂ ಒಬ್ಬ ಚಂದಾದಾರನೂ ಆಗಿಲ್ಲ. ಒಂದು ರೊಟ್ಟಿ. ಸ್ವಲ್ಪ ಹಾಲು ಮಗ್ಗುಲಲ್ಲಿದೆ. ಅವೇ ಅವನ ಆಹಾರ. ಮುದ್ರಣ ಮಾಡಿ ಮುಗಿದ ಅನಂತರ ಆತನು ಅಲ್ಲಿಯೇ ನೆಲದ ಮೇಲೆ ಮಲಗುತ್ತಾನೆ. ಜಗತ್ತು. ಪ್ರೆಸಿಡೆಂಟ್. ಸೆನೇಟ್. ಅವನ ವಿಚಾರ ಯೋಚಿಸುತ್ತಿದೆ. ಜಗತ್ತು ದಿಕ್ಕು. ದಾರಿ ತಪ್ಪಿದೆ. ಈ ಸಣ್ಣ ಕೊಠಡಿಯಲ್ಲಿ ಆಧುನಿಕ ಜಗತ್ತಿನ ಇತಿಹಾಸದ ಮಹಾಭಾಗ ಸೃಷ್ಟಿಯಾಗುತ್ತಿದೆಯೆಂದು ಜಗತ್ತಿಗೆ ತಿಳಿಯದು. ಉದ್ಧಾರಕ್ಕೆ. ಅಂತಹ ಅಪ್ರಸಿದ್ಧವಾದ ಸ್ಥಳದಲ್ಲೇ ನೋಡಬೇಕೆಂಬುದನ್ನು ಜಗತ್ತು ಇನ್ನೂ ಕಲಿಯಬೇಕಾಗಿದೆ.

"ಆ ಯುವಕ ಸಂಪಾದಕ ಧೈರ್ಯೋತ್ಸಾಹದಿಂದ ಇನ್ನೂ ಉಲ್ಲಾಸಗೊಂಡಿದ್ದಾನೆ. ಮೊದಲನೆಯ ಲೇಖನ ಹೀಗಿದೆ:

'ಬಿಡುಗಡೆಯ ಧ್ವಜವನ್ನು ಹಾರಿಸಿದ್ದಾಯಿತು. ವರ್ಣ ಜನಾಂಗದವರ ಹಿಂಸ್ರಕರೆಲ್ಲ ನಡುಗಲಿ. ನಾನು ಸತ್ಯದಂತೆಯೇ ಕಠಿಣ. ನ್ಯಾಯದಷ್ಟೇ ಕಠಿಣ. ನಾನು ಶ್ರದ್ಧೆಯುಳ್ಳವನಿದ್ದೇನೆ. ನಾನು ಸಂದಿಗ್ಧವಾಗಿ ಮಾತನಾಡುವುದಿಲ್ಲ. ಕ್ಷಮಿಸುವುದಿಲ್ಲ. ನನ್ನ ಮಾತನ್ನು ನೀವು ಕೇಳಲೇ ಬೇಕು. ನಾನು ನಡೆದ ಮಾರ್ಗ ಸರಿ ಎಂದು ಒಪ್ಪಲೇಬೇಕು.'

"ಹೀಗೆ ಬರೆದ ಮನುಷ್ಯ ದೀರ್ಘಕಾಲ ಆತ ಈ ಧ್ವಜವನ್ನು ಹಿಡಿಯುತ್ತಾನೆ. ಜನ ಅವನಿಗೆ ಕಲ್ಲು ಹೊಡೆದರು. ಸರ್ಕಾರ ಅವನನ್ನು ತುರಂಗಕ್ಕೆ ಹಾಕಿತು. ಚರ್ಚ್ ಅವನನ್ನು ಬಹಿಷ್ಕರಿಸಿತು. ಕಳ್ಳರು ಕೊಲೆಗಾರರು ಅವನ ದಾರಿ ಕಾದರು. ಅವನ ತಲೆಗೆ ಬೆಲೆ ಕಟ್ಟಿದರು; ಅವನನ್ನು ದ್ವೇಷಿಸಿ ತಿರಸ್ಕರಿಸಿ ತುಚ್ಛೀಕರಿಸಿದರು. ದೇಶದ ಧನಿಕರು, ವಿದ್ಯಾವಂತರು, ಮತಾಚಾರ ಎಲ್ಲವೂ ಅವನನ್ನು ತಿರಸ್ಕರಿಸಿದುವು. ಆದರೂ ಅವನು ಮುನ್ನುಗ್ಗಿದ. ಯಾವ ರಾಜಿ ಪ್ರಯತ್ನವನ್ನೂ ಮಾಡಲಿಲ್ಲ. ಇತರರ ತಪ್ಪನ್ನು ಕಡಿಮೆಯಾಗಿ ಪರಿಗಣಿಸಲು ಒಪ್ಪಲಿಲ್ಲ. ಅವನ ಧ್ವನಿ. ಉಳಿದ ಧ್ವನಿಗಳನ್ನೆಲ್ಲ ಮೀರಿ ಸಿಡಿಲಿನಂತೆ ಎದ್ದಿತು. ಮನುಷ್ಯಕಳ್ಳರನ್ನೂ ಅವರ ಸಹಾಯಕರನ್ನೂ ಪುಡಿಪುಡಿ ಮಾಡಿತು. ಕೊನೆಯಲ್ಲಿ, ಅವನು ಮೊದಲಿನಿಂದ-ತಾನು ಬಡವನಾಗಿದ್ದಾಗಿನಿಂದ-ನಂಬಿದ್ದಂತೆ. ಅವನಿಗೆ ಪೂರ್ಣಜಯವಾಯಿತು."

ಗ್ಯಾರಿಸನ್ ಹೇಳಿದ ಸತ್ಯಕ್ಕೆ ಜಯವಾಯಿತು. ಆ ಸತ್ಯ "ಮನುಷ್ಯನಿಗೆ ಮನುಷ್ಯ ಆಸ್ತಿಯಾಗಲಾರ," ಎಂಬುದು.

ಗ್ಯಾರಿಸನನೂ ಅವನ ಸಹಾಯಕರೂ ದಿನಕ್ಕೆ ಹದಿನಾಲ್ಕು ಗಂಟೆ ದುಡಿಯುತ್ತಿದ್ದರು. ಅವನ ಪತ್ರಿಕೆಯ ಉದ್ದೇಶ ಹೀಗಿತ್ತು: "ಸ್ಪಷ್ಟವಾಗಿ ನಿರ್ದಾಕ್ಷಿಣ್ಯವಾಗಿ ಮುಚ್ಚು ಮರೆಯಿಲ್ಲದೆ ಗುಲಾಮರನ್ನೂ ಅವರ ಒಡೆಯರನ್ನೂ ಕುರಿತು ಸತ್ಯ ವಿಚಾರಗಳನ್ನು ಪ್ರಕಟಿಸುವುದು. ಅವರ ಕ್ರೌರ್ಯ. ಹಿಂಸೆ ಇವುಗಳನ್ನು ಖಚಿತವಾಗಿ ಧೈರ್ಯವಾಗಿ ಬಯಲಿಗೆಳೆಯುವುದು." ಆ ಪತ್ರಿಕೆಯ ಜಂಝಾವಾತದ ಎದುರಿಗೆ, ಗುಲಾಮಗಿರಿಯ ವಿಷಯದಲ್ಲಿ ಜನರಿಗಿದ್ದ ಔದಾಸೀನ್ಯವೂ ಅಲಸಮನೋಭಾವವೂ ಕರಗಿಹೋದುವು. ದಕ್ಷಿಣ ಮತ್ತು ಉತ್ತರ ರಾಜ್ಯಗಳವರಿಬ್ಬರೂ. ಒಂದೇ ಸಮನಾಗಿ ಗ್ಯಾರಿಸನನನ್ನು ತಿರಸ್ಕರಿಸಿದರು. ಉತ್ತರದಲ್ಲಿ ಗುಲಾಮಗಿರಿ ಇರಲಿಲ್ಲ. ಆದರೆ ಗುಲಾಮಗಿರಿಯ ವ್ಯಾಪಾರದಲ್ಲಿ ದಕ್ಷಿಣದವರಿಗೆ ಉತ್ತರದವರು ಸಹಾಯಕರಾಗಿದ್ದರು. ದಕ್ಷಿಣದ ಕೆಲವು ರಾಜ್ಯಗಳು, ಗ್ಯಾರಿಸನನ ಪತ್ರಿಕೆ ಹಂಚುವುದೂ ಅಪರಾಧವೆಂದು ಕಾನೂನು ಮಾಡಿದುವು. ಟಪಾಲಿನಲ್ಲಿ ಪತ್ರಿಕೆ ತರಿಸುವುದೂ ಅಪರಾಧವೇ ಆಯಿತು. ಗ್ಯಾರಿಸನನಿಗೆ ನಿತ್ಯ ಬೈಗಳದ ಮತ್ತು ಹೆದರಿಸುವ ಕಾಗದಗಳು ಬರತೊಡಗಿದುವು. ಜಾರ್ಜಿಯ ಅವನ ಬಂಧನಕ್ಕಾಗಿ ಐದು ಸಾವಿರ ಡಾಲರುಗಳ ಬಹುಮಾನವನ್ನು ಪ್ರಕಟಿಸಿತು. ಗ್ಯಾರಿಸನನ ಮಿತ್ರರು ಆತ್ಮರಕ್ಷಣೆಗಾಗಿ ಆಯುಧವಿಟ್ಟುಕೊಳ್ಳುವಂತೆ ಆತನಿಗೆ ಸಲಹೆ ಮಾಡಿದರು. ಗ್ಯಾರಿಸನ್ ಲಕ್ಷ್ಯ ಮಾಡಲಿಲ್ಲ. ಅವನು ತನ್ನ ಪಾಡಿಗೆ ತನ್ನ ಕೆಲಸವನ್ನು ಮುಂದುವರಿಸಿದ.

೧೮೩೨ರ ಜನವರಿಯಲ್ಲಿ. ಗ್ಯಾರಿಸನ್ ಬಾಸ್ಟನ್‌ನಲ್ಲಿ "ನ್ಯೂ ಇಂಗ್ಲೆಂಡ್ ಆಂಟಿ ಸ್ಲೇವರಿ" ಎಂಬ ಗುಲಾಮಗಿರಿ ವಿರೋಧಿ ಸಂಘವನ್ನು ಸ್ಥಾಪಿಸಿದ. ಪ್ರಾರಂಭದಲ್ಲಿ ಅದಕ್ಕೆ ಹನ್ನೆರಡು ಮಂದಿ ಮಾತ್ರ ಸದಸ್ಯರಿದ್ದರು. ಆ ಸಂಸ್ಥೆ ಮೂರು ಧ್ಯೇಯಗಳನ್ನು ಹೊಂದಿದ್ದಿತು. ೧ ನಿನಗೆ ಇತರರು ಹೇಗೆ ಮಾಡಬೇಕೆಂದು ಬಯಸುತ್ತೀಯೋ. ನೀನು ಇತರರಿಗೆ ಹಾಗೆ ಮಾಡು. ೨ ದೇವರು ಎಲ್ಲ ದೇಶಗಳ ಪ್ರಜೆಗಳನ್ನೂ ಒಂದೇ ರಕ್ತದಲ್ಲಿ. ಒಂದೇ ರೀತಿಯಲ್ಲಿ ಮಾಡಿದ್ದಾನೆ. ೩ ಅಮೆರಿಕದ ಸಂವಿಧಾನದ ವಾಕ್ಯ: "ದೇವರು ಎಲ್ಲರಿಗೂ ಶಾಶ್ವತವಾದ ಕೆಲವು ಹಕ್ಕುಗಳನ್ನು ಕೊಟ್ಟಿದ್ದಾನೆ. ಜೀವ. ಸ್ವಾತಂತ್ರ್ಯ, ಸುಖಾನ್ವೇಷಣೆ ಇವು ಅವುಗಳಲ್ಲಿ ಕೆಲವು."

ಅನಂತರ ದೇಶದಲ್ಲೆಲ್ಲ ಅಂತಹ ಇತರ ಸಂಘಗಳು ಸ್ಥಾಪನೆಯಾಗತೊಡಗಿದುವು. ಹತ್ತು ವರುಷಗಳೊಳಗೆ ಎರಡು ಸಾವಿರ ಸಂಘಗಗಳೂ ಎರಡು ಲಕ್ಷ ಸದಸ್ಯರೂ (ಸ್ತ್ರೀ–ಪುರುಷರು) ಆದರು. ಲೇಖನಿಯಿಂದ ಮಾತ್ರವೇ ಅಲ್ಲ. ಭಾಷಣಗಳಿಂದ ಸಹ ಗ್ಯಾರಿಸನ್ ಜನರನ್ನು ಎಚ್ಚರಿಸಿದ. ಅವನ ಮೇಲೆ ವಿರೋಧದ ಪ್ರವಾಹವೇ ಹರಿದುಬಂತು. ಗುಲಾಮರನ್ನು ಹತ್ತೊಂಬತ್ತನೆಯ ಶತಮಾನದಲ್ಲಿಯೇ ಬಿಡುಗಡೆ ಮಾಡಿದ್ದ ಕ್ವೇಕರ್‌ಗಳ ಹೊರತು ಉಳಿದ ಎಲ್ಲ ಕ್ರಿಸ್ತರೂ–ಪಾದ್ರಿಗಳು ಸಹ–ಗ್ಯಾರಿಸನನ ವಿರೋಧಿಗಳಾದರು. ವಿದ್ಯಾವಂತರೂ ಸುಸಂಸ್ಕೃತರೂ ಅವನನ್ನು ಎದುರಿಸಿದರು. "ಚರ್ಚ್, ರಾಜಕೀಯ ಮುಖಂಡರು. ಸಾಮಾಜಿಕ ಮುಖಂಡರು ಎಲ್ಲರೂ ಆತನ ಮೇಲೆ ಉರಿಗಣ್ಣು ಬಿಡುತ್ತಿದ್ದರು. ಎಲ್ಲರೂ ಅಂಧಕಾರದ ರಾಶಿಯನ್ನು ಸೃಷ್ಟಿಸಿದರು. ಎಲ್ಲೆಲ್ಲಿಯೂ ದ್ವೇಷ ಅಸಹನೆಯ ಗುಡುಗು. ಮೋಡಗಳು. ಆದರೆ ಆ ಅಂಧಕಾರದ ಕಪ್ಪಿನ ಮೇಲೆಯೇ ಗ್ಯಾರಿಸನ್ "ನನ್ನ ಮಾತನ್ನು ಕೇಳಲೇಬೇಕು." ಎಂದು ಬರೆದ.

ಅವನು ಭಾಷಣ ಮಾಡುತ್ತಿದ್ದ ಸಮಯದಲ್ಲಿ ಕಲ್ಲು ಬಿದ್ದು ಗೊಂದಲವಾಗಿ ಸಭೆ ಚೆದರುತ್ತಿದ್ದಿತು. ೧೮೩೫ರಲ್ಲಿ ಬಾಸ್ಟನ್ನಿನ ಗುಲಾಮ ವಿರೋಧಿ ಸಂಘದ ಒಂದು ಸಭೆಯಲ್ಲಿ ಕೆಲವರು ಅವನ ಕತ್ತಿಗೆ ಒಂದು ಹಗ್ಗ ಹಾಕಿ, ಬೀದಿಯ ಸುತ್ತ ಅವನನ್ನು ಎಳೆದುಕೊಂಡು ಹೋದರು. ಬಾಸ್ಟನ್ನಿನ ಮೇಯರು ಅವನನ್ನು ಸಂರಕ್ಷಿಸುವುದಕ್ಕಾಗಿ ಅವನನ್ನು ಬಂಧಿಸಿದ. ಬರಿತಲೆಯಲ್ಲಿ ಅರ್ಧ ಬೆತ್ತಲೆ ಅವನನ್ನು ಸೆರೆಮನೆಯ ಒಂದು ಕೋಣೆಯಲ್ಲಿ ಬಂಧಿಸಿ ಬೀಗಹಾಕಿದರು. ಸೆರೆಮನೆಗೆ ತೆಗೆದುಕೊಂಡು ಹೋಗುತ್ತಿದ್ದಾಗ, ಪುಂಡರು ಗಾಡಿಯನ್ನು ತಡೆದು ಕುದುರೆಗೆ ನೇತು ಬಿದ್ದರು. ಸೆರೆಮನೆಯನ್ನೂ ಒಡೆದು ಅವನನ್ನು ಘಾತಿಸುವ ಭಯವಿದ್ದುದರಿಂದ, ಮರುದಿನ ಗ್ಯಾರಿಸನ್ ಅಧಿಕಾರಿಗಳ ಇಚ್ಛೆಯಂತೆ ರಹಸ್ಯವಾಗಿ ನಗರವನ್ನು ಬಿಟ್ಟು ಹೋದ. ಅವನ ಜೊತೆಯಲ್ಲಿ ಭಾಷಣ ಮಾಡಲು ಒಪ್ಪಿದ್ದ ಜಾರ್ಜ್ ಥಾಮ್‌ಸನ್ ಸಹ ಬಲಾತ್ಕಾರವಾಗಿ ನಗರವನ್ನು ಬಿಡಬೇಕಾಯಿತು. ಮುಂದಣ ಲಿಬರೇಟರ್ ಸಂಚಿಕೆಯಲ್ಲಿ ಗ್ಯಾರಿಸನ್ ಎಲ್ಲ ವಿಷಯಗಳನ್ನೂ ಸ್ಪಷ್ಟವಾಗಿ ಬರೆದು ತಪ್ಪಿತಸ್ಥರನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಖಂಡಿಸಿದ.

ಇದಕ್ಕೆ ಸ್ವಲ್ಪ ಮುಂಚೆ ಗ್ಯಾರಿಸನ್ ಪ್ರಚಾರಕ್ಕಾಗಿ ಇಂಗ್ಲೆಂಡಿಗೆ ಹೋಗಿದ್ದ. ವರ್ಣೀಯ ಬಾಲಕರಿಗಾಗಿ ಒಂದು ಕೈಗಾರಿಕಾ ತರಬೇತು ಸಂಸ್ಥೆಯನ್ನು ಸ್ಥಾಪಿಸಲು ಹಣ ಸಂಗ್ರಹಿಸುವುದು ಅವನ ಉದ್ದೇಶವಾಗಿತ್ತು. ಇಂಗ್ಲೆಂಡಿನವರು ಅವನನ್ನು ಆದರಿಸಿದರು. ಅನೇಕ ಮುಖಂಡರು ಅವನಿಗೆ ಸಹಾನುಭೂತಿ. ಸಹಾಯ ನೀಡಿದರು. ಅನಂತರ ಅವನು ನ್ಯೂ ಯಾರ್ಕ್‌ಗೆ ಹಿಂದಿರುಗಿದ. ಅಲ್ಲಿ ಪರಿಸ್ಥಿತಿ ಮೊದಲಿನಂತೆಯೇ ಅವನಿಗೆ ವಿರೋಧವಾಗಿತ್ತು. ಅವನು ಹಿಂದಿರುಗಿದುದನ್ನು ಕಂಡ ಗುಂಪು, ಅವನನ್ನು ಟಾರಿನಿಂದ ತೊಳೆಯಲು ಸಿದ್ಧವಾಗಿ ನಿಂತಿತ್ತು. ಆದರೆ ಅಧಿಕಾರಿಗಳು ಅದನ್ನು ಚದುರಿಸಿದರು.

ಗುಲಾಮಗಿರಿಯಿಲ್ಲದಿದ್ದ ಉತ್ತರ ಅಮೆರಿಕದವರೂ ನಿಧಾನವಾಗಿ ಗ್ಯಾರಿಸನನ ವಿರೋಧಿಗಳೇ ಆದರು. ೧೮೩೩ರಲ್ಲಿ ಕನೆಕ್ಟಿಕಟ್‌ನಲ್ಲಿ ಒಬ್ಬ ಕ್ವೇಕರ್ ತರುಣಿ ವರ್ಣದ ಹುಡುಗಿಯರಿಗೆ ಒಂದು ಪಾಠಶಾಲೆಯನ್ನು ಸ್ಥಾಪಿಸುವ ಪ್ರಯತ್ನಮಾಡಿದಳು. ಅವಳಿಗೆ ಸಾಧ್ಯವಾಗಲಿಲ್ಲ. ಜನರು ಅವಳನ್ನು ತಿರಸ್ಕರಿಸಿದರು. ಆಕೆಗೆ ಅಂಗಡಿಗಳವರು ಸಾಮಾನು ಮಾರಲಿಲ್ಲ. ಚರ್ಚಿಗೆ ಅವಳನ್ನು ಸೇರಿಸಲಿಲ್ಲ. ಆಕೆಗೆ ವಾಹನಗಳಲ್ಲಿ ಸ್ಥಳ ಕೊಡುತ್ತಿರಲಿಲ್ಲ. ಅವಳ ಮೇಲೆ ಎಲ್ಲೆಲ್ಲೂ ಅಪಪ್ರಚಾರ ಪ್ರಾರಂಭವಾಯಿತು. ಸುಳ್ಳು ಮೊಕದ್ದಮೆಗಳನ್ನು ಹೂಡಿ, ಅವಳನ್ನು ಕೋರ್ಟಿಗೆ ಎಳೆದರು. ಕೊನೆಯಲ್ಲಿ ಅವಳ ಮನೆಯನ್ನು

ಸುಟ್ಟು ಹಾಕಿದರು. ಬಾಸ್ಟನ್‌ನಲ್ಲಿ, ಗುಲಾಮಗಿರಿಯ ವಿರೋಧಿ ಎಂಬ ಕಾರಣದಿಂದ, ಆ ಅಮೆರಿಕನ್ ಮಹಿಳೆಗೆ ಸಾರ್ವಜನಿಕ ವಾಚನಾಲಯಕ್ಕೆ ಪ್ರವೇಶವನ್ನು ನಿರಾಕರಿಸಿದರು. ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಗುಲಾಮ ವಿರೋಧಿ ಪ್ರಾಧ್ಯಾಪಕರನ್ನು ನೌಕರಿಯಿಂದ ತೆಗೆದು ಹಾಕಿದರು. ಕ್ವೇಕರ್ ಕವಿ ವ್ಹಿಟ್ಟಿಯರನನ್ನು ಕಾನ್‌ಕಾರ್ಡ್ ಎಂಬಲ್ಲಿ ಕಲ್ಲಿನಿಂದ ಹೊಡೆದರು. ಬಾಸ್ಟನಿನಲ್ಲಿ ಗ್ಯಾರಿಸನನ ಮನೆಯ ಮುಂದೆ ಒಂದು ವಧ್ಯಸ್ಥಾನವನ್ನು ನಿರ್ಮಿಸಿ, ಅಲ್ಲಿ ಗ್ಯಾರಿಸನನ ಪ್ರತಿ ಆಕೃತಿಯನ್ನು ಸುಟ್ಟರು. ತನ್ನನ್ನು ತುರಂಗದಲ್ಲಿ ಹಾಕಿದಾಗ ೧೮೩೫ರ ಅಕ್ಟೋಬರ್ ೨೧ರಂದು ಗ್ಯಾರಿಸನ್ ಸೆರೆಮನೆಯ ಗೋಡೆಯ ಮೇಲೆ ಹೀಗೆ ಬರೆದ: "ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೆ; ಒಬ್ಬರನ್ನೊಬ್ಬರು ತುಳಿಯುವುದು ದೇವರಿಗೆ ಹಿತವಿಲ್ಲ. ಎಂದು ಗ್ಯಾರಿಸನ್ ಬೋಧಿಸಿದುದರಿಂದ ಕುಪಿತರಾದ ಪ್ರಭಾವಯುತರಾದ ಪ್ರತಿಷ್ಠಿತರ ಕೋಪದಿಂದ ರಕ್ಷಿಸುವುದಕ್ಕಾಗಿ ಗ್ಯಾರಿಸನನ್ನು ಇಲ್ಲಿ ಕೂಡಿದ್ದರು."

ಅಮೆರಿಕದಂತಹ ಸ್ವಾತಂತ್ರ್ಯಪ್ರೇಮಿ ದೇಶದಲ್ಲಿ ಗ್ಯಾರಿಸನನಿಗೆ ವಿರೋಧವಾಗಿ ಇಂತಹ ಪ್ರತಿಗಾಮಿ ಗುಂಪು ಎದ್ದುದು ಆಶ್ಚರ್ಯ. ಆದರೆ ಸ್ವಾರ್ಥ ಅತಿಯಾದಲ್ಲಿ ಜನರ ಕಣ್ಣಿನಿಂದ ಸತ್ಯ ಮರೆಯಾಗುತ್ತದೆ: ಹೃದಯ ಕಠಿಣವಾಗುತ್ತದೆ. ಅಮೆರಿಕದ ಅಂದಿನ ಜನಕ್ಕೆ ಗುಲಾಮಗಿರಿ ಮತ್ತು ಅದರ ವ್ಯಾಪಾರ ಪ್ರಯೋಜನವಾದುದೆಂದು ತಿಳಿಯದೆ ಇರಲಿಲ್ಲ. ಆದರೆ ಹಣದ ಆಸೆಯಿಂದ ತಪ್ಪಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಅವರ ಪರವಾಗಿ ಈ ಘೋಷಣೆಯನ್ನು ಹೊರಡಿಸಲಾಗಿತ್ತು: "ಗುಲಾಮಗಿರಿ ತಪ್ಪು ಎಂಬುದು ನಮಗೂ ಗೊತ್ತು. ಆದರೆ ಪ್ರಜಾರಾಜ್ಯದ (ರಿಪಬ್ಲಿಕನ್) ಸ್ಥಾಪಕರೇ ಅದನ್ನು ಒಪ್ಪಿದ್ದಾರೆ. ದಕ್ಷಿಣ ರಾಜ್ಯಗಳವರು ಅನೇಕ ಕೋಟಿ ಡಾಲರುಗಳನ್ನು ಅಮೆರಿಕದ ಇತರ ಭಾಗಗಳವರಿಗೆ ಕೊಡಬೇಕು. ಆದುದರಿಂದ ಉತ್ತರದವರಿಗೂ ದಕ್ಷಿಣದವರಿಗೂ ವ್ಯಾಜ್ಯ ಬರುವುದನ್ನು ನಾವು ಸಹಿಸುವುದಿಲ್ಲ. ಗುಲಾಮಗಿರಿಯನ್ನು ತೆಗೆದು ಹಾಕಲು ನಾವು ಅವಕಾಶ ಕೊಡುವುದಿಲ್ಲ. ವಿಮೋಚಕರನ್ನು ನಾವು ಅಡಗಿಸುತ್ತೇವೆ—ಸಾಧ್ಯವಾದರೆ ಸಂಧಾನದಿಂದ, ಇಲ್ಲದಿದ್ದರೆ ಬಲಾತ್ಕಾರವಾಗಿ. ಇದು ತತ್ತ್ವದ ವಿಚಾರವಲ್ಲ, ವ್ಯಾಪಾರ."

೧೮೩೮ರಲ್ಲಿ ಗ್ಯಾರಿಸನ್ ಮತ್ತೊಂದು ಸಂಘವನ್ನು ಸ್ಥಾಪಿಸಿದ. ಸ್ಥಾಪನೆಯಾದಾಗ ಅದು ಹೆಚ್ಚು ಜನರನ್ನು ಆಕರ್ಷಿಸಲಿಲ್ಲ. ಆದರೆ ಆ ತತ್ತ್ವ ಈಚೆಗೆ ದಿನದಿನಕ್ಕೆ ಬೆಳೆಯುತ್ತ ಬಂದಿದೆ. ಅದರ ಹೆಸರು ನಾನ್-ರೆಸಿಸ್ಟೆಂಟ್ ಸೊಸೈಟಿ. ಅದನ್ನು ಸತ್ಯಾಗ್ರಹ ಸಂಘ ಎನ್ನಬಹುದು. ಆ ಸಂಘದ ಪ್ರಾರಂಭದ ಘೋಷಣೆಯಲ್ಲಿ ಗ್ಯಾರಿಸನ್ ಹೀಗೆ ಬರೆದ:

"ಜಗತ್ತೇ ನಮ್ಮ ರಾಷ್ಟ್ರ. ಮಾನವ ಜನಾಂಗವೆಲ್ಲ ನಮ್ಮ ದೇಶದ ಪ್ರಜೆಗಳು. ನಾವು ನಮ್ಮ ದೇಶವನ್ನು ಪ್ರೀತಿಸುವಂತೆಯೇ ಇತರ ದೇಶಗಳನ್ನೂ ಪ್ರೀತಿಸುತ್ತೇವೆ. ಮನುಷ್ಯ ಸಮಾಜದ ಆಸೆ, ಸ್ವಾತಂತ್ರ್ಯ, ಹಕ್ಕುಗಳು ನಮಗೆ ಎಷ್ಟು ಪ್ರಿಯವೋ ಅಮೆರಿಕದವರ ಸ್ವಾತಂತ್ರ್ಯ ಹಕ್ಕುಗಳೂ ಅಷ್ಟೇ ಪ್ರಿಯ.

"ಒಂದು ರಾಷ್ಟ್ರಕ್ಕೆ ಶತ್ರುಗಳನ್ನು ಎದುರಿಸುವ ಹಕ್ಕು ಇಲ್ಲದೆ ಇದ್ದರೆ, ಶತ್ರುಗಳನ್ನು ಶಿಕ್ಷಿಸುವ ಹಕ್ಕು ಇಲ್ಲದೆ ಇದ್ದರೆ ವ್ಯಕ್ತಿಗೂ ಆ ಹಕ್ಕು ಇಲ್ಲ. ಸಮಾಜಕ್ಕಿಂತ ವ್ಯಕ್ತಿ ದೊಡ್ಡವನಲ್ಲ. ವ್ಯಕ್ತಿ ತನ್ನ ಹಕ್ಕಿಗಾಗಿ ಇತರರ ಪ್ರಾಣವನ್ನು ತೆಗೆಯಬಹುದಾದರೆ, ರಾಷ್ಟ್ರಗಳಿಗೂ ರಾಷ್ಟ್ರಗಳ ಸಂಘಗಳಿಗೂ ಅದೇ ಹಕ್ಕು ಇರಬೇಕು, ಎಂದಂತಾಗುತ್ತದೆ.

"ದೈಹಿಕ ಬಲಾತ್ಕಾರದಿಂದ ನೈತಿಕ ಪರಿಣಾಮವಾಗುವುದಿಲ್ಲವೆಂಬುದಕ್ಕೆ ಮಾನವನ ಇತಿಹಾಸದ ತುಂಬ ಉದಾಹರಣೆಗಳಿವೆ. ಮನುಷ್ಯನ ಪಾಪಬುದ್ಧಿಯನ್ನು ಪ್ರೇಮದಿಂದ ಮಾತ್ರ ತಿದ್ದಲು ಸಾಧ್ಯ. ಕೆಡಕನ್ನು ಒಳ್ಳೆಯತನದಿಂದ ನಾಶಮಾಡಬಹುದು. ಹಿಂಸೆಯಿಂದ ಮಾನವಜನಾಂಗವನ್ನು ರಕ್ಷಿಸಲು ನಾವು ದುರ್ಬಲರಾದ ಮನುಷ್ಯಜನಾಂಗದ ದೇಹಬಲವನ್ನು ನೆಚ್ಚಿದರೆ ಸಾಧ್ಯವಿಲ್ಲ. ನಮ್ರರಾದವರೇ ಭೂಮಿಯ ಒಡೆಯರಾಗುತ್ತಾರೆಂಬುದು ನಿಶ್ಚಯ. ಕತ್ತಿಯ ಮೇಲೆ ಅವಲಂಬಿಸಿರುವವರು ಕತ್ತಿಯಿಂದಲೇ ನಾಶವಾಗುತ್ತಾರೆ. ಆದುದರಿಂದ ನಿರ್ದೋಷವಾದ ಕಾರ್ಯಕ್ರಮದ ಅಂಗವಾಗಿ—ಅಂದರೆ

ಶಾಂತಿ, ಸುಖ ಮತ್ತು ಆಸ್ತಿ ಪ್ರಾಣಗಳ ರಕ್ಷಣೆ ಇದಕ್ಕಾಗಿ. ಮತ್ತು ಪರಮಾತ್ಮನೊಬ್ಬನಿಗೇ ಅಡಿಯಾಳಾಗಿರುವ ಗುರುತಾಗಿ. ನಾವು ಸತ್ಯಾಗ್ರಹವನ್ನು ಆಚರಿಸುತ್ತೇವೆ. ಅದು ಎಲ್ಲ ರೋಗಗಳಿಗೂ ಔಷಧಿ. ಅದರಿಂದ ನಮಗೆ ಬೇಕಾದುದೆಲ್ಲ ದೊರಕುತ್ತದೆ. ಅದು ಸರ್ವಶಕ್ತ. ಕೊನೆಯಲ್ಲಿ ಎಲ್ಲ ವಿರೋಧಶಕ್ತಿಗಳನ್ನೂ ಅದು ಜಯಿಸಿ ಆಜೇಯವಾಗುತ್ತದೆಂದು ನಮಗೆ ಗೊತ್ತು.

"ನಾವು ಸತ್ಯಾಗ್ರಹವನ್ನು ಅವಲಂಬಿಸಿದರೆ ಹಿಂಸ್ರಕರಾಗುವುದು ಸಾಧ್ಯವಿಲ್ಲ; ದೇಶದ್ರೋಹ ನಮ್ಮಿಂದ ಸಾಧ್ಯವಿಲ್ಲ; ಕೆಟ್ಟ ಕಾರ್ಯದಲ್ಲಿ ಪ್ರವರ್ತಿಸುವುದು ಸಾಧ್ಯವಿಲ್ಲ. ದೇವರ ಹೆಸರಿನಲ್ಲಿ ಮನುಷ್ಯ ಮಾಡುವ ಅನ್ಯಾಯಗಳನ್ನು ನಾವು ಸಹಿಸುವುದಿಲ್ಲ. ಸರ್ಕಾರ ಮಾಡುವ ಅನೀತಿಯುತವಲ್ಲದ ಎಲ್ಲ ಕಾನೂನುಗಳನ್ನೂ ನಡೆಸುತ್ತೇವೆ. ಸರ್ಕಾರದ ನ್ಯಾಯವಲ್ಲದ ಕಾನೂನುಗಳನ್ನು ತಿರಸ್ಕರಿಸಿ, ಉಂಟಾಗಬಹುದಾದ ಶಿಕ್ಷೆಯನ್ನು ಅನುಭವಿಸಿ ಎದುರಿಸುತ್ತೇವೆ."

ತಾವು ಕೇಡನ್ನು ಎದುರಿಸದವರಾದರೂ ಅನ್ಯಾಯವನ್ನು ಎದುರಿಸುವುದಾಗಿ ಗ್ಯಾರಿಸನ್ ಘೋಷಿಸಿದರು. "ನಾವು ಕೇಡನ್ನು ಎದುರಿಸದ ಸತ್ಯಾಗ್ರಹಿಗಳಾದರೂ, ದೇವರ ಹೆಸರಿನಲ್ಲಿ ಆತ್ಮಶಕ್ತಿಯನ್ನು ಉಪಯೋಗಿಸಿ, ಧೈರ್ಯವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಕೆಲಸಮಾಡುತ್ತೇವೆ. ದೊಡ್ಡವರು ಚಿಕ್ಕವರು ಯಾರು ಅನ್ಯಾಯ ಮಾಡಿದರೂ ತೀವ್ರವಾಗಿ ಖಂಡಿಸುತ್ತೇವೆ. ರಾಜಕೀಯ ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಿಗೆಲ್ಲ ಈ ತತ್ತ್ವವನ್ನು ಕೊಂಡೊಯ್ಯುತ್ತೇವೆ. ಸತ್ಯದ ರಾಜ್ಯ ಈ ಭೂಮಿಯಲ್ಲಿ ಸ್ಥಾಪನೆಯಾಗುವಂತೆ ಎಲ್ಲ ಕಾರ್ಯಗಳನ್ನೂ ಮಾಡುತ್ತೇವೆ."

ಕೇಡನ್ನು ಎದುರಿಸದಿರುವ ಈ ತತ್ತ್ವ ಬೈಬಲ್‌ನಲ್ಲೂ ಪ್ರತಿಪಾದಿತವಾಗಿದೆ. ಮಾನವಪ್ರೇಮಿಗಳು ಆಗಿಂದಾಗ್ಗೆ ಮನುಷ್ಯ ಸಮಾಜದ ಸಮಸ್ಯೆಗಳಿಗೆ ಈ ತತ್ತ್ವವನ್ನು ಅನ್ವಯಿಸಲು ಪ್ರಯತ್ನಿಸಿದ್ದಾರೆ. ರಷ್ಯದಲ್ಲಿ ಟಾಲ್‌ಸ್ಟಾಯ್ ಈ ತತ್ತ್ವವನ್ನು ಪ್ರತಿಪಾದಿಸಿ ತನಗೆ ಸಾಧ್ಯವಾದಷ್ಟು ಪ್ರಯೋಗವನ್ನೂ ನಡೆಸಿದ. ಗ್ಯಾರಿಸನ್, ಟಾಲ್‌ಸ್ಟಾಯ್ ಇವರು ಕಾರ್ಯಕಾರಿಯಾಗಿ ಪ್ರಯೋಗ ನಡೆಸಲು ಅವರಿಗೆ ಹೆಚ್ಚು ಅವಕಾಶ ದೊರಕಲಿಲ್ಲ. ಆದರೆ ಮಹಾತ್ಮ ಗಾಂಧಿಯವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ದೀರ್ಘಕಾಲ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಎದುರಾಗಿ ಈ ದೇಶದ ಸುಮಾರು ನಲವತ್ತು ಕೋಟಿ ಜನತೆಯನ್ನು ಸತ್ಯಾಗ್ರಹದಲ್ಲಿ ತೊಡಗಿಸಿದರು. ರಾಜಕೀಯ ಅಸ್ತ್ರವಾಗಿ ಸತ್ಯಾಗ್ರಹವನ್ನು ಇಷ್ಟು ಯಶಸ್ವಿಯಾಗಿ ನಡೆಸಿದ ಉದಾಹರಣೆ ಜಗತ್ತಿನ ಇತಿಹಾಸದಲ್ಲಿ ಬೇರೊಂದು ಇಲ್ಲ. ಟಾಲ್‌ಸ್ಟಾಯ್ ಬದುಕಿರುವಾಗಲೇ ಗಾಂಧಿಯವರ ಈ ಮಾರ್ಗವನ್ನು ಬಹುವಾಗಿ ಮೆಚ್ಚಿ, ಗಾಂಧೀಜಿಗೆ ಪತ್ರವನ್ನು ಸಹ ಬರೆದಿದ್ದ. ಬೈಬಲ್ ಬೋಧಿಸಿದ ಸತ್ಯಾಗ್ರಹವನ್ನು ಭಾರತದಲ್ಲಿ ಆಚರಿಸಲು ಸಾಧ್ಯವಾದುದು ಗಾಂಧೀಜೀ ದೈವಭಕ್ತರಾದ ಶ್ರೇಷ್ಠ ಸತ್ಪುರುಷರಾದುದರಿಂದಲೇ.

ಗ್ಯಾರಿಸನ್ ಸತ್ಯಾಗ್ರಹತತ್ತ್ವವನ್ನು ಎಷ್ಟು ಪರಿಣಾಮಕಾರಿಯಾಗಿ ಪ್ರಸರಿಸಿದನೆಂದರೆ. ಅವನ ಭಾಷಣವನ್ನು ಅಮೆರಿಕದಲ್ಲಿ ಕೇಳಿದ್ದ ಒಬ್ಬ ಜಪಾನ್ ವಿದ್ಯಾರ್ಥಿ ಸ್ವದೇಶಕ್ಕೆ ಹಿಂದಿರುಗಿದ ಅನಂತರ ಸೈನ್ಯಕ್ಕೆ ಸೇರಲು ತಿರಸ್ಕರಿಸಿ. ಬಂದ ಶಿಕ್ಷೆಯನ್ನು ಅನುಭವಿಸಿದ. ಆದರೆ ಆಗ ಇನ್ನೂ ಜಗತ್ತು ಸತ್ಯಾಗ್ರಹ ತತ್ತ್ವವನ್ನು ಕಲಿಯಲು ಸಿದ್ಧವಾಗಿರಲಿಲ್ಲ. "ದ್ವೇಷ ದ್ವೇಷದಿಂದ ನಾಶವಾಗುವುದಿಲ್ಲ. ದ್ವೇಷ ಪ್ರೇಮದಿಂದಲೇ ನಾಶವಾಗುತ್ತದೆ." ಎಂಬ ಹಳೆಯ ಸತ್ಯವನ್ನು ಆಚರಿಸಿ ತೋರಿಸಿ ಸ್ಥಾಪಿಸಲು ಮಹಾತ್ಮ ಗಾಂಧಿಯೇ ಬೇಕಾಯಿತು.

ಗ್ಯಾರಿಸನ್ ತನ್ನ ಜೀವಮಾನದಲ್ಲಿ ಮೂರು ಸಲ ಗುಲಾಮಗಿರಿಯ ನಿರೋಧ ಕಾರ್ಯಕ್ಕಾಗಿ ವಿದೇಶಪ್ರಯಾಣ ಕೈಕೊಂಡ. ನಾಲ್ಕನೆಯ ಸಲ. ಅಂದರೆ ೧೮೬೭ರಲ್ಲಿ,ಪ್ಯಾರಿಸಿನ ಅಂತರರಾಷ್ಟ್ರೀಯ ಗುಲಾಮಗಿರಿ ಸಮಸ್ಯೆಯ ಸಮ್ಮೇಳನಕ್ಕೆ ಹೋದ. ಈ ಸಮ್ಮೇಳನ ಸಹ ಗ್ಯಾರಿಸನನ ಮೂವತ್ತು ವರ್ಷಗಳ ಪರಿಶ್ರಮದ ಫಲವೇ ಆಗಿತ್ತು. ಜನ ಆಗಲೂ ಗುಲಾಮಗಿರಿಯ ನಿರೋಧವನ್ನು ಪೂರ್ಣವಾಗಿ ಒಪ್ಪಿರಲಿಲ್ಲ. ೧೮೩೫ರಲ್ಲಿ ಸಹ ಗುಲಾಮಗಿರಿಯ ನಿರೋಧ ಸಭೆಯೊಂದನ್ನು ಗುಂಪು ಬಲಾತ್ಕಾರವಾಗಿ ಚದುರಿಸಿತು. ೧೮೩೧ರಲ್ಲಿ ಗುಲಾಮಗಿರಿಗೆ ವಿರೋಧವಾಗಿ ಪತ್ರಿಕೆಯೊಂದನ್ನು ನಡೆಸುತ್ತಿದ್ದ

ಲವ್ ಜಾಯ್ ಎಂಬ ಪಾದ್ರಿಯನ್ನು ಗುಂಪು ಖೂನಿ ಮಾಡಿತ್ತು. ದಕ್ಷಿಣ ಅಮೆರಿಕದಲ್ಲಿ ಇನ್ನೂ ಇಂತಹ ಅನೇಕ ಕ್ರೂರ ಕೃತ್ಯಗಳು ನಡೆದುವು. ಈ ಕ್ರೌರ್ಯಗಳಿಂದೆಲ್ಲ ಮಾನವಪ್ರೇಮಿಗಳಾದವರ ಮತ್ತು ಸಜ್ಜನರ ಮನಸ್ಸು ಬಹಳ ನೊಂದಿತು. ಫಿಲಡೆಲ್ಫಿಯದಲ್ಲಿ ಗುಲಾಮಗಿರಿಗೆ ವಿರುದ್ಧವಾದ ಸಮ್ಮೇಳನ ನಡೆಯುತ್ತಿದ್ದಾಗ ಉದ್ರಿಕ್ತವಾದ ಗುಂಪು ಸಭಾಭವನವನ್ನೇ ಸುಟ್ಟಿತು. ಬಾಸ್ಟನ್ನಿನಲ್ಲಿ ಸಹ ಸಭಾಭವನವನ್ನು ಸುಡುವ ಪ್ರಯತ್ನ ನಡೆದು, ಸೈನ್ಯ ಬಂದುದರಿಂದ ನಿಂತಿತು. ಪ್ರಸಿದ್ಧ ಗುಲಾಮಗಿರಿ ನಿರೋಧ ಪ್ರಚಾರಕನಾದ ವೆಂಡೆಲ್ ಫಿಲಿಪ್ಸ್ (೧೮೧೧–೧೮೮೪) ಗ್ಯಾರಿಸನನ ಚಳವಳಿ ಸೇರಿದ. ಪ್ಲಿಮತ್ ಚರ್ಚಿನ ಪಾದ್ರಿ ವಾರ್ಡ್ ಬೀಚರನ್ನು ಪೋಲೀಸರು ತಮ್ಮ ಕಗ್ಗೊಲೆಯಾಗದಂತೆ ರಕ್ಷಿಸಬೇಕಾಯಿತು.

ಅಮೆರಿಕದ ಅಧ್ಯಕ್ಷಸ್ಥಾನಕ್ಕೆ ಲಿಂಕನನ ಚುನಾವಣೆಯೊಂದಿಗೆ ಗುಲಾಮಗಿರಿಯ ಪ್ರಶ್ನೆ ಉಗ್ರ ರೂಪ ತಾಳಿತು. ಗ್ಯಾರಿಸನ್ ಯಾವ ರಾಜಕೀಯ ಪಕ್ಷದೊಂದಿಗೂ ಸೇರಿರಲಿಲ್ಲ. ನನ್ನ ಚಳುವಳಿ ಬರಿಯ ಗುಲಾಮಗಿರಿಯ ನಿರೋಧದ ಪ್ರಶ್ನೆ ಅಲ್ಲ. ಇದು ಅಖಿಲ ಮಾನವ ಜನಾಂಗದ ಪ್ರಶ್ನೆ, ಎಂಬುದು ಅವನ ಅಭಿಪ್ರಾಯವಾಗಿತ್ತು. ಆದರೆ ಗುಲಾಮಗಿರಿಯನ್ನು ಗ್ಯಾರಿಸನ್ ಅಷ್ಟು ತೀವ್ರವಾಗಿ ವಿರೋಧಿಸಿದುದರಿಂದಲೇ ಲಿಂಕನನಿಗೆ ಜಯ ಸಾಧ್ಯವಾಯಿತು. "ಗುಲಾಮಗಿರಿಯನ್ನು ಎಲ್ಲರೂ ವಿರೋಧಿಸಬೇಕು. ವಿರೋಧಿಸುವವರೆಲ್ಲ ಅವರ ಮಿತ್ರರು." ಎಂಬ ಅವನ ವಾದವಿದ. ಗುಲಾಮಗಿರಿಗೆ ವಿರೋಧ ಪ್ರಬಲವಾಯಿತು. ಗುಲಾಮಗಿರಿ ಇರಬೇಕೆ, ಬೇಡವೆ, ಎಂಬ ಪ್ರಶ್ನೆಯ ಮೇಲೆಯೇ ಲಿಂಕನನ ಚುನಾವಣೆ ನಡೆಯಿತು. "ಖಂಡಿತ ಇರಕೂಡದು" ಎಂದು ಲಿಂಕನ್ ಘೋಷಿಸಿದ. ಲಿಂಕನ್ ಅಧ್ಯಕ್ಷನಾದ ಕೂಡಲೇ ಅಮೆರಿಕದಲ್ಲಿರುವ ಪ್ರತಿಯೊಬ್ಬ ಗುಲಾಮನನ್ನೂ ಸರ್ಕಾರದ ಪರವಾಗಿ ಕೊಂಡುಕೊಂಡು ಬಿಡುಗಡೆಮಾಡುವುದಾಗಿ ಘೋಷಿಸಿದ. ಆದರೆ ಉತ್ತರ ಮತ್ತು ದಕ್ಷಿಣದವರ ಮನೋಭಾವ ಬಹಳ ಕಠಿಣವೂ ಸ್ಪಷ್ಟವೂ ಆಗಿತ್ತು. ಪಕ್ಷಗಳು ತುಂಬ ಪ್ರಬಲವೂ ಧನವಂತರುಳ್ಳವೂ ಪ್ರಧಾನವಾಯಿತವೂ ಆಗಿದ್ದುವು. ಅನಂತರ ದೇಶ ನಾಲ್ಕು ವರ್ಷ ಭಯಂಕರವಾದ ಅಂತರ್ಯುದ್ಧದಲ್ಲಿ ತೊಳಲಿತು. ಕೊನೆಯಲ್ಲಿ ಶಾಂತಿ ಸ್ಥಾಪನೆಯಾದಾಗ "ಅಮೆರಿಕದ ೪ ಕೋಟಿ ಗುಲಾಮರು ಮಾತ್ರವೇ ಸ್ವತಂತ್ರರಾಗಲಿಲ್ಲ. ಅಮೆರಿಕದ ಅಖಿಲ ಜನಸಂಖ್ಯೆ ಸ್ವತಂತ್ರವಾಯಿತು." ಎಂದು ಗ್ಯಾರಿಸನ್ ಘೋಷಿಸಿದ. "ಎಲ್ಲಿಯ ವರೆಗೆ ಗುಲಾಮರು ಇದ್ದರೋ ಅಲ್ಲಿಯ ವರೆಗೆ ಗುಲಾಮರ ಯಜಮಾನರಿಗೆ ಸ್ವಾತಂತ್ರ್ಯವಿರಲಿಲ್ಲ". ಎಂಬುದು ಗ್ಯಾರಿಸನನ ಅಭಿಪ್ರಾಯವಾಗಿತ್ತು.

ಕೊನೆಯಲ್ಲಿ ಅಮೆರಿಕದ ಸಂವಿಧಾನದ ೧೩ನೆಯ ನಿಬಂಧನೆಯ ತಿದ್ದುಪಡಿಗೆ ಲಿಂಕನ್ ಹಸ್ತಾಕ್ಷರ ಹಾಕಿ ಗುಲಾಮಗಿರಿಯನ್ನು ನಿರ್ಮೂಲಮಾಡಿದ. ಗ್ಯಾರಿಸನನ ನಲವತ್ತು ವರ್ಷಗಳ ಕಾರ್ಯ, ಅವನಿಗೆ ಅರುವತ್ತು ವರುಷಗಳಾಗಿದ್ದಾಗ, ಜಯಪ್ರದವಾಗಿ ಮುಕ್ತಾಯವಾಯಿತು. ಸತ್ಯ ಮತ್ತು ನ್ಯಾಯಗಳಿಗೆ ಒಬ್ಬ ವ್ಯಕ್ತಿ ಮಾತ್ರವೇ ಹೋರಾಡಿದರೂ ಅವಕ್ಕೆ ಕೊನೆಗೂ ಮೇಲುಗೈ ಆಯಿತು. ಅವನ ವಾದ ಮೊದಲಿಂದಲೂ ಸರಿಯಾಗಿಯೇ ಇದ್ದಿತೆಂದು ಜನತೆ ಆಗ ಘೋಷಿಸಿತು. ಗ್ಯಾರಿಸನ್ ಅಮೆರಿಕನ್ ಸರ್ಕಾರದ ಆಹ್ವಾನವನ್ನು ಅಂಗೀಕರಿಸಿ, ಸಮ್ಟರ್ ಕೋಟೆಯ ಧ್ವಜಾರೋಹಣಕ್ಕೆ ಹೋಗಿದ್ದಾಗ ಜನತೆಯೂ ಸರ್ಕಾರವೂ ಅವನಿಗೆ ಅದ್ಭುತ ಸನ್ಮಾನ ಮಾಡಿದುವು. ಕೋಟ್ಯವಧಿ ನೀಗ್ರೋಗಳು ಪ್ರೇಮ, ಆದರ, ಕೃತಜ್ಞತೆ, ಬಾಷ್ಪಾಂಜಲಿ, ಪುಷ್ಪಾಂಜಲಿಗಳಿಂದ ಅವನನ್ನು ಗೌರವಿಸಿದರು. ಅಧ್ಯಕ್ಷ ಲಿಂಕನ್ ಗ್ಯಾರಿಸನನಿಗೆ ಸಕಲ ಮರ್ಯಾದೆಗಳನ್ನೂ ಸಲ್ಲಿಸಿದರು. ನೀಗ್ರೋ ಸ್ತ್ರೀ ಪುರುಷರೂ ಮಕ್ಕಳೂ ಲಕ್ಷಲಕ್ಷ ಸಂಖ್ಯೆಯಲ್ಲಿ ಅವನ ಸ್ಪರ್ಶವಾದರೆ ತಾವು ಪಾವನವಾದೆವೆಂದು ಅವನ ಕೋಟನ್ನು ಮುಟ್ಟುತ್ತಿದ್ದರು. ಮರುದಿನವೇ ಲಿಂಕನನ ಕೊಲೆಯಾಯಿತು. ದೇಶ ಶೋಕಸಾಗರದಲ್ಲಿ ಮುಳುಗಿತು.

ಆ ವರ್ಷದ ಡಿಸೆಂಬರ್‌ನಲ್ಲಿ ಗ್ಯಾರಿಸನ್ ಕೊನೆಯ ಸಲ ಲಿಬರೇಟರ್ ಪತ್ರಿಕೆಗೆ ಅಕ್ಷರಗಳನ್ನು ಜೋಡಿಸಿದ. ಮೂವತ್ತು ವರ್ಷಗಳ ಅವನ ಕಾರ್ಯ ಪೂರ್ತಿಯಾಗಿತ್ತು. ಬಣ್ಣದ ಜನಾಂಗ ಸ್ವತಂತ್ರವಾಗಿತ್ತು. ಅನಂತರ ಪತ್ರಿಕೆಯನ್ನು ನಿಲ್ಲಿಸಿದರೂ ಗ್ಯಾರಿಸನ್ ಮುಂದೆ ಹದಿಮೂರು ವರ್ಷಗಳ ಕಾಲ (ಜೀವಮಾನ ಪರ್ಯಂತ) ಸಾರ್ವಜನಿಕ ಪ್ರಶ್ನೆಗಳಲ್ಲಿ ಶ್ರದ್ಧೆವಹಿಸುತ್ತಲೇ ಇದ್ದ. ಪಾನನಿರೋಧ, ಸ್ತ್ರೀ

ಸ್ವಾತಂತ್ರ್ಯ. ಮುಕ್ತ ವ್ಯಾಪಾರ. ಬಿಡುಗಡೆಯಾದ ಗುಲಾಮರ ಪುನರ್ವಸತಿ, ಹೊರಗಿನವರು ಅಮೆರಿಕಕ್ಕೆ ಬರಲು ನಿಷೇಧದ ವಿರುದ್ಧ ಹೋರಾಟ–ಈ ಪ್ರಶ್ನೆಗಳಲ್ಲೆಲ್ಲ ಅವನಿಗೆ ಕುಂದದ ಉತ್ಸಾಹವಿತ್ತು.

ಗ್ಯಾರಿಸನ್ ಅಮೆರಿಕದಲ್ಲಿ ಮಾಡಿದ ಕಾರ್ಯದಿಂದ ಅವನಿಗೆ ಜಗತ್ತಿನಲ್ಲೆಲ್ಲ ಗೌರವವುಂಟಾಯಿತು. ಪ್ಯಾರಿಸಿನ ಅಂತರರಾಷ್ಟ್ರೀಯ ಗುಲಾಮಗಿರಿ ನಿರೋಧ ಸಮ್ಮೇಳನದಲ್ಲಿ ಅವನಿಗೆ ಅತ್ಯಂತ ಆತ್ಮೀಯ ಸನ್ಮಾನವನ್ನು ಏರ್ಪಡಿಸಲಾಯಿತ್ತು. "ಈತ ಗುಲಾಮರ ವಿಮೋಚಕ ಮಾತ್ರವೇ ಅಲ್ಲ, ಅಮೆರಿಕದ ಪ್ರತಿನಿಧಿ ಸಹ." ಎಂದು ಅವನನ್ನು ಅಲ್ಲಿಯವರು ವರ್ಣಿಸಿದರು. ಇಂಗ್ಲೆಂಡಿನ ಶ್ರೇಷ್ಠ ರಾಜಕಾರಣಿ ಜಾನ್ ಬ್ರೈಟನ ಅಧ್ಯಕ್ಷತೆಯಲ್ಲಿ ಅವನಿಗೆ ಸ್ವಾಗತ ನೀಡಲಾಯಿತು. ಇಂಗ್ಲೆಂಡ್ ಸ್ಕಾಟ್ಲೆಂಡ್‌ಗಳ ಮುಂದಾಳುಗಳೂ ಪ್ರಭಾವಶಾಲಿಗಳೂ ಆ ಕೂಟಕ್ಕೆ ಬಂದಿದ್ದರು. ಎಡಿನ್‌ಬರೋ ನಗರದ ಗೌರವವನ್ನು (ಫ್ರೀಡಂ ಆಫ್ ದಿ ಸಿಟಿ ಆಫ್ ಎಡಿನ್‌ಬರೊ) ಅವನಿಗೆ ಅರ್ಪಿಸಲಾಯಿತು. ಗ್ಯಾರಿಸನನನ್ನು ಕುರಿತು ಇಂಗ್ಲೆಂಡಿನ ಪ್ರಸಿದ್ಧ ಮೇಧಾವಿ ಜಾನ್ ಸ್ಟೂಯರ್ಟ್ ಮಿಲ್ ಹೀಗೆ ಹೇಳಿದ:

"ಗ್ಯಾರಿಸನನಿಂದ ಗುಲಾಮಗಿರಿಗೆ ಮಾತ್ರವೇ ಬಿಡುಗಡೆಯಾಯಿತೆಂದಲ್ಲ. ಅಮೆರಿಕದ ಬುದ್ಧಿಶಕ್ತಿಗೇ ಬಿಡುಗಡೆ ಆಯಿತು. ಸಮಾಜ, ಸರ್ಕಾರ ಇವುಗಳ ಮೂಲಭೂತ ಪ್ರಶ್ನೆಗಳ ಮೇಲೆ ದೇಶದ ಮನಸ್ಸು ಕೆಲಸ ಮಾಡುವಂತೆ ಆಗಿದೆ. ಆ ದೊಡ್ಡ ರಾಷ್ಟ್ರ ನೈತಿಕ ಮತ್ತು ಬೌದ್ಧಿಕ ಅಧಃಪಾತಾಳಕ್ಕೆ ಬಿದ್ದು ಅಲ್ಪವಾದ ತೃಪ್ತಿಯ ಮಾನಸಿಕ ಅಲಸಿಕೆಯಲ್ಲಿತ್ತು. ಗ್ಯಾರಿಸನ್ ಆ ರಾಷ್ಟ್ರವನ್ನು ಈ ಅಪಾಯದಿಂದ ಬಹಳ ಕಾಲದ ವರೆಗೆ ಪಾರುಮಾಡಿದ್ದಾನೆ. ಮಾನವಸಮಾಜ ಗ್ಯಾರಿಸನನಿಗೂ ಅವನ ಅನುಯಾಯಿಗಳಿಗೂ ಈ ಮತ್ತೊಂದು ಋಣಕ್ಕಾಗಿಯೂ ಕೃತಜ್ಞವಾಗಿರಬೇಕಾಗಿದೆ."

ಗ್ಯಾರಿಸನ್ ಅಮೆರಿಕಕ್ಕೆ ಹಿಂದಿರುಗಿದ ಅನಂತರ ಅಮೆರಿಕದ ಎಲ್ಲ ಅಭಿಪ್ರಾಯಗಳ ಜನರೂ ಸೇರಿ ಅವನಿಗೆ ಒಂದು ನಿಧಿಯನ್ನು ಸಮರ್ಪಿಸಿದರು. ಅವನ ಸೇವೆ ಅಮೆರಿಕನ್ ಜನತೆಗೆ ಪೂರ್ಣವಾಗಿ ಸಮ್ಮತವೂ ಮೆಚ್ಚಿಕೆಯೂ ಆಗಿತ್ತು.

ಗ್ಯಾರಿಸನ್ ನಿವೃತ್ತನಾದರೂ ಮುದ್ರಣಾಲಯದ ಸಂಪರ್ಕವನ್ನು ಬಿಡಲಿಲ್ಲ. ತನ್ನ ೭೦ನೆಯ ಜನ್ಮದಿನ ಅವನು ನ್ಯೂಬರಿ ಹೆರಾಲ್ಡ್ ಪತ್ರಿಕೆಯಲ್ಲಿ ಅಕ್ಷರಗಳನ್ನು ಜೋಡಿಸಿದ. ಮುಂದೆ ಮೂರು ವರ್ಷಗಳ ಅನಂತರ ಮತ್ತೆ ತಾನು ಬಾಲ್ಯದಲ್ಲಿ ಮಾಡಿದ ಚಮ್ಮಾರ ಮತ್ತು ಬಡಗಿ ಕಾರ್ಯಗಳ ವಾರ್ಷಿಕೋತ್ಸವವನ್ನು ಆಚರಿಸಿದ. ಸ್ವಲ್ಪ ಕಾಲಾನಂತರ ಅವನ ಆರೋಗ್ಯ ಕೆಟ್ಟಿತು. ಸಂಸಾರಜೀವನದ ಶಾಂತಿಯ ವಾತಾವರಣದಲ್ಲಿ ೧೮೭೯ರ ಮೇ ೨೪ ರಂದು ಅವನು ದೇಹಾವಸಾನ ಹೊಂದಿದ.

ಮಹಾನ್ ಸಾಧಕರ, ಜನಕಲ್ಯಾಣಕರ್ತರ ಭೌತದೇಹ ಕಣ್ಮರೆಯಾದರೂ ಅವರು ಸಾಧಿಸಿದ ಕಾರ್ಯ ಎಂದಿಗೂ ಕಣ್ಮರೆಯಾಗುವುದಿಲ್ಲ. ಅದು ಜನಕ್ಕೆ ಬೇಕಾದ ಕಾರ್ಯವಾಗಿ ಎಂದೆಂದಿಗೂ ನಿಲ್ಲುತ್ತದೆ. ಯಾವ ಬಾಸ್ಟನ್ ನಗರದಲ್ಲಿ ಅವನು ಬಹಳ ಕಾಲ ಕೆಲಸಮಾಡಿ, ಹೊಡೆಸಿಕೊಂಡು, ಬೈಸಿಕೊಂಡು ಅವಮಾನಿತನಾಗಿ, ಸೆರೆವಾಸ ಅನುಭವಿಸಿ, ಅರೆಜೀವವಾಗಿದ್ದನೋ ಅಲ್ಲಿ ಇಂದು ಅತ್ಯಂತ ಉತ್ತಮವಾದ ನಗರದ ಭಾಗದಲ್ಲಿ ಅವನ ಸುಂದರವಾದ ಕಲ್ಲಿನ ವಿಗ್ರಹ ಸ್ಥಾಪಿತವಾಗಿದೆ. ವಿಗ್ರಹದ ತಲೆಯಿಂದ ಮೇಲಕ್ಕೆ. ಗ್ಯಾರಿಸನ್ ತನ್ನ ಲಿಬರೇಟರ್ ಪತ್ರಿಕೆಯ ಪ್ರಥಮ ಸಂಚಿಕೆಯಲ್ಲಿ ಬರೆದ ಈ ವಾಕ್ಯವನ್ನು ಕೆತ್ತಿದ್ದಾರೆ: "ನಾನು ಶ್ರದ್ಧೆಯಿಂದ ದುಡಿಯುತ್ತೇನೆ...ನನ್ನ ಮಾತನ್ನು ಕೇಳಲೇಬೇಕು."

ಗ್ಯಾರಿಸನನ ದೃಷ್ಟಿ ಆತನ ಧ್ಯೇಯದಿಂದ ಎಂದೂ ಮರೆಯಾಗಲಿಲ್ಲ. ಆ ಧ್ಯೇಯ, "ಸ್ವಾತಂತ್ರ್ಯ ಎಲ್ಲ ಮಾನವರ ಹಕ್ಕು" ಎಂಬುದು. ಪೂರ್ಣ ಭಯವರ್ಜನ, ದೃಢಪ್ರತಿಜ್ಞೆ, ಶಾಶ್ವತವಾದ ಸಹನೆ, ಈ ಆಯುಧಗಳಿಂದಲೇ ಗ್ಯಾರಿಸನ್ ತನ್ನ ಹೋರಾಟದಲ್ಲಿ ಜಯಶೀಲನಾದ.

ಗ್ಯಾರಿಸನನ ದೃಷ್ಟಿ ಆತನ ಧ್ಯೇಯದಿಂದ ಎಂದೂ ಮರೆಯಾಗಲಿಲ್ಲ. ಆ ಧ್ಯೇಯ, "ಸ್ವಾತಂತ್ರ್ಯ ಎಲ್ಲ ಮಾನವರ ಹಕ್ಕು," ಎಂಬುದು. ಪೂರ್ಣ ಭಯವರ್ಜನ, ದೃಢ ಪ್ರತಿಜ್ಞೆ, ಶಾಶ್ವತವಾದ ಸಹನೆ, ಈ ಆಯುಧಗಳಿಂದಲೇ ಗ್ಯಾರಿಸನ್ ತನ್ನ ಹೋರಾಟದಲ್ಲಿ ಜಯಶೀಲನಾದ.

ಗ್ಯಾರಿಸನನ ಅಂತ್ಯಸಂಸ್ಕಾರಸಮಯದಲ್ಲಿ. ಗ್ಯಾರಿಸನನ ಜೊತೆ ಬಹಳ ಕಾಲ ಕೆಲಸ ಮಾಡಿದ್ದ ವೆಂಡಲ್ ಫಿಲಿಪ್ಸ್ ಹೀಗೆ ಹೇಳಿದ: "ಅಲ್ಲಿ ಈಗ ತಣ್ಣಗೆ ಬಿದ್ದಿರುವ ಆ ಕೈಯೇ ಗುಲಾಮರ ಬಿಡುಗಡೆಯ ನಿಬಂಧವನ್ನು ಬರೆದದ್ದು. ಲೇಖನಿ ಹಿಡಿದವರು ಯಾರು ಎಂಬುದು ಮುಖ್ಯವಲ್ಲ. ಗುಲಾಮರ ಸಂಕೋಲೆಯನ್ನು ಮುರಿದುದು ಗ್ಯಾರಿಸನನ ಕೈ. ಇದು ಇತಿಹಾಸಕ್ಕೂ ಕಾಣುತ್ತದೆ: ದೇವರಿಗೂ ಕಾಣುತ್ತದೆ."

ಗ್ಯಾರಿಸನನ ಬಾಳಿನಿಂದ ಒಂದು ಸತ್ಯ ಸ್ಪಷ್ಟವಾಗುತ್ತದೆ. ನಮ್ಮ ಕಾರ್ಯ, ಸಾಹಸ ಅನೇಕ ವೇಳೆ ವ್ಯರ್ಥವಾಗಬಹುದು. ಅದರಿಂದ ಮಾನವಜಗತ್ತಿಗೆ ಯಾವ ಲಾಭವೂ ಆದಂತೆ ಕಾಣದಿರಬಹುದು. ನೂರಕ್ಕೆ ತೊಂಬತ್ತೊಂಬತ್ತು ಸಲ ಹೀಗೆ ಆಗಬಹುದು. ಆದರೆ ನೂರನೆಯ ಸಲ ಅದರ ಫಲ ಅತ್ಯಂತ ಅದ್ಭುತವಾಗುತ್ತದೆ. ಎಷ್ಟು ಅದ್ಭುತವೆಂದರೆ. ಕೆಲಸ ಪ್ರಾರಂಭವಾದಾಗ ಯಾರಾದರೂ ಹಾಗೆ. ಅದರ ಫಲದ ವಿಷಯದಲ್ಲಿ. ಭವಿಷ್ಯ ಹೇಳಿದ್ದರೆ ಅತ ಮಿತಿಮೀರಿದ ಆಶಾವಾದಿ ಎಂದು ನಾವು ಹೇಳುತ್ತಿದ್ದೇವೇನೋ. ಗ್ಯಾರಿಸನನ ವಿಷಯದಲ್ಲಿಯೂ ಹಾಗೆ ಆಯಿತು.

ಮಾನವೀಯತೆಯನ್ನು ಪೂರ್ಣವಾಗಿ ಹೃದಯದಲ್ಲಿ ತುಂಬಿಕೊಂಡ ಗ್ಯಾರಿಸನ್ ಮಾನವ ಸಮಾಜದ ಅತಿದೊಡ್ಡ ಮಿತ್ರ. ಅವನ ಆದರ್ಶ ಇಂದಿಗೂ ನಮಗೆ ಬೇಕಾಗಿದೆ.

ಪಿ. ಗಂಗಾಧರ್

ಆದಿಕದಂಬರ ಕಾಲದಲ್ಲಿ ವೈಷ್ಣವಪಂಥ ಪ್ರಚಲಿತವಾಗಿತ್ತೆ?

ಆದಿಕದಂಬರ ಸುಪ್ರಸಿದ್ಧನಾದ ಕಾಕುತ್ಸ್ಥವರ್ಮನದೆಂದು (೪೦೫–೪೩೦) ಹೇಳಲಾದ ಹಳಗನ್ನಡದಲ್ಲಿರುವ ಹಲ್ಮಿಡಿ ಶಾಸನ[1]

ಜಯತಿಶ್ರೀಪರಿಷ್ವಜ್ಗ ಶ್ಯಾರ್ಙ್ಗ[ವ್ಯಾನತಿ]ರಚ್ಯುತಃ
ದಾನವಾಕ್ಷ್ಣೋರ್ಯುಗಾನ್ತಾಗ್ನಿಃ[ಶಿಷ್ಟಾನಾನ್ತು]ಸುದರ್ಶನಃ

ಎಂಬ ಅನುಷ್ಟುಪ್ ಶ್ಲೋಕದಿಂದ ಪ್ರಾರಂಭವಾಗಿದೆ.

ಇಲ್ಲಿ ಅಚ್ಯುತನು ಶ್ರೀಯಿಂದ ಅಂದರೆ ಲಕ್ಷ್ಮಿಯಿಂದ ಆಲಿಂಗಿತನಾಗಿದ್ದಾನೆ. ಆತ (ದಾನವರ ಸಂಹಾರಕ್ಕಾಗಿ) ಶಾರ್ಙ್ಗವೆಂಬ ಧನುಸ್ಸನ್ನು ಚೆನ್ನಾಗಿ ಬಗ್ಗಿಸಿ ಹಿಡಿದಿದ್ದಾನೆ. ದಾನವರ ದೃಷ್ಟಿಗೆ ಆತ ಪ್ರಳಯಕಾಲದ ಅಗ್ನಿಯಂತಿದ್ದಾನೆ. ಸಜ್ಜನರಿಗೆ ಸೊಗಸಾದ ನೋಟ(ಸುದರ್ಶನ)ವಾಗಿದ್ದಾನೆ.ಅಂದರೆ ರಕ್ಷಕನಾಗಿದ್ದಾನೆ.

ಇಲ್ಲಿ ವಿಷ್ಣು ಲಕ್ಷ್ಮಿಯೊಡನೆ ಅಚ್ಯುತನೆಂಬ ಹೆಸರಿನಿಂದ ಆಹೂತನಾಗಿದ್ದಾನೆ. ಇವನು ಸದಾ ದಾನವರ ಶತ್ರು. ಆದ್ದರಿಂದಲೇ ಅವರ ದೃಷ್ಟಿಗೆ ಪ್ರಳಯಾಗ್ನಿಯಂತಿದ್ದಾನೆ. ಇಲ್ಲಿ ಇವನ ಪ್ರಸಿದ್ಧವಾದ ಸುದರ್ಶನ ಚಕ್ರ ಶ್ಲೇಷೆಯಿಂದ ಸೂಚಿಸಲ್ಪಟ್ಟಿದೆ.

ಈ ಶಾಸನದ ಶಿರೋಭಾಗದ ಮಧ್ಯಭಾಗ ವಿಷ್ಣುವಿನ ಸುದರ್ಶನ ಚಕ್ರದ ಪ್ರಾತಿನಿಧ್ಯವೆಂದು ಪರಿಗಣಿಸಬಹುದು.

ಇದಲ್ಲದೆ. ಕದಂಬ ಮೃಗೇಶವರ್ಮನ (೪೫೫–೪೮೦) ಬನವಾಸಿ ಶಾಸನ[2] ಆದಿ ಕದಂಬ ಕಾಲೀನ ವೈಷ್ಣವಪಂಥದ ಅಧ್ಯಯನ ದೃಷ್ಟಿಯಿಂದ ಆದಿಕದಂಬರ ಹಲ್ಮಿಡಿ ಶಾಸನಕ್ಕಿಂತ ಹೆಚ್ಚು ಮಹತ್ವಪೂರ್ಣದ್ದಾಗಿದೆ.

ಈ ಶಾಸನ 'ಮಂತ್ರಘೋಷ'ದಿಂದ[3] ಪ್ರಾರಂಭವಾಗಿದೆ. ಈ ಘೋಷ ಸ್ಪಷ್ಟವಾಗಿ ವೈದಿಕ

---

[1] *Annual Report of the Mysore and Archaelogical Department for the year 1936*, pp. 72–81

[2] See the article entitled, "A New Kadamba Inscription" by Dr. B. R. Gopal in Prof. *Prof. P. B. Desai felicitation volume*, "Studies in Ancient History and Culture"

[3] ಇದೇ ಶಾಸನದ ಮೊದಲನೆಯ ಸಾಲು

ವಿಷ್ಣುಸ್ತುತಿಪರವಾದುದು. ಇಲ್ಲಿ ವಿಷ್ಣು "ಸ್ವಸ್ತಿ ಜಿತಂ ಭಗವತ್"[4] ಎಂಬುದಾಗಿ ಆಹೂತನಾಗಿದ್ದಾನೆ. ಇಲ್ಲಿರುವ ಉಪಜಾತಿ ವೃತ್ತದಲ್ಲಿರುವ ವಿಷ್ಣುಸ್ತೋತ್ರ[5] ಗಮನಾರ್ಹವಾದುದು.

ಚಿತ್ತೈಕಾಗ್ರತೆಯಿಂದ ವಿಷ್ಣು ನಮಸ್ಕರಿಸಲ್ಪಟ್ಟಿದ್ದಾನೆ–"ವಿಷ್ಣುಸ್ಸ(ಷ್ಣುಂಸ)ಮಸ್ಯಾಮಿ ತದೇಕ ಚಿ[ತ್ತವಾ]".[6] ಅತ ಆಧ್ಯಾತ್ಮಿಕ ತೇಜಸ್ಸಿನಿಂದ ಕೂಡಿದ್ದಾನೆ—"ಜ್ಯೋತಿರ್ಮಯಂ"[7]. ಅವನು ಬ್ರಹ್ಮಜ್ಞಾನಿಗಳಿಗೆ ಆಧಾರನಾಗಿದ್ದಾನೆ.–"ಬ್ರಹ್ಮವಿದಾಂ ಶರಣ್ಯಂ".[8] ಅವನು ಬ್ರಹ್ಮಾಂಡವನ್ನು ಸೃಷ್ಟಿಸಿರುವವನು.–"ವಿಶ್ವಸ್ಯಕರ್ತಾರಮ್"[9] ಅವನು ಅನೇಕ ರೂಪಗಳುಳ್ಳವನು–"ಅನೇಕರೂಪಮ್".[10] ಅವನು ಚರಾಚರ ವಿಶ್ವದ ಒಡೆಯನು–"ವಿಭುಮ್ಪ್ರಭುಮ್ ಸ್ಥಾವರಜಙ್ಗಮಾನಾಮ್"[11].

ಇದಲ್ಲದೆ, ಸಾಮಾನ್ಯವಾಗಿ ವಿಷ್ಣುಸ್ತುತಿಪರವಾದ 'ಅಂಬುಜ ಪತ್ರನೇತ್ರ'ವೆಂಬ[12] ವಿಶೇಷಣ ಇಲ್ಲಿ ಕದಂಬ ಶಾಂತಿವರ್ಮನಿಗೆ (೪೫೦-೪೭೫) ಕೊಡಲಾಗಿದೆ. ಇಲ್ಲಿ 'ಜಯಶ್ರೀ'[13] ಎಂಬ ಪದ ಲಕ್ಷ್ಮಿಯ ವಿಜಯ ಸ್ವರೂಪದ್ಯೋತಕವಾಗಿದೆ.

ಇಲ್ಲಿ ಪರಶುರಾಮನ ಕೀರ್ತಿಯನ್ನು ದಾಶರಥಿರಾಮ ಅಪಹರಿಸುವ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. "ರಾಮಸ್ಯ ಯಶ್ವೈ(ಧೃ)ವ ರಾಮಃ"[14]. ವಿಷ್ಣುವಿನ ಪ್ರಸಿದ್ಧವಾದ ಅವತಾರಗಳಾಗಿರುವ ದಾಶರಥಿರಾಮ ಮತ್ತು ಪರಶುರಾಮರ ಪ್ರಸ್ತಾಪ ಇಲ್ಲಿರುವುದರಿಂದ ಆದಿಕದಂಬರ ಕಾಲದಲ್ಲಿ ವೈಷ್ಣವಪಂಥ ಚೆನ್ನಾಗಿ ಪ್ರಚಲಿತವಾಗಿತ್ತೆಂದು ಹೇಳಬಹುದು.

ಈ ಶಾಸನದಲ್ಲಿರುವ 'ಪನ್ನಗೇಂದ್ರ'[15] ಎಂಬ ಪದ, ವಿಷ್ಣುವಿನ ಸುಪ್ರಸಿದ್ಧ ಶಯ್ಯೆಯಾಗಿರುವ ಆದಿಶೇಷನನ್ನು ಸ್ಮರಣೆಗೆ ತರುತ್ತದೆ.

ಆದಿಕದಂಬ ಅರಸರ ಹೆಸರುಗಳಾದ ಭಗೀರಥ[16] (೩೬೫-೩೮೫), ರಘು(೩೮೫-೪೦೫), ಕಾಕುತ್ಸ್ಥವರ್ಮ (೪೦೫-೪೩೦), ಮೊದಲನೆಯ ಕೃಷ್ಣವರ್ಮ (೪೩೦-೪೫೦), ವಿಷ್ಣುವರ್ಮ (೪೬೦-೪೮೦), ಶಿವಮಾಂಧಾತೃವರ್ಮ (೪೮೦-೪೯೫), ರವಿವರ್ಮ (೪೯೫-೫೩೭), ಎರಡನೆಯ ಕೃಷ್ಣವರ್ಮ (೫೩೬-೫೫೦), ಅಜವರ್ಮ (೫೩೬-೫೫೦) ಇವು ಈ ಅರಸರು ವೈಷ್ಣವ ಧರ್ಮಾನುಯಾಯಿಗಳಾಗಿದ್ದರೆಂಬುದಕ್ಕೆ ಪ್ರಬಲ ಸಾಕ್ಷಿಗಳಾಗಿವೆ.

ಈ ಶಾಸನಾಧಾರಗಳು ಆದಿ ಕದಂಬರ ಕಾಲದಲ್ಲಿ ಇದ್ದಂತಹ ಶೈವ, ಜೈನ, ಬೌದ್ಧ ಇತ್ಯಾದಿ ಪಂಥಗಳ ಜೊತೆಗೆ ಪ್ರಾಚೀನ ಕರ್ನಾಟಕದಲ್ಲಿ ವೈಷ್ಣವ ಪಂಥವೂ ಪ್ರಬಲವಾಗಿತ್ತೆಂಬುದನ್ನು ಖಚಿತಗೊಳಿಸುತ್ತವೆ.

---

4 ಇದೇ

5 ಇದೇ

6 ಇದೇ. ತದೇಕ ಚಿತ್ತಃ ಎಂದಿರಬೇಕು

7 ಇದೇ

8 ಇದೇ

9 ಇದೇ

10 ಇದೇ

11 ಇದೇ

12 ಇದೇ ಶಾಸನದ ೨ನೆಯ ಸಾಲು

13 ಇದೇ ಶಾಸನದ ೪ನೆಯ ಸಾಲು

14 ಇದೇ

15 ಇದೇ ಶಾಸನದ ೫ನೆಯ ಸಾಲು

16 ಇಲ್ಲಿ ಭಗೀರಥ, ರಘು, ಕಾಕುತ್ಸ್ಥ, ಮಾಂಧಾತ ಈ ಹೆಸರುಗಳು ವಾಲ್ಮೀಕಿಯ ಆದಿಕಾವ್ಯವಾದ ರಾಮಾಯಣದಲ್ಲಿ ಬರುವ ರಘುವಂಶದ ಅರಸರ ಹೆಸರುಗಳಾಗಿವೆ ಎಂಬುದು ಗಮನಾರ್ಹ.

ಪುಸ್ತಕ ಲೋಕ

ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ : ಲೇ: ಕೆ. ಬಸವಯ್ಯ ಮತ್ತು ಟಿ. ಆರ್. ನಾಗಪ್ಪ; ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೭೨): ಪು: vi + ೧೮೧ ಬೆಲೆ: ರೂ. ೯.೨೫

ಪೌರಸತ್ತೆಯ ಯಶಸ್ಸಿಗೆ ವಯಸ್ಕರ ಶಿಕ್ಷಣ ಅಗತ್ಯವಾಗಿ ಕೈಕೊಳ್ಳಬೇಕಾದ ಕಾರ್ಯಕ್ರಮ. ಅದ್ದರಿಂದಲೇ ಪೌರಸತ್ತೆಯ ರಾಜ್ಯಪದ್ಧತಿಯ ಪ್ರಚಾರಕಾರ್ಯದೊಡನೆ ಮತದಾರರ ಶಿಕ್ಷಣಕ್ಕೂ ಪ್ರಾಮುಖ್ಯವಿತ್ತಿರುವುದು. ಈ ಕಾರ್ಯಕ್ರಮವನ್ನು ಎರಡು ಮುಖಗಳಲ್ಲಿ ಸಾಧಿಸುವ ಯತ್ನ ನಡೆಯುತ್ತಿದೆ. ಮೊದಲನೆಯದಾಗಿ ಕಡ್ಡಾಯ ಶಿಕ್ಷಣವನ್ನು ಆಚರಣೆಗೆ ತರುವುದು; ಇದರಿಂದ ಮುಂದಿನ ವಯಸ್ಕರು ಶಿಕ್ಷಿತರಾಗಿದ್ದು ಮತದಾನ ನೀಡುವಾಗ ವಿವೇಕದಿಂದ ವರ್ತಿಸಬಲ್ಲರು. ಎರಡನೆಯದಾಗಿ ಸದ್ಯದಲ್ಲಿ ಇರತಕ್ಕ ಅನಕ್ಷರಸ್ಥ ವಯಸ್ಕರನ್ನು ಅಕ್ಷರಸ್ಥರನ್ನಾಗಿ ಮಾಡಲು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ವ್ಯಾಪಕವಾಗಿ ಕೈಕೊಳ್ಳುವುದು. ಈ ಎರಡು ಕಾರ್ಯಕ್ರಮಗಳು ಮುಂದುವರಿದ ದೇಶಗಳಲ್ಲಿ ಪರಿಣಾಮಕಾರಿಯಾಗಿದ್ದು ಅಕ್ಷರಸ್ಥರ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ಅದರೊಡನೆ ಪೌರಸತ್ತೆಯೂ ಯಶಸ್ಸನ್ನು ಸಾಧಿಸುತ್ತಿದೆ. ಸಾಕ್ಷರತೆ ಪೌರಸತ್ತೆಯಂತೆ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲೂ ರಾಷ್ಟ್ರಜೀವನದ ಯಶಸ್ಸಿಗೆ ಅಗತ್ಯವಾಗುತ್ತದೆ. ರಾಷ್ಟ್ರದ ಅಧಿಕೃತ ತತ್ತ್ವದೃಷ್ಟಿಯನ್ನರಿತು ಆ ತತ್ತ್ವದೃಷ್ಟಿಯಲ್ಲಿ ನಡೆಯುತ್ತ ಅದರ ಆರ್ಥಿಕ ಮುನ್ನಡೆಗೆ ನೆರವಾಗಲು ವ್ಯಕ್ತಿಗೆ ಶಿಕ್ಷಣ ಅನಿವಾರ್ಯವಾಗುತ್ತದೆ. ಇದನ್ನರಿತೇ ಆ ರಾಷ್ಟ್ರಗಳು ಕಡ್ಡಾಯ ಶಿಕ್ಷಣಕ್ಕೂ ವಯಸ್ಕರ ಶಿಕ್ಷಣಕ್ಕೂ ತಮ್ಮ ಅಭಿವೃದ್ಧಿ ಯೋಜನೆಗಳಲ್ಲಿ ಆದ್ಯತೆಯನ್ನು ನೀಡಿ ಆ ಕಾರ್ಯವನ್ನು ಸಾಧಿಸಿಕೊಂಡಿವೆ.

ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಶತಮಾನದ ಆದಿಯಿಂದಲೂ ಕಡ್ಡಾಯ ಶಿಕ್ಷಣದಂತೆ ವಯಸ್ಕರ ಶಿಕ್ಷಣ ಪ್ರಚಾರಕ್ಕೂ ಗಮನಕೊಡಲಾಗುತ್ತಿದೆ. ಆದರೆ ಅವೆರಡು ಕಾರ್ಯಗಳೂ ಇತ್ತೀಚಿನ ವರೆಗೂ ಅಷ್ಟು ಸಮರ್ಪಕವಾಗಿ ನಡೆಯುತ್ತಿರಲಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಈ ಶತಮಾನದ ಮಧ್ಯಕಾಲದಿಂದ ತಕ್ಕಮಟ್ಟಿನ ನಿಷ್ಠೆಯಿಂದ ಆಚರಣೆಗೆ ತರುವ ಯತ್ನ ನಡೆದುದರ ಫಲವಾಗಿ ನಿರಕ್ಷರತೆ ಸ್ವಲ್ಪಮಟ್ಟಿಗೆ ನಿರ್ಮೂಲವಾಗಿದೆ. ಆದರೂ ಒಟ್ಟು ಜನಸಂಖ್ಯೆಯ ಮೂರನೆಯ ಎರಡು ಭಾಗಕ್ಕಿಂತ ಹೆಚ್ಚು ಮಂದಿ ನಿರಕ್ಷರಸ್ಥರಿದ್ದಾರೆ. ಅಕ್ಷರಸ್ಥರ ಸಂಖ್ಯೆ ಹೆಚ್ಚುತ್ತಿದ್ದರೂ ಅದರ ಶೇಕಡ ಪ್ರಮಾಣ ಮಾತ್ರ ಹೆಚ್ಚುತ್ತಿಲ್ಲ. ಇದಕ್ಕೆ ತೀವ್ರ ವೇಗದಲ್ಲಿ ಜನಸಂಖ್ಯೆಯಲ್ಲಾಗುತ್ತಿರುವ ಹೆಚ್ಚಳವೇ ಕಾರಣ. ಜನಸಂಖ್ಯೆಯ ನಿಯಂತ್ರಣಕ್ಕೆ ತೀವ್ರಗತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೂ ಉದ್ದೇಶಿಸಿದಷ್ಟು ಅದು ಪರಿಣಾಮಕಾರಿಯಾಗಿಲ್ಲ. ಸದ್ಯದಲ್ಲಿ ಅದು ಆಗುವ ಸಂಭವವೂ ಇಲ್ಲ. ಆದ್ದರಿಂದ ಕಡ್ಡಾಯ ಶಿಕ್ಷಣವನ್ನೂ ವಯಸ್ಕರ ಶಿಕ್ಷಣವನ್ನೂ ನಿಷ್ಠೆಯಿಂದ ಆಚರಣೆಗೆ ತರುವ ಅನಿವಾರ್ಯ ಎಂದಿನಂತೆ ಹೆಚ್ಚಾಗಿಯೆ ಇದೆ.

ಕಡ್ಡಾಯ ಶಿಕ್ಷಣವನ್ನು ಪೂರ್ಣವಾಗಿ ಆಚರಣೆಗೆ ತಂದರೂ ವಯಸ್ಕರ ಶಿಕ್ಷಣವೂ ಎಂದಿನಂತೆ ಶಾಶ್ವತವಾಗಿ ಕೈಕೊಳ್ಳಬೇಕಾದ ಸೇವಾಕಾರ್ಯವೆಂದೇ ಪರಿಗಣಿಸಬೇಕು. ಒಂದು ಕಡೆ ಪ್ರಾಥಮಿಕ ಶಿಕ್ಷಣ ಮುಗಿಸಿದವರು ನಿರಕ್ಷರತೆಗೆ ಜಾರದಂತೆ ನೋಡಿಕೊಳ್ಳಲು ವಯಸ್ಕರ ಶಿಕ್ಷಣ ಯಶಸ್ವಿಯಾಗಿ ನಡೆಯಬೇಕು. ಜೊತೆಗೆ ಅಕ್ಷರಸ್ಥರಾದ ವಯಸ್ಕರಿಗೂ ತಕ್ಕಷ್ಟು ಶಿಕ್ಷಣ ಪಡೆದವರಿಗೂ ದಿನ[illegible] ಸಂಕೀರ್ಣತೆಗೇರುತ್ತಿರುವ ಆಧುನಿಕ ಸಮಾಜಜೀವನದಲ್ಲಿ ಹೊಂದಿಕೊಂಡು ಬಾಳಲು ಮುಂದುವರಿದ [illegible]

ಶಿಕ್ಷಣ ಅನಿವಾರ್ಯವಾಗುತ್ತಿದೆ. ಆದ್ದರಿಂದ ವಯಸ್ಕರ ಶಿಕ್ಷಣ ಎಲ್ಲ ದೇಶಗಳಲ್ಲೂ ಸತತವಾಗಿ ಕೈಕೊಳ್ಳಬೇಕಾದ ಕ್ಷೇಮಕಾರ್ಯಗಳಲ್ಲೊಂದಾಗಿ ಪರಿಣಮಿಸುತ್ತಿದೆ.

ನಿರಕ್ಷರತೆ ಅಧಿಕವಾಗುತ್ತಿರುವ ಭಾರತದಲ್ಲಿ ವಯಸ್ಕರ ಶಿಕ್ಷಣ ಮುಖ್ಯವಾಗಿ ಅಕ್ಷರಪ್ರಚಾರದ ಸ್ವರೂಪವನ್ನು ತಾಳುತ್ತದೆ. ಅಕ್ಷರಪ್ರಚಾರ ಮತ್ತು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವವರಿಗೆ ಅವೆರಡು ಕ್ಷೇತ್ರಗಳ ಬಗ್ಗೆ ಪರಿಜ್ಞಾನ ಅಗತ್ಯವೆನಿಸುತ್ತದೆ.

'ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ' ಎಂಬ ಈ ಕೃತಿಯನ್ನು ರಚಿಸಿರುವ ಇಬ್ಬರು ಲೇಖಕರು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅನುಭವಪಡೆದವರಾಗಿದ್ದಾರೆ. ತಮ್ಮ ಅನುಭವಗಳ ಜೊತೆಗೆ ಪ್ರಕಟವಾಗಿರುವ ಗ್ರಂಥಗಳಿಂದಲೂ ವರದಿಗಳಿಂದಲೂ ವಿಷಯವನ್ನು ಆಯ್ದು ಸಂಗ್ರಹಿಸಿದ್ದಾರೆ. ಇದರಲ್ಲಿ ೧. ೨. ೭ನೆಯ ಅಧ್ಯಾಯಗಳನ್ನು ಶ್ರೀ ಬಸವಯ್ಯನವರೂ ೩. ೪. ೫. ೬ ನೆಯ ಅಧ್ಯಾಯಗಳನ್ನು ಶ್ರೀ ನಾಗಪ್ಪನವರೂ ಬರೆದಿದ್ದಾರೆ. ನಾಗಪ್ಪನವರ ಮೂರು ಲೇಖನಗಳು ಆಗಲೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು. ಅವುಗಳ ಜೊತೆಗೆ ಹೊಸ ಲೇಖನಗಳನ್ನು ಸೇರಿಸಿ ಪುಸ್ತಕದ ರೂಪದಲ್ಲಿ ಈಗ ಹೊರತರಲಾಗಿದೆ. ವಯಸ್ಕರ ಶಿಕ್ಷಣ ಮತ್ತು ಸಾಕ್ಷರತೆಯ ಬಗ್ಗೆ ವಿವರಗಳನ್ನು ತಿಳಿಯಬಯಸುವವರಿಗೆ ಇದು ಆಸಕ್ತಿಯನ್ನು ಮೂಡಿಸುವ ಸಾಹಿತ್ಯವನ್ನು ಒದಗಿಸುತ್ತದೆ.

—ಡಾ. ಎನ್. ಎಸ್. ವೀರಪ್ಪ

ನಿರಕ್ಷರತೆ ಮತ್ತು ಅದರ ನಿವಾರಣೆ : ಲೇ: ಟಿ. ಆರ್. ನಾಗಪ್ಪ ಮತ್ತು ಸಿ. ಕೃಷ್ಣ: ಪ್ರ: ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು: ಪುಟಗಳು: ೧೫೧ + iv: ಬೆಲೆ: ರೂ. ೯.೫೦

ವಯಸ್ಕರಲ್ಲಿ ಅಕ್ಷರ ಪ್ರಚಾರ ಕಾರ್ಯವನ್ನು ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೆಲವು ದಶಕಗಳಿಂದ ಕೈಕೊಂಡಿದ್ದರೂ ಪ್ರಗತಿ ತಕ್ಕಷ್ಟು ಸಾಧನೆಯಾಗಿಲ್ಲ. ಇದಕ್ಕೆ ಹಲವಾರು ಕಾರಣಗಳಿರಬಹುದಾದರೂ ಆ ಕಾರ್ಯಕ್ಕೆ ಬಳಸುವ ವಾಚನ ಪುಸ್ತಕವೇ ಮುಂತಾದ ಬೋಧನ ಸಾಮಗ್ರಿಗಳೂ ಅನುಸರಿಸುವ ಬೋಧನ ತಂತ್ರಗಳೂ ಪ್ರಮುಖ ಕಾರಣಗಳೆನಿಸಿವೆ. ಯಾವ ಕಾರ್ಯಸಾಧನೆಯಲ್ಲೇ ಆಗಲಿ, ಸೂಕ್ತವಾದ ವಿಧಾನಗಳನ್ನೂ ಸೂಕ್ತ ಉಪಕರಣಗಳನ್ನೂ ಬಳಸುವುದು ಆಧುನಿಕ ಜಗತ್ತಿನ ಯಶಸ್ಸಾಧನೆಯ ಮಂತ್ರವಾಗಿದೆ. ಎಂದರೆ ಸಾಧಿಸುವ ಗುರಿ ಅದನ್ನು ಸಾಧಿಸಲು ಬಳಸುವ ವಿಧಾನವನ್ನು ಅವಲಂಬಿಸಿರುತ್ತದೆ. ಈ ತತ್ವದ ಅನ್ವಯ ವಯಸ್ಕರಲ್ಲಿ ಅಕ್ಷರ ಪ್ರಚಾರ ಕಾರ್ಯ ಹೆಚ್ಚಿನ ಯಶಸ್ಸನ್ನು ಸಾಧಿಸಬೇಕಾದರೆ ಸೂಕ್ತರೀತಿಯ ವಾಚನ ಪುಸ್ತಕವೇ ಮುಂತಾದ ಉಪಕರಣಗಳನ್ನು ಬಳಸಬೇಕು; ಪರಿಣಾಮಕಾರಿಯಾದ ವಿಧಾನವನ್ನೂ ಅನುಸರಿಸಬೇಕು.

ಪ್ರಸ್ತುತ ಗ್ರಂಥದಲ್ಲಿ ಲೇಖಕರು ವಯಸ್ಕರಲ್ಲಿ ಅಕ್ಷರ ಪ್ರಚಾರ ಕಾರ್ಯ ಕೈಕೊಳ್ಳಲು ನೆರವಾಗುವ ವಾಚನ ಪುಸ್ತಕಗಳ ರಚನೆಯ ಬಗ್ಗೆ ಮುಖ್ಯವಾಗಿ ಪರಿಶೀಲಿಸಿರುವರು. ಇದರಲ್ಲಿ ಹದಿನಾಲ್ಕು ಅಧ್ಯಾಯಗಳೂ ಒಂದು ಅನುಬಂಧವೂ ಇವೆ. ೧. ೨ನೆಯ ಅಧ್ಯಾಯಗಳಲ್ಲಿ ಸಾಕ್ಷರತೆಯ ಅರ್ಥ ಮತ್ತು ಆವಶ್ಯಕತೆಗಳನ್ನು ಕುರಿತು ಪರಿಶೀಲಿಸಿದೆ. ೩. ೪. ೫ನೆಯ ಅಧ್ಯಾಯಗಳಲ್ಲಿ ಅದಕ್ಕಾಗಿ ಅಗತ್ಯವೆನಿಸುವ ಪಠ್ಯಪುಸ್ತಕಗಳು, ಅವುಗಳ ರಚನೆ ಮತ್ತು ಕಾರ್ಯನಿರ್ದೇಶಿತ ಪಠ್ಯಪುಸ್ತಕಗಳ ಸ್ವರೂಪ–ಇವನ್ನು ಪರಿಶೀಲಿಸಿದೆ. ೬. ೭ನೆಯ ಅಧ್ಯಾಯಗಳು ತರಗತಿಯ ವ್ಯವಸ್ಥೆ ಮತ್ತು ಅಧ್ಯಾಪಕರ ಹೊಣೆಗಾರಿಕೆ–ಇವನ್ನು ಕುರಿತವಾಗಿವೆ. ೮ನೆಯ ಅಧ್ಯಾಯದಲ್ಲಿ ವಯಸ್ಕರಿಗೆ ಅಕ್ಷರಾಭ್ಯಾಸ ನಡೆದ ಮೇಲೆ ಒದಗಿಸುವ ಪೂರಕ ವಾಚನ ಪುಸ್ತಕಗಳ ಅಗತ್ಯವನ್ನು ಸೂಚಿಸಿದೆ. ೯. ೧೦. ೧೧ನೆಯ ಅಧ್ಯಾಯಗಳಲ್ಲಿ ವಯಸ್ಕರಿಗೆ ಓದು ಬರಹ ಕಲಿಸುವ ವಿಧಾನಗಳನ್ನು ಪರಿಶೀಲಿಸಿದೆ. ೧೨ನೆಯ ಅಧ್ಯಾಯದಲ್ಲಿ ವಯಸ್ಕರ ಶಿಕ್ಷಣದ ಅಧ್ಯಾಪಕರ ಬಗ್ಗೆ ಪ್ರಸ್ತಾಪಿಸಿದೆ. ೧೩ನೆಯ ಅಧ್ಯಾಯದಲ್ಲಿ ವಯಸ್ಕರ ಶಿಕ್ಷಣದಲ್ಲಿ ಶ್ರವ್ಯದೃಶ್ಯೋಪಕರಣಗಳ ಬಳಕೆಯ ಅಗತ್ಯವನ್ನು ಸೂಚಿಸಿದೆ. ಕೊನೆಯ ಅಧ್ಯಾಯದಲ್ಲಿ ವಯಸ್ಕರ ಶಿಕ್ಷಣದ ಭವಿಷ್ಯದ ಬಗ್ಗೆ ವಿವೇಚಿಸಿದೆ. ವಯಸ್ಕರ ಶಿಕ್ಷಣದಲ್ಲಿ ಆಸಕ್ತಿಯಿರುವವರಿಗೆ ಈ ಕೃತಿ ಉಪಯುಕ್ತ ಮಾಹಿತಿಯನ್ನೊದಗಿಸುತ್ತದೆ.

—ಡಾ. ಎನ್. ಎಸ್. ವೀರಪ್ಪ

ಶಿಕ್ಷಣ ಮತ್ತು ಸಂಸ್ಕೃತಿ : ಲೇ: ಆರ್. ಎಸ್. ಜಿರಲಿ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟಗಳು: ೬೮; ಬೆಲೆ: ೨೫ ಪೈಸೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಸ್ತರಣ ವಿಭಾಗ ವಿಶ್ವವಿದ್ಯಾಲಯಕ್ಕೆ ಸೇರಿ ಓದಲು ಅವಕಾಶವಿಲ್ಲದವರ ಉಪಯೋಗಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಗೆ ಆಸಕ್ತಿಯಿರುವ ವಿಷಯಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸಿ ಅವುಗಳ ಸಾರಾಂಶವನ್ನು ಕಿರುಹೊತ್ತಗೆಗಳ ಮೂಲಕ ಹೊರತಂದು ಸುಲಭ ಬೆಲೆಗೆ ವಾಚಕರಿಗೆ ಒದಗಿಸುವ ಕಾರ್ಯವನ್ನು ಕೈಕೊಂಡು ಈಗಾಗಲೆ ಅಂಥ ಇನ್ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಹಾಗೆ ಹೊರತಂದಿರುವ ಕೃತಿಗಳಲ್ಲಿ 'ಶಿಕ್ಷಣ ಮತ್ತು ಸಂಸ್ಕೃತಿ' ೧೯೦ನೆಯ ಪುಸ್ತಕ.

ಲೇಖಕರು ಈ ಕಿರುಹೊತ್ತಗೆಯಲ್ಲಿ ಶಿಕ್ಷಣ ಮತ್ತು ಸಂಸ್ಕೃತಿಯ ಸ್ವರೂಪವನ್ನು ಪರಿಚಯ ಮಾಡಿಕೊಟ್ಟು ಅವೆರಡೂ ಹೇಗೆ ಪರಸ್ಪರ ಪರಿಣಾಮಗೊಳಿಸುತ್ತಿವೆಯೆಂಬ ಅಂಶವನ್ನು ಸರಳವಾದ ಮಾತುಗಳಲ್ಲಿ ನೇರವಾಗಿ ಜನಸಾಮಾನ್ಯರಿಗೂ ಪ್ರಾಜ್ಞರಿಗೂ ಒಪ್ಪುವಂತೆ ವಿವರಿಸಿರುವರು. ಮೊದಲನೆಯ ಅಧ್ಯಾಯದಲ್ಲಿ ಶಿಕ್ಷಣದ ವ್ಯಾಪ್ತಿ ಮತ್ತು ಉದ್ದೇಶಗಳನ್ನು ಪರಿಚಯ ಮಾಡಿಕೊಡುತ್ತ, ಅದನ್ನು ಸೂರ್ಯಚಂದ್ರ ಮತ್ತು ನಕ್ಷತ್ರಗಳಿಗೆ ಹೋಲಿಸಿರುವರು. ಹೋಲಿಕೆ ಅರ್ಥಗರ್ಭಿತವಾಗಿದೆ. ಶಿಕ್ಷಣದ ಉದ್ದೇಶವನ್ನು ವಿವರಿಸುತ್ತ ಅದು "ಮನುಷ್ಯನನ್ನು ಸ್ವಾವಲಂಬಿಯನ್ನಾಗಿ, ಸ್ವಯಂಪೂರ್ಣನನ್ನಾಗಿ, ಸ್ನೇಹಪರನನ್ನಾಗಿ, ತ್ಯಾಗ ಮನೋಭಾವವುಳ್ಳವನನ್ನಾಗಿ, ನೀತಿವಂತನನ್ನಾಗಿ, ಸಹಕಾರಿಯನ್ನಾಗಿ, ರಾಷ್ಟ್ರೀಯ ಪ್ರವೃತ್ತಿಯುಳ್ಳವನನ್ನಾಗಿ ವಿಶ್ವಪ್ರೇಮಿಯನ್ನಾಗಿ, ಅಹಿಂಸಾಪರನನ್ನಾಗಿ, ಸತ್ಯಸಂಧನನ್ನಾಗಿ ಹೊಂದಾಣಿಕೆಯುಳ್ಳವನನ್ನಾಗಿ. ಪವಿತ್ರ ಜೀವಿಯನ್ನಾಗಿಮಾಡುವ ಸದುದ್ದೇಶದಿಂದ ಕೂಡಿರಬೇಕು" ಎಂದು ಸೂಚಿಸಿರುವರು. ಎರಡನೆಯ ಅಧ್ಯಾಯದಲ್ಲಿ ಆ ಉದ್ದೇಶಗಳನ್ನು ಈಡೇರಿಸಲು ಸಮಾಜ ರಚಿಸಿರುವ ಸಂಘಸಂಸ್ಥೆಗಳ ಕಾರ್ಯವನ್ನು ಕುರಿತು ಪರಿಶೀಲಿಸಿರುವರು. ಕುಟುಂಬ, ಶಾಲೆ, ಸಮಾಜ, ಗ್ರಂಥಾಲಯ, ನಾಟಕ, ಚಲನಚಿತ್ರ, ರೇಡಿಯೋ, ವೃತ್ತಪತ್ರಿಕೆ ಮುಂತಾದವು ಬೀರುವ ಶೈಕ್ಷಣಿಕ ಪ್ರಭಾವದ ಪ್ರಮಾಣವನ್ನು ವಿವರಿಸಿರುವರು. ಮೂರನೆಯ ಅಧ್ಯಾಯದಲ್ಲಿ ಪ್ರಾಚೀನ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಶಿಕ್ಷಣದ ಸ್ವರೂಪವನ್ನೂ ಅದು ಹೊಂದಿದ್ದ ಉದ್ದೇಶಗಳನ್ನೂ ಅವನ್ನು ಸಾಧಿಸಲು ಏರ್ಪಡಿಸುತ್ತಿದ್ದ ಕಾರ್ಯಕ್ರಮಗಳನ್ನೂ ವಿಮರ್ಶಿಸಿರುವರು. ನಾಲ್ಕನೆಯ ಅಧ್ಯಾಯದಲ್ಲಿ ಆಧುನಿಕ ಶಿಕ್ಷಣದಲ್ಲಿರುವ ದೋಷಗಳನ್ನೂ ಉತ್ತಮಾಂಶಗಳನ್ನೂ ಎತ್ತಿ ತೋರಿಸಿರುವರು. ಐದನೆಯ ಅಧ್ಯಾಯದಲ್ಲಿ ಸಂಸ್ಕೃತಿಯ ಸ್ವರೂಪವನ್ನು ಪರಿಶೀಲಿಸುತ್ತ, "ವ್ಯಕ್ತಿಯ ಆಚಾರ ವಿಚಾರಗಳಿಂದ, ಇರುವಿಕೆಯಿಂದ, ಜೀವನಕ್ರಮದಿಂದ ಅಭಿವ್ಯಕ್ತವಾಗುವ ರೀತಿನೀತಿಗೆ ಸಂಸ್ಕೃತಿಯೆನ್ನಬಹುದು; ಸಂಸ್ಕೃತಿಯು ಅಲ್ಪಾವಧಿಯಲ್ಲಿ ಉದಯಿಸುವಂತಹದಲ್ಲ; ಯಾವುದೊಂದು ಸಮಾಜವಾಗಲಿ, ರಾಷ್ಟ್ರವಾಗಲಿ, ನೂರಾರು ಸಾವಿರಾರು ವರ್ಷಗಳ ಕಾಲಾವಧಿಯಲ್ಲಿ ಕೆಲವೊಂದು ತತ್ವಗಳನ್ನು ಪ್ರಸಾಧಿಸಿಕೊಂಡು ಸಮಾಜಕ್ಕೂ ರಾಷ್ಟ್ರಕ್ಕೂ ಕಲ್ಯಾಣಕರವಾದ ಒಂದು ಸತ್ಪರಂಪರೆಯನ್ನು ಹಾಕುತ್ತದೆ. ಅಂಥ ಪರಂಪರೆಗೆ ಆ ಜನಾಂಗದ ಇಲ್ಲವೆ ರಾಷ್ಟ್ರದ ಸಂಸ್ಕೃತಿಯೆನ್ನುತ್ತಾರೆ," ಎಂದು ಬಹು ಸರಳವಾಗಿ ವಿವರಿಸಿರುವರು. ಸುಸಂಸ್ಕೃತ ವ್ಯಕ್ತಿಯ ಲಕ್ಷಣಗಳನ್ನು ವಿವರಿಸುತ್ತ, "ವ್ಯಕ್ತಿಯು ಸಭ್ಯನಾಗಿರಬೇಕು; ನಾಗರಿಕ ಪ್ರಜ್ಞೆಯುಳ್ಳವನಾಗಿರಬೇಕು; ವಿನಯಶೀಲನಾಗಿರಬೇಕು; ಬೇರೆಯವರಲ್ಲಿಯ ಸದ್ಗುಣಗಳನ್ನು ಕಂಡುಹಿಡಿದು ಅವನ್ನು ಪ್ರಶಂಸಿಸುವ ಮನೋಭಾವವುಳ್ಳವನಾಗಿರಬೇಕು; ಉಪಕಾರ ಮಾಡಿದವರನ್ನು ಸ್ಮರಿಸಬೇಕು; ರಸಿಕನಾಗಿರಬೇಕು; ಸ್ವತಂತ್ರ ವಿಚಾರ ಮಾಡುವ ಶಕ್ತಿಯುಳ್ಳವನಾಗಿರಬೇಕು; ಪರರ ಇಂಗಿತವನ್ನು ಅರಿತುಕೊಳ್ಳುವ ಜಾಣ್ಮೆಯಿಂದ ಕೂಡಿರಬೇಕು; ಕರ್ತವ್ಯದಕ್ಷನಿರಬೇಕು; ಸತ್ಯಸಂಧನೂ ಗುರುಭಕ್ತಿಯುಳ್ಳವನೂ ದೇಶಾಭಿಮಾನಿಯೂ ತ್ಯಾಗಿಯೂ ಶುಚಿತ್ವವುಳ್ಳವನೂ ಸ್ನೇಹಪರನೂ ಆಗಿರಬೇಕು. ಹೀಗಿರುವ ವ್ಯಕ್ತಿಗೆ ಸುಸಂಸ್ಕೃತನೆಂದು ಕರೆಯಬಹುದು," ಎಂದು ಸೂಚಿಸಿ ಎಲ್ಲರಿಗೂ ಅರ್ಥವಾಗುವಂತೆ ಬರೆದಿರುವರು. ಸಂಸ್ಕೃತಿಯ ಪ್ರಭಾವವನ್ನು ಕುರಿತು, "ಅದು ಜನಜೀವನದಲ್ಲಿ ಎಲ್ಲ ಕ್ಷೇತ್ರಗಳಿಗೂ ಪಾವಿತ್ರ್ಯವನ್ನು ಕೊಡುತ್ತದೆ; ಮಾನವನ ಘನತೆ ಗೌರವಗಳನ್ನು ಹೆಚ್ಚಿಸುತ್ತದೆ; ಅವನನ್ನು ತೇಜಸ್ವಿಯನ್ನಾಗಿಯೂ ಧರ್ಮಾತ್ಮನನ್ನಾಗಿಯೂ ಮಾಡುತ್ತದೆ. ಇದೇ ತೆರನಾಗಿ ಸುಸಂಸ್ಕೃತ ಸಮಾಜ ಹಾಗೂ ರಾಷ್ಟ್ರ ಘನತೆ

ಯನ್ನೂ ಗಾಂಭೀರ್ಯವನ್ನೂ ತೇಜಸ್ಸನ್ನೂ ಧಾರ್ಮಿಕತೆಯನ್ನೂ ಪಡೆಯುತ್ತವೆ." ಎಂದು ವರ್ಣಿಸಿರುವರು. ಆರನೆಯ ಅಧ್ಯಾಯದಲ್ಲಿ ಸಂಸ್ಕೃತಿಯ ವಾಹಕಗಳನ್ನು ಕುರಿತು ಪರಿಶೀಲಿಸಿರುವರು. ಕುಟುಂಬದ ಹಿರಿಯರಿಂದ ಕಿರಿಯರಿಗೂ ಇಂದಿನ ಪೀಳಿಗೆಯಿಂದ ಮುಂದಿನ ಪೀಳಿಗೆಗೂ ಪರಿಸ್ಥಿತಿಯ ಪ್ರಭಾವದಿಂದ ಅದಕ್ಕೊಳಗಾದ ವ್ಯಕ್ತಿಗಳಿಗೂ ಸಂಸ್ಕೃತಿಗಾಗಿ ಬರುವ ವಿಷಯವನ್ನು ಪರಿಶೀಲಿಸಿರುವರು. ಮತಾಂತರದಿಂದ ಒಂದು ಸಂಸ್ಕೃತಿಯ ಮೇಲೆ ಇನ್ನೊಂದು ಸಂಸ್ಕೃತಿ ನಡೆಸಬಹುದಾದ ದಾಳಿಯನ್ನು. ಇತರ ಪ್ರಭಾವಗಳಿಂದ ಸಂಸ್ಕೃತಿಯ ಮೇಲಾಗುವ ಪರಿಣಾಮವನ್ನು ಸೂಚಿಸಿರುವರು. ವ್ಯಾಪಾರ ಮತ್ತು ಸಾರಿಗೆ ಸಂಪರ್ಕಗಳು ಹೇಗೆ ಒಂದು ದೇಶದ ಸಂಸ್ಕೃತಿಯನ್ನು ಅನ್ಯದೇಶಗಳಿಗೆ ಒಯ್ದು ಪ್ರಚಾರ ಮಾಡುವ ವಾಹಕಗಳಾಗಿ ಕೆಲಸಮಾಡುವುವೆಂಬುದನ್ನು ಸಾಧಾರಣವಾಗಿ ತೋರಿಸಿರುವರು. ಶಿಕ್ಷಣ ಇವೆಲ್ಲಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಸಂಸ್ಕೃತಿವಾಹಕವೆಂಬುದನ್ನು ಒತ್ತಿ ಹೇಳಿರುವರು. ಏಳನೆಯ ಅಧ್ಯಾಯದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನೂ ಎಂಟನೆಯ ಅಧ್ಯಾಯದಲ್ಲಿ ಭಾರತೀಯ ಸಂಸ್ಕೃತಿಯನ್ನೂ ಸ್ಥೂಲವಾಗಿ ಪರಿಚಯ ಮಾಡಿಕೊಟ್ಟಿರುವರು. ಭಾರತೀಯ ಸಂಸ್ಕೃತಿಯ ರೂಪರೇಷೆಗಳನ್ನು ವಿವರಿಸುತ್ತ "ನಮ್ಮ ಜನರ ಧಾರ್ಮಿಕ ಶ್ರದ್ಧೆ. ಪರಾಕ್ರಮ. ಶಿಕ್ಷಣಾಭಿಮಾನ. ಔದಾರ್ಯ. ಸ್ವಾಮಿನಿಷ್ಠೆ, ವೈರಾಗ್ಯ ಜೀವನಗಳ ಹಿನ್ನೆಲೆಯಾಗಿದೆ. ನಮ್ಮವರು ಕೈಕೊಳ್ಳುವ ದೇಶಪರ್ಯಟನ. ಮಾಡುವ ತೀರ್ಥಯಾತ್ರೆ, ಆಚರಿಸುವ ಹಬ್ಬಹುಣ್ಣಿಮೆ. ಜರುಗಿಸುವ ಜಾತ್ರೆ ಉತ್ಸವಗಳು. ನೆರವೇರಿಸುವ ಮದುವೆ ಮುಂಜಿ ಮುಂತಾದವುಗಳಲ್ಲಿ ನಮ್ಮ ಸಂಸ್ಕೃತಿಯನ್ನು ಕಾಣುತ್ತೇವೆ. ಯುಗಾದಿಯಂದು ಬೇವು ಬೆಲ್ಲ ತಿನ್ನುವುದು. ನಾಗಪಂಚಮಿಯಂದು ಹುತ್ತಿನ ನಾಗಪ್ಪನಿಗೆ ಹಾಲೆರೆಯುವುದು. ವಿಜಯ ದಶಮಿಯಂದು ಬನ್ನಿ ಮುಡಿಯುವುದು. ಶಿವರಾತ್ರಿಯಂದು ಜಾಗರಣೆ ಮಾಡುವುದು. ಇತ್ಯಾದಿ ಆಚರಣೆಗಳು ನಮ್ಮ ಸಂಸ್ಕೃತಿಯ ದ್ಯೋತಕಗಳಾಗಿವೆ." ಎಂದು ಹೇಳಿ ಸಂಸ್ಕೃತಿಯ ಬಗ್ಗೆ ಎಲ್ಲರಿಗೂ ತಿಳಿಯುವಂಥ ವಿವರಣೆ ನೀಡಿದ್ದಾರೆ. ಭಾರತೀಯ ಸಂಸ್ಕೃತಿಯ ಜಾಯಮಾನವನ್ನು ಕುರಿತು "ಕಾಲ ಪ್ರವಾಹದಲ್ಲಿ ಪರಕೀಯರ ಹಾಗೂ ಪರಧರ್ಮೀಯರ ಆಘಾತಗಳನ್ನೂ ವಿಪ್ಲವಗಳನ್ನೂ ರಾಜಕೀಯ ಒತ್ತಡವನ್ನೂ ಎದುರಿಸಿತು. ಅವರವರ ಸಂಸ್ಕೃತಿಯ ಒಳ್ಳೆಯದನ್ನು ತೆಗೆದುಕೊಂಡು ತನ್ನದನ್ನಾಗಿಸಿಕೊಂಡಿತು. ಆದರೆ ಆ ಪರಕೀಯ ಸಂಸ್ಕೃತಿಗಳ ಸೆಳವಿಗೆ ಸಿಕ್ಕಿ ಕೊಚ್ಚಿ ಹೋಗಲಿಲ್ಲ" ಎಂದು ಹೇಳಿರುವರು. ಅದು ಇತರ ವೈಶಿಷ್ಟ್ಯಗಳೆಂದರೆ ಪರಧರ್ಮ ಸಹಿಷ್ಣುತೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು. ರಾಷ್ಟ್ರೀಯ ಭಾವನೆಯನ್ನು ಪೋಷಿಸಿದರೂ ಮಾನವೀಯ ಭಾವನೆಯನ್ನು ಶ್ರೇಷ್ಠತೆಯನ್ನು ಪುರಸ್ಕರಿಸುವುದು, ಸತ್ಯಂ ಶಿವಂ ಸುಂದರಂ ಎಂಬ ಮೂರು ಮುಖಗಳೂ ಒಂದೇ ಎಂಬ ನಂಬಿಕೆಯನ್ನು ತಳೆದಿರುವುದು–ಇವೇ ಮುಂತಾದವನ್ನು ಪ್ರಾಸಂಗಿಕವಾಗಿ ಬಣ್ಣಿಸಿದ್ದಾರೆ. ಕೊನೆಯ ಅಧ್ಯಾಯದಲ್ಲಿ ಶಿಕ್ಷಣ ಸಂಸ್ಕೃತಿಗಳ ಸಮನ್ವಯವನ್ನು ಸಾಧಿಸಿ ತೋರಿಸಿದ್ದಾರೆ. "ಶಿಕ್ಷಣ. ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳು; ಶಿಕ್ಷಣವೇ ಸಾಧನ; ಸಂಸ್ಕೃತಿಯೇ ಅದರಿಂದ ಆಗುವ ಸಿದ್ಧಿ" ಎಂದು ಸ್ಪಷ್ಟಪಡಿಸಿರುವರು. ಒಳ್ಳೆಯ ಶಿಕ್ಷಣದಿಂದ ಒಳ್ಳೆಯ ಸಂಸ್ಕೃತಿಯು ಸಿದ್ಧಿಸುವುದೆಂದು ವಿವರಿಸಿ ಆ ಕಾರ್ಯಸಾಧನೆಗಾಗಿ ನಮ್ಮ ಇಂದಿನ ಶಿಕ್ಷಣದ ಪುನರ್ವ್ಯವಸ್ಥೆಯ ಬಗ್ಗೆ ಆಸಕ್ತಿ ವ್ಯಕ್ತಪಡಿಸಿರುವರು.

ಶಿಕ್ಷಣ ಸಂಸ್ಕೃತಿಗಳಂಥ ಸಂಕೀರ್ಣ ವಿಷಯಗಳ ಬಗ್ಗೆ ಬಹು ಸರಳವಾಗಿ. ನೇರವಾಗಿ ಹಾಗೂ ಪರಿಣಾಮಕಾರಿಯಾಗಿ ವಿವರಣೆಗಳ ಮೂಲಕ ಈ ಪುಟ್ಟ ಪುಸ್ತಕದಲ್ಲಿ ಪರಿಚಯ ಮಾಡಿಕೊಟ್ಟಿದೆ. ಅವೆರಡಕ್ಕೂ ಇರುವ ಸಂಬಂಧವನ್ನು ಎಲ್ಲರಿಗೂ ಅರ್ಥವಾಗುವಂತೆ ವಿವರಿಸಿದೆ. ಇಂಥ ಉತ್ತಮ ಕೃತಿಯನ್ನು ರಚಿಸಿದ ಲೇಖಕರು ತುಂಬ ಉಪಕಾರ ಮಾಡಿದ್ದಾರೆ. ಜನತೆಯಲ್ಲಿ ಜ್ಞಾನ ಪ್ರಚಾರವಾಗಿ ಸುಸಂಸ್ಕೃತ ಜನಾಂಗ ನಿರ್ಮಾಣವಾಗಬೇಕಾದರೆ ಇಂಥ ಉಪಯುಕ್ತ ಕೃತಿಗಳು ಆಗತ್ಯವಾಗಿ ಪ್ರಕಟವಾಗಬೇಕು.

—ಡಾ. ಎನ್. ಎಸ್. ವೀರಪ್ಪ

ಈ ಸಂಚಿಕೆಯ ಲೇಖನಗಾರರು

೧ ಪಿ. ಆರ್. ತಿಪ್ಪೇಸ್ವಾಮಿ — ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ವಸ್ತುಸಂಗ್ರಹಾಲಯದ ಕ್ಯೂರೇಟರ್

೨ ಪ್ರೊ. ಬಿ. ಕೃಷ್ಣನ್ — ಮಾನಸಗಂಗೋತ್ರಿಯ ಮನಶ್ಶಾಸ್ತ್ರ ವಿಭಾಗ ಮುಖ್ಯರು ಮತ್ತು ಪ್ರಾಧ್ಯಾಪಕರು

೩ ಎ. ಎಸ್. ಧರಣೇಂದ್ರಯ್ಯ — ಅಧ್ಯಾಪಕರು, ಮನಶ್ಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ ೫೮೦೦೦೩

೪ ಡಾ. ಪಿ. ಗುರುರಾಜ ಭಟ್ — ಪ್ರಿನ್ಸಿಪಾಲ್, ಮಿಲಾಗ್ರೀಸ್ ಕಾಲೇಜು, ಕಲ್ಯಾಣಪುರ (ದ.ಕ.)

೫ ಡಾ. ಎನ್. ಎಸ್. ವೀರಪ್ಪ — ಮೈಸೂರಿನ ಶಿಕ್ಷಣ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವಕೋಶದ ಜೀವಶಾಸ್ತ್ರ ವಿಭಾಗದ ಗೌರವ ಸಂಪಾದಕರು

೬ ಡಾ. ಬಾ. ರಾ. ಗೋಪಾಲ್ — ಶಾಸನತಜ್ಞನರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೭ ಬಿ. ಚನ್ನಕೇಶವ — ಸಂಸ್ಕೃತ ಅಧ್ಯಾಪಕರು, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು

೮ ದೇವರ ಕೊಂಡಾರೆಡ್ಡಿ — ಅಧ್ಯಾಪಕರು, ಸರ್ಕಾರಿ ಜ್ಯೂನಿಯರ್ ಕಾಲೇಜು, ಗುಂಡ್ಲುಪೇಟೆ (ಮೈಸೂರು ಜಿಲ್ಲೆ)

೯ ಮಾವಿನಕುಳಿ ಶ್ರೀನಿವಾಸ — ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿ

೧೦ ಡಿ. ಎಸ್. ಜಯಪ್ಪಗೌಡ — ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೧೧ ಎಸ್. ಎ. ಹನುಮಂತರಾವ್ — ಮನಶ್ಶಾಸ್ತ್ರ ಪ್ರಾಧ್ಯಾಪಕರು, ಕರ್ನಾಟಕ ಆರ್ಟ್ಸ್ ಕಾಲೇಜು ಧಾರವಾಡ

೧೨ ಎನ್. ಪ್ರಭುಸ್ವಾಮಿ — ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ

೧೩ ವಿ. ಎನ್. ಶೇಷಗಿರಿರಾವ್ — ತತ್ತ್ವಶಾಸ್ತ್ರ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು

೧೪ ಡಾ. ಎ. ಎಸ್. ಸೀತಾರಾಂ — ಅಧ್ಯಾಪಕರು, ಶಿಕ್ಷಣ ವಿಭಾಗ, ಮಾನಸಗಂಗೋತ್ರಿ

೧೫ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ — ಕರ್ನಾಟಕದ ಸುಪ್ರಸಿದ್ಧ ಲೇಖಕರು, ಗೊರೂರು (ಹಾಸನ ಜಿಲ್ಲೆ)

೧೬ ಪಿ. ಗಂಗಾಧರ್ — ಸಹಾಯಕ ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮಾನಸಗಂಗೋತ್ರಿ

WO 14337—MUPM—1025 copies—25-10-75

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸ ಗಂಗೋತ್ರಿ, ಮೈಸೂರು–೫೭೦೦೦೬